₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಬುಧವಾರ 06.08.2025 ಸಂಪುಟ: 68 ಸಂಚಿಕೆ: 93 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಇಂಗ್ಲೆಂಡ್‌ನಲ್ಲಿ ನಡೆದ ಟೆಸ್ಟ್ ಸರಣಿಯಲ್ಲಿ ಉತ್ತಮ ಪ್ರದರ್ಶನ ತೋರಿದ ವಾಷಿಂಗ್ಟನ್ ಸುಂದರ್ ಇಂಪ್ಯಾಕ್ಟ್ ಪ್ಲೇಯರ್ ಪ್ರಶಸ್ತಿಗೆ ಭಾಜನರಾದರು.

ದೇವಭೂಮಿಯಲ್ಲಿ ಅವಳಿ ಮೇಘಸ್ಫೋಟ ಸೈನಿಕರ ಸಹಿತ ನೂರಾರು ಮಂದಿ ಕಣ್ಮರೆ

ಸೊಂಪಾದ ಪುಟಗಳು

ಮಿಲಿಟರಿಯಿಂದ ತಾಯಂದಿರ ಆರೋಗ್ಯದವರೆಗೆ

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ 6

ದೇಶದ ಏಕತೆ ವಿಷಯದಲ್ಲಿ ಒಡಕು ಧ್ವನಿ ಬೇಡ !

ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ



ಯಾವ ಕಾರಣಕ್ಕೂ ಜೀವನದಲ್ಲಿ ಒಂದು ದಿನವೂ ವಿಷಾದಪಡಬೇಡಿ. ಒಳ್ಳೆಯ ದಿನಗಳು ಸಂತಸವನ್ನು, ಕೆಟ್ಟ ದಿನಗಳು ಅನುಭವವನ್ನು, ಅತಿ ಕೆಟ್ಟ ದಿನಗಳು ಪಾಠವನ್ನು ಮತ್ತು ಉತ್ತಮ ದಿನಗಳು ನೆನಪುಗಳನ್ನು ನೀಡುತ್ತವೆ.

ವಕ್ರತುಂಡೋಕ್ತಿ

ಸಾಮಾಜಿಕ ಜಾಲತಾಣದ ಸ್ಮೋಕಿಂಗ್ ಏರಿಯಾಕ್ಕೆ ಟ್ವಿಟರ್ (ಎಕ್ಸ್) ಎಂದು ಕರೆಯಬಹುದು.

ತಸ್ತೀಕ್ ಹಣ ಬಿಡುಗಡೆ

ಬೆಂಗಳೂರು: ಮುಜರಾಯಿ ಇಲಾಖೆಯಲ್ಲಿ ಸುಪರ್ದಿಯಲ್ಲಿರುವ ದೇವಾಲಯಗಳ ಅರ್ಚರಿಕಗೆ ತಸ್ತೀಕ್‌ನ ಮೊದಲ ಹಂತದ ಅನುದಾನವನ್ನು ರಾಜ್ಯ ಸರಕಾರ ಬಿಡುಗಡೆಗೊಳಿಸಿದೆ. ವಿವಿಧ ಜಿಲ್ಲೆಗಳ ತಾಲೂಕು ಮಟ್ಟದಲ್ಲಿ ದೇವಾಲಯಗಳಿಗೆ ಅನುದಾನ ಬಿಡುಗಡೆ ಮಾಡಿದ್ದು, ಸಂಬಂಧಿಸಿದ ತಹಶೀಲ್ದಾರ್ ಅವರ ಖಾತೆಗೆ ಹಣ ಜಮೆ ಮಾಡಲಾಗಿದೆ. ಸಂಬಂಧಿಸಿದ ದೇವಾಲಯದ ಸಿಬ್ಬಂದಿ ಅಥವಾ ನೌಕರರಿಗೆ ಬಿಡುಗಡೆಗೊಳಿಸಲು ಆದೇಶ ಹೊರಡಿಸಲಾಗಿದೆ. ರಾಜ್ಯದ ಸುಮಾರು 25 ಸಾವಿರ ಮುಜರಾಯಿ ದೇವಾಲಯಗಳಿಗೆ ಮೊದಲ ಹಂತದಲ್ಲಿ 91.26 ಲಕ್ಷ ರು. ಅನುದಾನವನ್ನು ಬಿಡುಗಡೆಗೊಳಿಸಿ ಆದೇಶ ಹೊರಡಿಸಲಾಗಿದೆ.

ಮದರಸಾಗಳಲ್ಲಿ ಕನ್ನಡ ಕಲಿಕೆ

ಬೆಂಗಳೂರು: ಅಲ್ಪಸಂಖ್ಯಾತ ಮತ್ತು ಬಹುಸಂಖ್ಯಾತ ಸಮುದಾಯಗಳ ನಡುವಿನ ಸಾಮರಸ್ಯವನ್ನು ಕದಡುವ ವಿಭಜಕ ರಾಜಕಾರಣ ವಿಜೃಂಭಿಸುತ್ತಿರುವ ಇಂದಿನ ದಿನಮಾನಗಳಲ್ಲಿ ಭಾಷೆಯ ಮೂಲಕವೇ ಸಂವಹನ ಗಟ್ಟಿಯಾಗಬೇಕೆನ್ನುವ ಖಚಿತ ನಿಲುವಿನಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಕನ್ನಡವನ್ನು ಕಲಿಸುವ ಪ್ರಯತ್ನಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮುಂದಾಗಿದೆ ಎಂದು ಡಾ. ಪುರುಷೋತ್ತಮ ಬಿಳಿಮಲೆ ಹೇಳಿದ್ದಾರೆ. ಮದರಸಾಗಳಲ್ಲಿ ಬೋಧಿಸುತ್ತಿರುವ ಸುಮಾರು 180 ಶಿಕ್ಷಕರುಗಳಿಗೆ ಕನ್ನಡ ಕಲಿಕಾ ಅಭಿಯಾನವನ್ನು ಉದ್ಘಾಟಿಸಿ ಮಾತನಾಡಿದರು.

ಫನ್‌ತರಂಗ
- ರಘುಪತಿ ಶೃಂಗೇರಿ -

ಸಿಎಂ ಕಚೇರಿಯಲ್ಲಿ ಕಾಫಿ, ತಿಂಡಿ, ಬಿಸ್ಕತ್‌ಗೆ 200 ಕೋಟಿ ವೆಚ್ಚ ಎಂದು ದೂರು ಸುದ್ದಿ



ಹೈ ತರಾಟೆ ಬಳಿಕ ಪ್ರತಿಭಟನೆ ಕೈ ಬಿಟ್ಟ ಕಾರ್ಮಿಕ ಸಂಘಟನೆ
ಬಸ್‌ಗಳಿಲ್ಲದೆ ಪ್ರಯಾಣಿಕರ ಪರದಾಟ, ಕಲ್ಲು ತೂರಾಟ
ಸಾರಿಗೆ ಮುಷ್ಕರ ವಾಪಸ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನ್ಯಾಯಾಲಯದ ಸ್ಪಷ್ಟ ಆದೇಶದ ಹೊರತಾಗಿಯೂ ಮುಷ್ಕರಕ್ಕೆ ಕರೆ ನೀಡಿದ್ದ ಕೆಎಸ್ಸಾರ್ಟಿಸಿ ಮತ್ತು ಬಿಎಂಟಿಸಿ ಸಾರಿಗೆ ನೌಕರರ ಮುಷ್ಕರ ಒಂದೇ ದಿನಕ್ಕೆ ಸೀಮಿತವಾಗಿದೆ.

ಹೈಕೋರ್ಟ್ ಮಧ್ಯಂತರ ಆದೇಶದ ಹೊರತಾಗಿಯೂ, ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಬಹುತೇಕ ಸಾರಿಗೆ ಸಿಬ್ಬಂದಿ ಕೆಲಸಕ್ಕೆ ಹಾಜರಾಗದೇ ಮುಷ್ಕರವನ್ನು ಬೆಂಬಲಿಸಿದ್ದರು. ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಸರಕಾರಿ ಬಸ್‌ಗಳಿಲ್ಲದೇ ಸಾರಿಗೆ ಸಂಚಾರ ಅಸ್ತವ್ಯಸ್ತವಾಗಿತ್ತು. ಹೈಕೋರ್ಟ್ ಈ ವಿಷಯವನ್ನು ಗಂಭೀ ರವಾಗಿ ಪರಿಗಣಿಸಿ, ಮಧ್ಯಂತರ ಆದೇಶದ ಹೊರತಾ ಗಿಯೂ ಬಸ್‌ಗಳನ್ನು ಓಡಿಸದೇ ಮುಷ್ಕರ ನಡೆಸಿರುವುದು ನ್ಯಾಯಾಂಗ ನಿಂದನೆಯಾಗುತ್ತದೆ. ಮುಷ್ಕರ ನಿಂತಿರುವ ಬಗ್ಗೆ ಬುಧವಾರ ಮಾಹಿತಿ ನೀಡಿ, ಇಲ್ಲವೇ ನ್ಯಾಯಾಂಗ ನಿಂದನೆಯ ಅರ್ಜಿ ದಾಖಲಿಸಲಾಗುವುದು ಎಂದು ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಗೆ ಎಚ್ಚರಿಕೆ ನೀಡಿದ ಬೆನ್ನಲ್ಲೇ, ಮುಷ್ಕರ ಹಿಂಪಡೆಯುವುದಾಗಿ ಲಿಖಿತ ವಿವರಣೆ ನೀಡಲಾಗಿದೆ. ಇದರ ಬೆನ್ನಲ್ಲೇ ಅನಂತ ಸುಬ್ಬರಾವ್ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ಮುಷ್ಕರ ಹಿಂಪಡೆಯಲು ತೀರ್ಮಾನಿಸಲಾಯಿತು.

→ 4

ಪ್ರಮುಖಾಂಶ

- ಖಾಸಗಿ ಬಸ್‌ಗಳಲ್ಲೂ ಉಚಿತ ಟಿಕೆಟ್ ವಾಗ್ವಾದ
- ಜನರಿಲ್ಲದೆ ಬಿಕೋ ಎಂದ ಸರಕಾರಿ ಬಸ್ ನಿಲ್ದಾಣಗಳು
- ದುಪ್ಪಟ್ಟು ವಸೂಲಿಗಿಳಿದ ಖಾಸಗಿ ಬಸ್, ಆಟೋ ಚಾಲಕರು
- ಮೆಜೆಸ್ಟಿಕ್‌ನಲ್ಲಿ ಬಸ್ ಸಿಗದೇ ಒದ್ದಾಡಿದ ನಟ ಹೊನ್ನವಳಿ ಕೃಷ್ಣ
- ಕೋಲಾರ, ಗದಗ ಜಿಲ್ಲೆಯಲ್ಲಿ ನಿಗಮದ ಬಸ್‌ಗಳ ಮೇಲೆ ಕಲ್ಲೆಸೆತ

ಮತ್ತೆ ಬಸ್ ಸಂಚಾರ

ಹೈಕೋರ್ಟ್ ಎಚ್ಚರಿಕೆ ಬೆನ್ನಲ್ಲೇ ಮುಷ್ಕರ ಮುಂದೂಡಿಕೆ ಘೋಷಿಸಿದ ಸಾರಿಗೆ ಸಂಘಟನೆಗಳು, ಕೂಡಲೇ ನೌಕರರು ಕರ್ತವ್ಯಕ್ಕೆ ಹಾಜರಾಗುವಂತೆ ಕೋರಿದವು. ಈ ಹಿನ್ನೆಲೆಯಲ್ಲಿ ಸಂಜೆ ವೇಳೆಗೆ ಸಾರಿಗೆ ನೌಕರರು ಕರ್ತವ್ಯಕ್ಕೆ ಹಾಜರಾಗಿದ್ದು, 19,239 ಬಸ್‌ಗಳಲ್ಲಿ 15466 ರಸ್ತೆಗೆ ಇಳಿದಿವೆ. 6266 ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ 4315 ಬಸ್‌ಗಳು ಸಂಚಾರ ಆರಂಭಿಸಿವೆ. ಬಿಎಂಟಿಸಿಯ 6199 ಬಸ್‌ಗಳಲ್ಲಿ 6198 ಸಂಚಾರ ಆರಂಭಿಸಿವೆ. ಎನ್‌ಡಬ್ಲ್ಯೂಕೆಆರ್‌ಟಿಸಿ 3605ಬಸ್‌ಗಳಲ್ಲಿ 3002 ಸಂಚಾರ ಆರಂಭಿಸಿದ್ದು, ಕೆಕೆಆರ್‌ಟಿಸಿ ಯ 3169 ಬಸ್‌ಗಳಲ್ಲಿ 1951 ಆರಂಭಿಸಿವೆ. ರಾಜ್ಯಾದ್ಯಂತ ಒಟ್ಟು ಶೇ.80.4 ಆಗಿದೆ ಎಂಬುದಾಗಿ ಮಾಹಿತಿ ನೀಡಿದೆ.

ಪರದಾಡಿದ ಸಾರ್ವಜನಿಕರು: ಸಾರಿಗೆ ಮುಷ್ಕರದ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲದೇ ಸಾವಿರಾರು ಪ್ರಯಾಣಿಕರು ಎಂದಿನಂತೆ ಬಸ್‌ನಿಲ್ದಾಣಗಳಿಗೆ ಆಗಮಿಸಿದ್ದರು. ಕೆಲವರು ದೂರದೂರುಗಳಿಂದ ಬೆಂಗಳೂರಿಗೆ ಆಗಮಿಸಿದ್ದರು. ಬಸ್‌ಗಳಿಲ್ಲದೇ ಸಮಸ್ಯೆ ಅನುಭವಿಸಿದರು.

ಸಾರಿಗೆ ನೌಕರರ ಮುಷ್ಕರ ಸ್ಥಗಿತಗೊಳಿಸಲಾಗಿದೆ. ಸರಕಾರ ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ನಮ್ಮನ್ನು ಮಾತುಕತೆಗೆ ಕರೆದು ಇತರ ಬೇಡಿಕೆಗಳ ಬಗ್ಗೆ ಚರ್ಚೆ ನಡೆಸಬೇಕು. ಸರಕಾರ ನೀಡಲು ಸಮ್ಮತಿಸಿರುವ 14 ತಿಂಗಳ ಹಿಂಬಾಕಿಯನ್ನು ಯಾವ ಕಾರಣಕ್ಕೂ ನಾವು ತೆಗೆದುಕೊಳ್ಳುವುದಿಲ್ಲ. ಎಲ್ಲ 38 ತಿಂಗಳ ಹಿಂಬಾಕಿ ನೀಡಬೇಕು.

- ಎಚ್. ವಿ ಅನಂತ್ ಸುಬ್ಬಾರಾವ್, ಕೆಎಸ್‌ಆರ್‌ಟಿಸಿ ನೌಕರರ ಜಂಟಿ ಕ್ರಿಯಾ ಸಮಿತಿ ಅಧ್ಯಕ್ಷ

ಅಧಿಕಾರ ಇದ್ದಾಗ ನವರಂಗಿ ಆಟ, ಪ್ರತಿಪಕ್ಷದಲ್ಲಿದ್ದಾಗ ಗೋಸುಂಬೆ ನಾಟಕ. ಅಧಿಕಾರವಿದ್ದಾಗ ಹಗಲುವೇಷ, ವಿರೋಧಪಕ್ಷದಲ್ಲಿದ್ದಾಗ ರೋಷಾವೇಶ. ಆರ್ ಅಶೋಕ್ ಅವರೇ, ಈ ಬಣ್ಣನೆ ನಿಮ್ಮ ಆತ್ಮವಂಚಕ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ ಯಾಗಿದೆ. ಸಾರಿಗೆ ಸಂಸ್ಥೆಗಳ ಇತಿಹಾಸದಲ್ಲಿಯೇ ಮೊದಲ ಬಾರಿಗೆ 15 ದಿವಸಗಳ ಸುದೀರ್ಘ ಮುಷ್ಕರ ನಡೆದಾಗಲೂ ಸಾರಿಗೆ ಸಚಿವರಾಗಿ ಕೈಕಟ್ಟಿ ಕೂತು ತಮ್ಮ ಅಸಾಮರ್ಥ್ಯ ಪ್ರದರ್ಶಿಸಿದ್ದೂ ನೀವೇ ಅಲ್ಲವೇ?

- ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಾರಿಗೆ ನೌಕರರ ಮುಷ್ಕರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೂಡಲೇ ಪರಿಹಾರ ನೀಡಬೇಕು. ಸಾರಿಗೆ ಸಂಸ್ಥೆಗಳ ನೌಕರರಿಗೆ ವೇತನ ಕೊಡಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಬಹಳ ತಿಂಗಳಿಂದ ಆರ್ಥಿಕ ಮುಗ್ಗಟ್ಟು ಇದ್ದು, ಸಮಸ್ಯೆ ಉಲ್ಬಣವಾಗಿದೆ. ಹಾಗಾಗಿ ಅವರ ಬೇಡಿಕೆ ಈಡೇರಿಸಲು ಮುಖ್ಯಮಂತ್ರಿಗಳಿಗೆ ಸಾಧ್ಯವಾಗುತ್ತಿಲ್ಲ.

- ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಉತ್ತರಕಾಶಿಯಲ್ಲಿ ಭಾರೀ ಜಲ ಪ್ರಳಯ

ಡೆಹ್ರಾಡೂನ್: ಉತ್ತರಾಖಂಡ ರಾಜ್ಯದ ಉತ್ತರಕಾಶಿ ಜಿಲ್ಲೆಯಲ್ಲಿ ಮಂಗಳವಾರ ಅವಳಿ ಮೇಘಸ್ಫೋಟ ಸಂಭವಿಸಿದ್ದು, ಪ್ರಕೃತಿಯ ರೌದ್ರ ನರ್ತನಕ್ಕೆ ದೇವಭೂಮಿ ಅಕ್ಷರಶಃ ತತ್ತರಿಸಿ ಹೋಗಿದೆ. ಆರಂಭದಲ್ಲಿ ಉತ್ತರಕಾಶಿ ಜಿಲ್ಲೆಯ ಧರಾಲಿ ಗ್ರಾಮದಲ್ಲಿ ಮೇಘಸ್ಫೋಟ ಸಂಭವಿಸಿ ಪ್ರವಾಹ ಪರಿಸ್ಥಿತಿ ತಲೆದೋರಿತು. ಅದರ ಬೆನ್ನಲ್ಲೇ ಸುಖಿ ಟಾಪ್ ಗ್ರಾಮದಲ್ಲಿಯೂ ಮೇಘಸ್ಫೋಟ ಉಂಟಾಗಿದ್ದು, ಪ್ರವಾಹ ಗುಡ್ಡದಿಂದ ರಭಸದಿಂದ ಹರಿದು ಬಂದಿದೆ. ಈ ದುರಂತದಲ್ಲಿ ಧರಾಲಿ ಗ್ರಾಮದ 4 ಮಂದಿ ಮೃತಪಟ್ಟಿದ್ದು, 60ಕ್ಕೂ ಹೆಚ್ಚು ಮಂದಿ ನಾಪತ್ತೆಯಾಗಿದ್ದಾರೆ.

ಇಡೀ ಧರಾಲಿ ಗ್ರಾಮವೇ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದೆ ಎಂದು ವರದಿಯೊಂದು ತಿಳಿಸಿದೆ. ಸದ್ಯ ಸ್ಥಳಕ್ಕೆ ಅಧಿಕಾರಿಗಳು, ಭದ್ರತಾ ತಂಡದ ಸದಸ್ಯರು ಧಾವಿಸಿದ್ದು, ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಸುಖಿ ಟಾಪ್‌ನಲ್ಲಿ ಸಂಭವಿಸಿದ ಮೇಘಸ್ಫೋಟದಿಂದ ಯಾವುದೇ ಜೀವ ಹಾನಿಯಾಗಿರುವ ಬಗ್ಗೆ ವರದಿ ಬಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

→ 4

- ಉತ್ತರಾಖಂಡದ ಸುಖಿಟಾಪ್ ಗ್ರಾಮದಲ್ಲಿ ಘಟನೆ
- ಅವಳಿ ಮೇಘಸ್ಫೋಟದ ಘಟನೆ
- ಕೊಚ್ಚಿ ಹೋದ ಪೂರ್ತಿ ಗ್ರಾಮ
- 4 ಸಾವು, 60ಕ್ಕೂ ಹೆಚ್ಚು ಮಂದಿ ನಾಪತ್ತೆ
- ಕೇಂದ್ರ ಸರಕಾರದಿಂದ ಅಗತ್ಯ ನೆರವು

ವಿಷಲ್ ಮೂಲಕ ಅಪಾಯದ ಎಚ್ಚರಿಕೆ

ಉತ್ತರಾಖಂಡದ ಧರಾಲಿ ಗ್ರಾಮದಲ್ಲಿ ದಿಢೀರ್ ಪ್ರವಾಹ ಗ್ರಾಮದತ್ತ ನುಗ್ಗುವ ವಿಡಿಯೊಗಳು ಸೋಶಿಯಲ್ ಮೀಡಿ ಯಾದಲ್ಲಿ ಹರಿದಾಡುತ್ತಿವೆ. ಈ ವಿಡಿಯೊಗಳಲ್ಲಿ ಸ್ಥಳೀಯರು ಜೋರಾದ ಧ್ವನಿಯಲ್ಲಿ ವಿಷಲ್ ಹೊಡೆಯುತ್ತಿದ್ದಾರೆ. ಇತರರರನ್ನು ಎಚ್ಚರಿಸಲು ಸಾಮಾನ್ಯ ವಾಗಿ ಅಲ್ಲಿ ವಿಷಲ್ ಬಳಸಲಾಗುತ್ತದೆ. ಜೋರಾದ ಧ್ವನಿಯಲ್ಲಿ ವಿಷಲ್ ಹೊಡೆ ಯವುದು ಅಪಾಯದ ಮುನ್ನೆಚ್ಚರಿಕೆಯ ಸೂಚನೆಯಾಗಿದ್ದು, ಅದರಿಂದ ಜನರ ಗಮನವನ್ನು ಸುಲಭವಾಗಿ ಸೆಳೆಯ ಬಹುದೆಂಬ ಸಾಂಪ್ರದಾಯಿಕ ಎಚ್ಚರಿ ಕೆಯ ಕರೆಗಂಟೆ ಎನಿಸಿಕೊಂಡಿದೆ.

ಹೊಸ ಸ್ಥಳ ಮಹಜರಿಗೆ ಎಸಿ ಸೂಚನೆ, ಅಸಮಾಧಾನ
ಎಸಿ-ಎಸ್‌ಐಟಿ ಮಧ್ಯೆ ಗೊಂದಲ

ಧರ್ಮಸ್ಥಳ: ಶವಗಳನ್ನು ಹೂತಿಟ್ಟ ಶೋಧಕಾರ್ಯ ಪ್ರಕರಣದಲ್ಲಿ ಸಹಾಯಕ ಆಯುಕ್ತೆ (ಎ.ಸಿ) ಸ್ಟೆಲ್ಲಾ ವರ್ಗೀಸ್ ಹಾಗೂ ವಿಶೇಷ ತನಿಖಾ ತಂಡ (ಎಸ್ಐಟಿ) ನಡುವಿನ ಗೊಂದಲ ಜಗ'ಜ್ಜಾಹೀರಾಗಿದೆ. ಮಂಗಳವಾರ ಶೋಧ ಕಾರ್ಯಕ್ಕಾಗಿ ನಿಗದಿಪಡಿಸಿದ 11ನೇ ಪಾಯಿಂಟ್ ಬಿಟ್ಟು, ಪುತ್ತೂರು ಉಪ ವಿಭಾಗ ಎ.ಸಿ ಸ್ಟೆಲ್ಲಾ ವರ್ಗೀಸ್ ಹೊಸ ಸ್ಥಳದಲ್ಲಿ ಮಹಜರು ನಡೆಸಲು ಸೂಚಿಸಿದ ಕ್ರಮಕ್ಕೆ ಎಸ್‌ಐಟಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

→ 4

ಇನ್ನೊಂದೇ ಪಾಯಿಂಟ್ ಬಾಕಿ

ದೂರುದಾರ ನೀಡಿದ ಮಾಹಿತಿಯಂತೆ ಧರ್ಮಸ್ಥಳದ 11ನೇ ಪಾಯಿಂಟ್ ಮತ್ತು 12ನೇ ಪಾಯಿಂಟ್‌ನಲ್ಲಿ ಮಂಗಳವಾರ ಕಾರ್ಯಾಚರಣೆ ನಡೆಯಿತು. ಮುಖ್ಯರಸ್ತೆಯಿಂದ ಕೇವಲ 20 ಮೀ. ದೂರದಲ್ಲಿ ಎರಡೂ ಪಾಯಿಂಟ್‌ಗಳಲ್ಲಿಯೂ 6 ಅಡಿ ಗುಂಡಿ ತೋಡಿದರೂ ಯಾವುದೇ ಕಳೇಬರವಾಗಲಿ, ತಲೆ ಬುರುಡೆಗಳಾಗಲಿ ಪತ್ತೆಯಾಗಲಿಲ್ಲ. ಹಾಗಾಗಿ ಕೊನೆಗೆ ಹಿಟಾಚಿ ಮೂಲಕ ಅಗೆದ ಜಾಗವನ್ನು ಮುಚ್ಚಲಾಯಿತು. ಮಂಗಳವಾರ ಮಧ್ಯಾಹ್ನದ ಬಳಿಕ ಜೋರಾಗಿ ಮಳೆಯಾಗಿದ್ದ ಕಾರಣ ಉತ್ಖನನ ಕಾರ್ಯಕ್ಕೆ ಅಡ್ಡಿಯಾಯಿತು, ಆದರೂ ಕಾರ್ಮಿಕರು ಶ್ರಮವಹಿಸಿ ಮಣ್ಣು ತೆಗೆದು ಶೋಧನೆಯಲ್ಲಿ ತೊಡಗಿದ್ದರು.

ಪರೀಕ್ಷಾ ಪೆ ಚರ್ಚಾ
ಗಿನ್ನೆಸ್ ದಾಖಲೆ !

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ವಾರ್ಷಿಕ 'ಪರೀಕ್ಷಾ ಪೆ ಚರ್ಚಾ' ಕಾರ್ಯಕ್ರಮ 3.53 ಕೋಟಿಗೂ ಹೆಚ್ಚು ನೋಂದಣಿ ಮತ್ತು ದೂರದರ್ಶನದಲ್ಲಿ 21 ಕೋಟಿಗೂ ಹೆಚ್ಚು ವೀಕ್ಷಕರನ್ನು ಹೊಂದುವ ಮೂಲಕ ವಿಶ್ವದಾಖಲೆ ನಿರ್ಮಿಸಿದೆ.

ಪರೀಕ್ಷಾ ಪೆ ಚರ್ಚಾ ಗಿನ್ನೆಸ್ ವಿಶ್ವದಾಖಲೆ ಮಾಡಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಮಂಗಳವಾರ ತಿಳಿಸಿದ್ದಾರೆ. ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುವುದು, ಪರೀಕ್ಷೆಯ ಕುರಿತ ಭಯ ದೂರ ಮಾಡಿಕೊಳ್ಳುವುದು ಮೊದಲಾದ ಅಂಶಗಳ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲೆಂದೇ ಪ್ರಧಾನಿ ನರೇಂದ್ರ ಮೋದಿ ಅವರು 2018ರಲ್ಲಿ 'ಪರೀಕ್ಷಾ ಪೆ ಚರ್ಚಾ' ಕಾರ್ಯಕ್ರಮ ಆರಂಭಿಸಿದರು. ಅಂದಿನಿಂದ ಕಾರ್ಯಕ್ರಮ ನಿರಂತರವಾಗಿ ನಡೆದು ಬರುತ್ತಿದ್ದು, ಈಗ ವಿಶ್ವದಾಖಲೆಗೂ ಕಾರಣವಾಗಿದೆ.

→ 4

ಪಂತ್ ಸಹಾಯಹಸ್ತ

ಬಾಗಲಕೋಟೆ: ಪಿಯುಸಿಯಲ್ಲಿ ಉತ್ತಮ ಅಂಕಗಳಿಸಿದರೂ ಪದವಿ ಪ್ರವೇಶಾತಿಗೆ ಹಣವಿಲ್ಲದೇ ಪರದಾಡುತ್ತಿದ್ದ ವಿದ್ಯಾರ್ಥಿನಿಗೆ ಕ್ರಿಕೆಟ್ ಆಟಗಾರ ರಿಷಭ್ ಪಂತ್ ನೆರವಾಗಿ ಮಾನವೀಯತೆ ಮೆರೆದಿದ್ದಾರೆ. ಬೀಳಗಿ ತಾಲೂಕಿನ ಚವಡಾಪುರ ರಬಕವಿ ಗ್ರಾಮದ ಜ್ಯೋತಿ ಕಣಬೂರ ಪಿಯುಸಿಯಲ್ಲಿ ಶೇ.83 ಅಂಕಗಳಿಸಿದ್ದಳು.

ಚಹಾ ಅಂಗಡಿ ನಡೆಸುತ್ತಿರುವ ತಂದೆ ತೀರ್ಥಯ್ಯ ಮಗಳ ಕಲಿಕೆಗೂ ಹಣವಿಲ್ಲದೇ ಪರದಾಡುತ್ತಿದ್ದರು. ಅದೇ ಗ್ರಾಮದ ಗುತ್ತಿಗೆದಾರ ಅನಿಲ ಹುಣಶಿಕಟ್ಟಿ ಪಂತ್ ಅವರಿಗೆ ಆತ್ಮೀಯರಾ ಗಿರುವ ತಮ್ಮ ಬೆಂಗಳೂರಿನ ಸ್ನೇಹಿತ ಅಕ್ಷಯ ನಾಯಕ ಅವರನ್ನು ಸಂಪರ್ಕಿಸಿದ್ದರು. ಅಕ್ಷಯ ಅವರು ರಿಷಭ್ ಅವರ ಗಮನಕ್ಕೆ ತಂದಾಗ ನೆರವಿಗೆ ಬಂದಿರುವ ರಿಷಭ್ ಜು.17ರಂದು ಕಾಲೇಜಿನ ಖಾತೆಗೆ ನೇರವಾಗಿ ಜ್ಯೋತಿಯ ಮೊದಲ ಸೆಮಿಸ್ಟರ್‌ನ 40ಸಾವಿರ ರು.ಗಳ ಶುಲ್ಕವನ್ನು ತುಂಬಿದ್ದಾರೆ.

ದೇಶದ ಹಿತಾಸಕ್ತಿ ಕಾಯಲು ಎಲ್ಲಾ ಅಗತ್ಯ ಕ್ರಮ: ಭಾರತ
ಟ್ರಂಪ್‌ಗೆ ಭಾರತದ ಖಡಕ್ ಉತ್ತರ

ವಾಷಿಂಗ್ಟನ್: ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿ ಉಕ್ರೇನ್ ವಿರುದ್ಧದ ಯುದ್ಧಕ್ಕೆ ಸಹಕಾರ ನೀಡುತ್ತಿದೆ ಎನ್ನುವ ಹೇಳಿಕೆಗೆ ಭಾರತ ತಿರುಗೇಟು ಕೊಟ್ಟ ಬೆನ್ನಲ್ಲೇ ಟ್ರಂಪ್ ಮತ್ತಷ್ಟು ಸುಂಕ ವಿಧಿಸುವ ಬೆದರಿಕೆ ಹಾಕಿದ್ದಾರೆ. ಭಾರತದಿಂದ ಖರೀದಿಸುವ ಎಲ್ಲಾ ಆಮದು ವಸ್ತುಗಳ ಮೇಲೆ ಸುಂಕ ಗಣನೀಯ ಏರಿಕೆ ಮಾಡಲಾಗುವುದು ಎಂದೂ ಎಚ್ಚರಿಸಿದ್ದಾರೆ.

ರಷ್ಯಾದಿಂದ ದೊಡ್ಡ ಪ್ರಮಾಣದಲ್ಲಿ ಭಾರತ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತಿದೆ, ಆ ಮೂಲಕ ದೊಡ್ಡ ಪ್ರಮಾಣದಲ್ಲಿ ಲಾಭ ಮಾಡಿಕೊಳ್ಳುತ್ತಿದೆ. ಭಾರತವು ದೊಡ್ಡ ಪ್ರಮಾಣದಲ್ಲಿ ರಷ್ಯಾದ ತೈಲ ಮಾತ್ರ ಖರೀದಿಸುತ್ತಿಲ್ಲ, ಖರೀದಿಸಿದ ತೈಲವನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ, ದೊಡ್ಡ ಪ್ರಮಾಣದ ಲಾಭ ಮಾಡಿಕೊಳ್ಳುತ್ತಿದೆ ಎಂದು ತಮ್ಮ ಸಾಮಾಜಿಕ ಜಾಲತಾಣ ಟ್ರುಥ್ ಸೋಷಿಯಲ್‌ನಲ್ಲಿ ಟ್ರಂಪ್ ಬರೆದುಕೊಂಡಿದ್ದಾರೆ.

→ 4

ಪಾಕ್‌ಗೆ ನೆರವಾದ ಸುದ್ದಿ ನೆನಪಿಸಿದ ಭಾರತೀಯ ಸೇನೆ

1971ರಲ್ಲಿ ನಡೆದ ಯುದ್ಧದ ವೇಳೆ, ಶಸ್ತ್ರಾಸ್ತ್ರ ಪೂರೈಸುವುದು ಸೇರಿ ಪಾಕಿಸ್ತಾನಕ್ಕೆ ಅಮೆರಿಕ ನೀಡಿದ್ದ ನೆರವಿಗೆ ಸಂಬಂಧಿಸಿದ ಸುದ್ದಿಯೊಂದನ್ನು ಭಾರತ ಮಂಗಳವಾರ 'ಎಕ್ಸ್'ನಲ್ಲಿ ಹಂಚಿಕೊಂಡಿದೆ.ಸೇನೆಯ ಪೂರ್ವ ಕಮಾಂಡ್ ಈ ಸುದ್ದಿಯನ್ನು ಹಂಚಿಕೊಂಡಿದ್ದು, '1954ರಿಂದಲೂ ಅಮೆರಿಕ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಒದಗಿಸುತ್ತಿದೆ' ಎಂದು ಹೇಳಿದೆ. ರಕ್ಷಣಾ ಉತ್ಪಾದನಾ ಸಚಿವರಾಗಿದ್ದ ವಿ.ಸಿ. ಶುಕ್ಲಾ ಅವರು ರಾಜ್ಯಸಭೆಯಲ್ಲಿ ಮಾತನಾಡುವ ವೇಳೆ, ಪಾಕಿಸ್ತಾನಕ್ಕೆ ಅಮೆರಿಕ ನೆರವು ಒದಗಿಸುತ್ತಿರುವ ಕುರಿತು ನೀಡಿದ್ದ ಹೇಳಿಕೆ ಉಲ್ಲೇಖಿಸಿ ವರದಿ ಪ್ರಕಟವಾಗಿತ್ತು. ಆ ವರದಿಯನ್ನು ಸೇನೆ ಈಗ ಹಂಚಿಕೊಂಡಿದೆ.

ಸಮಾಚಾರ ಸಣ್ಣದಲ್ಲ

ರಕ್ಷಾಬಂಧನದ ಸಂಯುಕ್ತ ಕಾರ್ಯಕ್ರಮ ಆ.9ಕ್ಕೆ

ಕೆಂಭಾವಿ: ಪಟ್ಟಣದ ಹಿರೇಮಠದಲ್ಲಿ ಆ.9, ಶನಿವಾರದಂದು ಸಾಯಂಕಾಲ 7 ಗಂಟೆಗೆ ಸತ್ಸಂಗ ಮತ್ತು ರಕ್ಷಾಬಂಧನದ ಸಂಯುಕ್ತ ಕಾರ್ಯಕ್ರಮವನ್ನು ಶ್ರೀಮಠದ ಭಕ್ತ ವೃಂದ ಮತ್ತು ಕೆಂಭಾವಿಯ ವಿವೇಕ ಜಾಗೃತ ಬಳಗ ಸಂಯುಕ್ತಾಶ್ರಯದಲ್ಲಿ ಆಯೋಜಿಸ ಲಾಗಿದೆ ಎಂದು ಸತ್ಸಂಗಿ ಗುಡದಯ್ಯ ದಾವಣಗೆರೆ ತಿಳಿಸಿದ್ದಾರೆ. ಸತ್ಸಂಗದ ಸಂದರ್ಭದಲ್ಲಿ ಶ್ರೀಮಠದ ಪವಿತ್ರ ಪರಿಸರದಲ್ಲಿ ಸಂಗೀತ, ಭಜನೆಗಳು ಮತ್ತು ಧಾರ್ಮಿಕ ಉಪನ್ಯಾಸವನ್ನು ಹಮ್ಮಿಕೊಳ್ಳಲಾಗಿದೆ. ''ಸತ್ಸಂಗವು ಆತ್ಮಶುದ್ಧಿಯ ಮಾರ್ಗ, ಒಳ್ಳೆಯ ಸಂಗತಿಗಳ ಸಂಗದಿಂದ ಜೀವನಕ್ಕೆ ನವಚೈತನ್ಯ ಸಿಗುತ್ತದೆ,'' ಅಷ್ಟೇ ಅಲ್ಲದೆ ರಕ್ಷಾಬಂಧನದ ಕಾರ್ಯಕ್ರ ಮಯೂ ನೆರವೇರುವುದು. ಸಹೋದರ-ಸಹೋದ ರಿಯರ ಬಾಂಧವ್ಯವನ್ನು ಪ್ರತಿಬಿಂಬಿಸುವ ಮತ್ತು ಪವಿತ್ರ ಸಹೋದರತ್ವದ ಮತ್ತು ಸಹೋದರಿಯರ ಭದ್ರತೆಗಾಗಿ ಪ್ರತಿಜ್ಞೆ ಮತ್ತು ಶ್ರೀರಕ್ಷೆ ಕಟ್ಟುವ ಕಾರ್ಯಕ್ರಮವಿದೆ. ಕಾರಣ ತಾವೆಲ್ಲ ಭಾಗಿಯಾಗಿ ಗುರೂಜಿಯವರ ಕೃಪೆಗೆ ಪಾತ್ರರಾಗಬೇಕು. ಈ ಕಾರ್ಯಕ್ರಮದಿಂದ ಸಮಾಜದಲ್ಲಿ ಆತ್ಮೀಯತೆ, ಭಕ್ತಿ ಮತ್ತು ಭಾರತೀಯ ಸಂಸ್ಕೃತಿಯ ಮಹತ್ವ ಮೆರೆಯಲಿ. ಆಧ್ಯಾತ್ಮಿಕತೆಯೊಂದಿಗೆ ಭಾವನಾತ್ಮಕ ಹಬ್ಬವನ್ನೂ ಒಂದೇ ವೇದಿಕೆಯಲ್ಲಿ ಆಚರಿಸುವ ಅಪೂರ್ವ ಸತ್ಸಂಗವಾಗಲಿ ಎಂದು ತಿಳಿಸಿದ್ದಾರೆ. ಕಾರ್ಯಕ್ರಮಕ್ಕೆ 10 ನಿಮಿಷ ಮುಂಚಿತವಾಗಿ ಬನ್ನಿ, ಅಕ್ಕ ಪಕ್ಕದವರನ್ನು ಕರೆದುಕೊಂಡು ಬನ್ನಿ ಎಂದು ಕೋರಿದ್ದಾರೆ.

ಆಡಳಿತ ಮಂಡಳಿ ವಿಶೇಷ ಸಭೆ ಇಂದು

ಬೀದರ್: ಜಿಲ್ಲೆಯ ಅನುದಾನ ರಹಿತ ಹಾಗೂ ಅನುದಾನ ಸಹಿತ ಖಾಸಗಿ ಶಾಲಾ, ಕಾಲೇಜು ಆಡಳಿತ ಮಂಡಳಿಗಳ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳ ವಿಶೇಷ ಸಭೆ ಇಲ್ಲಿಯ ಬಿ.ವಿ. ಭೂಮರಡ್ಡಿ ಕಾಲೇಜಿನಲ್ಲಿ ನಡೆಯಲಿದೆ. ಕಲ್ಯಾಣ ಕರ್ನಾಟಕ ಅನುದಾನ ರಹಿತ ಖಾಸಗಿ ಶಾಲಾ ಆಡಳಿತ ಮಂಡಳಿ ಸಂಘದ ರಾಜ್ಯ ಅಧ್ಯಕ್ಷ ರೇವಣಸಿದ್ದಪ್ಪ ಜಲಾದೆ ಭಾಗವಹಿಸಲಿದ್ದಾರೆ. 1995ರ ನಂತರ ಆರಂಭವಾದ ಖಾಸಗಿ ಶಾಲಾ-ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವುದು, ಅನುದಾನಿತ ಶಾಲಾ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು ಹಾಗೂ ಖಾಸಗಿ ಶಾಲಾ-ಕಾಲೇಜುಗಳಿಗೆ ವಿಧಿಸಿರುವ ಷರತ್ತುಗಳನ್ನು ಸಡಿಲಗೊಳಿಸುವ ಕುರಿತು ಚರ್ಚೆ ನಡೆಯಲಿದೆ. ಸಭೆಯಲ್ಲಿ ಅನುದಾನ ರಹಿತ ಹಾಗೂ ಅನುದಾನ ಸಹಿತ ಖಾಸಗಿ ಶಾಲಾ-ಕಾಲೇಜು ಆಡಳಿತ ಮಂಡಳಿಗಳ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ತಪ್ಪದೇ ಭಾಗವಹಿಸಬೇಕು ಎಂದು ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ರಾಜೇಂದ್ರ ಮಣಗೀರೆ ಹಾಗೂ ಪ್ರಧಾನ ಕಾರ್ಯದರ್ಶಿ ಗುರುನಾಥ ರೆಡ್ಡಿ ಚಿಂತಾಕಿ ಮನವಿ ಮಾಡಿದ್ದಾರೆ.

ಪ್ರವೇಶಾತಿಗೆ ಅರ್ಜಿ ಆಹ್ವಾನ

ಬೀದರ: ಬಸವಕಲ್ಯಾಣದ ನಾರಾಯಣಪೂರದಲ್ಲಿರುವ ಜವಾಹರ ನವೋದಯ ವಿದ್ಯಾಲಯದಲ್ಲಿ 11ನೇ ತರಗತಿಯ ಖಾಲಿಯಿರುವ ಸೀಟುಗಳಿಗೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ರಾಜ್ಯ ಶಿಕ್ಷಣ ಇಲಾಖೆಯ ಹತ್ತನೇ ತರಗತಿಯಲ್ಲಿ ಶೆ. 60 ರಷ್ಟು ಅಂಕಗಳನ್ನು ಪಡೆದಿರಬೇಕು. ಅಲ್ಲದೇ ವಿಜ್ಞಾನ ಹಾಗೂ ಗಣಿತ ವಿಷಯದಲ್ಲಿಯೂ ಶೇ.60 ರಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು. ಅರ್ಜಿ ಸಲ್ಲಿಸಲು ಆ. 10 ಕೊನೆಯ ದಿನಾಂಕ ವಾಗಿದೆ. ಅಭ್ಯರ್ಥಿಗಳು ಖುದ್ದಾಗಿ ವಿದ್ಯಾಲಯ ದಿಂದ ಅರ್ಜಿ ಪಡೆದು ಅಥವಾ ವಿದ್ಯಾಲಯದ ವೆಬ್‌ಸೈಟ್ ನಿಂದ ಅರ್ಜಿ ಡೌನ್‌ಲೋಡ್ ಮಾಡಿ ಭರ್ತಿ ಮಾಡಿ ಆಗಸ್ಟ್.10 ರೊಳಗಾಗಿ ಅರ್ಜಿ ಸಲ್ಲಿಸಬೇಕೆಂದು ನವೋದಯ ವಿದ್ಯಾಲಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೃಹಸಚಿವ ಅಮಿತ್ ಶಾ ಹೊಸ ದಾಖಲೆ

ಯಾದಗಿರಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾರತದ ಇತಿಹಾಸದಲ್ಲಿ ಅತ್ಯಂತ ದೀರ್ಘಾವಧಿಯ ಗೃಹ ಸಚಿವರಾಗಿ ಹೊಸ ದಾಖಲೆಯನ್ನು ಸೃಷ್ಟಿಸಿ ಇತಿಹಾಸ ನಿರ್ಮಾಣ ಮಾಡಿದ್ದಾರೆ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ ಮತ್ತು ನಗರಸಭೆ ಅಧ್ಯಕ್ಷೆ ಲಲಿತಾ ಅನಪುರ ಸಂತಸ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಅಮಿತ್ ಶಾ ಅವರು 2019 ಮೇ 30, ಭಾರತದ ಗೃಹ ಸಚಿವರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಗೋವಿಂದ ವಲ್ಲಭ ಪಂತ್ ಮತ್ತು ಲಾಲ್ ಕೃಷ್ಣ ಅಡ್ವಾಣಿ ಅವರ ದಾಖಲೆಗಳನ್ನು ಹಿಂದಿಕ್ಕಿ ಅತಿ ಹೆಚ್ಚು ಕಾಲ ಗೃಹ ಸಚಿವರಾಗಿ ಸೇವೆ ಸಲ್ಲಿಸಿದ ಕೀರ್ತಿಗೆ ಪಾತ್ರರಾಗಲಿದ್ದಾರೆ. ಲಾಲ್ ಕೃಷ್ಣ ಅಡ್ವಾಣಿ ಅವರ 6 ವರ್ಷ 64 ದಿನಗಳ ಹಾಗೂ ಗೋವಿಂದ ವಲ್ಲಭ ಪಂತ್ ಅವರ 6 ವರ್ಷ 56 ದಿನಗಳ ದಾಖಲೆಯನ್ನು ಮುರಿದಿದ್ದಾರೆ ಎಂದಿದ್ದಾರೆ.

{ಆರ್.ಅಶೋಕ್ } ವಿಧಾನಸಭೆ ವಿಪಕ್ಷ ನಾಯಕ

ಶ್ರೀರಂಗಪಟ್ಟಣ ತಾಲೂಕಿನ ಕೃಷ್ಣರಾಜ ಸಾಗರಕ್ಕೆ ಟಿಪ್ಪುಸುಲ್ತಾನ್ ಸಾಗರ ಎಂದು ಮರುನಾಮಕರಣ ಮಾಡಲು ಕಾಂಗ್ರೆಸ್ ಹುನ್ನಾರ ನಡೆಸುತ್ತಿದೆ. ಇದಕ್ಕೆ ಸಚಿವ ಎಚ್.ಸಿ.ಮಹದೇವಪ್ಪ ಅವರು ಪೀಠಿಕೆ ಹಾಕಿದ್ದಾರೆ. ಕೃಷ್ಣರಾಜಸಾಗರ ಡ್ಯಾಂಗೆ ಟಿಪ್ಪು ಹೆಸರು ತಳಕು ಹಾಕುತ್ತಿರುವುದು ನಾಲ್ವಡಿ ಕೃಷ್ಣರಾಜ ಒಡೆಯರ್‌ಗೆ ಮಾಡಿದ ಅಪಮಾನ.

ಕೆಎಸ್ಆರ್‌ಟಿಸಿ ಸಿಬ್ಬಂದಿ ಮುಷ್ಕರ: ಎರಡು ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರ ಪರದಾಟ

ಮುಷ್ಕರ: ಖಾಸಗಿ ವಾಹನಗಳ ದರ್ಬಾರ್

ಯಾದಗಿರಿ: ರಾಜ್ಯ ಸಾರಿಗೆ ಸಂಸ್ಥೆ ನೌಕರರು ಮುಷ್ಕರದ ಬಿಸಿ ಗಡಿ ಜಿಲ್ಲೆಯ ಜನರಿಗೆ ತಟ್ಟಿದೆ. ಮುಂಗಡವಾಗಿ ರೈಲು ಪ್ರಯಾಣ, ಆಸ್ಪತ್ರೆ ಸೇರಿದಂತೆ ಹಲವು ಕಾರ್ಯಗಳಿಗೆ ತೆರಳಬೇಕಿರುವ ಜನರು ಪರಿತಪಿಸುವಂತಾಗಿದೆ.

ನಗರದಲ್ಲಿರುವ ಎರಡು ಬಸ್ ನಿಲ್ದಾಣಗಳತ್ತ ಬೆಳಿಗ್ಗೆ ಆಗಮಿಸಿದ ಪ್ರಯಾಣಿಕರಿಗೆ ಬಸ್ ಸಿಗದೇ ಪರದಾಟ ನಡೆಸುವುದು ಸರ್ವೆ ಸಾಮಾನ್ಯವಾಗಿತ್ತು. ಇನ್ನೂ ಇದನ್ನೇ ಬಂಡವಾಳ ಮಾಡಿಕೊಂಡ ಖಾಸಗಿ ವಾಹನ ಮಾಲೀಕರು ಪ್ರಯಾಣಿಕರಿಂದ ದುಪಟ್ಟು ಹಣ ವಸೂಲಿಗೆ ಇಳಿದರು.

ಗಡಿ ತಾಲೂಕು ಗುರುಮಠಕಲ್ ದಿಂದ ಯಾದಗಿರಿಗೆ ಸಾಮಾನ್ಯವಾಗಿ 50ರ. ಒಳಗೆ ಟಿಕೆಟ್ ದರ ಇದ್ದು, ಸಾರಿಗೆ ಬಸ್ ಬಂದ್ ಆಗಿರುವುದನ್ನು ಬಂಡವಾಳ ಮಾಡಿಕೊಂಡು ಖಾಸಗಿ ವಾಹನಗಳ ಚಾಲಕರು ಬಸ್ ನಿಲ್ದಾಣದಲ್ಲಿಯೇ ಖಾಸಗಿ ವಾಹನಗಳಲ್ಲಿ ಜನರನ್ನು ತುಂಬಿಕೊಂಡು ಹೆಚ್ಚಿನ ಹಣ ಪೀಕಲಾಯಿತು. ಈ ಬಗ್ಗೆ ಪ್ರಯಾಣಿಕರು ಹೆಚ್ಚಿನ ಹಣ ನೀಡಲು ಸಹಜವಾಗಿಯೇ ನಿರಾಕರಿಸಿದರೇ, ಪ್ರಯಾಣಿಕರನ್ನೇ ದಬಾಯಿಸಿ, ಹೋಗೊದಿದ್ದರೆ ಹೋಗು, ಎಲ್ಲರೂ ಹೋಗುತ್ತಿಲ್ಲವೇ ಎಂದು ಹೆದರಿಸಿ ಖಾಸಗಿ ವಾಹನಗಳ ಹತ್ತಿಸುತ್ತಿರುವುದು ಕಂಡು ಬಂತು.

ಇನ್ನೂ ತೆಲಂಗಾಣ ಮಹಾರಾಷ್ಟ್ರ ಸೇರಿದಂತೆ ವಿವಿಧೆಡೆ ತೆರಳಲು ಪ್ರಯಾಣಿಕರು ಮಹಿಳೆಯರು ಮಕ್ಕಳೊಂದಿಗೆ ಆಗಮಿಸಿದ್ದರು.ಬಸ್ ಇಲ್ಲದ ಕಾರಣ ಮರಳಿ ಮನೆಗೆ ತೆರಳಿದರು. ಹಿಂದು ಧರ್ಮೀಯರ ಪವಿತ್ರ ಶ್ರಾವಣ ಮಾಸ ಪ್ರಯುಕ್ತ ಆಧ್ಯಾತ್ಮಿಕ ಕೇಂದ್ರಗಳಿಗೆ ಭೇಟಿ ಕೊಡುವವರ ಸಂಖ್ಯೆ ಈ ಸಮಯದಲ್ಲಿ ಜಾಸ್ತಿ ಇರುತ್ತದೆ. ಸರಕಾರದ ಶಕ್ತಿ ಯೋಜನೆಯನ್ನು ನಂಬಿ ವಿವಿಧ ದೇವಸ್ಥಾನ ಕ್ಕೆ ತೆರಳಲು ಬಂದ ಮಹಿಳೆಯರು ನಿರಾಶೆಯಿಂದ ಮರಳಬೇಕಾಯಿತು.

ಸಾರಿಗೆ ಬಸ್ ಇಲ್ಲದ ಹಿನ್ನೆಲೆ ಕೆಲ ಪ್ರಯಾಣಿಕರು ಖಾಸಗಿ ವಾಹನಗಳಿಗೆ ಮೊರೆ ಹೋದರು. ಸಾರಿಗೆ ಸಿಬ್ಬಂದಿಯ ಮನವೊಲಿಸಲು ಮುಂದಾದರಾದರೂ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಕರ್ತವ್ಯಕ್ಕೆ ಹಾಜರಾಗದೆ ಸಾವಿರಕ್ಕೂ ಹೆಚ್ಚು ನೌಕರರಿಂದ ಮುಷ್ಕರ ನಡೆಯಿತು.

ರಾತ್ರಿ ವಿವಿಧ ಹಳ್ಳಿಗಳಿಗೆ ತೆರಳಿದ್ದ ಬಸ್‌ಗಳನ್ನು ಡಿಪೋಗೆ ತರುತ್ತಿರುವ ಸಾರಿಗೆ ನೌಕರರು ಇಲ್ಲಿಗೆ ತಂದು ನಿಲ್ಲಿಸುತ್ತಿದ್ದು ಸಹ ಕಂಡುಬಂದಿತ್ತು.ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ನಗರಕ್ಕೆ ತಟ್ಟಿದ ಸಾರಿಗೆ ಬಂದ್ ಬಿಸಿ, ಉತ್ತಮ ಪ್ರತಿಕ್ರಿಯೆ

ಶಹಾಪುರ: ಸಾರಿಗೆ ಇಲಾಖೆಯ ನೌಕರರು ತಮ್ಮ ಹಿಂಬಾಕಿ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಕೆಗೆ ಆಗ್ರಹಿಸಿ ರಾಜ್ಯ ಸಾರಿಗೆ ಸಂಸ್ಥೆ ನೌಕರರ ಮುಷ್ಕರಕ್ಕೆ ನಗರದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು, ಇನ್ನೂ ಮುಷ್ಕರ ತಿಳಿಯದೇ ಬಂದ ಪ್ರಯಾಣಿಕರು ಪರದಾಡಿದರು.

ನಗರಕ್ಕೆ ಬಂದ್ ಬಿಸಿ ತಟ್ಟಿತು. ರಸ್ತೆಗಿಳಿಯದ ಬಸ್‌ನ್ನು ಕಂಡು ಪ್ರತಿನಿತ್ಯ ಬೆಳಗಿನ ಜಾವವೇ ಎದ್ದು ದೂರದ ಶಾಲಾ, ಕಾಲೇಜು, ನೌಕರಿಗಳಿಗೆ ಹೋಗುವವರು ಭಾರಿ ಪರದಾಟ ನಡೆಸಿದರು. ಇದರಿಂದ ಆಟೋಗಳ ಮೊರೆ ಹೋದರು, ಆಟೋ, ಕ್ರೂಸರ್ ದವರು ಸದ ದುಪ್ಪಟ್ಟು ಹಣದ ಬೇಡಿಕೆ ಇಟ್ಟದ್ದರಿಂದ ಪ್ರಯಾಣಿಕರು ಮತ್ತಷ್ಟು ಪರದಾಡುವಂತಾಯಿತು. ಬಸ್ ನಿಲ್ದಾಣದಲ್ಲಿ ಜನರ ಹೋಡಾಟ ಇತ್ತು, ಆದರೆ ಬಸ್‌ಗಳು ಕಾರ್ಯ ನಿರ್ವಹಿಸಲಿಲ್ಲಾ.

ನೌಕರರ ಮುಷ್ಕರ: ಪ್ರಯಾಣಿಕರಿಗೆ ಸಂಕಟ

ಬಸವಕಲ್ಯಾಣ: ರಾಜ್ಯಾದ್ಯಂತ ಸಾರಿಗೆ ನೌಕರರು ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಕೆಗೆ ಒತ್ತಾಯಿಸಿ ಕರೆ ನೀಡಿರುವ ಅನಿರ್ದಿಷ್ಟಾವಧಿ ಮುಷ್ಕರದಿಂದ ನಗರದಲ್ಲಿ ಸಾರ್ವಜನಿಕರು ಸಂಚಾರಕ್ಕೆ ಪರದಾಡುವಂತಹ ಪರಿಸ್ಥಿತಿ ಎದುರಾಯಿತು. ದಿನನಿತ್ಯ ಸರಕಾರಿ ನೌಕರರು ಕಚೇರಿಗೆ ತೆರಳಲು ಹಾಗೂ ಶಾಲಾ ಕಾಲೇಜು ಮಕ್ಕಳು ಸೇರಿದಂತೆ ಸಾರ್ವಜನಿಕರಿಗೆ ಮುಷ್ಕರದ ಬಿಸಿ ತಟ್ಟಿದೆ. ಬಸ್ ಸಂಚಾರ ಸ್ಥಗಿತದಿಂದ ಖಾಸಗಿ ವಾಹನಗಳಲ್ಲಿ ತೆರಳಿರುವುದು ಕಂಡು ಬಂದಿದೆ.

ನನ್ನ ಸಂಬಂಧಿಕರು ಮಹಾರಾಷ್ಟ್ರದ ಲಾತೂರನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಅವರನ್ನು ನೋಡಲು ಹೋಗೋದಕ್ಕಾಗಿ ಬಸ್ ನಿಲ್ದಾಣಕ್ಕೆ ಬಂದೆ ಆದರೆ ಇಲ್ಲಿ ನೋಡಿದರೆ ಯಾವುದೇ ಬಸ್ಸುಗಳು ಚಲಿಸುತ್ತಿಲ್ಲ ತುಂಬಾ ಕಷ್ಟವಾಗಿದೆ.

– ಸೂರಜ್ ಪಾಟೀಲ್, ಸ್ಥಳೀಯ ನಿವಾಸಿ

ಸಾರ್ವಜನಿಕರು ಬಸ್ ಬಂದ ಇರುವುದನ್ನು ಅರಿತು ಬಸ್ ನಿಲ್ದಾಣದತ್ತ ಬಹುತೇಕರು ಸುಳಿಯಲಿಲ್ಲ. ಸರಕಾರಿ ಬಸ ಗಳು ಬಂದ್ ಆಗಿದ್ದ ಪರಿಣಾಮವಾಗಿ ಖಾಸಗಿ ವಾಹನ ಮಾಲೀಕರು ಜನರಿಂದ ಹೆಚ್ಚಿನ ಹಣ ವಸೂಲಿ ಮಾಡಿದ ಆರೋಪಗಳು ಕೇಳಿ ಬಂದವು. ದೂರದ ಊರುಗಳಿಗೆ ತೆರಳಬೇಕಾದ ಪ್ರಯಾಣಿಕರು ಮನೆ ಕಡೆಗೆ ಮುಖ ಮಾಡಿದರು. ನಿಲ್ದಾಣದ ಎದುರುಗಡೆ ಜಮಾಯಿಸಿದ ಪ್ರಯಾಣಿಕರು ಕ್ರೂಸರ್ ಅಟೋಗಳು ಸೇರಿದಂತೆ ಇನ್ನಿತರೆ ವಾಹನಗಳಲ್ಲಿ ತೆರಳಿದರು. ಧರಣಿಗೆ ಪ್ರಮುಖ ಕಾರಣವೆಂದರೆ, ಸಮಾನ ವೇತನ ನೀತಿ, ಪಿಂಚಣಿ ಸೌಲಭ್ಯ, ಸ್ಥಾಯೀಕರಣ ಹಾಗೂ ಸೇವಾ ಭದ್ರತೆ ಎಂಬ ಪ್ರಮುಖ ಬೇಡಿಕೆಗಳು. ನೌಕರರು ಸರಕಾರದ ಮೇಲಿನ ಅಸಮಾಧಾನ ವ್ಯಕ್ತಪಡಿಸುತ್ತಾ, ಕಳೆದ ಆರು ತಿಂಗಳಿಂದ ಮನವಿಗೆ ಸ್ಪಂದನೆ ಇಲ್ಲದೆ ಇರುವುದು. ಹಿಂಬಾಕಿ ಪಾವತಿ. ವೇತನ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳು ಮುಷ್ಕರಕ್ಕೆ ಕರೆ ನೀಡಿದರು ಆದ್ದರಿಂದ ಬಸ್ ಸಂಚಾರ ವ್ಯವಸ್ಥೆ ಸ್ಥಗಿತಗೊಳಿಸಲಾಗಿದೆ ಎಂದು ಸಾರಿಗೆ ಇಲಾಖೆಯ ಸಿಬ್ಬದಿಯೊಬ್ಬರು ತಿಳಿಸಿದರು.

ತೆಲಂಗಾಣ ಮಹಾರಾಷ್ಟ್ರ ಬಸ್ ಸಂಚಾರ

ವಿವಿಧ ಬೇಡಿಕೆಯ ಈಡೇರಿಸಲು ಆಗ್ರಹಿಸಿ ಕಲ್ಯಾಣ ಕರ್ನಾಟಕ ಸಾರಿಗೆ ನೌಕರರು ಕೆಲಸ ಸ್ಥಗಿತಗೊಳಿಸಿ ಮುಷ್ಕರ ನಡೆಸುತ್ತಿರುವುದರಿಂದ ಬಸ್ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದೆ. ನೆರೆಯ ತೆಲಂಗಾಣ ಮತ್ತು ಮಹಾರಾಷ್ಟ್ರದ ಬಸ್‌ಗಳು ಎಂದಿನಂತೆ ಸಂಚರಿಸಿದವು.

ಕುರಿಗಾರರ ಸಮಸ್ಯೆ ಮುಕ್ತಿಗೆ ಸರಕಾರ ಬದ್ಧ



ನಗರದ ತಾ.ಪಂ ಆವರಣದಲ್ಲಿ ವಲಸೆ ಕುರಿಗಾರರಿಗೆ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಗುರುತಿನ ಚೀಟಿ ವಿತರಿಸಿದರು.

ಶಹಾಪುರ: ರಾಜ್ಯ ಸರಕಾರ ಕುರಿಗಾರರ ಬಗ್ಗೆ ಹೆಚ್ಚು ಮುತುವರ್ಜಿ ವಹಿಸಿ ಕುರಿಗಾಹಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಯೋಜನೆ ರೂಪಿಸಿ ಹಿತ ಕಾಪಾಡುತ್ತಿದೆ, ಕುರಿಗಾರರದ್ದು ಏನೇ ಸಮಸ್ಯೆಗಳಿದ್ದರು ಮುಕ್ತಿಗೆ ಕಾಂಗ್ರೆಸ್ ಸರಕಾರ ಬದ್ಧವಾಗಿದೆ ಎಂದು ಸಣ್ಣ ಕೈಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಹೇಳಿದರು.

ನಗರದ ತಾ.ಪಂ ಆವರಣದಲ್ಲಿ ವಲಸೆ ಕುರಿಗಾರರಿಗೆ ಗುರುತಿನ ಚೀಟಿ ವಿತರಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2013 ರಿಂದ 18 ರವರೆಗೆ ಅಧಿಕಾರದಲ್ಲಿದ್ದಾಗ ಕುರಿಗಳು ಅನಾಹುತದಲ್ಲಿ ಕುರಿಗಳು ಸಾವನ್ನಪ್ಪಿದರೆ ಪರಿಹಾರ ನಿಧಿ ನೀಡಲಾಗುತಿತ್ತು. ನಂತರ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದಾಗ ಕುರಿಗಾಹಿಗಳ ಯೋಜನೆಯನ್ನು ನಿಲ್ಲಿಸಿತ್ತು, ಇದೀಗ ಕಾಂಗ್ರೆಸ್ ಸರಕಾರ ಮತ್ತೆ ಅಧಿಕಾರಕ್ಕೆ ಬಂದ ನಂತರ ಒಂದು ಕುರಿಗೆ 7.500 ರು ಪರಿಹಾರ ನೀಡುವ ಕಾರ್ಯಕ್ಕೆ ಮರು ಚಾಲನೆ ಪಡೆದಿವೆ ಎಂದರು.

ನಮ್ಮ ತಾಲೂಕಿನಲ್ಲಿ ಕುರಿ, ಮೇಕೆಗಳಿಗೆ ಹೆಚ್ಚು ಬೇಡಿಕೆಗಳಿದ್ದು, ದೂರದ ಗುಜರಾತ್ ಸೇರಿದಂತೆ ಇನ್ನೀತರ ರಾಜ್ಯಗಳ, ಜಿಲ್ಲೆಗಳ ಜನರು ಬಂದು ಇಲ್ಲಿನ ಕುರಿಗಳು, ಮೇಕೆಗಳನ್ನು ಖರೀದಿಸುತ್ತಾರೆ. ಮತ್ತು ಡಿಸಿಸಿ ಬ್ಯಾಂಕ್ ,ಖಾದಿ ಬೋರ್ಡ್ ಒಪ್ಪಂದ ಮಾಡಿಕೊಂಡಿದ್ದು 2 ಲಕ್ಷ್ಯದ ವರೆಗೆ ಕುರಿ ಖರೀದಿ ಮಾಡಲು ಸಾಲ ನೀಡುವ ಯೋಜನೆ ರೂಪಿಸಲಾಗಿದೆ ಇದರಿಂದ ಅನುಕೂಲವಾಗಲಿದೆ. ಸಾಕಷ್ಟು ತೊಂದರೆಗಳ ನಡುವೆ ಕೊಟ್ಟ ಮಾತಂತೆ 5 ಗ್ಯಾರಂಟಿಗಳನ್ನು ಸರಕಾರ ನೀಡುತ್ತಿದೆ ಎಂದು ತಿಳಿಸಿದರು.

ಗೊಬ್ಬರ ಬಗ್ಗೆ ರೈತರು ಕಾಳಜಿ ವಹಿಸಬೇಕು, ಹೆಚ್ಚಿನ ದರಕ್ಕೆ ಯೂರಿಯ ಮಾರಾಟ ಮಾಡುವ ಅಂಗಡಿಗಳನ್ನು ಅಧಿಕಾರಿಗಳು ಬಂದ್ ಮಾಡಿಸಬೇಕು. ಯೂರಿಯಾ, ಡಿಎಪಿ ದಾಸ್ತಾನು ಕಡಿಮೆಯಿದ್ದು, ಇದಕ್ಕೆ ರಾಜ್ಯ ಸರ್ಕಾರ ಸಂಭಂಧವಿಲ್ಲಾ. ಕೇಂದ್ರ ಸರ್ಕಾರ ಸಮಯಕ್ಕೆ ಸರಿಯಾಗಿ ಯೂರಿಯಾವನ್ನು ನೀಡಿದಾಗ ರೈತರಿಗೆ ಅನುಕೂಲವಾಗಲಿದೆ.

-ಶರಣಬಸಪ್ಪಗೌಡ ದರ್ಶನಾಪುರ, ಸಚಿವರು

ಕುರಿ ಮತ್ತು ಮೇಕೆ ಸಾಕಾಣಿಕೆದಾರ ಮಹಾಮಂಡಳಿ ನಿರ್ದೇಶಕ ಶಾಂತಗೌಡ ನಾಗನಟಗಿ ಮಾತನಾಡಿ, ಅರಣ್ಯ ಪ್ರದೇಶಗಳಲ್ಲಿ ಕುರಿ, ಮೇಕೆ ಮತ್ತು ಜಾನುವಾರಗಳನ್ನು ಮೇಯಿಸಲು ಅನುಮತಿ ಕೊಡಬೇಕು ಈ ಬಗ್ಗೆ ಸಚಿವವರು ಸಹ ಅರಣ್ಯ ಇಲಾಖೆಯ ಸಚಿವರಾದ ಈಶ್ವರ ಖಂಡ್ರೆ ಅವರಿಗೆ ಒತ್ತಾಯಿಸಬೇಕು ಮತ್ತು ಕುರಿಗಾರರ ಹಿತ ರಕ್ಷಣಾ ಕಾಯ್ದೆ ಜಾರಿ ಮಾಡಿ ಕುರಿಗಾರರ ಹಿತವನ್ನು ಕಾಪಾಡಬೇಕು. ಕುರಿಗಾರರಿಗೆ ಜಿರೋ ಬಡ್ಡಿ ದರದಲ್ಲಿ ಸಾಲ ವಿತರಿಸಬೇಕು ಎಂದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ಮೆಹರೂನ ಬೇಗಂ, ಪಶುಪಾಲನ ಇಲಾಖೆಯ ಉಪನಿರ್ದೇಶಕ ಡಾ.ರಾಜು ದೇಶಮುಖ, ತಹಸೀಲ್ದಾರ್ ಸಿದ್ದಾರೂಢ ಬನ್ನಿಕೊಪ್ಪ, ತಾ.ಪಂ ಇಒ ಬಸವರಾಜ ಶರಬೈ, ಪೌರಾಯುಕ್ತ ಜೀವನ್, ಸಹಾಯಕ ನಿರ್ದೇಶಕ ರಾಜಶೇಖರ ಕಸಬಾ, ಗೌಡಪ್ಪಗೌಡ ಆಲ್ದಾಳ, ಪಶು ವೈದ್ಯಾಧಿಕಾರಿ ಡಾ.ಶರಣಭೂಪಾಲ ರೆಡ್ಡಿ, ಡಾ. ಅಣ್ಣಾರಾವ್ ಪಾಟೀಲ್, ಬಸವರಾಜ ಪೂಜಾರಿ ಕೆಂಭಾವಿ, ಮುನಿಯಪ್ಪಗೌಡ, ಭೀಮಣಗೌಡ, ತಿರುಪತಿ ಬಾಣತಿಹಾಳ, ಮಲ್ಲಣಗೌಡ ತಿಪ್ಪನಹಳ್ಳಿ, ಶರಬಣ್ಣ ರಸ್ತಾಪುರ, ಮಾಳಪ್ಪ ಸೇರಿದಂತೆ ಸಿಬ್ಬಂದಿಗಳು, ಕುರಿಗಾರರು ಇದ್ದರು.

ಆ.16ರಂದು ಶ್ರೀಕೃಷ್ಣ ಜಯಂತಿ ಅರ್ಥಪೂರ್ಣ ಆಚರಣೆಗೆ ಸಿದ್ಧತೆ



ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ್ ಅವರ ಅಧ್ಯಕ್ಷತೆಯಲ್ಲಿ ಶ್ರೀ ಕೃಷ್ಣ ಜಯಂತಿ ಆಚರಣೆ ಕುರಿತು ನಡೆದ ಪೂರ್ವಭಾವಿ ಸಿದ್ಧತಾ ಸಭೆ ನಡೆಯಿತು.

ಯಾದಗಿರಿ: ಜಿಲ್ಲಾಡಳಿತದವತಿಯಿಂದ ಜಿಲ್ಲೆಯಲ್ಲಿ ಇದೇ ಆ.16ರಂದು ಶ್ರೀ ಕೃಷ್ಣ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ. ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ್ ಅವರ ಅಧ್ಯಕ್ಷತೆಯಲ್ಲಿ ಶ್ರೀ ಕೃಷ್ಣ ಜಯಂತಿ ಆಚರಣೆ ಕುರಿತು ನಡೆದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಇದೇ ಆಗಸ್ಟ್ 16 ರ ಶ್ರೀ ಕೃಷ್ಣನ ಜಯಂತಿಯನ್ನು ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಆಚರಿಸಲು ನಿರ್ಧರಿಸಲಾಗಿದ್ದು, ಅವಶ್ಯಕ ಸಿದ್ಧತೆ ಮಾಡಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ವೇದಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಶಿಷ್ಟಾಚಾರದಂತೆ ಅತಿಥಿ ಗಣ್ಯರನ್ನು ಆಹ್ವಾನಿಸಲು, ವೇದಿಕೆ, ಆಹ್ವಾನ ಪತ್ರಿಕೆ, ವೇದಿಕೆ ಸಿದ್ದತೆ ಮಾಡಿಕೊಳ್ಳುವಂತೆ ಹಾಗೂ ನುರಿತ ಉಪನ್ಯಾಸಕರನ್ನು ಆಹ್ವಾನಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾ, ಗ್ರಾಮ ಪಂಚಾಯಿತಿ, ತಾಲೂಕು ಮಟ್ಟ ಹಾಗೂ ಶಾಲಾ, ಕಾಲೇಜು, ಕಚೇರಿಯಲ್ಲಿ ಜಯಂತಿ ಆಚರಣೆಗೆ ಕ್ರಮ ಕೈಗೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಕಾರ್ಯಕ್ರಮವು ಶಿಸ್ತುಬದ್ದವಾಗಿ ನಡೆಯಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ ಸ್ವಾಗತಿಸಿದರು. ಸಮಾಜದ ಮುಖಂಡರಾದ ಯಾದವ್ ಸಮಾಜದ ಜಿಲ್ಲಾಧ್ಯಕ್ಷ ತಾಯಪ್ಪ ಯಾದವ್, ತಾಲೂಕಾಧ್ಯಕ್ಷ ನಾಗಪ್ಪ ಯಾದವ್, ಯಲ್ಲಪ್ಪ ಯಾದವ್ ಮೋಟ್ನಳ್ಳಿ, ನಾಗಪ್ಪ ಯಾದವ್ ಹೊಸಳ್ಳಿ, ಶರಣು ಕುಮಾರ್ ಯಾದವ್, ಹಣುಮಂತ ಯಾದವ್, ಚಂದ್ರಪ್ಪ ಯಾದವ್ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ತಾಯಂದಿರ ಆರೋಗ್ಯ ಸುಧಾರಣೆಗೆ ಸ್ತನ್ಯಪಾನ ಸಪ್ತಾಹ

ಬೀದರ್: ದೇಶಾದ್ಯಂತ ಸ್ತನ್ಯಪಾನದ ಮಹತ್ವವನ್ನು ತಿಳಿಸಲು ಹಾಗೂ ಶಿಶುಗಳ ಮತ್ತು ತಾಯಂದಿರ ಆರೋಗ್ಯ ಸುಧಾರಣೆಗಾಗಿ ಸ್ತನ್ಯಪಾನವನ್ನು ಮುಂದುವರೆಸಲು, ಉತ್ತೇಜಿಸಲು ಮತ್ತು ಬೆಂಬಲಿಸಲು ಆಗಸ್ಟ್.1 ರಿಂದ 7 ರವರೆಗೆ ವಿಶ್ವ ಸ್ತನ್ಯಪಾನ ಸಪ್ತಾಹ ಆಚರಿಸಲಾಗುತ್ತಿದೆ ಎಂದು ಬೀದರ್ ಆರ್.ಸಿ.ಎಚ್ ಅಧಿಕಾರಿ ಡಾ.ಶಿವಶಂಕರ ಬಿ. ಅವರು ತಿಳಿಸಿದರು.

ಅವರು ಮಂಗಳವಾರ ತಾಯಿ ಮತ್ತು ಮಕ್ಕಳ ಆರೈಕೆ ಕೇಂದ್ರ, ನೂರು ಹಾಸಿಗೆ ಆಸ್ಪತ್ರೆ ಬೀದರನಲ್ಲಿ ಹಮ್ಮಿಕೊಂಡಿದ್ದ ವಿಶ್ವ ಸ್ತನ್ಯಪಾನ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ತಾಯಿಯ ಹಾಲು ನೀಡುವುದರಲ್ಲಿ ಹೂಡಿಕೆ ಮಾಡಿದರೆ ಮಕ್ಕಳ ಆರೋಗ್ಯಕರ ಭವಿಷ್ಯಕ್ಕಾಗಿ ಹೂಡಿಕೆ ಮಾಡಿದಂತೆ ಎಂಬ ಈ ವರ್ಷದ ಘೋಷವಾಕ್ಯದೊಂದಿಗೆ ವಿಶ್ವ ಸ್ತನ್ಯಪಾನ ಸಪ್ತಾಹ'' ಎಂಬ ಈ ವರ್ಷದ ಘೋಷವಾಕ್ಯದೊಂದಿಗೆ ಎಲ್ಲೆಡೆ ಜಾಗತಿಕ ಅಭಿಯಾನವಾಗಿ ಆಚರಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಬೀದರ ತಾಯಿ ಮತ್ತು ಮಕ್ಕಳ ಆರೈಕೆ ಕೇಂದ್ರ, ನೂರು ಹಾಸಿಗೆ ಆಸ್ಪತ್ರೆಯ ಸ್ತ್ರೀರೋಗ ತಜ್ಞ ಡಾ.ಸರೋಜ ಪಾಟೀಲ ಮಾತನಾಡಿ, ಜಿಲ್ಲೆಯ ಎಲ್ಲಾ ಆರೋಗ್ಯ ಸಂಸ್ಥೆಯ ಅಂದರೆ ಸಾರ್ವಜನಿಕ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಎಸ್.ಎನ್.ಸಿ.ಯು, ಎಸ್.ಬಿ.ಎಸ್.ಯು, ಎನ್.ಆರ್.ಸಿ, ಪಿ.ಎನ್.ಸಿ.ಯು, ಮಕ್ಕಳವಾರ್ಡ್ ಕಾರ್ಯತಂತ್ರದ ಸ್ಥಳಗಳಲ್ಲಿ ವಿಶೇಷವಾಗಿ ಸ್ತನ್ಯಪಾನಕ್ಕಾಗಿ ಒಂದು ಕೊಠಡಿ ಮೀಸಲಿದೆ ಎಂದರು. ಬೀದರ ತಾಯಿ ಮತ್ತು ಮಕ್ಕಳ ಆರೈಕೆ ಕೇಂದ್ರ, ನೂರು ಹಾಸಿಗೆ ಆಸ್ಪತ್ರೆಯ ಮಕ್ಕಳ ತಜ್ಞ ಡಾ.ವರ್ಷಾ ತೊಂಡಾರೆ ಅವರು ಮಾತನಾಡಿದರು. ಜಿಲ್ಲಾ ಕಾರ್ಯಕ್ರಮ ಸಂಯೋಜಕ ಶಿವಶಂಕರ ಬೇಮಳಗಿ. ಡಾ. ಗೌಸ್ ಪಾಶಾ ಮಕ್ಕಳ ತಜ್ಞರು, ಡಾ. ಪ್ರೀತಿ ಬಿರಾದರ ಸ್ತ್ರೀರೋಗ ತಜ್ಞರು,. ಭಾಗ್ಯಲಕ್ಷ್ಮಿ ಪ್ರ.ಡಿ.ಎನ್.ಒ., ಸಂಗೀತಾ ಡಿ.ಸಿ.ಎಂ, ರವಿ. ಡಿ.ಡಿ.ಎಂ, ಅನಿತಾ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಬೀದರ ನಗರದ ಆಸ್ಪತ್ರೆಯಲ್ಲಿ ವಿಶ್ವ ಸ್ತನ್ಯಪಾನ ಕಾರ್ಯಕ್ರಮದಲ್ಲಿ ಡಾ. ಶಿವಶಂಕರ ಬಿ. ಅವರು ಉದ್ಘಾಟಿಸಿದರು.

ದೇವಸ್ಥಾನಕ್ಕೆ ಸಂಸದ ಅನುದಾನ : ಮೆಚ್ಚುಗೆ

ಔರಾದ್: ಪಟ್ಟಣದ ಉದ್ಭವಲಿಂಗ ಶ್ರೀ ಅಮರೇಶ್ವರ ದೇವಸ್ಥಾನಕ್ಕೆ ಸಂಸದ ಸಾಗರ ಖಂಡ್ರೆ ಅವರು ಸಂಸದರ ಅನುದಾನದಡಿ 1 ಕೋಟಿ ಅನುದಾನ ನೀಡಲುತ್ತಿರುವುದು ಈ ಭಾಗದ ಲಕ್ಷಾಂತರ ಭಕ್ತರಿಗೆ ಅನುಕೂಲವಾಗಲಿದೆ ಎಂದು ಕಾಂಗ್ರೆಸ್ ಮುಖಂಡ ಡಾ. ಭೀಮಸೇನರಾವ ಶಿಂಧೆ ಹೇಳಿದರು. ಈ ಕುರಿತು ಮಂಗಳವಾರ ಪತ್ರಿಕಾ ಪ್ರಕಟಣೆ ನೀಡಿದ ಅವರು ಸಾಗರ ಖಂಡ್ರೆ ಅವರು ಸಂಸದರಾದ ಮೇಲೆ ಔರಾದ್ ಕ್ಷೇತ್ರದ ಅಭಿವೃದ್ಧಿಗೆ ಅನೇಕ ಕೆಲಸಗಳು ಮಾಡುತ್ತಿದ್ದಾರೆ. ಇಲ್ಲಿಯ ಭಕ್ತರ ಬಹುದಿನಗಳ ಬೇಡಿಕೆಯಾದ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಅನುದಾನ ನೀಡುತ್ತಿದ್ದಾರೆ. ಭಕ್ತರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದರು. ದೇವಸ್ಥಾನದ ಬಗ್ಗೆ ಈಗಾಗಲೇ ನಾನು ಕುಡಾ ಸಂಸದರೊಂದಿಗೆ ಹಾಗೂ ಸ್ಥಳೀಯ ಅಧಿಕಾರಿಗಳೊಂದಿಗೆ ಚರ್ಚಿಸಿದ್ದೇನೆ. ಅಲ್ಲದೇ ಮುಜರಾಯಿ ಇಲಾಖೆ, ಪ್ರವಾಸೋದ್ಯಮ ಇಲಾಖೆಗೂ ಪತ್ರ ಬರೆಯುವ ಮೂಲಕ ಇನ್ನೂ ಹೆಚ್ಚಿನ ಅನುದಾನದ ಬೇಡಿಕೆ ಈಡೇರಿಸಲಾಗುತ್ತದೆ ಎಂದು ಭರವಸೆ ನೀಡಿದರು. ಈ ಭಾಗದ ಅಮರೇಶ್ವರ ದೇವಸ್ಥಾನ ಅಭಿವೃದ್ಧಿಗೆ ನಾನು ಎಲ್ಲ ರೀತಿಯ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು. ಕಾಮಗಾರಿಗೆ ಪೂಜೆ ನೇರವೇರಿಸಿ, ಚಾಲನೆ ನೀಡುವಂತೆ ಸಂಸದ ಸಾಗರ ಖಂಡ್ರೆ ಅವರಿಗೆ ಭೇಟಿ ಮಾಡಿ ಮನವಿ ಮಾಡಿಕೊಳ್ಳುತ್ತೇನೆ ಎಂದರು.

ಸದ್ಗುಣಗಳ ದೀಕ್ಷೆ ಹರಿಕಾರರು: ದುಶ್ಚಟಗಳ ನಿರ್ಮೂಲನೆಗೆ ಜೋಳಿಗೆ

ಗುರುಬಸವ ಪಟ್ಟದ್ದೇವರ ಜನ್ಮದಿನ ಇಂದು

ಚನ್ನಬಸವ ಮೋಕ್ತೆದಾರ, ಬೀದರ್



ಹುಟ್ಟು ಉಚಿತ, ಸಾವು ಖಚಿತವಾಗಿರುವ ಬದುಕಿನಲ್ಲಿ ಭಗವಂತ ಕರುಣಿಸಿರುವ ಜೀವನಕ್ಕೆ ಅರ್ಥ ಬರಬೇಕಾದರೆ ಜೀವನದಲ್ಲಿ ಸಮಾಜೋಪಯೋಗಿ, ಮಾನವೀಯ, ಜಗಮೆಚ್ಚುವ ಮೌಲ್ಯಯುತ ಕಾರ್ಯಗಳನ್ನು ಮಾಡಬೇಕಾಗಿರುವುದು ಅತ್ಯವಶ್ಯ. ಈ ನಿಟ್ಟಿನಲ್ಲಿ ಭಕ್ತರ, ಸಹೃದಯಿಗಳ, ವಿದ್ಯಾರ್ಥಿಗಳ ಹೃದಯದಲ್ಲಿ ಮನೆ ಮಾತಾಗಿ ರುವವರು ಭಾಲ್ಕಿ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರು. ಮಠಕೆ ಪೀಠಾಧಿಪತಿಯಾಗಿ ಕೇವಲ ಕುರ್ಚಿಗೆ ಅಂಟಿಕೊಳ್ಳದೆ, ಭಕ್ತರ ದರುಶನಕ್ಕೆ ಮಾತ್ರ ತಮ್ಮನ್ನು ತಾವು ಮೀಸಲಿರಿಸಿಕೊಳ್ಳದೆ. ಸಮಾಜದ ಸರ್ವತೋಮುಖ ಏಳ್ಗೆಗಾಗಿ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಮಾನವೀಯ ಕಾರ್ಯಗಳ ಮೂಲಕ ಸಮಾಜದಲ್ಲಿ ಬದಲಾವಣೆಯನ್ನು ತರಲು ಹಗಲಿರಲು ಶ್ರಮಿಸಿದವರು ಶ್ರೀಗಳು. ಬಡವರಲ್ಲಿಯೇ ಕಷ್ಟಗಳು ಎಂಬಂತೆ ಹಿಂದುಳಿದವರಿಂದಲೇ ದುಶ್ಚಟಗಳ ನಿರ್ಮೂಲನೆಗೆ ಭಿಕ್ಷೆ ಬೇಡಿ ಸುಂದರ ಜೀವನ ನಡೆಸಲು ಸದ್ಗುಣಗಳ ದೀಕ್ಷೆ ನೀಡಿದವರು ಶ್ರೀಗಳು.

ಈ ಮಹೋನ್ನತ ಮಾನವೀಯ ಕಾರ್ಯವನ್ನು ಪರಿಗಣಿಸಿ ರಾಜ್ಯ ಮದ್ಯಪಾನ ಸಂಯಮ ಮಂಡಳಿ 2020-21ನೇ ಸಾಲಿನ ಸಂಯಮ ಪ್ರಶಸ್ತಿ ನೀಡಿ ಗೌರವಿಸಿದೆ. ಆ ಮೂಲಕ ಈ ಪ್ರಶಸ್ತಿಯ ಘನತೆಯೂ ಹೆಚ್ಚಾಗಿದೆ ಎಂದರೆ ಅತಿಶಯೋಕ್ತಿ ಆಗಲಾರದು.

ಯಾವುದೇ ಆಸೆ ಆಕಾಂಕ್ಷೆಗಳನ್ನು ಇಲ್ಲದೇ ನಿಶ್ವಾರ್ಥವಾಗಿ ಸಮಾಜ ಸೇವೆಗೈಯುತ್ತಿರುವ ಹಿರೇಮಠ ಸಂಸ್ಥಾನದ ಪಿಠಾಧೀಪತಿ ಗುರುಬಸವ ಪಟ್ಟದೇವರು ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ಅಪ್ಪಿಕೊಂಡು ಅಕ್ಷರಶಃ ಅದರಂತೆ ಬದುಕು ಸಾಗಿಸಿದವರು. ಡಾ.ಚನ್ನಬಸವ ಪಟ್ಟದ್ದೇವರು, ಡಾ.ಬಸವಲಿಂಗ ಪಟ್ಟದ್ದೇವರು ತೋರಿದ ದಾರಿಯಲ್ಲಿ ನಡೆಯುತ್ತಿರುವ ಶ್ರೀಗಳು ಬಸವತತ್ವ ಪ್ರಚಾರ, ಪ್ರಸಾರದ ಜತೆಗೆ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಸೇವೆ ಸಲ್ಲಿಸುತ್ತಿರುವುದನ್ನು ಸಮಾಜದ ಪ್ರಮುಖರು, ಚಿಂತಕರು, ಸಾಹಿತಿಗಳು, ರಾಜಕಾರಣಿಗಳು ಮುಕ್ತ ಕಂಠದಿಂದ ಪ್ರಶಂಶಿಸುತ್ತಾರೆ.

-ಶಶಿಧರ ಕೋಸಂಬೆ, ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಸದಸ್ಯ

ಅನಾಥರ ಆಶಾಕಿರಣ ಮಾತೃಹೃದಯಿ

ಸದಾ ಕ್ರಿಯಾಶೀಲ ಸ್ವಾಮೀಜಿ ಅವರು ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಆಶ್ರಯ ನೀಡುವ ಗುಣ ಹೊಂದಿರುವ ಪೂಜ್ಯರು ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಂಡು ಬಡ ವಿದ್ಯಾರ್ಥಿಗಳಿಗೆ ಬೆನ್ನೆಲುಬಾಗಿ ನಿಲ್ಲುವ ಮೂಲಕ ಶಿಕ್ಷಣ ಒದಗಿಸಿಕೊಡಲು ಶ್ರಮಿಸಿದವರು ಅನಾಥರ ಆಶಾಕಿರಣ ಮಾತೃಹೃದಯಿಯಾಗಿದ್ದಾರೆ.

ಭಕ್ತರ ದುಶ್ಚಟಗಳ ಭಿಕ್ಷೆ ಬೇಡಿದ ಶ್ರೀಗಳು

ದುರ್ಗುಣ ದುಶ್ಚಟಗಳಿಂದ ಮುಕ್ತರಾಗಲು ಶ್ರೀಗಳು ಭಕ್ತರಲ್ಲಿ ಜೋಳಿಗೆ ಹಿಡಿದು ಭಿಕ್ಷೆ ಕ್ರಾಂತಿಯನ್ನೆ ಪ್ರಾರಂಭಿಸಿದರು. ಗಡಿ ಭಾಗದ ಜನರು ವ್ಯಸನಗಳಿಗೆ ಬಲಿಯಾಗಬಾರದು ಎಂದು ದುಶ್ಚಟಗಳ ನಿರ್ಮೂಲನೆಗೆ ಭಿಕ್ಷೆ ಬೇಡುವ ಮೂಲಕ ಭಕ್ತರು ಸುಂದರ ಜೀವನ ನಡೆಸಲು ಹೊಸ ಕ್ರಾಂತಿಯನ್ನೆ ಕೈಗೊಂಡಿದ್ದರು.

ಕಲಬುರಗಿ ಜನರಿಗೆ ತಟ್ಟಿದ ಬಿಸಿ | ವಿದ್ಯಾರ್ಥಿಗಳು, ನೌಕರರು, ದೂರದೂರಿಗೆ ತೆರಳುವವರ ಪರದಾಟ | ಪರ್ಯಾಯ ವಾಹನಗಳಲ್ಲಿ ಪ್ರಯಾಣ

ಸಾರಿಗೆ ನೌಕರರ ಮುಷ್ಕರ, ಸಂಚಾರ ವ್ಯತ್ಯಯ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಸಾರಿಗೆ ಇಲಾಖೆಯ ನೌಕರರು ತಮ್ಮ 38 ತಿಂಗಳ ಹಿಂಬಾಕಿ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮಂಗಳವಾರ ರಾಜ್ಯದಾದ್ಯಂತ ಕೈಗೊಂಡ ಅನಿರ್ಧಿಷ್ಟಾವದಿ ಮುಷ್ಕರದ ಬಿಸಿ ಕಲ್ಯಾಣ ನಾಡಿನ ಕೇಂದ್ರ ಸ್ಥಾನ ಕಲಬುರಗಿ ಜಿಲ್ಲೆಗೂ ತಟ್ಟಿದ್ದು, ಬಸ್ ಸಂಚಾರ ಇಲ್ಲದೆ ಅನೇಕ ಪ್ರಯಾಣಿಕರು ತೊಂದರೆಗೆ ಸಿಲುಕಿದರು.

ಬಸ್ ಸಂಚಾರ ಬಂದ್ ಮಾಡಿದರಿಂದ ಭಾರಿ ಪ್ರಮಾಣದಲ್ಲಿ ಜನರಿಗೆ ಅದರ ಬಿಸಿ ತಟ್ಟಿದ್ದು, ದೂರದ ಬೆಂಗಳೂರು, ಹೈದ್ರಾಬಾದ್, ಮುಂಬೈನಿಂದ ನಗರಕ್ಕೆ ಆಗಮಿಸಿ, ಇಲ್ಲಿಂದ ತಮ್ಮ ಊರುಗಳಿಗೆ ಹೋಗಬೇಕಾದ ಪ್ರಯಾಣಿಕರು ಕೇಂದ್ರ ಬಸ್ ನಿಲ್ದಾಣದಲ್ಲೇ ಬಸ್ಸಿಗಾಗಿ ಗಂಟೆಗಟ್ಟಲೆ ಕಾದು ಕುಳಿತ ದೃಶ್ಯಗಳು ಸಾಮಾನ್ಯವಾಗಿ ಕಂಡುಬಂದವು. ಮುಷ್ಕರದಿಂದಾಗಿ ಒಂದೇ ಒಂದು ಬಸ್ ಸಹ ರಸ್ತೆಗೆ ಇಳಿಯದ ಹಿನ್ನೆಲೆ ಪ್ರತಿನಿತ್ಯ ಬೆಳಗಿನ ಜಾವವೇ ಎದ್ದು ದೂರದೂರಲ್ಲಿ ಇರುವ ಶಾಲಾ, ಕಾಲೇಜ್, ನೌಕರಿಗಳಿಗೆ ಹೋಗುವವರು ಅಂತು ಸಿಕ್ಕಾಪಟ್ಟೆ ಪರದಾಟ ನಡೆಸಿ, ದುಬಾರಿ ಹಣ ವ್ಯಯಿಸಿ ಖಾಸಗಿ ವಾಹನಗಳಲ್ಲಿ ಹೋದ ಪ್ರಸಂಗವು ನಡೆದಿದೆ.

ಸಾರಿಗೆ ನೌಕರರ ಮುಷ್ಕರ ಹಿನ್ನಲೆ ಕಲಬುರಗಿ ಕೇಂದ್ರ ಬಸ್ ನಿಲ್ದಾಣಕ್ಕೆ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ ಅವರು ಭೇಟಿ ನೀಡಿ, ಬಸ್‌ಗಳ ಪ್ರಯಾಣದ ಬಗ್ಗೆ ಮಾಹಿತಿ ಪಡೆದುಕೊಂಡರು.

ಅಲ್ಲದೇ, ಬಸ್ ಓಡಿಸುವವರನ್ನು ತಡೆದು ನಿಲ್ಲಿಸಿದರೇ ಅವರ ವಿರುದ್ಧ ಕಠಿಣ ಕ್ರಮಕೈಗೊಳ್ಳುವ ಬಗ್ಗೆ ಖಡಕ್ ಎಚ್ಚರಿಕೆ ನೀಡಿದರು.

ಖಾಸಗಿ ವಾಹನಗಳ ಮೊರೆ: ಕೆ.ಎಸ್.ಆರ್.ಟಿ.ಸಿ ನೌಕರರ ಮುಷ್ಕರ ಹಿನ್ನೆಲೆ ಕಲಬುರಗಿಯ ಯಾವ ಬೀದಿಯಲ್ಲೂ ಬಸ್ ಗಳ ಸಂಚಾರದ ಲಕ್ಷಣ ಕಾಣದೇ ಇರುವುದರಿಂದ ಬೇರೆ ಜಿಲ್ಲೆ, ಊರುಗಳಲ್ಲಿ ಸರಕಾರಿ ನೌಕರಿ ಮಾಡುವ ನೌಕರರೆಲ್ಲ ಸೇರಿ ಖಾಸಗಿ ವಾಹನಗಳ ಮೊರೆ ಹೋದರು. ನಾಲ್ಕೈದು ಜನರು ಸೇರಿ ಒಂದು ಖಾಸಗಿ ವಾಹನ ಬುಕ್ ಮಾಡಿ ತಮ್ಮ ಕೆಲಸಗಳಿಗೆ ತೆರಳಿದ ಪ್ರಸಂಗ ಸಹ ನಡೆದಿದೆ. ಇನ್ನು ಕೆಲ ಸಾರ್ವಜನಿಕರು ಕೂಡ ಬಸ್ ಗಾಗಿ ಕಾಯದೆ, ಖಾಸಗಿ ವಾಹನ, ಪರಿಚಿತರ ವಾಹನ, ಸ್ವಂತ ವಾಹನಗಳಲ್ಲಿ ತಮ್ಮ ಕೆಲಸಗಳನ್ನು ಪೂರೈಸಿಕೊಳ್ಳಲು ಮುಂದಾದರು.

ದುಪ್ಪಟ್ಟಾದ ಆಟೋ ರೇಟ್: ಬಸ್ ಮುಷ್ಕರ ಪ್ರಯುಕ್ತ ಜನರು ಅನಿವಾರ್ಯ ಕಾರಣ ಖಾಸಗಿ ವಾಹನಗಳ ಮೊರೆ ಹೋದರೆ, ವಾಹನ ಗಳ ಸೌಲಭ್ಯ ಪಡೆಯಲು ಆಗದ ಕೆಲವರು ಆಟೋಗಳ ಮೊರೆ ಹೋದರು. ಆದರೆ, ನಿತ್ಯವೂ ಒಂದಿದ್ದ ಆಟೋ ದರ ಮುಷ್ಕರ ಹಿನ್ನಲೆ ದುಪ್ಪಟ್ಟಾಗಿತ್ತು. 20 ರು. ಜಾಗ ದಲ್ಲಿ 200 ರು. 50 ಜಾಗದಲ್ಲಿ 500 ರು. ದರ ನಿಗದಿ ಮಾಡಿದ ಆಟೋ ಚಾಲಕರು ಮುಷ್ಕರದ ದುರುಪ ಯೋಗ ಮಾಡಿಕೊಂಡ ಘಟನೆ ಸಹ ನಡೆಯಿತು. ಬಸ್ ಸೇವೆ ಇಲ್ಲದೇ, ವಾಹನಗಳ ಸೌಲಭ್ಯ ಪಡೆಯಲು ಆಗದೆ, ಆಟೋಗಳಿಗೆ ದುಪ್ಪಟು ಹಣ ನೀಡುವ ಪರಿಸ್ಥಿತಿಯಿಂದಾಗಿ ಶ್ರೀಸಾಮಾನ್ಯ ಪರದಾಡಿದರು.

ಮುಷ್ಕರದ ಬಿಸಿ ಕಲಬುರಗಿ ಜಿಲ್ಲೆಗೂ ತಟ್ಟಿದ್ದು, ಬಸ್ ಇಲ್ಲದೆ ಪ್ರಯಾಣಿಕರು ತೊಂದರೆಗೆ ಸಿಲುಕಿದರು.

ಮುಂದೂಡಿದ ಮುಷ್ಕರ

ಸಾರಿಗೆ ನೌಕರರ ಮುಷ್ಕರ ಮುಂದುಡಲಾದ ಪರಿಣಾಮವಾಗಿ ಕಲಬುರಗಿ ನಗರದಲ್ಲಿ ಸಾರಿಗೆ ಬಸ್ ಸಂಚಾರ ಪುನರಾರಂಭ ಆಗಿದೆ. ಸಾರಿಗೆ ನೌಕರರ ಹಿಂಬಾಕಿ ಪಾವತಿ, ವೇತನ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ, ರಾಜ್ಯಾದ್ಯಂತ ಸಾರಿಗೆ ನೌಕರರ ಸಂಘ ಹಾಗೂ ಕಾರ್ಮಿಕ ಸಂಘಟನೆಗಳು ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಮುಂದಾಗಿದ್ದು, ಬೆಳಗ್ಗೆಯಿಂದ ಕರ್ತವ್ಯಕ್ಕೆ ಗೈರಾಗಿ ಮುಷ್ಕರಕ್ಕೆ ಬೆಂಬಲ ನೀಡಲಾಗಿತ್ತು. ಇದೀಗ ಮುಷ್ಕರ ಮುಂದುಡಿದ ಹಿನ್ನೆಲೆಯಲ್ಲಿ ಸಾರಿಗೆ ನೌಕರರು ಕರ್ತವ್ಯಕ್ಕೆ ಹಾಜರಾಗಿದ್ದು, ಎಂದಿನಂತೆ ಸಾರಿಗೆ ಸಂಚಾರ ಪ್ರಾರಂಭಗೊಂಡಿದೆ.

ಸಾರಿಗೆ ಬಸ್‌ಗಳ ಸಂಚಾರ ಸ್ಥಗಿತ

ಸಾರಿಗೆ ನೌಕರರ ಮುಷ್ಕರದ ನಿಮಿತ್ತ ಸರಕಾರಿ ಬಸ್‌ಗಳ ಸಂಚಾರ ಸ್ಥಗಿತಗೊಂಡ ಹಿನ್ನೆಲೆ, ಕಲಬುರಗಿ ಕೇಂದ್ರ ಬಸ್ ನಿಲ್ದಾಣದಲ್ಲಿ ಖಾಸಗಿ ವಾಹನಗಳ ಹಾವಳಿ ಹೆಚ್ಚಾಗಿತ್ತು. ದೂರದ ಊರುಗಳಿಗೆ ತೆರಳುವ ಪ್ರಯಾಣಿಕರು ಖಾಸಗಿ ಬಸ್‌ಗಳ ಮೂಲಕ ತಮ್ಮ ಊರಿಗೆ ಪ್ರಯಾಣ ಬೆಳೆಸಿದ್ದಾರೆ. ಖಾಸಗಿ ವಾಹನಗಳ ಜತೆಗೆ ಕ್ರೂಸರ್ ವಾಹನಗಳು ಕಲಬುರಗಿಯಿಂದ ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯಪುರ ಜಿಲ್ಲೆಯ ವಿವಿಧೆಡೆ ಪ್ರಯಾಣಿಕರನ್ನು ಕೂರಿಸಿಕೊಂಡು ತೆರಳಿದ ಪ್ರಸಂಗ ಕೇಂದ್ರ ಬಸ್ ನಿಲ್ದಾಣದಲ್ಲಿ ಕಂಡುಬಂದಿತು.

> ಶ್ರಾವಣ ಮಾಸದ ನಿಮಿತ್ತ ಸೋಮವಾರ ಕಲಬುರಗಿ ಶರಣಬಸವೇಶ್ವರರ ಹಾಗೂ ಬಂದೇ ನವಾಜ್ ದರ್ಗಾದ ದರ್ಶನ ಪಡೆಯಲು ಬಂದಿದ್ದೆ. ಮಂಗಳವಾರ ಬೆಳಗ್ಗೆ ನಮ್ಮೂರಿಗೆ ಹೋಗಲು ಬಸ್ ವ್ಯವಸ್ಥೆ ಇಲ್ಲ. ಖಾಸಗಿ ವಾಹನಗಳ ಮೂಲಕ ಹೋಗಬೇಕೆಂದರೆ ಹಣ ದುಪ್ಪಟ್ಟು ಕೇಳಿದ್ದಾರೆ. ಸರಕಾರಿ ಬಸ್ಸಿನ ಸೇವೆ ಇಲ್ಲಲಿದ್ದರೆ ಅನಾನುಕೂಲ ಆಗುತ್ತದೆ.
>
> – **ಶರಣಪ್ಪ ಬಿನ್ನಾಳ**, ಪ್ರಯಾಣಿಕ ಕೊಪ್ಪಳ

> ನಿತ್ಯ ಬೆಳಗ್ಗೆ 5 ಗಂಟೆಯಿಂದ 8 ಗಂಟೆವರೆಗೆ ನಿತ್ಯ 220 ಬಸ್ ಸಂಚಾರ ಮಾಡುತ್ತಿದ್ದವು. ಮುಷ್ಕರದಿಂದ ಕೇವಲ 20 ಬಸ್ ಮಾತ್ರ ಸಂಚರಿಸಲು ಸಾಧ್ಯವಾಗಿದೆ. ಬೇರೆ ಕಡೆಗೆ ಹೋಗುವವರಿಗೆ ಪರ್ಯಾಯವಾಗಿ ಖಾಸಗಿ ಬಸ್, ಕ್ರೂಸರ್‌ಗಳ ಬಳಕ್ಕೆ ಮಾಡಲಾಗಿತ್ತು. ಪ್ರಯಾಣಿಕರಿಗೆ ತೊಂದರೆ ಆಗದಂತೆ ನೋಡಿಕೊಂಡಿದ್ದೇವೆ.
>
> –**ಗಂಗಾಧರ್**, ಡಿಸಿ, ಕೆಕೆಆರ್‌ಟಿಸಿ ವಿಭಾಗ-1

> ಕೆ.ಎ.ಎಸ್. ಕೋಚಿಂಗ್ ಸಲುವಾಗಿ ವಿಜಯಪುರಕ್ಕೆ ಹೋಗಬೇಕಾಗಿತ್ತು. ಸಾರಿಗೆ ವ್ಯವಸ್ಥೆ ಇಲ್ಲದೆ ಹೋಗಲು ಸಾಧ್ಯವಾಗುತ್ತಿಲ್ಲ. ಕೋಚಿಂಗ್ ಸೆಂಟರ್ ನಲ್ಲಿ ಕೇವಲ 3 ಸೀಟು ಖಾಲಿಯಿವೆ. ಬೇಗ ಬಂದು ಹಾಜರಾಗಿ ಎಂದು ಕೋಚಿಂಗ್ ಸೆಂಟರ್‌ನವರು ಫೋನ್ ಮಾಡಿ ಹೇಳಿದ್ದಾರೆ. ಏನೂ ಮಾಡಬೇಕು ತೋಚುತ್ತಿಲ್ಲ. ಭವಿಷ್ಯದ ಹಿತದೃಷ್ಟಿಯಿಂದ ಅನಿವಾರ್ಯವಾಗಿ ದುಪ್ಪಟ್ಟು ಹಣ ನೀಡಿ ಕಾರು ಮೂಲಕ ಹೋಗಬೇಕಾಗಿದೆ.
>
> –**ಗೀತಾ ರಾಠೋಡ್** ವಿದ್ಯಾರ್ಥಿನಿ, ಕಲಬುರಗಿ

> ಮಂಗಳವಾರ ಬೆಳಗ್ಗೆಯಿಂದ ಒಂದಿಷ್ಟು ಬಸ್ ಸಂಚಾರ ನಡೆದಿದೆ. ಸರಕಾರ ಸಕಾರಾತ್ಮಕವಾಗಿ ನೌಕರರಿಗೆ ಸ್ಪಂದಿಸಿದೆ. ಹೈಕೋರ್ಟ್ ಆದೇಶವಿದ್ದರೂ ನೌಕರರು ಗೈರಾಗಿದ್ದಾರೆ. ಎಲ್ಲ ಡಿವಿಜನ್ ಕಂಟ್ರೋಲರ್‌ಗಳಿಗೆ ಗೈರಾದ ನೌಕರರಿಗೆ ಶೋಕಾಸ್ ನೋಟಿಸ್ ಜಾರಿ ಮಾಡುವಂತೆ ತಿಳಿಸಲಾಗಿದೆ. ಸಾರ್ವಜನಿಕರಿಗೆ ತೊಂದರೆಯಾದರೆ, ಶಿಸ್ತು ಕ್ರಮಕೈಗೊಳ್ಳಲಾಗುವುದು.
>
> –**ಬಿ.ಸುಶಿಲಾ**
> ವ್ಯವಸ್ಥಾಪಕ ನಿರ್ದೇಶಕಿ, ಕೆಕೆಆರ್‌ಟಿಸಿ

ರಸ್ತೆಗೆ ಇಳಿಯದ ಬಸ್‌ಗಳು: ಬಂದ್‌ಗೆ ಬೆಂಬಲ

ಆಳಂದ: ವೇತನ ಪರಿಷ್ಕರಣೆ ಹೆಚ್ಚುವರಿ ವೇತನ ಬಾಕಿ ಬಿಡುಗಡೆ ಸೇರಿ ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಪಟ್ಟು ಹಿಡಿದಿರುವ ರಾಜ್ಯ ಸಾರಿಗೆ ನಿಗಮಗಳ ನೌಕರರ ಸಂಘಟನೆಗಳು ನೀಡಿರುವ ಬಂದ ಕರೆ ಹಿನ್ನೆಲೆಯಲ್ಲಿ ಆಳಂದ ಸಾರಿಗೆ ಬಸ್ಸುಗಳು ರಸ್ತೆ ಇಳಿಯದ ಪ್ರಯುಕ್ತ ಸಾರ್ವಜನಿಕರು ಪರದಾಡುವಂತೆ ಆಯಿತು.

ಮಂಗಳವಾರ ಬೆಳಗ್ಗ 6 ಗಂಟೆಯಿಂದಲೇ ಡಿಪೋದಿಂದ ಬಸ್ಸುಗಳು ಬಾರದೇ ಇರುವುದರಿಂದ ಸರಕಾರಿ ನೌಕರರು, ಶಾಲಾ ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರು, ವ್ಯಾಪಾರಸ್ಥರು, ಆಸ್ಪತ್ರೆ, ರೈತರು, ಸಾರ್ವಜನಿಕರು ಸಂಚರಿಸುವುದಕ್ಕೆ ತೊಂದರೆ ಉಂಟಾಯಿತು.

ಬಸ್ ನಿಲ್ದಾಣದಲ್ಲಿ ಬಸ್ಸುಗಳು ಇಲ್ಲದೇ ಸುಮಾರು 200ಕ್ಕೂ ಹೆಚ್ಚು ಖಾಸಗಿ ವಾಹನಗಳು ಕಲಬುರಗಿ, ಸೋಲಾಪೂರ, ಉಮರ್ಗಾ, ಗಾಣಗಾಪುರ, ವಿ.ಕೆ.ಸಲಗರ ಸಂಚರಿಸಲು ನಿಂತಾಗ ಸರಕಾರ ನಿಗದಿತ ದರದಲ್ಲಿ ಸಾಗಲು ಇಲಾಖೆ, ಆರ್‌ಟಿಒ ಅವರು ಅನುಮತಿ ನೀಡಿದರು.

ಕೂಡಾ ವಾಹನ ಮಾಲೀಕರು ಎಲ್ಲ ಮಾರ್ಗಗಳಲ್ಲಿ ಸಾರ್ವಜನಿಕರಿಂದ ದುಪ್ಪಟ್ಟು ದರ ಪಡೆದುಕೊಂಡು ಖಾಸಗಿ ಅವರು ಅಟ್ಟಹಾಸ ಮೆರೆದರು. ಒಟ್ಟಾರೆಯಾಗಿ ಸಾರಿಗೆ ಇಲಾಖೆಯ ಮುಷ್ಟರದಿಂದ ಸಾರ್ವಜನಿಕರಿಗೆ ಬೀಸಿ ತಟ್ಟಿದ್ದು, ಮುಷ್ಕರ ಮುಂದು ವರೆದರೆ ಖಾಸಗಿ ವಾಹನ ಮಾಲೀಕರು ಸಾರ್ವಜನಿಕರಿಂದ ಹಣ ವಸೂಲಿ ಮಾಡುವ ಯತ್ತಾವತ್ತಾಗಿ ನಡೆಯುತ್ತದೆ. ಮುಷ್ಕರದಿಂದ ಘಟಕದ ಒಳಗಡೆ ಅಲ್ಲದೇ ರಸ್ತೆ ಪಕ್ಕದಲ್ಲಿ ಬಸ್ಸುಗಳು ನಿಲ್ಲಿಸಿ ಚಾಲಕರು, ನಿರ್ವಾಹಕರು ಹಾಗೂ ಸಿಬ್ಬಂದಿ ಪ್ರತಿಭಟನೆಗೆ ಬೆಂಬಲ ನೀಡಿದರು.

ಆಳಂದ ಸಾರಿಗೆ ಬಸ್ಸುಗಳು ರಸ್ತೆ ಇಳಿಯದ ಪ್ರಯುಕ್ತ ಸಾರ್ವಜನಿಕರು ಪರದಾಡುವಂತೆ ಆಯಿತು.

ಕಾಳಗಿ ಪಪಂ: 32 ಮಂದಿ ನಾಮಪತ್ರ ಸಲ್ಲಿಕೆ

ಕಾಳಗಿ: ಚಿಂಚೋಳಿ ವಿಧಾನಸಭಾ ಮತಕ್ಷೇತ್ರದ ವ್ಯಾಪ್ತಿಯ ಕಾಳಗಿ ತಾಲೂಕಿನ ಪಟ್ಟಣ ಪಂಚಾಯಿತಿಗೆ ಪ್ರಥಮ ಬಾರಿಗೆ ಚುನಾವಣೆ ಪ್ರಕ್ರಿಯೆ ಪ್ರಾರಂಭಿಸಲಾಗಿದ್ದು, ಮಂಗಳವಾರ ವಿವಿಧ ಪಕ್ಷದ ಹುರಿಯಾಳುಗಳು ನಾಮಪತ್ರ ಸಲ್ಲಿಕೆ ಮಾಡಿದರು. ಕಾಂಗ್ರೆಸ್ 11, ಬಿಜೆಪಿ 11, ಆಮ ಆದ್ಮಿ 02 ಹಾಗೂ ಇತರೆ 08 ಸೇರಿ ಒಟ್ಟು 32 ಜನ ನಾಮಪತ್ರ ಸಲ್ಲಿಕೆ ಮಾಡಲಾಗಿದೆ ಎಂದು ಚುನಾವಣೆ ಅಧಿಕಾರಿಯೂ ಆಗಿರುವ ಕಾಳಗಿ ತಾಪಂ ಇಒ ಡಾ.ಬಿ.ಎಸ್.ಡಿಗ್ಗಿ ಮಾಹಿತಿ ನೀಡಿದ್ದಾರೆ.

ಪಟ್ಟಣ ಪಂಚಾಯಿತಿಯ ಒಟ್ಟು 11 ವಾರ್ಡ್‌ಗಳಿಗೆ ಚುನಾವಣೆ ನಡೆಯಲಿದ್ದು,ಆ.6 ನಾಮಪತ್ರ ಪರಿಶೀಲನೆ ನಡೆಯಲಿದೆ. ಆ.8 ನಾಮಪತ್ರ ಸಲ್ಲಿಕೆ ಹಿಂದೆ ತೆಗೆದುಕೊಳ್ಳಲು ಕೊನೆಯ ದಿನವಾಗಿದೆ. ಆ.17 ಮತದಾನ ನಡೆಯಲಿದ್ದು, ಆ.20ರಂದು ಮತ ಏಣಿಕೆ ನಡೆಯಲಿದೆ.

ಮೆರವಣಿಗೆ ವೇಳೆ ಮಾಜಿ ಸಚಿವ ಬಾಬುರಾವ ಚವ್ಹಾಣ, ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಅಶೋಕ್ ಬಗಲಿ, ಅಮರನಾಥ ಪಾಟೀಲ, ಗೌತಮ್ ಪಾಟೀಲ, ಗೋಪಾಲರಾವ ಕಟ್ಟಿಮನಿ, ಶ್ರೀಮಂತ ಕಟ್ಟಿಮನಿ, ರವಿರಾಜ ಕೊರವಿ, ಶರಣಪ್ಪ ತಳವಾರ, ಪ್ರೇಮಸಿಂಗ್ ಜಾಧವ್, ಭೀಮಶೆಟ್ಟಿ ಮುರುಡಾ ಇದ್ದರು.

ಕಾಳಗಿ ತಾಲೂಕಿನ ಪಟ್ಟಣ ಪಂಚಾಯಿತಿಗೆ ವಿವಿಧ ಪಕ್ಷದ ಹುರಿಯಾಳುಗಳು ನಾಮಪತ್ರ ಸಲ್ಲಿಸಿದರು.

ಬಿಜೆಪಿಯಿಂದ ಶಕ್ತಿ ಪ್ರದರ್ಶನ

ಕಾಳಗಿ ಪಪಂ ಚುನಾವಣೆ ಹಿನ್ನೆಲೆ ಶಾಸಕ ಡಾ.ಅವಿನಾಶ ಜಾಧವ್ ಅವರ ನೇತೃತ್ವದಲ್ಲಿ ಬಿಜೆಪಿ ಅಭ್ಯರ್ಥಿಗಳು ಕಾಳಗಿಯ ಕಾಳೇಶ್ವರ ಮಂದಿರದಿಂದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದವರೆಗೆ ಬೃಹತ್ ರೋಡ್ ಶೋ ಮೆರವಣಿಗೆ ನಡೆಸಿ, ಶಕ್ತಿ ಪ್ರದರ್ಶನ ಮಾಡಿದ ಬಳಿಕ 11 ಅಭ್ಯರ್ಥಿಗಳು ನಾಮಪತ್ರ ಸಲ್ಲಿಕೆ ಮಾಡಿದರು.

ಜಯಶ್ರೀ ಆತ್ಮಹತ್ಯೆ: ಚುರುಕುಗೊಂಡ ತನಿಖೆ

ಕಲಬುರಗಿ: ಕಳೆದ ಜು.30ರಂದು ಕಲಬುರಗಿ ಕೇಂದ್ರಿಯ ವಿಶ್ವವಿದ್ಯಾಲಯದ ಭೂ ಗರ್ಭಶಾಸ್ತ್ರ ವಿಭಾಗದಲ್ಲಿ ಬಿಎಸ್ಸಿ ಓದುತ್ತಿದ್ದ ಜಯಶ್ರೀ ನಾಯಕ ಅವರು ವಿಶ್ವವಿದ್ಯಾಲಯದ ಯಮುನಾ ವಸತಿ ನಿಲಯದ ತಮ್ಮ ಕೊಠಡಿಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು ವಿಷಾದನೀಯ ಎಂದು ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ್ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ತಿಳಿಸಿರುವ ಅವರು, ವಿದ್ಯಾರ್ಥಿನಿಯ ಸಾವಿಗೆ ಕಾರಣವೇನೆಂಬುದರ ಬಗೆಗೆ ಅನೇಕ ಉಹಾಪೋಹ ವರದಿಗಳು ಬರುತ್ತಿದ್ದು, ಇದರ ಬಗ್ಗೆ ಸ್ಪಷ್ಟಿಕರಣ ನೀಡಲಾಗುತ್ತಿದ್ದು, ಯಾವ ಕಾರಣಕ್ಕೆ ಜಯಶ್ರೀ ನಾಯಕ ಅವರು ಆತ್ಮಹತ್ಯೆ ಮಾಡಿಕೊಂಡರು ಎಂಬುದು ಪೊಲೀಸ್ ತನಿಖೆಯಿಂದ ಹೊರಬರಬೇಕಿದೆ. ಪೊಲೀಸರು ಈಗಾಗಲೇ ವಿದ್ಯಾರ್ಥಿನಿಯ ಮೊಬೈಲ್ ಹಾಗೂ ಅವಳಿಗೆ ಸಂಬಂಧಿಸಿದ ಕೆಲವಸ್ತುಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಇದಲ್ಲದೆ ವಿದ್ಯಾರ್ಥಿನಿಯ ಮೊಬೈಲ್‌ನ ಒಳ ಮತ್ತು ಹೊರಹೊದ ಕರೆಗಳ ವಿವರ, ಪಾರೆನಸಿಕ್ ವಿಭಾಗದ ಅಧಿಕಾರಿಗಳು ಸಹ ಸ್ಥಳಕ್ಕೆ ಧಾವಿಸಿ ಮಾಹಿತಿ ಪಡೆದಿದ್ದಾರೆ. ವಿದ್ಯಾರ್ಥಿಯ ವಸತಿನಿಲಯದ ಸಿಸಿ ಟಿವಿ ಫೂಟೇಜ್‌ಗಳನ್ನು ಕೂಡ ವಶಕ್ಕೆ ಪಡೆದುಕೊಂಡಿದ್ದಾರೆ.

ವಿಶ್ವ ವಿದ್ಯಾಲಯದ ಘನತೆಗೆ ದಕ್ಕೆ ತರುವಂತಹ ಈ ಕೃತ್ಯವನ್ನು ವಿಶ್ವವಿದ್ಯಾಲಯವು ಖಂಡಿಸುತ್ತದೆ ಹಾಗೂ ಪೊಲೀಸರು ಸಂಬಂಧ ಪಟ್ಟವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸುತ್ತೇವೆ. ವಿಶ್ವ ವಿದ್ಯಾಲಯ ಸಾವಿನ ತನಿಖೆಗೆ ಸಂಪೂರ್ಣ ಸಹಕಾರ ನೀಡುತ್ತಿದೆ ಹಾಗೂ ಇನ್ನು ಮುಂದೆಯು ಸಂಪೂರ್ಣ ಸಹಕಾರ ನೀಡಲಿದೆ ಎಂದು ತಿಳಿಸಿದರು.

> ವಿದ್ಯಾರ್ಥಿನೀಯ ಸಾವಿನ ತನಿಖೆ ಪ್ರಗತಿಯಲ್ಲಿದೆ ಇದಕ್ಕೆ ಕಾರಣವೇನೆಂಬುದುತನಿಖೆಯ ನಂತರ ಗೊತ್ತಾಗಲಿದೆ ಎಂದರು. ಈ ಘಟನೆಯ ಮುಂಚೆ ವಿದ್ಯಾರ್ಥಿನಿ ವಿದ್ಯಾರ್ಥಿ ಕಲ್ಯಾಣಾಧಿಕಾರಿಗಳನ್ನು ಭೇಟಿಯಾಗಿಲ್ಲ ಹಾಗೂ ಇನ್ನಾವುದೆ ರೀತಿಯಲ್ಲಿ ಅವರನ್ನು ಸಂಪರ್ಕಿಸಿಲ್ಲ ಹಾಗೂ ಯಾವುದೇ ಮಾಹಿತಿ ನೀಡಿಲ್ಲ.
>
> -**ಪ್ರೊ.ಬಟ್ಟು ಸತ್ಯನಾರಾಯಣ್**, ಕುಲಪತಿ

ಈಡಿಗ ಸಮಾಜದ ಸಭೆ 10ರಂದು

ಸುದ್ದಿಗೋಷ್ಠಿಯಲ್ಲಿ ಕರದಾಳ ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿ ಪೀಠದ ಪೀಠಾಧಿಪತಿ ಪ್ರಣವಾನಂದ ಶ್ರೀ ಮಾತನಾಡಿದರು.

ಕಲಬುರಗಿ: ಸೆ.7ರಂದು ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಆಚರಣೆ ಮಾಡುತ್ತಿರುವ ಪ್ರಯುಕ್ತ ಆ.10 ರಂದು ನಗರದ ಆಮಂತ್ರಣ ಹೋಟಲ್‌ನಲ್ಲಿ ಬೆಳಗ್ಗೆ 10 ಗಂಟೆಗೆ ಸಮಾಜದ ಮುಖಂಡರ ಸಭೆ ಕರೆಯಲಾಗಿದೆ ಎಂದು ಕರ ದಾಳ ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿ ಪೀಠದ ಪೀಠಾಧಿಪತಿ ಪ್ರಣವಾನಂದ ಸ್ವಾಮೀಜಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಸಭೆಗೆ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸಲಹೆ- ಸೂಚನೆ ನೀಡಬೇಕು. ಈಡಿಗ ಸಮಾಜದವರಿಗೆ ಎರಡು ಎಕರೆ ಜಮೀನು ನೀಡಬೇಕು. ರಾಜ್ಯದಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಅವರ ಮೂರ್ತಿ ಸ್ಥಾಪನೆ ಮಾಡಬೇ ಕು. ಕುಲಶಾಸ್ತ್ರ ಅಧ್ಯಯನ ಕೈಗೊಳ್ಳಬೇಕು ಎಂದರು.

ನಿಗಮ ಮಂಡಳಿಗೆ ಅನುದಾನ ನೀಡುವುದು ಸೇರಿ 16 ಬೇಡಿಕೆಗಳ ಈಡೇರಿಕೆಗಾಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಸಿಎಂ ಬಳಿ ನಿಯೋಗ ತೆಗೆದುಕೊಂಡು ಹೋಗಬೇಕು ಎಂದು ಒತ್ತಾಯಿಸಿದರು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಈಡಿಗ ಸಮಾಜ ಅತಿ ಹಿಂದುಳಿದಿದೆ. ಸಮಾಜ ಬೇಡಿಕೆಗಳಿಗೆ ಆಗ್ರಹಿಸಿ ಪಾದಯಾತ್ರೆ ಹಾಗೂ ಧರಣಿ ಮಾಡಿದರೂ ಬೇಡಿಕೆಗಳು ಮಾತ್ರ ಈಡೇರಿಸಿಲ್ಲ ಎಂದು ಬೇಸರ ವ್ಯಕ್ತಪಡಿ ಸಿದರು. ಹಿಂದಿನ ಸರಕಾರದಲ್ಲಿ ಸಮಾಜಕ್ಕೆ ನಿಗಮ ಮಂಡಳಿ ಸ್ಥಾಪನೆಯಾಗಿತ್ತು ಎಂದರು.

ಸುದ್ದಿಗೋಷ್ಠಿಯಲ್ಲಿ ವೆಂಕಟೇಶ, ಮಹಾದೇವ ಗುತ್ತೇದಾರ, ಮಹೇಶ ಗುತ್ತೇದಾರ, ಮಲ್ಲಿ ಕಾರ್ಜುನ ಗುತ್ತೇದಾರ ಇತರರಿದ್ದರು. ವಿಧಾನಸೌಧದವರೆಗೆ ಪಾದಯಾತ್ರೆ ಕರ ದಾಳದಲ್ಲಿ ಶಕ್ತಿಪೀಠ ಸ್ಥಾಪನೆಯಾಗಿ 3 ವರ್ಷ ಕಳೆದರೂ ಅನುದಾನ ಬಿಡುಗಡೆ ಮಾಡಿಲ್ಲ. ಚಿತ್ತಾಪುರ ದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ 50 ಲಕ್ಷ ಅನುದಾನ ನೀಡುವ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಭರವಸೆ ನೀಡಿದ್ದಾರೆ.

ಅದು ಕಾರ್ಯಗತವಾಗಿಲ್ಲ. ಸರಕಾರ ಈಡಿಗ ಸಮುದಾಯವನ್ನು ಕಡೆಗಣಿಸಿದೆ ಸಮಾಜದ ಜನರೊಂದಿಗೆ ಚರ್ಚಿಸಿ ಶಕ್ತಿಪೀಠದಿಂದ ಬೆಂಗಳೂರ ವಿಧಾನಸೌಧದವರೆಗೆ ಪಾದಯಾತ್ರೆ ನಡೆಸಬೇಕಾಗುತ್ತದೆ ಎಂದು ಶ್ರೀಗಳು ಎಚ್ಚರಿಸಿದರು.

> ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಬ್ರಹ್ಮಶ್ರೀ ಅವರ ಅಧ್ಯಯನ ಪೀಠಗಳು ಸ್ಥಾಪನೆ ಮಾಡಬೇಕು. ಸಮಾಜದ ಬಡವರಿಗೆ ಆಶ್ರಯ ಮನೆಗಳು ಮಂಜೂರು ಮಾಡಬೇಕು. ಗೋಮಾಳ ಭೂಮಿಗಳನ್ನು ಮರಳಿ ಸಮಾಜದವರಿಗೆ ನೀಡಬೇಕು. ಮಂಗಳೂರು, ಉಡುಪಿ, ಕಾರವಾರ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಕೆಎಎಸ್ ಮತ್ತು ಐಎಎಸ್ ತರಬೇತಿ ಕೇಂದ್ರಗಳನ್ನು ಸ್ಥಾಪಿಸಬೇಕು.
>
> -**ಪ್ರಣವಾನಂದ ಶ್ರೀ**

ಗುರುವಿನ ಮಾರ್ಗದಿಂದ ನಿಜವಾದ ಜ್ಞಾನ ಲಭ್ಯ

ಕಲಬುರಗಿ: ಬಸವಣ್ಣನವರ ಅರಿವೇ ಜ್ಞಾನ, ಗುರುವೇ ಮಾರ್ಗದರ್ಶನ ನಿಜವಾದ ಜ್ಞಾನ ಮತ್ತು ಮಾರ್ಗದರ್ಶನವು ಸ್ವಯಂ ಅರಿವಿನಿಂದ ಬರುತ್ತದೆ, ಬಾಹ್ಯ ಗುರುಗಳಿಗಿಂತ ಹೆಚ್ಚಾಗಿ. ಒಬ್ಬ ವ್ಯಕ್ತಿಯು ತನ್ನ ಆಂತರಿಕ ಜ್ಞಾನ ಮತ್ತು ಅರಿವನ್ನು ಗುರುತಿಸಬೇಕು ಮತ್ತು ಅದರ ಮೇಲೆ ಅವಲಂಬಿತನಾಗಿರಬೇಕು ಎಂದು ಶರಣಬಸವ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕಿ ಡಾ.ಸಾರಿಕಾದೇವಿ ಕಾಳಗಿ ಹೇಳಿದರು.

ಅಖಿಲ ಭಾರತ ಶಿವಾನುಭವ ಮಂಟಪ ಶರಣಬಸವೇಶ್ವರ ದೇವಸ್ಥಾನದಲ್ಲಿ ಸೋಮವಾರ ಶ್ರಾವಣ ಮಾಸದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣನವರ ವಿಷಯದ ಶೀರ್ಷಿಕೆ ಅಡಿಯಲ್ಲಿ ಬಸವಣ್ಣನವರು ಮತ್ತು ಅರಿವೆಗುರು ಎಂಬ ವಿಷಯ ಕುರಿತು ಮಾತನಾಡಿದರು.

'ಅರಿವೇ ಗುರು' ಮತ್ತು 'ಕಾಯಕವೆ ಕೈಲಾಸ' ಎಂಬುವು ಲಿಂಗವಂತ ಧರ್ಮದ ಎರಡು ಬಹು ಪ್ರಚಲಿತ ಘೋಷವಾಕ್ಯಗಳು. 'ಅರಿವೇ ಗುರು' ಎಂದು ಹಾವಿನಾಳ ಕಲ್ಲಯ್ಯ ಮತ್ತು ಮುಕ್ತಾಯಕ್ಕ ತಮ್ಮ ವಚನಗಳಲ್ಲಿ ತಿಳಿಸಿದ್ದಾರೆ. ಬಸವಣ್ಣನವರ ವಚನವೊಂದರಲ್ಲಿ 'ಕಾಯವೇ ಕೈಲಾಸ' ಎಂದು ಬರುತ್ತದೆ. ಕಾಯಕ ಮತ್ತು ಕೈಲಾಸ ಪದಗಳನ್ನು ಅನೇಕ ವಚನಕಾರರು ಬಳಸಿದ್ದಾರೆ. ಈ ಅರಿವು ಮತ್ತು ಆಚರಣೆಗೆ ಲಿಂಗವು ಜ್ಞಾನರೂಪದಲ್ಲಿದೆ. ಸಕಲಜೀವಾತ್ಮರಿಗೆ ಲೇಸನೆ ಬಯಸುವ ಮನಸ್ಥಿತಿಯನ್ನು ಸೃಷ್ಟಿಸುವುದು. ಆಗ ದಯವೇ ಧರ್ಮದ ಮೂಲವಾಗುವುದು. ಇದು ಧಾರ್ಮಿಕ, ಪಾರಮಾರ್ಥಿಕ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಒಳಗೊಂಡಿರುತ್ತದೆ ಎಂದು ಹೇಳಿದರು. ಸಂಚಾಲಕರಾದ ಡಾ.ಶಿವರಾಜ ಶಾಸ್ತ್ರಿ ಹೇರೂರ್ ಮಾತನಾಡಿದರು.

> ಬಸವಣ್ಣನವರ ಅರಿವೇ ಗುರು ಎಂದು ಹೇಳಿದ್ದಾರೆ. ಅಂದರೆ ಒಬ್ಬರ ಸ್ವಂತ ಅರಿವು ಅವರ ಗುರು. ಅವರು ತಮ್ಮ ವಚನಗಳಲ್ಲಿ ಇದನ್ನು ಸ್ಪಷ್ಟಪಡಿಸಿದ್ದಾರೆ. ಅವರ ಪ್ರಕಾರ, ಬಾಹ್ಯ ಗುರುಗಳ ಬೋಧನೆಗಳಿಗಿಂತ, ಸ್ವಂತ ಅರಿವು ಒಬ್ಬನನ್ನು ಸರಿಯಾದ ಮಾರ್ಗಕ್ಕೆ ಕೊಂಡೊಯ್ಯುತ್ತದೆ. ಬಸವಣ್ಣನವರು ಸ್ವಯಂ ಅರಿವಿನಿಂದ ಜ್ಞಾನೋದಯವನ್ನು ಪಡೆಯಬಹುದು.
>
> -**ಡಾ.ಸಾರಿಕಾದೇವಿ ಕಾಳಗಿ**, ಕನ್ನಡ ಪ್ರಾಧ್ಯಾಪಕಿ

ಪ್ಲಾಸ್ಟಿಕ್ ಧ್ವಜ ಮಾರಾಟ ನಿಷೇಧಿಸಿ

ಕಲಬುರಗಿ: ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ರಾಷ್ಟ್ರಧ್ವಜಕ್ಕೆ ಅವಮಾನ ಮಾಡುವುದನ್ನು ತಡೆಯಲು ಮತ್ತು ನಿಷೇಧಿತ ಪ್ಲಾಸ್ಟಿಕ್ ಧ್ವಜ ಮಾರಾಟ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಹಿಂದೂ ಜಾಗೃತಿ ಸೇನೆ ಪ್ರತಿಭಟನೆ ನಡೆಸಿತು.

ಸೋಮವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಎದುರುಗಡೆ ಪ್ರತಿಭಟನೆ ನಡೆಸಿ, ಮನವಿ ಸಲ್ಲಿಸಿ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ರಾಷ್ಟ್ರಧ್ವಜಕ್ಕೆ ಅವಮಾನ ಮಾಡುವುದನ್ನು ತಡೆಯಲು ಮತ್ತು ನಿಷೇಧಿತ ಪ್ಲಾಸ್ಟಿಕ್ ಧ್ವಜ ಮಾರಾಟ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಈ ವೇಳೆ ಮಾತನಾಡಿದ ಸಂಘಟನೆಯ ಜಿಲ್ಲಾಧ್ಯಕ್ಷ ಲಕ್ಷ್ಮೀಕಾಂತ ಸ್ವಾದಿ, ಸ್ವಾತಂತ್ರ್ಯ ದಿನಾಚಾರ ವೇಳೆ ಬಹಳಷ್ಟು ಕಡೆ ರಾಷ್ಟ್ರಧ್ವಜಕ್ಕೆ ಅಪಮಾನ ಮಾಡಿರು ಘಟನೆಗಳು ಜರುಗಿದೆ. ಈ ರೀತಿಯ ಘಟನೆ ಮರುಕಳಿಸದಂತೆ ಹಾಗೂ ಪ್ಲಾಸ್ಟಿಕ್ ಧ್ವಜ ಮಾರಾಟಕ್ಕೆ ಅನುಮತಿ ನೀಡದಂತೆ ಆಗ್ರಹಿಸಿ, ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಗಣೇಶ್ ಗಯ್ಯಾಳಿ, ಚಿದಾನಂದ ಮಠಪತಿ, ರಾಜು ಸ್ವಾಮಿ, ರಾಜಕುಮಾರ ವಾಗ್ಮಾರೆ, ಸಿದ್ದು ಕಂದಗಲ್, ಸುನೀಲ್ ಶಿರ್ಕೆ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಸಂಭ್ರಮದ ಮಲ್ಲಿಕಾರ್ಜುನ ಪಲ್ಲಕ್ಕಿ ಉತ್ಸವ

ಕಾಳಗಿ: ತಾಲೂಕಿನ ಬೆಣ್ಣೆತೋರಾ ಜಲಾಶಯ ದಂಡೆಯಲ್ಲಿರುವ ಸುಕ್ಷೇತ್ರ ಕನ್ನಡಗಿ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಶ್ರಾವಣ ಮಾಸದ ಎರಡನೇ ಸೋಮವಾರ ಅಪಾರ ಭಕ್ತ ಸಮೂಹದ ಮಧ್ಯೆ ಮಲ್ಲಿಕಾರ್ಜುನ ಮೂರ್ತಿಯ ಪಲ್ಲಕ್ಕಿ ಉತ್ಸವ ಸಂಭ್ರಮದಿಂದ ಜರುಗಿತು.

ಜಾತ್ರಾ ಮಹೋತ್ಸವ ನಿಮಿತ್ತ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಶ್ರಾವಣ ಮಾಸದ ಎರಡನೇ ಸೋಮವಾರ ನಸುಕಿನ ಜಾವ 3 ಗಂಟೆಗೆ ಕನ್ನಡಗಿ ಮಲ್ಲಿಕಾರ್ಜುನ ಮೂಲ ಕರ್ತೃ ಗದ್ದುಗೆಗೆ ಅರ್ಚಕರ ನೇತೃತ್ವದಲ್ಲಿ ವಿಶೇಷ ರುದ್ರಾಭಿಷೇಕ, ಧಾರಾಭಿಷೇಕ, ಮಹಾ ಮಂಗಳಾರತಿ ಜರುಗಿತು. ಭಕ್ತರು ಸರತಿ ಸಾಲಿನಲ್ಲಿ ನಿಂತು ಕನ್ನಡಗಿ ಮಲ್ಲಿಕಾರ್ಜುನ ಮಹರಾಜಕೀ ಜೈ ಎಂದು ಜೈಘೋಷ್ ಕೂಗುತ್ತಾ ಮಲ್ಲಿಕಾರ್ಜುನ ಗದ್ದುಗೆಗೆ ಕಾಯಿ, ಕರ್ಪೂರ, ನೈವೇದ್ಯ ಅರ್ಪಿಸಿ ದರ್ಶನ ಪಡೆದರು.

ಮಧ್ಯಾಹ್ನ ಹೇರೂರ (ಕೆ) ಗ್ರಾಮದ ಮುಖಂಡ ಬಸವರಾಜ ಪಾಟೀಲ ಹೇರೂರ ನೇತೃತ್ವದಲ್ಲಿ ಭಜನಾ ಮಂಡಳಿ ದೇವಸ್ಥಾನಕ್ಕೆ ತಲುಪುತ್ತಿದ್ದಂತೆ ಅಲಂಕೃತ ಕನ್ನಡಗಿ ಮಲ್ಲಿಕಾರ್ಜುನ ಪಲ್ಲಕ್ಕಿ ಉತ್ಸವ ಸಕಲ ವಾದ್ಯಮೇಳ, ಭಜನೆ, ನಂದಿಕೋಲು, ಪುರವಂತರ ಕುಣಿತದೊಂದಿಗೆ ದೇವಸ್ಥಾನ ಸುತ್ತಲೂ ಭವ್ಯ ಮೆರವಣಿಗೆ ಜರುಗಿತು. ಭಕ್ತರು 'ಕನ್ನಡಗಿ ಮಹಾರಾಜ ಕೀ ಜೈ' ಎಂದು ಜಯಘೋಷ ಕೂಗಿದರು.

ದೇವಸ್ಥಾನ ಸಮಿತಿ ಅಧ್ಯಕ್ಷ ಸುಭಾಷ್ಚಂದ್ರ ಮಾಲಿಪಾಟೀಲ ಕನ್ನಡಗಿ, ಮುಖಂಡ ಬಸವರಾಜ ಪಾಟೀಲ ಹೇರೂರ, ದೇವಸ್ಥಾನ ಕಾರ್ಯದರ್ಶಿ ಸಿದ್ದಣ್ಣ ತಳವಾರ, ಚನ್ನವೀರಪ್ಪ ಮಾಲಿಪಾಟೀಲ, ವಿಜಯಕುಮಾರ್ ಮಾಲಿಪಾಟೀಲ, ರಾಜು ಕನ್ನಡಗಿ, ಶಾಮರಾಯ ಕನ್ನಡಗಿ, ಗುರಲಿಂಗಪ್ಪ ಪಾಟೀಲ, ಮಲ್ಲಣ್ಣ ನಾಯಕೋಡಿ, ಶಾಂತಕುಮಾರ ಕನ್ನಡಗಿ, ಎಚ್.ಬಿ. ಪಾಟೀಲ, ಮಲ್ಲಿಕಾರ್ಜುನ ವಕೀಲರು ಸೇರಿದಂತೆ ಕಲಬುರಗಿ, ಹೆರೂರ (ಕೆ), ನಾಗೂರ, ಶೆಳ್ಳಗಿ, ಸಾವತಖೇಡ, ಜೀವನ ಮಾರಡಗಿ, ಹೆಬ್ಬಾಳ ಸೇರಿದಂತೆ ವಿವಿಧ ಗ್ರಾಮಗಳ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು. ಕಾಳಗಿ ಪಿಎಸ್‌ಐ ತಿಮ್ಮಯ್ಯ ಬಿಕೆ ನೇತೃತ್ವದಲ್ಲಿ ಬಂದೋಬಸ್ತ್ ಒದಗಿಸಲಾಗಿತ್ತು.

ಶ್ರಾವಣ ಮಾಸದ ಎರಡನೇ ಸೋಮವಾರ ಅಪಾರ ಭಕ್ತ ಸಮೂಹದ ಮಧ್ಯೆ ಮಲ್ಲಿಕಾರ್ಜುನ ಮೂರ್ತಿಯ ಪಲ್ಲಕ್ಕಿ ಉತ್ಸವ ಸಂಭ್ರಮದಿಂದ ಜರುಗಿತು.

ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ಆ.15 ಕೊನೆ

ಕಲಬುರಗಿ: ನಗರದ ಜೇವರ್ಗಿ ಕಾಲೋನಿಯ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ 2025-26ನೇ ಸಾಲಿನ ಸ್ನಾತಕೋತ್ತರ ಎಂ.ಎ.ಕನ್ನಡ, ರಾಜ್ಯಶಾಸ್ತ್ರ, ಇತಿಹಾಸ, ಅರ್ಥಶಾಸ್ತ್ರ, ಎಂ.ಎಸ್ಸಿ. ಗಣಿತ ಹಾಗೂ ಎಂ.ಕಾಮ್.ಪ್ರಥಮ ವರ್ಷಕ್ಕೆ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಿದ್ದು, ಅರ್ಹ ವಿದ್ಯಾರ್ಥಿಗಳು ಪ್ರವೇಶ ಪಡೆಯಬೇಕೆಂದು ಎಂದು ಕಲಬುರಗಿ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ. ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜಾಗಿದ್ದು, ಸರಕಾರಿ ಕೋಟಾ ಮಾತ್ರ ಇರುತ್ತದೆ. 2025ರ ಆ.15 ವರೆಗೆ ಪ್ರವೇಶ ಪಡೆಯಲು ಅವಕಾಶ ವಿರುತ್ತದೆ. ಆನ್‌ಲೈನ್ ಅರ್ಜಿ ಮೂಲಕ ಪ್ರವೇಶ ಪ್ರಾರಂಭವಾಗಿದೆ. ಹೆಚ್ಚಿನ ಮಾಹಿತಿಗಾಗಿ ಎಂ.ಎ.ಕನ್ನಡ ಕುರಿತು ಡಾ. ಪ್ರಿಯದರ್ಶಿನಿ-9611711780, ಎಂ.ಎ.ರಾಜ್ಯಶಾಸ್ತ್ರ ಕುರಿತು ಡಾ.ಪದ್ಮಾಪೂಜಾರಿ-8431694490, ಎಂ.ಎ. ಇತಿಹಾಸ ಕುರಿತು ಡಾ. ಅನಂತಾ-9741605896, ಎಂ.ಎ.ಅರ್ಥಶಾಸ್ತ್ರ ಕುರಿತು ಡಾ.ಜ್ಯೋತಿ ಕೆ.ಎಸ್.-9449314162, ಎಂ.ಎಸ್ಸಿ ಗಣಿತ ಕುರಿತು ಡಾ. ನಿಯಾಜ್ ಬೇಗಂ-9243237576 ಹಾಗೂ ಎಂ.ಕಾಮ್. ಕುರಿತು ಡಾ. ಶರಣಬಸಪ್ಪ ಚಿಕ್ಕಲಿ ಇವರ ಮೊಬೈಲ್ ಸಂ.9986179845 ಗಳಿಗೆ ಸಂಪರ್ಕಿಸಲು ಕೋರಲಾಗಿದೆ.

ಸಮಾಚಾರ ಸಣ್ಣದಲ್ಲ

ಕಿಶೋರ ಕಾವ್ಯ ಸ್ಪರ್ಧೆ: ಅರ್ಜಿ ಆಹ್ವಾನ

ಕಲಬುರಗಿ: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ವತಿಯಿಂದ ಪ್ರಸಕ್ತ ಸಾಲಿನಿಂದ ಕಿಶೋರ ಕನಕ ಕಾವ್ಯ ಸ್ಪರ್ಧೆಯನ್ನು ಏರ್ಪಡಿಸಲಾಗುತ್ತಿದೆ. ಕಿಶೋರ ಕನಕ ಕಾವ್ಯ ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ. ಕನಕದಾಸರ ಕಾವ್ಯಗಳನ್ನು ಮಾತ್ರ ಗಮಕ ವಾಚನಕ್ಕೆ ಪರಿಗಣಿಸಲಾಗುವುದು. ಈ ಸ್ಪರ್ಧೆಯಲ್ಲಿ 10 ರಿಂದ 15 ವರ್ಷದ ವಯೋಮಾನದ ಕಿಶೋರ ಪ್ರತಿಭೆಗಳಿಗೆ ಮಾತ್ರ ಸ್ಪರ್ಧೆಯಲ್ಲಿ ಅವಕಾಶ ಇದ್ದು, ಈ ಸ್ಪರ್ಧೆಯಲ್ಲಿ ವಿಜೇತರಾದ ಸ್ಪರ್ಧಿಗಳಿಗೆ ಪ್ರಥಮ ಬಹುಮಾನ 20,000 ರು., ದ್ವಿತೀಯ ಬಹುಮಾನ 15,000 ರು., ತೃತೀಯ ಬಹುಮಾನ 10,000 ರು. ಹಾಗೂ ಇಬ್ಬರಿಗೆ ಸಮಾಧಾನಕರ ಬಹುಮಾನ (ತಲಾ 5,000 ರು.ದಂತೆ) ಇರುತ್ತವೆ. ವಿಜೇರಾದವರಿಗೆ ಪ್ರತ್ಯೇಕ ಸಮಾರಂಭವೊಂದರಲ್ಲಿ ಬಹುಮಾನ ವಿತರಿಸಲಾಗುತ್ತದೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಅಭ್ಯರ್ಥಿಗಳು https://kanakadasaresearchcenter.karnataka.gov.in ವೆಬ್‌ಸೈಟ್‌ದಿಂದ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಪೂರ್ಣ ಮಾಹಿತಿಯನ್ನೊಳಗೊಂಡ ಅರ್ಜಿಯನ್ನು ಭರ್ತಿ ಮಾಡಿ ಇತ್ತೀಚಿನ ಭಾವಚಿತ್ರವನ್ನು ಲಗತ್ತಿಸಿ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು-560056ಗೆ ಅಥವಾ kanakaresearchcentre@gmail.com ಇ-ಮೇಲ್ ವಿಳಾಸಕ್ಕೆ 2025ರ ಸೆ.20 ರೊಳಗಾಗಿ ತಲುಪುವಂತೆ ಕಳುಹಿಸಿಕೊಡಬೇಕು. ಹೆಚ್ಚಿನ ಮಾಹಿತಿಗಾಗಿ 6364529319ಗೆ ಸಂಪರ್ಕಿಸಲು ಕೋರಲಾಗಿದೆ.

ವಿದ್ಯುತ್ ಸರಬರಾಜು ವ್ಯತ್ಯಯ ಇಂದು

ಕಲಬುರಗಿ: ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ವಿಭಾಗ-1ರ ವತಿಯಿಂದ 110/33/11ಕೆವಿ ಕಲಬುರಗಿ ಪಶ್ಚಿಮ ವಿದ್ಯುತ್ ವಿತರಣಾ ಕೇಂದ್ರದಲ್ಲಿ 10 ಎಮ್.ವಿ.ಎ ಪರಿವರ್ತಕ 2ರ ತ್ರೈಮಾಸಿಕ ನಿರ್ವಹಣಾ ಕಾಮಗಾರಿಕೈಗೊಂಡಿರುವ ಪ್ರಯುಕ್ತ ಈ ವಿತರಣಾ ಕೇಂದ್ರದಿಂದ ಹೊರಹೊಗುವ 11ಕೆವಿ ಫೀಡರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳಲ್ಲಿ ಆ.6ರಂದು ಬೆಳಗ್ಗ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಎಲ್ಲ ಗ್ರಾಹಕರು ಇದಕ್ಕೆ ಸಹಕರಿಸಬೇಕೆಂದು ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ವಿಭಾಗ-1ರ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ. ಪಶ್ಚಿಮ ವಿದ್ಯುತ್ ವಿತರಣಾ ಕೇಂದ್ರ: ಜಾಫರಾಬಾದ ಐಪಿ ಫೀಡರಿನ ಪಟ್ಟಣ, ಹತಗುಂದಾ, ಯಳವಂತಗಿ, ಕೆರಿಭೋಸಗಾ, ಸಾವಳಗಿ, ಸಾವಳಗಿ ಸ್ಟೇಶನ್, ಜಾಫರಾಬಾದ, ಸಿಂದಗಿ, ಭೀಮಳ್ಳಿ ಹಾಗೂ ಸಿಂಧಗಿ ಎನ್.ಜೆ.ವೈ. ಫೀಡರಿನ ಜಾಫರಾಬಾದ, ಸಿಂಧಗಿ, ಕಮರಾನ ಕಾಲೋನಿ, ಕೃಷ್ಣ ಕಾಲೋನಿ ಹಾಗೂ ದಿನದಯಾಳ ನಗರ.

ಹಿರೋಷಿಮಾ ದಿನ: ಕಾರ್ಯಕ್ರಮ ಇಂದು

ಕಲಬುರಗಿ: ಹಿರೋಷಿಮಾ ದಿನದ ಅಂಗವಾಗಿ ಕಲಬುರಗಿ ಜಿಲ್ಲಾ ವಿಜ್ಞಾನ ಕೇಂದ್ರದಲ್ಲಿ ಆ.6 ರಂದು ಬೆಳಗ್ಗೆ 11 ಗಂಟೆಗೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕಲಬುರಗಿ ಮಹಾಗಾಂವ ಕ್ರಾಸ್‌ನ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಚಿವುಕುಲ್ ಶ್ರೀಕಾಂತ ಅವರು 'ಪರಮಾಣು ಶಕ್ತಿಯ ಅನುಕೂಲಗಳು ಮತ್ತು ಸವಾಲುಗಳು' ಕುರಿತು ಉಪನ್ಯಾಸ ನೀಡುವರು. ಬೆಳಗ್ಗೆ 11.45 ಗಂಟೆಗೆ ಪರಮಾಣು ಶಕ್ತಿ ಕುರಿತು ಮುಕ್ತ ರಸಪ್ರಶ್ನೆ ಸ್ಪರ್ಧೆ ಹಾಗೂ ಮಧ್ಯಾಹ್ನ 12.15 ಗಂಟೆಗೆ 'ಹಿರೋಷಿಮಾ ಮತ್ತು ನಾಗಾಸಾಕಿ ಪರಮಾಣು ಬಾಂಬ್ ದಾಳಿ'ಗಳು ಕುರಿತು ಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿದೆ.

ಅರಸು ಜಯಂತಿ: ಸಭೆ ಇಂದು

ಕಲಬುರಗಿ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಆಗಸ್ಟ್ 20ರಂದು ಡಿ.ದೇವರಾಜ ಅರಸುರವರ 110ನೇ ಜನ್ಮದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿರುವ ಹಿನ್ನೆಲೆಯಲ್ಲಿ ಆ.6 ರಂದು ಬೆಳಗ್ಗೆ 11.30 ಗಂಟೆಗೆ ಕಲಬುರಗಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಯಲಿದ್ದು, ಕಲಬುರಗಿ ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು, ವಿವಿಧ ಸಂಘ-ಸಂಸ್ಥೆಗಳ ಅಧ್ಯಕ್ಷರುಗಳು ಈ ಸಭೆಗೆ ಹಾಜರಾಗಿ ಸೂಕ್ತ ಸಲಹೆಗಳನ್ನು ನೀಡುವಂತೆ ಕಲಬುರಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ ಡಿ.ಕೆ.ಶಿವಕುಮಾರ್ } ಡಿಸಿಎಂ

ಇದು ನಮ್ಮ ಮೆಟ್ರೋ. ಮುಖ್ಯಮಂತ್ರಿಯವರು ಹಾಗೂ ನಾನು ಉದ್ಘಾಟನೆ ಮಾಡಿ ಎಂದು ಪ್ರಧಾನಿಗಳ ಬಳಿ ಮನವಿ ಮಾಡಿದ್ದೆವು. ಈಗ ಸಮಯ ನೀಡಿದ್ದಾರೆ. ಇದು ಕೇವಲ ಕೇಂದ್ರ ಸರಕಾರದ ಯೋಜನೆಯಲ್ಲ. ಕೇಂದ್ರ ಹಾಗೂ ರಾಜ್ಯ ಸರಕಾರ ಎರಡೂ ಶೇ.50 ರಷ್ಟು ಪಾಲನ್ನು ಹೊಂದಿವೆ.

ಆ.10ರಂದು ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆ ಮೈಸೂರು ಅರಮನೆಗೆ ಪ್ರವೇಶ

ಅರಣ್ಯ ಭವನದಲ್ಲಿ ದಸರಾ ಗಜಪಡೆ ರಿಲ್ಯಾಕ್ಸ್



ವಿಶ್ವವಿಖ್ಯಾತ ದಸರಾ ಜಂಬೂ ಸವಾರಿಯಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಆಗಮಿಸಿರುವ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ 9 ಆನೆಗಳು ಅರಣ್ಯ ಭವನದ ಆವರಣದಲ್ಲಿ ವಾಸ್ತವ್ಯ ಹೂಡಿವೆ. ▸▸ ಚಿತ್ರ: ಕೃಷ್ಣೋಜಿರಾವ್

ಮೈಸೂರು: ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಸಲುವಾಗಿ ಕಾಡಿನಿಂದ ನಾಡಿಗೆ ಆಗಮಿಸಿರುವ ಅಭಿಮನ್ಯು ನೇತೃತ್ವದ ಆನೆಗಳ ತಂಡ ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದಲ್ಲಿ ಬೀಡು ಬಿಟ್ಟಿದ್ದು, ಆ.10ರಂದು ಅರಮನೆ ಪ್ರವೇಶಿಸಲಿವೆ.

ಸದ್ಯ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ದಸರಾ ಗಜಪಡೆ ಫುಲ್ ರಿಲ್ಯಾಕ್ಸ್ ಮೂಡ್ ನಲ್ಲಿದ್ದು, ವೀರನ ಹೊಸಹಳ್ಳಿಯಲ್ಲಿ ನಡೆದ ಗಜಪಯಣ ಸಮಾರಂಭದ ಬಳಿಕ ಸೋಮವಾರ ಸಂಜೆ ಲಾರಿಗಳ ಮೂಲಕ ಮೈಸೂರಿನ ಅರಣ್ಯ ಭವನಕ್ಕೆ ಬಂದಿಳಿದಿದ್ದವು. ಪ್ರಯಾಣದಿಂದ ಬಳಲಿದ ಹಿನ್ನೆಲೆಯಲ್ಲಿ ವಿಶ್ರಾಂತಿ ನೀಡಲಾಗಿದೆ. ಸೋಮವಾರ ಇಡೀ ದಿನ ಆನೆಗಳು ದಣಿದಂತೆ ಕಂಡುಬಂದ ಹಿನ್ನೆಲೆಯಲ್ಲಿ ಅವುಗಳ ಮೈತೊಳೆದು, ಆಲದಮರ ಎಲೆ, ಮುದ್ದೆ ಹಾಗೂ ಕಬ್ಬು ನೀಡಿ ಆರೈಕೆ ಮಾಡಲಾಯಿತು.

ಆಗಸ್ಟ್ 7ರ ಬದಲು ಆಗಸ್ಟ್ 10ಕ್ಕೆ ದಸರಾ ಗಜಪಡೆ ಮೈಸೂರು ಅರಮನೆ ಆವರಣಕ್ಕೆ ಪ್ರವೇಶಿಸಲಿವೆ. ಈ ಬಾರಿ ಕೂಡ ಅಭಿಮನ್ಯು ಅಂಬಾರಿ ಹೊರುತ್ತಾನೆ. ಬ್ಯಾಕ್ ಅಪ್ ಆಗಿ ಮೂರು ಆನೆಗಳಿಗೆ ತಾಲೀಮು ನಡೆಸುತ್ತೇವೆ. ಎಲ್ಲಾ ಆನೆಗಳು ಆರೋಗ್ಯದಿಂದ ಇವೆ.
-ಡಾ.ಪ್ರಭುಗೌಡ, ಡಿಸಿಎಫ್

ಸಹಾಯಕ ಆಯುಕ್ತೆ-ಎಸ್ಐಟಿ ನಡುವೆ ಗೊಂದಲ

← ಮೊದಲಪುಟದಿಂದ

ಸೋಮವಾರ ಒಬ್ಬ ಪುರುಷನ ಅಸ್ಥಿಪಂಜರ ಪತ್ತೆಯಾಗಿದ್ದ ಪ್ರಕರಣವು ಧರ್ಮಸ್ಥಳ ಪೊಲೀಸ್ ಠಾಣೆಯ ವ್ಯಾಪ್ತಿಗೆ ಸೇರಿದ ಅನಾಮಿಕನ ಸಾವು ಪ್ರಕರಣವಾಗಿದ್ದು, ಕಾರ್ಯಾಚರಣೆ ನಿಯಮಗಳಡಿ ಬರುವುದಿಲ್ಲ ಎಂದು ಎಸ್ಐಟಿ ವಾದಿಸಿದೆ. ಆದರೆ ಅನಾಮಿಕ ದೂರುದಾರ ಆ ಸ್ಥಳವನ್ನು ತೋರಿಸಿದ್ದರಿಂದ, ಎ.ಸಿ ಸ್ಟೆಲ್ಲಾ ವರ್ಗೀಸ್ ಅವರ ಸೂಚನೆಯ ಮೇರೆಗೆ ಮಹಜರು ನಡೆಸಲಾಯಿತು. ಅದರ ಬಗ್ಗೆ ಎಸ್ಐಟಿ ಮತ್ತು ಸ್ಟೆಲ್ಲಾ ವರ್ಗೀಸ್ ನಡುವಿನ ಗೊಂದಲ ಮಂಗಳವಾರವೂ ಮುಂದುವರೆಯಿತು. ಅಂತಿಮವಾಗಿ ಎ.ಸಿ ಸ್ಟೆಲ್ಲಾ ವರ್ಗೀಸ್ ಸೂಚನೆಯಂತೆ ಅಸ್ಥಿಪಂಜರವನ್ನು ವಶಕ್ಕೆ ಪಡೆದು ಅಗತ್ಯ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಯಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳೀಯ ಪೊಲೀಸರು ಹಾಗೂ ಎಸ್ಐಟಿ ಅಧಿಕಾರಿಗಳು ಮುಂದಿನ ಹಂತದ ತನಿಖೆಯನ್ನು ಮುಂದುವರೆಸಲಿದ್ದಾರೆ.

ಸಾರಿಗೆ ಮುಷ್ಕರ ವಾಪಸ್

← ಮೊದಲಪುಟದಿಂದ

ಆದರೆ ಮಂಗಳವಾರ ರಾಜ್ಯದ ಬಹುತೇಕ ಭಾಗದಲ್ಲಿ ಸಾರಿಗೆ ನೌಕರರ ಮುಷ್ಕರದ ಕಾರಣ ಲಕ್ಷಾಂತರ ಪ್ರಯಾಣಿಕರು ಬಸ್ ಸಂಚಾರವಿಲ್ಲದೆ ಪರದಾಡುವಂತಾಯಿತು. ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಕೋರಿ ಕೆಎಸ್ಆರ್‌ಟಿಸಿ, ಬಿಎಂಟಿಸಿ, ಎನ್ ಡಬ್ಲ್ಯು ಕೆಆರ್‌ಟಿಸಿ, ಕೆಕೆಆರ್‌ಟಿಸಿ ನೌಕರರು ಮಂಗಳವಾರ ನಡೆಸಿದ ಅನಿರ್ದಿಷ್ಟಾವಧಿ ಮುಷ್ಕರದಿಂದ ಹಲವು ಕಡೆಗಳಲ್ಲಿ ಸಾರಿಗೆ ಸಂಸ್ಥೆಯ ಬಸ್‌ಗಳು ರಸ್ತೆಗೆ ಇಳಿಯದ ಹಿನ್ನೆಲೆ ಜನಜೀವನ ಅಸ್ತವ್ಯಸ್ತವಾಗಿತ್ತು.

ಮುಷ್ಕರದಿಂದಾಗಿ ಮೆಜೆಸ್ಟಿಕ್, ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣ ಮತ್ತು ಶಾಂತಿನಗರ ಬಸ್ ನಿಲ್ದಾಣದಲ್ಲಿ ನೂರಾರು ಜನ ಪ್ರಯಾಣಿಕರು ಪರದಾಡುವಂತಾಯಿತು. ಹಲವು ಕಡೆಗಳಲ್ಲಿ ಬಿಎಂಟಿಸಿ ಬಸ್‌ಗಳ ಸಂಚಾರವಿಲ್ಲದೆ ಜನರು ಆಟೋಗಳ ಮೊರೆ ಹೋಗುವಂತಾಗಿದ್ದು, ಆಟೋ ಚಾಲಕರು ಕೇಳಿದಷ್ಟು ಹಣ ನೀಡಿ ಸಂಚಾರ ನಡೆಸಬೇಕಾದ ಅನಿವಾರ್ಯತೆಯುಂಟಾಯಿತು.

ಮತ್ತೆ ಸಂಚಾರ ಆರಂಭಿಸಿದ ಬಸ್‌ಗಳು: ಹೈಕೋರ್ಟ್ ಎಚ್ಚರಿಕೆ ಬೆನ್ನಲ್ಲೇ ಮುಷ್ಕರ ಮುಂದೂಡಿಕೆ ಘೋಷಿಸಿದ ಸಾರಿಗೆ ಸಂಘಟನೆಗಳು, ಕೂಡಲೇ ನೌಕರರು ಕರ್ತವ್ಯಕ್ಕೆ ಹಾಜರಾಗುವಂತೆ ಕೋರಿದವು.

ಈ ಹಿನ್ನಲೆಯಲ್ಲಿ ಸಂಜೆ ವೇಳೆಗೆ ಸಾರಿಗೆ ನೌಕರರು ಕರ್ತವ್ಯಕ್ಕೆ ಹಾಜರಾಗಿದ್ದು, 18,434 ಬಸ್‌ಗಳಲ್ಲಿ 11,752 ರಸ್ತೆಗೆ ಇಳಿದಿವೆ. 5,918 ಕೆ ಎಸ್ಆರ್‌ಟಿಸಿ ಬಸ್‌ಗಳಲ್ಲಿ 2572 ಬಸ್‌ಗಳು ಸಂಚಾರ ಆರಂಭಿಸಿವೆ. ಬಿಎಂಟಿಸಿಯ 6014 ಬಸ್‌ಗಳಲ್ಲಿ 6010 ಸಂಚಾರ ಆರಂಭಿಸಿವೆ. ಎನ್‌ಡಬ್ಲ್ಯೂಕೆಆರ್‌ಟಿಸಿ 3515 ಬಸ್‌ಗಳಲ್ಲಿ 2258 ಸಂಚಾರ ಆರಂಭಿಸಿದ್ದು, ಕೆಕೆಆರ್‌ಟಿಸಿಯ 2987 ಬಸ್‌ಗಳಲ್ಲಿ 912 ಆರಂಭಿಸಿವೆ. ರಾಜ್ಯಾದ್ಯಂತ ಒಟ್ಟು ಶೇ.63.8 ಆಗಿದೆ ಎಂಬುದಾಗಿ ಮಾಹಿತಿ ನೀಡಿದೆ.

ವಿಚಾರಣೆ ಆ.7ಕ್ಕೆ

ಸಾರಿಗೆ ನೌಕರರ ಮುಷ್ಕರಕ್ಕೆ ಸಂಬಂಧಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ಮಂಗಳವಾರ ಹೈಕೋರ್ಟ್‌ನ ನ್ಯಾಯಮೂರ್ತಿ ವಿಭು ಬಕ್ರು, ನ್ಯಾ.ಸಿ.ಎಂ ಜೋಷಿ ನೇತೃತ್ವದ ದ್ವಿಸದಸ್ಯ ಪೀಠದಲ್ಲಿ ನಡೆಯಿತು. ಸರಕಾರಿ ಪರ ವಕೀಲರಾಗಿ ಎಜಿ ಶಶಿಕಿರಣ್ ಶೆಟ್ಟಿ ವಾದ ಮಂಡಿಸಿದರು. ಮುಷ್ಕರ ನಿರ್ಧಾರ ಕಾನೂನು ಬಾಹಿರವಾಗಿದೆ.

ಹೈಕೋರ್ಟ್ ಆದೇಶವಿದ್ದರೂ ನೀವು ಅದನ್ನು ಪಾಲಿಸಿಲ್ಲ. ಎಸ್ಮಾ ಕಾಯಿದೆಯಲ್ಲಿ ಸಂಘಟನೆಯ ಪದಾಧಿಕಾರಿಗಳನ್ನು ಬಂಧಿಸಬಹುದು. ಬುಧವಾರ ಮುಷ್ಕರ ನಿಂತಿದೆ ಎಂಬುದನ್ನು ಕೋರ್ಟ್‌ಗೆ ಹೇಳಬೇಕು ಎಂದು ತಾಕೀತು ಮಾಡಿದರು. ಇದಕ್ಕೆ ಉತ್ತರಿಸಿದ ನೌಕರರ ಸಂಘಟನೆ ಪರ ವಕೀಲರು, ಬುಧವಾರ ಮುಷ್ಕರ ನಡೆಸುವುದಿಲ್ಲ ಎಂದು ಹೇಳಿದರು. ಬಳಿಕ ಕೋರ್ಟ್ ವಿಚಾರಣೆಯನ್ನು ಆಗಸ್ಟ್ 7ಕ್ಕೆ ಮುಂದೂಡಿತು.

ಭಾರೀ ಮಳೆ

ಬೀದರ್/ಕೊಪ್ಪಳ/ವಿಜಯಪುರ: ಉತ್ತರ ಕರ್ನಾಟಕದ ಹಲವೆಡೆ ಭಾರೀ ಮಳೆಯಾಗುತ್ತಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಗಡಿ ಜಿಲ್ಲೆ ಬೀದರ್‌ನಲ್ಲಿ ಸತತ ಒಂದು ಗಂಟೆಯಿಂದ ಭಾರೀ ಮಳೆಯಾಗಿದೆ. ಗುಡುಗು, ಸಿಡಿಲು ಸಹಿತ ವರುಣ ಅಬ್ಬರಿಸು ತ್ತಿದ್ದಾನೆ. ಬೀದರ್, ಬಸವಕಲ್ಯಾಣದಲ್ಲಿ, ಕಮಲ ನಗರ, ಭಾಲ್ಕಿ ಸೇರಿದಂತೆ ಜಿಲ್ಲೆಯಾದ್ಯಂತ ಧಾರಾಕಾರ ಮಳೆಯಾಗಿದ್ದು, ಜನ ಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದೆ. ಗುಂಪಾ ರಸ್ತೆ, ಏರ್‌ಪೋರ್ಟ್ ರಸ್ತೆ, ಹೈದ್ರಾಬಾದ್ ರಸ್ತೆಗಳು ಕೆರೆಯಂತಾಗಿವೆ. ವಿಜಯಪುರ ಜಿಲ್ಲೆಯ ಹಲವೆಡೆ ಧಾರಾಕಾರ ಮಳೆಯಾಗುತ್ತಿದ್ದು, ಗುಡುಗು, ಸಿಡಿಲು ಸಮೇತ ವರುಣ ಆರ್ಭಟ ಜೋರಾಗಿದೆ. ಇನ್ನೂ ಕೊಪ್ಪಳ ತಾವರಗೇರಾದಲ್ಲಿ ಭಾರೀ ಮಳೆಯಾಗಿ ರಸ್ತೆಗಳು ಜಲಾವೃತಗೊಂಡಿವೆ.

ಭಾರೀ ಜಲ ಪ್ರಳಯ

← ಮೊದಲಪುಟದಿಂದ

ಮೊದಲ ಮೇಘಸ್ಫೋಟ ನಡೆದ ಉತ್ತರಕಾಶಿ ಜಿಲ್ಲೆಯ ಧರಾಲಿ ಸಮೀಪವೇ ಸುಖಿ ಟಾಪ್ ಇದೆ. ಗಂಗೋತ್ರಿಗೆ ತೆರಳುವ ಮಾರ್ಗ ಮಧ್ಯೆ ಧಾರಾಲಿ ಗ್ರಾಮವಿದೆ. ಕಮೀಷನರ್ ವಿನಯ್ ಶಂಕರ್ ಈ ಬಗ್ಗೆ ಮಾಹಿತಿ ನೀಡಿ, 'ಉತ್ತರಕಾಶಿಯ ಸುಖಿ ಟಾಪ್‌ನಲ್ಲಿಯೂ ಮೇಘಸ್ಫೋಟದ ಉಂಟಾಗಿದೆ, ಅಲ್ಲಿ ಯಾವುದೇ ಜೀವಕ್ಕೆ ಅಥವಾ ಆಸ್ತಿಪಾಸ್ತಿಗೆ ಹಾನಿಯಾದ ಬಗ್ಗೆ ಮಾಹಿತಿ ಸಿಕ್ಕಿಲ್ಲ. ಮಳೆ ಜೋರಾಗಿ ಸುರಿಯುತ್ತಿದ್ದು, ರಕ್ಷಣಾ ಕಾರ್ಯಾಚರಣೆಗೆ ಅಡ್ಡಿಯಾಗಿದೆ' ಎಂದು ತಿಳಿಸಿದ್ದಾರೆ.

ಪ್ರಧಾನಿ ಮೋದಿ ಘಟನೆ ಬಗ್ಗೆ ಆಘಾತ ವ್ಯಕ್ತಪಡಿಸಿದ್ದಾರೆ. 'ಉತ್ತರಕಾಶಿಯಲ್ಲಿ ನಡೆದ ದುರಂತದ ಬಗ್ಗೆ ತಿಳಿದು ದುಃಖವಾಗಿದೆ. ಎಲ್ಲರ ಸುರಕ್ಷತೆಗಾಗಿ ಪ್ರಾರ್ಥಿಸುತ್ತೇನೆ. ಮುಖ್ಯಮಂತ್ರಿ ಪುಷ್ಕರ್ ಧಾಮಿ ಅವರೊಂದಿಗೆ ಸಮಾಲೋಚನೆ ನಡೆಸಿದ್ದೇನೆ. ರಕ್ಷಣಾ ತಂಡಗಳು ಕಾರ್ಯ ನಿರತವಾಗಿವೆ' ಎಂದು ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ. ವಿಪಕ್ಷ ನಾಯಕ, ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಸೇರಿದಂತೆ ಹಲವರು ಘಟನೆಯ ಬಗ್ಗೆ ಆಘಾತ ವ್ಯಕ್ತಪಡಿಸಿದ್ದಾರೆ. ಹರ್ಸಿಲ್ ಬಳಿಯ ಖೀರ್ ಗಢ್ ಪ್ರದೇಶದ ಧರಾಲಿ ಗ್ರಾಮದಲ್ಲಿ ಭಾರಿ ಪ್ರಮಾಣದಲ್ಲಿ ಮಣ್ಣು ಕುಸಿತ ಸಂಭವಿಸಿದ್ದು, ರಸ್ತೆಗಳು ಮುಚ್ಚಿ ಹೋಗಿವೆ. ಜನವಸತಿ ಪ್ರದೇಶದ ಮೂಲಕ ಧಿಡೀರ್ ಪ್ರವಾಹ ಹರಿದಿದೆ ಎಂದು ಭಾರತೀಯ ಸೇನೆ ತಿಳಿಸಿದೆ. ಪ್ರವಾಹದ ರಭಸಕ್ಕೆ ಹಲವು ಮನೆಗಳು ಹಾನಿಗೊಳಗಾಗಿವೆ, ಕೆಲವು ಕೊಚ್ಚಿ ಹೋಗಿವೆ.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಸಚಿವರಾದ ಅಶ್ವಿನಿ ವೈಷ್ಣವ್ ಮತ್ತು ಜಿತಿನ್ ಪ್ರಸಾದ ಅವರ ಜತೆಗೂಡಿ ಗಿನ್ನೆಸ್ ವಿಶ್ವ ದಾಖಲೆ ಪ್ರಮಾಣಪತ್ರ ಸ್ವೀಕರಿಸಿದರು.

ಪ್ರಧಾನಿ ಮೋದಿ ಪರೀಕ್ಷಾ ಪೆ ಚರ್ಚಾ ಗಿನ್ನೆಸ್ ದಾಖಲೆ!

← ಮೊದಲಪುಟದಿಂದ

ಪರೀಕ್ಷಾ ಪೆ ಚರ್ಚಾ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ದೇಶದ ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರ ಜತೆ ನೇರ ಸಂವಾದ ನಡೆಸುತ್ತಾರೆ. ವಿದ್ಯಾರ್ಥಿಗಳು ಅನುಸರಿಸಬೇಕಾದ ಅಧ್ಯಯನ ವಿಧಾನ ಮತ್ತು ಪರೀಕ್ಷೆಗಳ ಒತ್ತಡವನ್ನು ಕಡಿಮೆ ಮಾಡಿಕೊಳ್ಳುವ ಬಗ್ಗೆ ಸಲಹೆಗಳನ್ನು ನೀಡುತ್ತಾರೆ. 'ಹೆಚ್ಚು ಓದು, ಸದಾ ಓದು' ಎಂದು ಮಕ್ಕಳ ಮೇಲೆ ಒತ್ತಡ ಹೇರುವ ಬದಲು ಅವರ ಕನಸುಗಳನ್ನು ಬೆಂಬಲಿಸಿ ಎಂದೂ ಪೋಷಕರು ಮತ್ತು ಶಿಕ್ಷಕರಿಗೆ ಮಾರ್ಗದರ್ಶನ ನೀಡುತ್ತಾರೆ. ಗಿನ್ನೆಸ್ ದಾಖಲೆ ಪ್ರಮಾಣಪತ್ರ ಸ್ವೀಕರಿಸಲು ಬಹಳ ಸಂತೋಷವಾಗುತ್ತಿದೆ ಎಂದಿರುವ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ, ಈ ವರ್ಷ 3.53 ಕೋಟಿಗೂ ಹೆಚ್ಚು ನೋಂದಣಿಗಳು ದಾಖಲಾಗಿವೆ, ಟಿವಿ, ಸಾಮಾಜಿಕ ಮಾಧ್ಯಮ ಮತ್ತು ಜಾಲತಾಣದಲ್ಲಿ 21 ಕೋಟಿಗೂ ಹೆಚ್ಚು ವೀಕ್ಷಕರು ಕಾರ್ಯಕ್ರಮ ವೀಕ್ಷಿಸಿ ಪರೀಕ್ಷಾ ಪೆ ಚರ್ಚಾ ವಿಶ್ವ ದಾಖಲೆಗೆ ಕಾರಣವಾಗಿದ್ದಾರೆ ಎಂದರು. ಪರೀಕ್ಷಾ ಪೆ ಚರ್ಚಾ ಕೇವಲ ಒಂದು ಕಾರ್ಯಕ್ರಮವಲ್ಲ, ಬದಲಾಗಿ ದೇಶಾದ್ಯಂತದ ಅಭಿಯಾನವಾಗಿದೆ. ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಿ, ಒತ್ತಡ ನಿರ್ವಹಣೆ ಕ್ರಮವನ್ನು ತೋರಿಸಿಕೊಡುತ್ತಿದೆ ಎಂದರು. ಈ ಯಶಸ್ಸಿನ ಕೀರ್ತಿ ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸಿದ ವಿದ್ಯಾರ್ಥಿ, ಪೋಷಕರು, ಶಿಕ್ಷಕರು ಮತ್ತು ಶಾಲೆಗೆ ಸಲ್ಲುತ್ತದೆ ಎಂದರು.

ಟ್ರಂಪ್‌ಗೆ ಭಾರತದ ಖಡಕ್ ಉತ್ತರ

← ಮೊದಲಪುಟದಿಂದ

ಅತ್ತ ರಷ್ಯಾದ ಯುದ್ಧ ಟ್ಯಾಂಕರ್‌ಗಳಿಂದ ಉಕ್ರೇನ್‌ನಲ್ಲಿ ಹಲವು ಜನ ಸಾಯುತ್ತಿದ್ದರೂ ಅವರು ಹೆದರುತ್ತಿಲ್ಲ, ಆ ಕಾರಣದಿಂದಲೇ, ಭಾರತದಿಂದ ಖರೀದಿಸುವ ಎಲ್ಲ ಸರಕುಗಳಿಗೂ ಸುಂಕವನ್ನು ಗಣನೀಯವಾಗಿ ಏರಿಕೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಭಾರತವು ಸುಂಕ ಹೇರುವ ಪರಿಣಾಮಗಳ ಕುರಿತು ಪರಿಶೀಲನೆ ನಡೆಸುತ್ತಿದ್ದು, ದೇಶದ ಹಿತಾಸಕ್ತಿ ಕಾಯಲು ಎಲ್ಲ ರೀತಿಯ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಹೇಳಿದೆ. ಈಗಾಗಲೇ ಆಗಸ್ಟ್ 7ರಿಂದ ಅನ್ವಯವಾಗುವಂತೆ ಭಾರತದಿಂದ ಆಮದು ಮಾಡಿಕೊಳ್ಳುವ ಎಲ್ಲ ಸರಕುಗಳಿಗೂ ಶೇ.25ರಷ್ಟು ಸುಂಕ ವಿಧಿಸುವ ಆದೇಶಕ್ಕೆ ಟ್ರಂಪ್ ಸಹಿ ಹಾಕಿದ್ದಾರೆ. ಆದರೆ ಪಾಕಿಸ್ತಾನಕ್ಕೆ ಶೇ.19 ಸುಂಕ ವಿಧಿಸಿದ್ದಾರೆ. ಬೃಹತ್ ಪ್ರಮಾಣದಲ್ಲಿ ರಷ್ಯಾದ ಸೇನಾ ಉಪಕರಣಗಳು, ಕಚ್ಚಾ ತೈಲ ಖರೀದಿಸುತ್ತಿರುವ ಭಾರತದ ಮೇಲೆ ದಂಡ ವಿಧಿಸಲಾಗುವುದು ಎಂದು ಹೇಳಿದ್ದರು.

ಗವಿಸಿದ್ದಪ್ಪ ಕೊಲೆ ಪ್ರಕರಣ: 4 ಸೆರೆ

ಕೊಪ್ಪಳ: ತಾನು ಮದುವೆಯಾಗಲು ಬಯಸಿದ್ದ ಯುವತಿಯನ್ನು ಇಲ್ಲಿನ ಕುರುಬರ ಓಣಿಯ ನಿವಾಸಿ ಗವಿಸಿದ್ದಪ್ಪ ನಾಯಕ ಕೂಡ ಪ್ರೀತಿಸಿದ ಎಂಬ ಕಾರಣಕ್ಕಾಗಿ ನಡೆದ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು ನಾಲ್ಕು ಜನ ಆರೋಪಿಗಳನ್ನು ಬಂಧಿಸಲಾಗಿದೆ.

ಭಾನುವಾರ ರಾತ್ರಿ 7.45ರ ಸುಮಾರಿಗೆ ಗವಿಸಿದ್ದಪ್ಪನ ಕೊಲೆ ನಡೆದಿತ್ತು. ಇಲ್ಲಿನ ಸೈಲಾನಪುರ ಬಡಾವಣೆಯ ಸಾಧಿಕ್ ಹುಸೇನ್ ಕೋಲ್ಕಾರ್ ಮುಸ್ಲಿಂ ಸಮುದಾಯದ ಯುವತಿಯನ್ನು ಪ್ರೀತಿಸುತ್ತಿದ್ದ. ಗವಿಸಿದ್ದಪ್ಪ ಕೂಡ ಅದೇ ಯುವತಿಯನ್ನು ಪ್ರೀತಿ ಮಾಡುತ್ತಿದ್ದ. ಕೃತ್ಯ ಎಸಗಿದ ಬಳಿಕ ಸಾಧಿಕ್ ನೇರವಾಗಿ ಇಲ್ಲಿನ ನಗರ ಪೊಲೀಸ್ ಠಾಣೆಗೆ ತೆರಳಿ ಶರಣಾಗಿದ್ದ. ಗೇಸುದರಾಜ ಪಟೇಲ್, ಮಹಮ್ಮದ್ ನಿಜಾಮುದ್ದೀನ್ ಮತ್ತು ಮೆಹಬೂಬ್ ಸಿಕ್ಕಲ್‌ಗಾರ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

ಕರ್ನಾಟಕ ಸರ್ಕಾರ
ಆಡಳಿತ ವೈದ್ಯಾಧಿಕಾರಿಗಳ ಕಛೇರಿ, ಉಪವಿಭಾಗೀಯ ಆಸ್ಪತ್ರೆ ಸಾಗರ, ಶಿವಮೊಗ್ಗ ಜಿಲ್ಲೆ-577401.
ದೂರವಾಣಿ: 08183-226076 ಇ-ಮೇಲ್: amosagara@gmail.com
ಸಂ:ಉವಿಆಸಾ/ಸಿ.ಆ.ಪೂ.ಟೆ/42/2025-26 ದಿನಾಂಕ: 01-08-2025

ಸಿದ್ಧಪಡಿಸಿದ ಪಥ್ಯಾಹಾರ ಪೂರೈಕೆ ಸಂಬಂಧ ಇ-ಟೆಂಡರ್ ಪ್ರಕಟಣೆ

ಉಪವಿಭಾಗೀಯ ಆಸ್ಪತ್ರೆ ಸಾಗರ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸಾಗರ ಇಲ್ಲಿಗೆ ಸಿದ್ಧಪಡಿಸಿದ ಪಥ್ಯಾಹಾರ ಪೂರೈಕೆ ಪಡೆಯಲು ಅರ್ಹ ಸಂಸ್ಥೆಗಳಿಂದ two tender document system ರಂತೆ Karnataka Public Procurement Portal (KPPP) ಮುಖಾಂತರ ಇ-ಟೆಂಡರ್ ಆಹ್ವಾನಿಸಿದ್ದು, ಆಸಕ್ತ ಅರ್ಹ ಟೆಂಡರ್ ದಾರರು ದರಗಳನ್ನು upload ಮಾಡಬಹುದಾಗಿದೆ. ದರಗಳನ್ನು upload ಮಾಡಲು ಕಡೆಯ ದಿನ ಹಾಗೂ ಸಮಯ 19-08-2025 4:30pm ಹಾಗೂ ಈ ಕುರಿತು ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ವೆಬ್ ಸೈಟ್‌ಗೆ ಲಾಗ್ ಆನ್ ಮಾಡಲು ಕೋರಲಾಗಿದೆ.

ಸಹಿ/- ಆಡಳಿತ ವೈದ್ಯಾಧಿಕಾರಿಗಳು, ಉಪವಿಭಾಗೀಯ ಆಸ್ಪತ್ರೆ, ಸಾಗರ
ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/25-26/20/08/705

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್
ಎ ಶೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕ್
CIN No. L65923KA2006PLC040028
ನೋಂದಾಯಿತ ಕಛೇರಿ: ದಿ ಫೇರ್‌ವೇ ಬ್ಯುಸಿನೆಸ್ ಪಾರ್ಕ್ #10/1, 11/2, 12/2B, ಡೊಮ್ಲೂರ್ ಆಫ್, ಕೋರಮಂಗಲ ಒಳವರ್ತುಲ ರಸ್ತೆ, EGL ಪಕ್ಕ , ಚಲ್ಲಘಟ್ಟ , ಬೆಂಗಳೂರು 560071

19ನೇ ವಾರ್ಷಿಕ ಪ್ರಧಾನ ಸಭೆಯ

1. ಈ ಮೂಲಕ ಸೂಚನೆ ನೀಡಲಾಗಿರುವುದೇನೆಂದರೆ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ 19 ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ("AGM") ಶುಕ್ರವಾರ, 29ನೇ ಆಗಸ್ಟ್ 2025 ರಂದು ವೀಡಿಯೊ ಕಾನ್ಫರೆನ್ಸ್ ವಿಧಾನ ಮೂಲಕ ನಿಗದಿಪಡಿಸಲಾಗಿದೆ.
2. 2024-25ನೇ ಹಣಕಾಸು ವರ್ಷದ ನೋಟಿಸ್ ಮತ್ತು ವಾರ್ಷಿಕ ವರದಿಯ ಎಲೆಕ್ಟ್ರಾನಿಕ್ ಪ್ರತಿಗಳನ್ನು ಬ್ಯಾಂಕ್/ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್/ಡಿಪಾಸಿಟರಿ ಪಾರ್ಟಿಸಿಪೆಂಟ್(ಗಳು)ನಲ್ಲಿ ನೋಂದಾಯಿಸಿರುವ ಇಮೇಲ್ ವಿಳಾಸಗಳನ್ನು ಹೊಂದಿರುವ ಎಲ್ಲ ಷೇರುದಾರರಿಗೆ ಕಳುಹಿಸಲಾಗಿದೆ. ಮುಂದುವರಿದು, ಈ ಮೇಲೆ ಹೇಳಲಾದ ನೋಟಿಸ್ ಮತ್ತು ವಾರ್ಷಿಕ ವರದಿಯನ್ನು ಬ್ಯಾಂಕ್‌ನ ವೆಬ್‌ಸೈಟ್ www.janabank.com ಮತ್ತು ಷೇರು ವಿನಿಮಯ ಮಂಡಳಿಗಳ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ನಲ್ಲಿ ಲಭ್ಯವಾಗುವಂತೆ ಮಾಡಲಾಗುತ್ತದೆ.
3. ತಮ್ಮ ಇಮೇಲ್ ಐಡಿಗಳನ್ನು ಬ್ಯಾಂಕ್/ಆರ್‌ಟಿಎ/ಠೇವಣಿದಾರರಲ್ಲಿ ನೋಂದಣಿ ಮಾಡಿಕೊಳ್ಳದ ಷೇರುದಾರರಿಗೆ ವಾರ್ಷಿಕ ವರದಿಯ ಸಂಪೂರ್ಣ ವಿವರಗಳು ಇರುವ ನಿಖರ ಪಾಥ್ ಒಳಗೊಂಡಿರುವ ವೆಬ್ ಲಿಂಕ್ ಇರುವ ಪತ್ರವನ್ನು ಬ್ಯಾಂಕ್ ಕಳುಹಿಸುತ್ತದೆ.
4. ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ AGM ಸಮಯದಲ್ಲಿ ತಮ್ಮ ಮತಗಳನ್ನು ಚಲಾಯಿಸುವ ಸೌಲಭ್ಯವನ್ನು ಷೇರುದಾರರಿಗೆ ಬ್ಯಾಂಕ್ ಒದಗಿಸಿದೆ. AGM ಗೆ ಮುಂಚಿತವಾಗಿ ರಿಮೋಟ್ ಇ-ಮತದಾನದ ಮೂಲಕ ಪ್ರಕ್ರಿಯೆ ನಡೆಸಬಹುದು ಮತ್ತು ರಿಮೋಟ್ ಇ-ಮತದಾನದ ವೇಳಾಪಟ್ಟಿ ಈ ಕೆಳಗಿನಂತಿದೆ:

ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ರಿಮೋಟ್ ಮತದಾನದ ಪ್ರಾರಂಭದ ದಿನಾಂಕ ಮತ್ತು ಸಮಯ	ಮಂಗಳವಾರ, 26 ಆಗಸ್ಟ್ 2025 ಬೆಳಗ್ಗೆ 09:00
ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ರಿಮೋಟ್ ಮತದಾನದ ಮುಕ್ತಾಯದ ದಿನಾಂಕ ಮತ್ತು ಸಮಯ	ಗುರುವಾರ, 28 ಆಗಸ್ಟ್ 2025 ಸಂಜೆ 05:00

5. ಸಭೆಯ ನೋಟಿಸ್‌ನಲ್ಲಿ ನಿಗದಿಪಡಿಸಿದ ನಿರ್ಣಯಗಳ ಮೇಲೆ ಮತ ಚಲಾಯಿಸಲು ಅರ್ಹರಾಗಿರುವ ಷೇರುದಾರರನ್ನು ನಿರ್ಧರಿಸುವ ಕೊನೆಯ ದಿನಾಂಕವು ಆಗಸ್ಟ್ 21, 2025 ಆಗಿರುತ್ತದೆ. ಮುಂದುವರಿದು, ಸದಸ್ಯರ ಮತದಾನದ ಹಕ್ಕು ಬ್ಯಾಂಕಿನ ಕಟ್-ಆಫ್ ದಿನಾಂಕದ ಪ್ರಕಾರ ಪೇಯ್ಡ್ ಅಪ್ ಕ್ಯಾಪಿಟಲ್‌ನ ಷೇರುಗಳ ಅನುಪಾತದಲ್ಲಿರುತ್ತದೆ. ರಿಮೋಟ್ ಇ-ಮತದಾನದ ಮಾಡ್ಯೂಲ್ ಅನ್ನು 28ನೇ ಆಗಸ್ಟ್ 2025 ರ ಸಂಜೆ 05:00 ಗಂಟೆಯ ನಂತರ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರೀಸ್ ಲಿಮಿಟೆಡ್ ("NSDL") ಮತ್ತು ಸೆಂಟ್ರಲ್ ಡಿಪಾಸಿಟರಿ ಸೆಕ್ಯುರಿಟೀಸ್ ಲಿಮಿಟೆಡ್ ("CDSL") ನಿಷ್ಕ್ರಿಯಗೊಳಿಸಲಾಗುತ್ತದೆ ಮತ್ತು ನಿರ್ಣಯದ ಮೇಲೆ ಮತವನ್ನು ಷೇರುದಾರರು ಚಲಾವಣೆ ಮಾಡಿದ/ದೃಢೀಕರಿಸಿದ ನಂತರ, ಅವನು/ ಅವಳು ನಂತರ ಅದನ್ನು ಬದಲಾಯಿಸಲು ಅನುಮತಿಸಲಾಗುವುದಿಲ್ಲ.
6. ವಿಡಿಯೋ ಕಾನ್ಫರೆನ್ಸ್ ಮೂಲಕ ಎಜಿಎಂ ನಡೆಯುವುದರಿಂದ ಮತಪತ್ರದ ಮೂಲಕ ಮತದಾನ ಮಾಡುವ ಸೌಲಭ್ಯ ಲಭ್ಯವಿರುವುದಿಲ್ಲ. ಆದರೆ, ಸಭೆಯ ನಿರ್ಣಯಗಳ ಮೇಲೆ ಮತ ಚಲಾಯಿಸದ ಷೇರುದಾರರಿಗೆ ಸಭೆಯ ನಡಾವಳಿಗಳ ಸಮಯದಲ್ಲಿ ಮತ್ತು ಸಭೆಯ ಮುಕ್ತಾಯದಿಂದ ಅರ್ಧ ಗಂಟೆಯವರೆಗೆ ಮತದಾನ ಕಾರ್ಯವಿಧಾನವನ್ನು ಎನ್‌ಎಸ್‌ಡಿಎಲ್ ಮತ್ತು ಸಿಡಿಎಸ್‌ಎಲ್ ಒದಗಿಸುತ್ತದೆ. ಎಜಿಎಂಗಿಂತ ಮೊದಲು ರಿಮೋಟ್ ಮತದಾನದ ಮೂಲಕ ತಮ್ಮ ಮತವನ್ನು ಚಲಾಯಿಸಿದ ಷೇರುದಾರರು ಸಹ ಎಜಿಎಂಗೆ ಹಾಜರಾಗಬಹುದು, ಆದರೆ ಮತ್ತೆ ತಮ್ಮ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.
7. ನಿರ್ದೇಶಕರ ಮಂಡಳಿಯು ವಾಗ್ದೇವಿ, 543/A, 7 ನೇ ಮುಖ್ಯ, 3 ನೇ ಕ್ರಾಸ್, S.L. ಭೈರಪ್ಪ ರಸ್ತೆ, ಹನುಮಂತ ನಗರ, ಬೆಂಗಳೂರು - 560019 ಇಲ್ಲಿ ಕಚೇರಿ ಹೊಂದಿರುವ ಶ್ರೀ. ನಾಗೇಂದ್ರ ಡಿ ರಾವ್, ಪ್ರಾಕ್ಟೀಸಿಂಗ್ ಕಂಪನಿ ಕಾರ್ಯದರ್ಶಿ (FCS 5553; COP 7731) ಅವರನ್ನು ಇ-ಮತದಾನ ಪ್ರಕ್ರಿಯೆಯನ್ನು ನ್ಯಾಯೋಚಿತ ಮತ್ತು ಪಾರದರ್ಶಕವಾಗಿ ಪರಿಶೀಲಿಸಲು ತಪಾಸಕರನ್ನಾಗಿ ನೇಮಿಸಿದೆ. ಮೇಲಿನ ನಿರ್ಣಯಗಳ ಮೇಲೆ ಮಾಡಿದ ಮತದಾನದ ಫಲಿತಾಂಶಗಳನ್ನು ಬ್ಯಾಂಕಿನ ವಾರ್ಷಿಕ ಸಾಮಾನ್ಯ ಸಭೆಯ ಮುಕ್ತಾಯದಿಂದ 48 ಗಂಟೆಗಳ ನಂತರ ಘೋಷಿಸಲಾಗುತ್ತದೆ. ತಪಾಸಕರ ವರದಿಯೊಂದಿಗೆ ಘೋಷಿಸಲಾದ ಫಲಿತಾಂಶಗಳನ್ನು ಷೇರು ವಿನಿಮಯ ಮಂಡಳಿಗಳಿಗೆ ಅಂದರೆ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಲಿಮಿಟೆಡ್ ("NSE") ಮತ್ತು ಬಿಎಸ್‌ಇ ಲಿಮಿಟೆಡ್ ("BSE") ಗೆ ತಿಳಿಸಲಾಗುತ್ತದೆ ಮತ್ತು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮತ್ತು ಎನ್‌ಎಸ್‌ಡಿಎಲ್ ವೆಬ್‌ಸೈಟ್‌ನಲ್ಲಿ ಲಭ್ಯವಾಗುವಂತೆ ಮಾಡಲಾಗುತ್ತದೆ.
8. ಸುಲಭವಾಗಿ ನಡಾವಳಿ ನಿರ್ವಹಣೆಗೆ, ಸಭೆಯಲ್ಲಿ ವ್ಯವಹಾರ ಮಾಡಬೇಕಾದ ವಿಷಯಗಳ ಬಗ್ಗೆ ಪ್ರಶ್ನೆಗಳನ್ನು ಕೇಳಲು / ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಬಯಸುವ ಸದಸ್ಯರುಚ ಸಭೆಗೆ ಕನಿಷ್ಠ ಏಳು ದಿನಗಳ ಮೊದಲು, ತಮ್ಮ ಹೆಸರು, ಡಿಮ್ಯಾಟ್ ಖಾತೆ ಸಂಖ್ಯೆ, ಇ-ಮೇಲ್ ಐಡಿ, ಮೊಬೈಲ್ ಸಂಖ್ಯೆ ಇತ್ಯಾದಿಗಳನ್ನು ನಮೂದಿಸಿ investor.grievance@janabank.com ಗೆ ಇಮೇಲ್ ಕಳುಹಿಸುವ ಮೂಲಕ ತಮ್ಮ ಪ್ರಶ್ನೆಗಳನ್ನು / ಅಭಿಪ್ರಾಯಗಳನ್ನು ಮುಂಚಿತವಾಗಿ ಕಳುಹಿಸಬಹುದು.
9. ಕಂಪನಿಗಳ ಕಾಯಿದೆ, 2013 ರ ವಿಭಾಗ 91 ರ ನಿಬಂಧನೆಗಳಿಗೆ ಅನುಸಾರವಾಗಿ, AGM ಉದ್ದೇಶಕ್ಕಾಗಿ ಸದಸ್ಯರ ನೋಂದಣಿಯು 21ನೇ ಆಗಸ್ಟ್ 2024 ರಿಂದ 29ನೇ ಆಗಸ್ಟ್ 2024 ರವರೆಗೆ (ಎರಡೂ ದಿನಗಳನ್ನು ಒಳಗೊಂಡಂತೆ) ಮುಚ್ಚಿರುತ್ತದೆ.

ದಿನಾಂಕ: 06 ಆಗಸ್ಟ್ 2025
ಸ್ಥಳ: ಬೆಂಗಳೂರು

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಪರವಾಗಿ
ಲಕ್ಷ್ಮಿ ಆರ್ ಎನ್
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಜಂಟಿ ನಿರ್ದೇಶಕರು (ಪಶುಸಂಗೋಪನೆ) ರವರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು - 560002.
ಸಂಖ್ಯೆ: ಜನಿ(ಪಸಂ)/ಪಿಆರ್-280/2025-26 ದಿನಾಂಕ: 05-08-2025

ಟೆಂಡರ್ ಪ್ರಕಟಣೆ

ಜಂಟಿ ನಿರ್ದೇಶಕರು, ಪಶುಸಂಗೋಪನೆ (ಖರೀದಿದಾರರು), ಬಿಬಿಎಂಪಿ, ಬೆಂಗಳೂರು ಇವರು **ಸಕ್ರಿಯ ತಂಪು ಲಸಿಕೆ ವಾಹಕಗಳ ಪೂರೈಕೆಗಾಗಿ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೋಂದಾಯಿಸಿರುವ ಅರ್ಹ ಟೆಂಡರ್‌ದಾರರಿಂದ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಟೆಂಡರ್ ಉಲ್ಲೇಖ ಸಂಖ್ಯೆ: **ಬಿಬಿಎಂಪಿ/2025-26/ಐಎನ್‌ಡಿ0154**
1) ಕೆಪಿಪಿ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭ ದಿನಾಂಕ: **05-08-2025 ರಿಂದ.** 2) ಬಿಡ್ ಪೂರ್ವ ಭಾವಿ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ: **08-08-2025 ರಂದು ಬೆಳಿಗ್ಗೆ 11.00 ಗಂಟೆಗೆ ವಿಶೇಷ ಆಯುಕ್ತರು (ಆರೋಗ್ಯ) ರವರ ಕಛೇರಿ, 3ನೇ ಮಹಡಿ, ಅನೆಕ್ಸ್-3 ಕಟ್ಟಡ, ಎನ್.ಆರ್. ಚೌಕ, ಬೆಂಗಳೂರು - 560002.** 3) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ವಿಚಾರಣೆಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **08-08-2025 ರಂದು ಸಂಜೆ 5.00 ಗಂಟೆಯವರೆಗೆ.** 4) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **19-08-2025 ರಂದು ಸಂಜೆ 5.00 ಗಂಟೆಯವರೆಗೆ.** 5) ತಾಂತ್ರಿಕ ಬಿಡ್‌ನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ: **20-08-2025 ರಂದು ಸಂಜೆ 5.10 ಗಂಟೆಗೆ.** 6) ಪ್ರದರ್ಶನದ ದಿನಾಂಕ ಮತ್ತು ಸಮಯ: **ತಾಂತ್ರಿಕ ಬಿಡ್‌ನ್ನು ತೆರೆದ ನಂತರ ತಿಳಿಸಲಾಗುವುದು.** 7) ಸಂಪರ್ಕಿಸುವ ವಿಳಾಸ: **ಜಂಟಿ ನಿರ್ದೇಶಕರು (ಪಶುಸಂಗೋಪನೆ) ರವರ ಕಛೇರಿ, ಕೇಂದ್ರ ಕಛೇರಿ, ಬಿಬಿಎಂಪಿ, ಬೆಂಗಳೂರು.** ದೂರವಾಣಿ ಸಂಖ್ಯೆ: **9480685653,** ಇ-ಮೇಲ್: **jointdirector01@gmail.com.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/-
ಜಂಟಿ ನಿರ್ದೇಶಕರು (ಪಶುಸಂಗೋಪನೆ), ಬಿಬಿಎಂಪಿ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಚೇರಿ, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ - 591302.
ಸಂಖ್ಯೆ:ಕನೀನಿನಿ/ಕಯೋವಿ/ಖಾ/ಪಿಬಿ/ಅ.ಟೆಂ.ಪ್ರ/2025-26/822-823 ದಿನಾಂಕ: 01-08-2025

ಅಲ್ಪಾವಧಿ ಶೇಕಡಾವಾರು ಟೆಂಡರ್ ಪ್ರಕಟಣೆ
(ಕೆಪಿಪಿ-ಪೋರ್ಟಲ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ ಕಛೇರಿ ಅಡಿಯಲ್ಲಿ ಬರುವ ಈ ಕೆಳಗಿನ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರರಿಂದ ಶೇಕಡಾವಾರು ಟೆಂಡರ್‌ಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಕೆಪಿಪಿ-ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ ಜಿ.ಎಸ್.ಟಿ. ಹೊರತುಪಡಿಸಿ (ರೂ. ಲಕ್ಷಗಳಲ್ಲಿ)
1	Restoration and Reconstruction of Road from Havagi Village to Vivek Pragati School (Dharwad Road) under Haliyal Tank Filling Scheme in Haliyal Taluk of Uttar Kannada District. **(KNNL/2025-26/RT/WORK_INDENT3070)**	175.61
2	Development of Roads related to Irrigation Project at Chandur, Khanagaon BK and Marihal Villages in Belagavi Taluka under Belagavi Rural Constituency. **(KNNL/2025-26/RD/WORK_INDENT 3100)**	254.011

ಅರ್ಹ ಗುತ್ತಿಗೆದಾರರ ದರ್ಜೆ: ಕ್ರ.ಸಂ. 1 ಕ್ಕೆ ಕೆ.ಪಿ.ಡಬ್ಲ್ಯೂ.ಡಿ. ದರ್ಜೆ 3 ಮತ್ತು ಮೇಲ್ಪಟ್ಟು ಹಾಗೂ ಕ್ರ.ಸಂ. 2 ಕ್ಕೆ ಕೆ.ಪಿ.ಡಬ್ಲ್ಯೂ.ಡಿ. ದರ್ಜೆ 2 ಮತ್ತು ಮೇಲ್ಪಟ್ಟು

ವೆಬ್‌ಸೈಟ್: **https://kppp.karnataka.gov.in** ನಲ್ಲಿ ಅರ್ಜಿ ಡೌನ್‌ಲೋಡ್ ಮಾಡಿಕೊಳ್ಳಬಹುದು / ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **14-08-2025 ರಂದು ಸಂಜೆ 4.00 ಘಂಟೆಯವರೆಗೆ ಸಲ್ಲಿಸಬಹುದು.** ಪ್ರಿ-ಬಿಡ್ ಸಭೆಯನ್ನು ದಿನಾಂಕ: **08-08-2025 ರಂದು ಬೆಳಿಗ್ಗೆ 11.00 ಘಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನಾ ವಿಭಾಗ, ಖಾನಾಪುರ, ಬೆಳಗಾವಿ ಕಛೇರಿಯಲ್ಲಿ ಆಯೋಜಿಸಲಾಗಿದೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **16-08-2025 ರಂದು ಬೆಳಿಗ್ಗೆ 11.00 ಘಂಟೆಗೆ.** ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ್ ಷರತ್ತುಗಳು ಹಾಗೂ ಇತರೆ ವಿವರಗಳನ್ನು ಕೆಪಿಪಿ-ಪೋರ್ಟಲ್ ಮುಖಾಂತರ **https://kppp.karnataka.gov.in** ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: **08336-222163** ಸಂಪರ್ಕಿಸುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ.
ವಾಸಾಸಂಇ/ಬೆಳಗಾವಿ/787/ಅಡ್ವರ್ಟೋರ್/2025-26

ಉಳ್ಳಾಲ ನಗರ ಸಭೆ ದ.ಕ. ಜಿಲ್ಲೆ
ನಂಬ್ರ.:ಉನಸ/ಜೆ.ಇ.(2)/ಕಾಮಗಾರಿ/ಸಿಆರ್/11/2025-26 ದಿನಾಂಕ: 05.08.2025

ಟೆಂಡರು ಪಕಟಣೆ (ಕೆ.ಪಿ.ಪಿ.ಪಿ ಪೋರ್ಟಲ್)

ಉಳ್ಳಾಲ ನಗರಸಭೆಯ ವ್ಯಾಪ್ತಿಯಲ್ಲಿ 2025-26ನೇ ಸಾಲಿನ ನಗರಸಭಾ ನಿಧಿಯಡಿ ಈ ಕೆಳಗಿನ 2 ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರುಗಳನ್ನು ಕೆ.ಟಿ.ಪಿ.ಪಿ ಅಧಿನಿಯಮ 1999 ನಿಯಮಾವಳಿಗಳು 2000ರ ಅನ್ವಯ ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ **ಪೌರಾಯುಕ್ತರು, ಉಳ್ಳಾಲ ನಗರಸಭೆ** ಇವರಿಂದ ಟೆಂಡರು ಕರೆಯಲಾಗಿದೆ. ಟೆಂಡರು ಶರ್ತಗಳು, ಇತರ ಮಾಹಿತಿ ಬೇಕಾದಲ್ಲಿ ನಗರ ಸಭೆ ಕಚೇರಿಯಲ್ಲಿ ಕಚೇರಿಯ ಸಮಯದಲ್ಲಿ ಪಡೆದುಕೊಳ್ಳಬಹುದು ಅಥವಾ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಪಡೆಯಬಹುದು www.ullalatown.mrc.gov.in ನಲ್ಲಿ ನೋಡಬಹುದು.
ಟೆಂಡರು ಸಲ್ಲಿಸುವ ಕೊನೆಯ ದಿನಾಂಕ, 22.08.2025 ಅಪರಾಹ್ನ 4.00 ಗಂಟೆಗೆ, ಟೆಂಡರು ತೆರೆಯುವ ದಿನಾಂಕ 25.08.2025 ಅಪರಾಹ್ನ 5.00 ಗಂಟೆಗೆ

(ಶ್ರೀಮತಿ ಕೆ. ಶಶಿಕಲಾ) ಅಧ್ಯಕ್ಷರು, ಉಳ್ಳಾಲ ನಗರಸಭೆ
(ಶ್ರೀ ನವೀನ್ ಕುಮಾರ್ ಬಿ.ಎನ್.) ಪೌರಾಯುಕ್ತರು ಉಳ್ಳಾಲ ನಗರಸಭೆ

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ
ದೊಡ್ಡಕೆರೆ ಮೈದಾನ, ಇಂದಿರಾನಗರ, ಮೈಸೂರು-570010.
ದೂರವಾಣಿ (ಕಛೇರಿ): 0821-2523626
e-mail::exhibitionauthority@gmail.com
ಸಂಖ್ಯೆ/ಕವಪ್ರಾ/ಮುಕಾನಿ/2025-26 ದಿನಾಂಕ: 04.08.2025

ಪ್ರಕಟಣೆ

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಅಭಿವೃದ್ಧಿಗೊಳಿಸುವ ಸಂಬಂಧ ಕೆಲವು ಕಾಮಗಾರಿಗಳು ಕೈಗೊಳ್ಳಬೇಕಾಗಿದ್ದು ಸದರಿ ಕಾಮಗಾರಿ ಕೆಲವು ಐಟಂಗಳಿಗೆ ದರಗಳು ಬೇಕಾಗಿರುವುದರಿಂದ, KPPP Portal ಮೂಲಕ Request for Information (RFI) ಮಾಹಿತಿಯನ್ನು ಆಹ್ವಾನಿಸಿದ್ದು ವಿವಿರ ಈ ಕೆಳಕಂಡತ್ತಿದೆ ಹಾಗೂ ಸದರಿ ವಿವರಗಳಿಗೆ ಮಾಹಿತಿ ಮತ್ತು ತಮ್ಮ ದರವನ್ನು ನೀಡಲು ಕಛೇರಿ ವೇಳೆಯಲ್ಲಿ ಪ್ರಾಧಿಕಾರದ ಅಧಿಕಾರಿಗಳನ್ನು ಸಂಪರ್ಕಿಸಿ ಈ ಕೆಳಕಂಡ ಎಲ್ಲಾ ಕಾಮಗಾರಿಗಳಿಗೆ ಐಟಂಗಳ ವಿವರಗಳನ್ನು ಪಡೆದು ತಮ್ಮ ದರವನ್ನು ನಮೂದಿಸಿ ದಿ: 11.08.2025ರಂದು ಪೂರ್ವಾಹ್ನ 10:30 ಗಂಟೆಯವರೆಗೆ ಪ್ರಾಧಿಕಾರಕ್ಕೆ ಸಲ್ಲಿಸಬಹುದಾಗಿದೆ. ಆದ್ದರಿಂದ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಕಛೇರಿ ವೇಳೆಯಲ್ಲಿ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಿವಿಲ್), ರವರನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು ಕೋರಿದೆ.

1) KEA/2025-26/EL/WORK_INDENT64 **2)** KEA/2025-26/ OW/WORK_INDENT65 **3)** KEA/2025-26/OW/WORK_INDENT67 **4)** KEA/2025-26/OW/WORK_INDENT68 **5)** KEA/2025-26/OW/WORK_INDENT69 **6)** KEA/2025-26/OW/WORK_INDENT70 **7)** KEA/2025-26/OW/WORK_ INDENT71 **8)** KEA/2025-26/OW/WORK_INDENT72 **9)** KEA/2025-26/OW/WORK_INDENT73

ಮೊಬೈಲ್ ಸಂಖ್ಯೆ: 9961640868,7892920878.
ಇ-ಮೇಲ್: exhibitionauthority@gmail.com
ಸಹಿ/- ಸಹಾಯಕ ಕಾರ್ಯಪಾಲಕ ಅಭಿಯಂತರರು
DIPR/DDMYS/763/KSMCA/429/2025-26

ತುಮಕೂರು ಮಹಾನಗರಪಾಲಿಕೆ, ತುಮಕೂರು
ವೆಬ್‌ಸೈಟ್ : www.tumkurucity.mrc.gov.in
ಇಮೇಲ್: itstaff_ulb_tumkur@yahoo.com
ದೂರವಾಣಿ : 2278480, ಫ್ಯಾಕ್ಸ್ 2275106, ಸಾರ್ವಜನಿಕ : 0816-2271200, 2272200
ತುಮಪಾ/ತಾಂಶಾ/ಸಿವಿಲ್ ಶಾಖೆ/ಸಿಆರ್/10/2025-26 ದಿನಾಂಕ: 31-07-2025

ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಮಹಾನಗರಪಾಲಿಕೆ ನಿಧಿ ಹಾಗೂ 2025-26ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿಯ ಶೇ.17.15%, 6.95%, ಶೇ. 7.25ರ ಅನುದಾನದಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್ **http://kppp.karnataka.gov.in** ಮುಖಾಂತರ ಭಾಗವಹಿಸಲು ಟೆಂಡರ್ ಆಹ್ವಾನಿಸಲಾಗಿದ್ದು,

ಇ-ಪಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1.	ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ:	**ದಿನಾಂಕ: 01-08-2025 ರಿಂದ ದಿನಾಂಕ: 18-08-2025 ರವರೆಗೆ**
2.	ಪ್ರಿ-ಬಿಡ್ ಮಿಟಿಂಗ್ ದಿನಾಂಕ:	**ದಿನಾಂಕ: 07-08-2025 ಬೆಳಗ್ಗೆ 4.30 ಗಂಟೆಗೆ**
3.	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:	**ದಿನಾಂಕ: 18-08-2025 ರಂದು ಬೆಳಗ್ಗೆ 11.30 ಗಂಟೆವರೆಗೆ**
4.	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:	**19-08-2025 ಬೆಳಗ್ಗೆ 11.40 ಗಂಟೆಗೆ**
5.	ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:	**ದಿನಾಂಕ:20-08-2025ರ ಬೆಳಗ್ಗೆ 11.45ಗಂಟೆಗೆ**

ಸಹಿ/- ಕಾರ್ಯಪಾಲಕ ಅಭಿಯಂತರರು ತುಮಕೂರು ಮಹಾನಗರಪಾಲಿಕೆ ತುಮಕೂರು.
DIPR/TUM/RO-96/25-26/Oysters

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ನಂ:ದಾಮಪಾ:ಕಾಅ1.ಇ.ಟೆಂಡರ್:20:2025-26 ದಿನಾಂಕ: 01-08-2025

ಟೆಂಡರ್ ಪ್ರಕಟಣೆ
(ಕೆಪಿಪಿಪಿ ಪೋರ್ಟಲ್ ಮುಖಾಂತರ)

2025-26 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ-06 ಕಾಮಗಾರಿಗಳು, ಎಸ್.ಬಿ.ಎಂ 2.0-01 ಕಾಮಗಾರಿಗಳು, ದರಪಟ್ಟಿ ಆಹ್ವಾನ (EOI) :-02 ಕಾಮಗಾರಿಗಳು, ಒಟ್ಟು 09 ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜುದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆಪಿಪಿಪಿ ಸಹಾಯಕ ದೂರವಾಣಿ ಸಂಖ್ಯೆ: +91-8046010000 +91-8068948777 ರಿಂದ ಮಾಹಿತಿ ಪಡೆಯಬಹುದು. ಅಂದಾಜು ಮೊತ್ತ, ಟೆಂಡರ್‌ಗಿಟ್ಟ ಮೊತ್ತ, ಇ.ಎಂ.ಡಿ. ಮೊತ್ತ ಮತ್ತು ಟೆಂಡರ್ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.
ಕ್ರಮ ಸಂ.01 ರಿಂದ 04 ರ ಕಾಮಗಾರಿಗಳಿಗೆ : ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 04-08-2025 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ : 18-08-2025 ಸಮಯ : 16.00
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 18-08-2025 ಸಮಯ : 17.00
ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20-08-2025 ಸಮಯ : 11.00
ಕ್ರಮ ಸಂ.05 ರಿಂದ 09 ರ ಕಾಮಗಾರಿಗಳಿಗೆ: ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 04-08-2025 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 12-08-2025 ಸಮಯ : 16.00
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 12-08-2025 ಸಮಯ : 17.00
ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 13-08-2025 ಸಮಯ : 17.05

ವಾಸಾಇ/ದಾವಣಗೆರೆ/234/ ಕೆಎಸ್‌ಎಂಸಿಎ/2025-26
ಸಹಿ/-ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ದಾವಣಗೆರೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560020.
ಸಂ: ಬೆಂಅಪ್ರಾ/ನಯೋಸ/CLU-61/1769/2025-26 ದಿನಾಂಕ: 04.08.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀಮತಿ ಮಂಜುಳ ಎ ಎನ್ #22, ಇ.ಇ ಲೇಔಟ್, ಪ್ರಶಾಂತನಗರ, 3ನೇ ಕ್ರಾಸ್, ಕೆ.ನಾರಾಯಣಪುರ ಕ್ರಾಸ್, ಬೆಂಗಳೂರು-560 077.	ಯಲಹಂಕ	ಹೆಸರಘಟ್ಟ	ರಾಜಾನಕುಂಟೆ	51/11	0ಎ-05ಗುಂ	ವ್ಯವಸಾಯ	ವಸತಿ

ಷರಾ:- ಅರ್ಜಿದಾರರು ಪ್ರಶ್ನಿತ ಜಮೀನನ್ನು ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸದರಿ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ, ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ, ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವ್ಯವಸಾಯ'** ವಲಯದಿಂದ **'ವಸತಿ'** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಸಮಾಚಾರ ಸಣ್ಣದಲ್ಲ

ಸೇತುವೆ ಕುಸಿದು ನಾಲೆಗೆ ಬಿದ್ದ ಲಾರಿ

ಮೈಸೂರು: ಸೇತುವೆ ಮುರಿದು ಬಿದ್ದು ಭತ್ತ ಸಾಗಿಸುತ್ತಿದ್ದ ಲಾರಿ ನಾಲೆಗೆ ಬಿದ್ದಿರುವ ಘಟನೆ ಸರಗೂರು ತಾಲೂಕಿನ ಹಾಲುಗಡ ಗಣೇಶನ ಗುಡಿ ಬಳಿ ನಡೆದಿದೆ. ಸರಗೂರು ತಾಲೂಕಿನ ಬಲದಂಡೆ ನಾಲೆ ಸೇತುವೆ ಕುಸಿದು ಬಿದ್ದಿದ್ದು, ಶ್ರೀ ಚಿಕ್ಕದೇವಮ್ಮನ ಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ಹಾಗೂ ವಿವಿಧ ಗ್ರಾಮಗಳಿಗೆ ತೆರಳುವ ರಸ್ತೆಯಲ್ಲಿರುವ ಸೇತುವೆ ಇದಾಗಿದೆ. ಇಟ್ನ ಗ್ರಾಮದಿಂದ ತಮಿಳುನಾಡಿಗೆ ಭತ್ತ ತುಂಬಿಕೊಂಡು ಹೋಗುತ್ತಿದ್ದ ಲಾರಿ ಅಪಘಾತಕ್ಕೀಡಾಗಿದೆ. ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಸೇತುವೆ ದುರಸ್ತಿಪಡಿಸುವಂತೆ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಸ್ಥಳೀಯರು ದೂರಿದರು. ಕಬಿನಿ ಜಲಾಶಯದ ಕಾರ್ಯಪಾಲಕ ಅಭಿಯಂತರ ಕೆ.ಉಷಾ ಹಾಗೂ ಸರಗೂರು ಠಾಣೆಯ ಎಸ್‌ಐ ಕಿರಣ್ ಕುಮಾರ್ ಘಟನಾ ಸ್ಥಳ ಪರಿಶೀಲನೆ ನಡೆಸಿದರು.

ವಸತಿ ಶಾಲೆಯ ನಾಲ್ವರು ಅಮಾನತು

ಮೈಸೂರು: ತಾಲೂಕಿನ ತಗಡೂರಿನ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ ಪ್ರಾಂಶುಪಾಲ ಸೇರಿ ನಾಲ್ವರನ್ನು ಅಮಾನತುಗೊಳಿಸಿ, ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕ ಕಾಂತರಾಜು ಆದೇಶ ಹೊರಡಿಸಿದ್ದಾರೆ. ಪ್ರಾಂಶುಪಾಲೆ ವಸಂತ ಕುಮಾರಿ, ಪ್ರಭಾರ ನಿಲಯಪಾಲಕ ಮಹದೇವಪ್ಪ, ಗಣಿತ ವಿಷಯ ಶಿಕ್ಷಕ ಮಂಜುನಾಥ್, ಅತಿಥಿ ಶಿಕ್ಷಕ ಗಣೇಶ್ ಅಮಾನತು ಮಾಡಲಾಗಿದೆ. ಮೂಲ ಸೌಕರ್ಯ ಕಲ್ಪಿಸಿಲ್ಲ' ಎಂದು ಆರೋಪಿಸಿ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾನುವಾರ ಪ್ರತಿಭಟಿಸಿ, ಕ್ರಮಕ್ಕೆ ಒತ್ತಾಯಿಸಿದ್ದರು.

ಶೃಂಗೇರಿ ಶಾರದಾಂಬೆಗೆ ರೇವಣ್ಣ ವಿಶೇಷ ಪೂಜೆ

ಚಿಕ್ಕಮಗಳೂರು: ರೇಪ್ ಕೇಸ್‌ನಲ್ಲಿ ಶಿಕ್ಷೆಗೆ ಗುರಿಯಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಹುಟ್ಟುಹಬ್ಬದ ಹಿನ್ನೆಲೆ, ಶೃಂಗೇರಿ ಶಾರದಾಂಬೆಗೆ ಮಾಜಿ ಸಚಿವ ಎಚ್.ಡಿ.ರೇವಣ್ಣ ವಿಶೇಷ ಪೂಜೆ ಸಲ್ಲಿಸಿದ್ದಾರೆ. ಸೋಮವಾರ ರಾತ್ರಿಯೇ ಬಂದು ಶೃಂಗೇರಿಯಲ್ಲಿ ವಾಸ್ತವ್ಯ ರೇವಣ್ಣ ಹೂಡಿದ್ದ ಹೂಡಿ ದ್ದರು. ಶೃಂಗೇರಿ ಗುರುಗಳ ಭೇಟಿ ಮಾಡಿ ಆಶೀ ರ್ವಾದ ಪಡೆದಿದ್ದರು. ಮಂಗಳವಾರ ಬೆಳಗ್ಗೆಯೇ ಶಾರದಾಂಬೆಗೆ ವಿಶೇಷ ಪೂಜೆ ಸಲ್ಲಿಸಿ ದರ್ಶನ ಪಡೆದು ಬೆಂಗಳೂರಿಗೆ ಹೊರಟಿದ್ದಾರೆ. ದೇವೇ ಗೌಡರ ಕುಟುಂಬ ಸುಮಾರು 50 ವರ್ಷಗಳಿಂದ ಶಾರದಾಂಬೆಯ ಭಕ್ತರಾಗಿದ್ದಾರೆ. ಹಿಂದೆ ಸಮ್ಮಿಶ್ರ ಸರಕಾರದ ಅವಧಿಯಲ್ಲೂ ಸರಕಾರ ಉಳಿಸಿಕೊಳ್ಳಲು ರೇವಣ್ಣ ದೇವರ ಮೊರೆ ಹೋಗಿದ್ದರು. ಶೃಂಗೇರಿ ದೇವಾಲಯಕ್ಕೆ ಹೋಗಿ ಶಾರದೆಗೆ ವಿಶೇಷ ಪೂಜೆ ಸಲ್ಲಿಸಿದ್ದರು.

ಕಟ್ಟಡದಿಂದ ಬಿದ್ದು ಯುವತಿ ಸಾವು

ನೆಲಮಂಗಲ: ಮೂರಂತಸ್ತಿನ ಕಟ್ಟಡದಿಂದ ಬಿದ್ದು ಯುವತಿ ಅನುಮಾನಾಸ್ಪದ ವಾಗಿ ಸಾವನ್ನಪ್ಪಿದ ಘಟನೆ ಬೆಂಗಳೂರು ಉತ್ತರ ತಾಲೂ ಕಿನ ಕಡಬಗೆರೆಯಲ್ಲಿ ನಡೆದಿದೆ. ರಿಸೆಪ್ಷನಿಸ್ಟ್ ರಕ್ಷಿತಾ (20) ಮೃತ ಯುವತಿ. ರಕ್ಷಿತಾ ಜುನಿಫರ್ ಫಿಟ್ನೆಸ್ ಸೆಂಟರ್‌ನಲ್ಲಿ ಕಳೆದ 8 ತಿಂಗಳಿನಿಂದ ರಿಸೆಪ್ಷನಿಸ್ಟ್ ಆಗಿ ಕೆಲಸ ಮಾಡುತ್ತಿದ್ದರು. ಇದ್ದಕ್ಕಿದ್ದಂತೆ ಮೂರನೇ ಮಹಡಿಯಲ್ಲಿದ್ದ ಫಿಟ್ನೆಸ್ ಸೆಂಟರ್ ಕಟ್ಟಡದ ಮೇಲಿನಿಂದ ಬಿದ್ದು ರಕ್ಷಿತಾ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಶ್ವವಾಣಿ ಕ್ಲಬ್ ಹೌಸ್
06.08.2025
ಸಂಜೆ: 06.55 ರಿಂದ 08.05 ರವರೆಗೆ
ಬುಧವಾರದ ಅತಿಥಿ
ಕವನ ಕೋಗಿಲೆ
ವಿಷಯ
ಹಾಡಿನ ಪುಸ್ತಕದ ಹಾಡುಗಳು
vishwavani.news

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ



ಬೆಂಗಳೂರಿನ ಮೆಜೆಸ್ಟಿಕ್ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಟರ್ಮಿನಲ್1 ರಲ್ಲಿ ಮುಷ್ಕರದ ಹಿನ್ನೆಲೆ ಕಾರ್ಯನಿರ್ವಹಿಸದೆ ಸಾಲಾಗಿ ನಿಂತಿರುವ ಬಸ್‌ಗಳು. ▶▶ ಚಿತ್ರ: ಸುಧಾಕರ್ ದೇವರಾಜ್

ನಾನಾ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮುಷ್ಕರ, ಬಹುತೇಕ ಯಶಸ್ವಿ | ಖಾಸಗಿ ವಾಹನಗಳಿಂದ ದುಪ್ಪಟ್ಟು ಹಣ ವಸೂಲಿ

ಸಾರಿಗೆ ನೌಕರರ ಮುಷ್ಕರ: ಪ್ರಯಾಣಿಕರ ಪರದಾಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಾರಿಗೆ ನೌಕರರ ಮುಷ್ಕರವು ಬಹುತೇಕ ಯಶಸ್ವಿಯಾಗಿದ್ದು, ಬಹುತೇಕ ಕಡೆಗಳಲ್ಲಿ ಪ್ರಯಾಣಿಕರು ಬಸ್ ಸಂಚಾರವಿಲ್ಲದೆ ಪರದಾಡುವಂತಾಯಿತು.

ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಕೋರಿ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯು ಕೆಆರ್‌ಟಿಸಿ, ಕೆಕೆಆರ್‌ಟಿಸಿ ನೌಕರರು ಮಂಗಳವಾರ ನಡೆಸಿದ ಅನಿರ್ದಿಷ್ಟಾವಧಿ ಮುಷ್ಕರದಿಂದ ಹಲವು ಕಡೆಗಳಲ್ಲಿ ಸಾರಿಗೆ ಸಂಸ್ಥೆಯ ಬಸ್‌ಗಳು ರಸ್ತೆಗೆ ಇಳಿಯದ ಹಿನ್ನೆಲೆ ಜನಜೀವನ ಅಸ್ತವ್ಯಸ್ತವಾಗಿತ್ತು. ಮುಷ್ಕರದಿಂದಾಗಿ ಮೆಜೆಸ್ಟಿಕ್, ಮೈಸೂರು ರಸ್ತೆಯ ಸ್ಯಾಟ್‌ಲೈಟ್ ಬಸ್ ನಿಲ್ದಾಣ ಮತ್ತು ಶಾಂತಿನಗರ ಬಸ್ ನಿಲ್ದಾಣದಲ್ಲಿ ನೂರಾರು ಜನ ಪ್ರಯಾಣಿಕರು ಪರದಾಡುವಂತಾಯಿತು. ಹಲವು ಕಡೆಗಳಲ್ಲಿ ಬಿಎಂಟಿಸಿ ಬಸ್‌ಗಳ ಸಂಚಾರವಿಲ್ಲದೆ ಜನರು ಆಟೋಗಳ ಮೊರೆ ಹೋಗುವಂತಾಗಿದ್ದು, ಆಟೋ ಚಾಲಕರು ಕೇಳಿದಷ್ಟು ಹಣ ನೀಡಿ ಸಂಚಾರ ನಡೆಸಬೇಕಾದ ಅನಿವಾರ್ಯತೆಯುಂಟಾಯಿತು.

ಮುಷ್ಕರ ಆಗಬಾರದು. ಜನಸಾಮಾನ್ಯರಿಗೆ ಭಾರಿ ತೊಂದರೆಗಳಾಗುತ್ತವೆ. ಮುಂದೆ ಈ ರೀತಿಯ ಮುಷ್ಕರಕ್ಕೆ ಅವಕಾಶ ಕೊಡಬಾರದು. ಜನರು ಯಾವ ರೀತಿ ಕಷ್ಟ ಅನುಭವಿಸು ತ್ತಾರೆ ಎಂದು ಇಲ್ಲಿಗೆ ಬಂದು ನೋಡಿದರೆ ತಿಳಿಯು ತ್ತದೆ. ಎಲ್ಲವೂ ಸರಿಯಿದ್ದರೆ ಜೀವನ ಎನ್ನಿಸಿ ಕೊಳ್ಳುವುದಿಲ್ಲ. ಕಷ್ಟ-ಸುಖ, ಬೇವು-ಬೆಲ್ಲ ಎಲ್ಲವೂ ಇರಬೇಕು.

-ಹೊನ್ನವಳ್ಳಿ ಕೃಷ್ಣ, ಹಿರಿಯ ನಟ

ಎಲೆಕ್ಟ್ರಿಕ್ ಬಸ್ ಸಂಚಾರ

ಬೆಂಗಳೂರಿನಲ್ಲಿ ಸಾರಿಗೆ ನೌಕರರ ಮುಷ್ಕರದ ನಡುವೆಯೂ ಬಿಎಂಟಿಸಿಯ ಕೆಲವು ಎಲೆಕ್ಟ್ರಿಕ್ ಬಸ್‌ಗಳು ಸಂಚಾರ ನಡೆಸಿದ್ದು, ನಿಗಮಗಳ ಕಾಯಂ ನೌಕರರು ಮುಷ್ಕರ ನಡೆಸಿದರೆ, ಎಲೆಕ್ಟ್ರಿಕ್ ಬಸ್‌ಗಳಲ್ಲಿ ಕಾರ್ಯ ನಿರ್ವಹಿಸುವ ಖಾಸಗಿ ಸಂಸ್ಥೆಗಳ ಹೊರಗುತ್ತಿಗೆ ನೌಕರರು ಮುಷ್ಕರದಲ್ಲಿ ಭಾಗಿಯಾಗದೇ ತಮ್ಮ ಕೆಲಸ ವನ್ನು ತಾವು ಮುಂದುವರೆಸಿದ್ದರಿಂದಾಗಿ ಒಂದಷ್ಟು ಗೊಂದಲ ಉಂಟಾಗಿತ್ತು. ಬಿಎಂಟಿಸಿ ಎಲೆಕ್ಟ್ರಿಕ್ ಬಸ್‌ಗಳನ್ನು ಗುತ್ತಿಗೆ ಆಧಾರದಲಿದ್ದು, ಬಹುತೇಕ ಬಸ್‌ಗಳು ಮತ್ತು ಅದರಲ್ಲಿನ ಸಿಬ್ಬಂದಿ ಸಂಪೂ ರ್ಣ ಹೊರ ಗುತ್ತಿಗೆಯಾಗಿವೆ. ಹೀಗಾಗಿ ಮುಷ್ಕರದ ನಡೆವೆಯೂ ಎಲೆಕ್ಟ್ರಿಕ್ ಬಸ್‌ಗಳು ಸಂಚಾರ ನಡೆಸಿದ್ದವು.

ಮೆಟ್ರೋದಲ್ಲಿ ಹೆಚ್ಚಿದ ಜನಸಂದಣಿ

ಸಾರಿಗೆ ನೌಕರರ ಮುಷ್ಕರವು ನಮ್ಮ ಮೆಟ್ರೋ ಪಾಲಿಗೆ ವರದಾನವಾಗಿ ಪರಿಣಮಿಸಿದೆ. ಬಸ್ ಸರಿಯಾಗಿ ಸಿಗದೆ ಪರದಾಡುತ್ತಿರುವ ಜನರು ಮೆಟ್ರೋದ ಮೊರೆ ಹೋಗಿದ್ದು, ಮೆಟ್ರೋ ನಿಲ್ದಾಣಗಳಲ್ಲಿ ಎಂದಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರು ಸಂಚಾರ ನಡೆಸಿದ್ದಾರೆ. ದಿನನಿತ್ಯಕ್ಕಿಂತ ಮೆಟ್ರೋ ಪ್ರಯಾಣಿಕರು ಹೆಚ್ಚಾಗಿರುವುದರಿಂದ ತೊಂದರೆಯಾಗದಂತೆ ಮೆಟ್ರೋ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿತ್ತು. ಮೆಟ್ರೋ ನಿಲ್ದಾಣದ ಹೊರಗಿನಿಂದಲೂ ಪ್ರಯಾಣಿಕರು ಕ್ಯೂ ನಿಂತಿದ್ದರು. ಮೆಜೆಸ್ಟಿಕ್ ಮೆಟ್ರೋ ನಿಲ್ದಾಣದ ಮುಂಭಾಗದಲ್ಲಿ ಭಾರಿ ಜನಸಂದಣಿ ಕಂಡು ಬಂದ ಹಿನ್ನೆಲೆ ಮೆಟ್ರೋ ನಿಲ್ದಾಣದ ಬಳಿ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಸಾರಿಗೆ ಬಸ್‌ಗಳ ಮುಂಗಡ ಬುಕ್ಕಿಂಗ್ ಅಭಾದಿತ

ಸಾರಿಗೆ ಬಸ್‌ಗಳ ಮುಷ್ಕರ ಇದ್ದರೂ ಕೂಡ ಮುಂಗಡ ಟಿಕೆಟ್ ಬುಕ್ಕಿಂಗ್ ಸ್ವೀಕರಿಸಲಾಗುತ್ತಿತ್ತು. ಮುಷ್ಕರ ಶೀಘ್ರವಾಗಿ ಮುಗಿಯುವ ನಿರೀಕ್ಷೆಯಲ್ಲಿ ಟಿಕೆಟ್ ಬುಕ್ಕಿಂಗ್ ಕಾರ್ಯ ನಡೆಸಲಾಗುತ್ತಿತ್ತು. ಸ್ಯಾಟ್‌ಲೈಟ್, ಮೆಜೆಸ್ಟಿಕ್, ಶಾಂತಿನಗರ ಬಸ್ ನಿಲ್ದಾಣದಲ್ಲಿ ಎಂದಿನತಂತೆ ಜನ ಮುಂಗಡ ಟಿಕೆಟ್ ಕಾಯ್ದಿರಿಸಿದರು.

ಮಹಿಳಾ ಪ್ರಯಾಣಿಕರಿಗೆ ಬಂದ್ ಬಿಸಿ: ಸರಕಾರಿ ಬಸ್‌ಗಳಿಲ್ಲದ ಹಿನ್ನೆಲೆ ಅನೇಕ ಮಹಿಳಾ ಪ್ರಯಾಣಿಕರು ತೀವ್ರ ತೊಂದರೆ ಅನುಭವಿಸಿದ್ದು, ಶಕ್ತಿ ಯೋಜನೆಯಲ್ಲಿ ಉಚಿತವಾಗಿ ಪ್ರಯಾಣಿಸುತ್ತಿದ್ದ ಮಹಿಳೆಯರು ಮಂಗಳವಾರ ಖಾಸಗಿ ಬಸ್‌ನಲ್ಲಿ ದುಪ್ಪಟ್ಟು ದರ ಪಾವತಿಸಿ ಪ್ರಯಾಣಿಸಿದರು. ಹಾಸನಕ್ಕೆ ಪ್ರಯಾಣಿಸುತ್ತಿದ್ದ ಒಬ್ಬ ಮಹಿಳೆ 400 ರು. ಮತ್ತು ಬಳ್ಳಾರಿಗೆ ಪ್ರಯಾಣಿಸುತ್ತಿದ್ದ ಇಬ್ಬರು ಮಹಿಳೆಯರು ತಲಾ 600 ರು. ಪಾವತಿಸಿದ್ದು, ಟಿಕೆಟ್‌ಗೆ ಹಣ ಪಾವತಿಸಲು ಬಯಸದ ಕೆಲವು ಮಹಿಳಾ ಪ್ರಯಾಣಿಕರು ವಾಪಸ್ ಮನೆಗೆ ಹೋಗುತ್ತಿರುವ ದೃಶ್ಯಗಳು ಬಸ್ ನಿಲ್ದಾಣಗಳಲ್ಲಿ ಸಾಮಾನ್ಯವಾಗಿತ್ತು.

ಇನ್ನು ಸಾರಿಗೆ ಮುಷ್ಕರದ ಪರಿಣಾಮ ಹಿರಿಯ ನಟ ಹೊನ್ನವಳ್ಳಿ ಕೃಷ್ಣ ಹಾಗೂ ಅವರ ಪತ್ನಿ ಬಿಎಂಟಿಸಿ ಬಸ್‌ನಿಲ್ದಾಣದಲ್ಲಿ ಸುಮಾರು 2-3 ಗಂಟೆ ಕಾಲಹರಣ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ವೈಟ್‌ಫೀಲ್ಡ್‌ಗೆ ಹೋಗಿದ್ದ ಹೊನ್ನವಳಿ ಕೃಷ್ಣ ಮತ್ತು ಅವರ ಪತ್ನಿ ವಾಪಾಸು ಮಾದನಾಯಕನಹಳ್ಳಿಗೆ ತೆರಳಲು ಕೆಂಪೇಗೌಡ ಬಸ್‌ನಿಲ್ದಾಣಕ್ಕೆ ಮೆಟ್ರೋದಲ್ಲಿ ಆಗಮಿಸಿದರು. ಇಲ್ಲಿಂದ ಮುಂದೆ ಪ್ರಯಾಣಿಸಲು ಅವರಿಗೆ ಬಸ್ ಲಭ್ಯವಿರಲಿಲ್ಲ. ಹೀಗಾಗಿ ಬಸ್ ನಿಲ್ದಾಣದ ಉಪಾಹಾರ ಗೃಹದಲ್ಲಿ ಕಾಫಿ ಕುಡಿದು, ತಿಂಡಿ ತಿಂದು ಸಮಯ ಕಳೆದರು. ಕೊನೆಗೆ ಬಸ್‌ಗಳಿಲ್ಲ ವೆಂದು ಮನವರಿಕೆಯಾದಾಗ ಮಾದವರದವರೆಗೂ ಮೆಟ್ರೋದಲ್ಲಿ ಪ್ರಯಾಣಿಸಿದರು.

ಮೈಸೂರು ರಸ್ತೆಯ ಸ್ಯಾಟ್‌ಲೈಟ್ ನಿಲ್ದಾಣದಲ್ಲಿ ಬಸ್‌ಗಳಿಗಳಿಗೆ ಪ್ರಯಾಣಿಕರು ಕಾಯುತ್ತಿರುವುದು.

ಸಾರಿಗೆ ನೌಕರರ ಮುಷ್ಕರದ ಹಿನ್ನೆಲೆ ಮೆಜೆಸ್ಟಿಕ್‌ನಲ್ಲಿ ಬಸ್‌ಗಳು ಇಲ್ಲದೆ ಪ್ರಯಾಣಿಕರು ಪರದಾಡಿದರು.

● ಹುಬ್ಬಳ್ಳಿ, ಕೋಲಾರದಲ್ಲಿ ಕಿಡಿಗೇಡಿಗಳಿಂದ ಅಟ್ಟಹಾಸ

ಸರಕಾರಿ ಬಸ್‌ಗೆ ಕಲ್ಲು ಎಸೆತ

ಹುಬ್ಬಳ್ಳಿ ನಗರದ ಹೊರವಲಯದ ಗದಗ ರಸ್ತೆಯ ರಿಂಗ್ ರೋಡ್ ಸಮೀಪ ಹುಬ್ಬಳ್ಳಿಯಿಂದ ಹೊಸಪೇಟೆಗೆ ತೆರಳುತ್ತಿದ್ದ ಬಸ್‌ಗೆ ಕಿಡಿಗೇಡಿಗಳು ಕಲ್ಲು ತೂರಿದ್ದಾರೆ. ಬಸ್ ಮುಂಭಾಗದ ಗಾಜು ಜಖಂಗೊಂಡಿದೆ. ಕೇಶ್ವಾಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ. ಹೊಸಪೇಟೆ ಘಟಕಕ್ಕೆ ಸೇರಿದ ಬಸ್ ಇದಾಗಿದ್ದು, ಬೆಳಗ್ಗೆ 7.15ರ ವೇಳೆ ಹೊಸೂರಿನ ಪ್ರಾದೇಶಿಕ ಬಸ್ ನಿಲ್ದಾಣದಿಂದ ಹೊರಟಿತ್ತು. ಸುಮಾರು 7.30ರ ವೇಳೆ ರಿಂಗ್ ರೋಡ್ ಬಳಿ ಇಬ್ಬರು ಮುಸುಕುಧಾರಿಗಳು ಕಲ್ಲು ತೂರಿ ಪರಾರಿಯಾಗಿರುವ ಮಾಹಿತಿಯಿದೆ. ಇನ್ನೂ ಕೋಲಾರದಲ್ಲೂ ದುಷ್ಕರ್ಮಿಗಳು ನಿಂತಿದ್ದ ಬಸ್‌ಗಳಿಗೆ ಕಲ್ಲು ಎಸೆದಿರುವ ಘಟನೆ ಬಸ್ ನಿಲ್ದಾಣದ ಬಳಿ ನಡೆದಿದೆ. ಸಾರಿಗೆ ನೌಕರರ ಮುಷ್ಕರದ ಹಿನ್ನೆಲೆ ಕೋಲಾರ ಬಸ್ ನಿಲ್ದಾಣವು ಮುಂಜಾನೆಯಿಂದ ಸ್ಥಬ್ದವಾಗಿತ್ತು. ಬಳಿಕ ಒಂದೆರಡು ಬಸ್‌ಗಳನ್ನು ನಿಲ್ದಾಣಕ್ಕೆ ಅಧಿಕಾರಿಗಳು ಕಳುಹಿಸಿದ್ದರು. ಬಸ್ ನಿಲ್ದಾಣಕ್ಕೆ ಬರುತ್ತಿದ್ದಂತೆ ಕಿಡಿಗೇಡಿಗಳು ಬಸ್‌ಗೆ ಕಲ್ಲು ಎಸೆದಿದ್ದಾರೆ. ಪರಿಣಾಮ ಬಸ್‌ನ ಕಿಟಕಿ ಗಾಜು ಪುಡಿಯಾಗಿವೆ.

ನಾನಾ ಜಿಲ್ಲೆಗಳಿಗೆ ತಟ್ಟಿದ ಮುಷ್ಕರದ ಬಿಸಿ

ಮೈಸೂರು: ಮೈಸೂರಿನಲ್ಲಿ ಸಾರಿಗೆ ನೌಕರರ ಮುಷ್ಕರದಿಂದಾಗಿ ಪ್ರಯಾಣಿಕರು ಪರದಾಡುವಂತಾಯಿತು. ಈ ಹಿನ್ನೆಲೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಖಾಸಗಿ ಬಸ್‌ಗಳು ಸಂಚಾರ ಆರಂಭಿಸಿದ್ದು ಮೈಸೂರಿನ ವಿವಿಧ ತಾಲೂಕು, ಮಂಡ್ಯ, ಚಾಮರಾಜನಗರ ಮತ್ತು ಬೆಂಗಳೂರಿಗೆ ಖಾಸಗಿ ಬಸ್ ಸಂಚಾರ ನಡೆಸಿದ್ದು, ಅಧಿಕೃತ ವಾಗಿ ಸಬ್ ಅರ್ಬನ್ ನಿಲ್ದಾಣದ ಒಳ ಭಾಗದಿಂದಲೇ ಸಂಚಾರ ನಡೆಸಿವೆ.

ಹಾಸನ: ಜಿಲ್ಲೆಯಲ್ಲಿ ಬೆಳಗ್ಗೆ 6 ಗಂಟೆಯಿಂದಲೇ ಬಸ್‌ಗಳು ರಸ್ತೆಗಿಳಿಯದ ಹಿನ್ನೆಲೆ ಕೆಲಸಕ್ಕೆ ತೆರಳುವವರು ಬಸ್ ನಿಲ್ದಾಣದಲ್ಲೇ ಕಾದು ಕುಳಿತುಕೊಳ್ಳುವ ಸ್ಥಿತಿ ನಿರ್ಮಾಣವಾಗಿತ್ತು. ಕೆಎಸ್‌ಆರ್‌ಟಿಸಿ ಘಟಕ-1 ಹಾಗೂ ಘಟಕ-2 ರಲ್ಲಿ ಪ್ರಯಾಣಿಕರು ಅನುಕೂಲಕ್ಕಾಗಿ ಖಾಸಗು ಬಸ್‌ಗಳು ಸಂಚಾರ ನಡೆಸಿದ್ದವು.

ಧಾರವಾಡ: ಸಾರಿಗೆ ಸಂಸ್ಥೆ ನೌಕರರು ರಾಜ್ಯದಾದ್ಯಂತ ಮುಷ್ಕರ ನಡೆಸಿದ್ದು, ಧಾರವಾಡದಲ್ಲೂ ಈ ಮುಷ್ಕರದ ಬಿಸಿ ತಟ್ಟಿದೆ. ಸಾರಿಗೆ ಸಂಸ್ಥೆ ಬಸ್‌ಗಳು ಸೇರಿದಂತೆ ಬಿಆರ್‌ಟಿಎಸ್ ಸಂಸ್ಥೆಯ ಬಸ್‌ಗಳೂ ರಸ್ತೆಗಿಳಿದಿಲ್ಲ. ಇದರಿಂದ ವಿದ್ಯಾರ್ಥಿಗಳು ಹಾಗೂ ಕೆಲಸಗಳಿಗೆ ಹೋಗುವ ಪ್ರಯಾಣಿಕರು ಬಸ್‌ಗಳಿಲ್ಲದೇ ಪರದಾಡುವಂತಾಯಿತು. ಬೇಂದ್ರೆ ನಗರ ಸಾರಿಗೆ ಮತ್ತು ಇತರ ಖಾಸಗಿ ವಾಹನಗಳು ಓಡಾಟ ನಡೆಸಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ಧಾರವಾಡದಲ್ಲಿ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.

ಬೀದರ್: ಬೀದರ್ ಜಿಲ್ಲೆಗೂ ಸಾರಿಗೆ ಮುಷ್ಕರದ ಬಿಸಿ ತಟ್ಟಿದ್ದು, ಕಲಬುರಗಿ, ಹುಮ್ನಾಬಾದ್, ಭಾಲ್ಕಿ, ಹೈದ್ರಾಬಾದ್, ಸೇರಿದಂತೆ ಹಲವು ಕಡೆಗಳಲ್ಲಿ ಬಸ್‌ಗಾಗಿ ಪ್ರಯಾಣಿಕರು ನಿಲ್ದಾಣದಲ್ಲೇ ಕಾದು ಕುಳಿತಿದ್ದರು. ಪೊಲೀಸರು ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಂಡಿದ್ದರು.

ಬಾಗಲಕೋಟೆ: ಜಿಲ್ಲೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳು ಹಾಗೂ ಖಾಸಗಿ ಬಸ್‌ಗಳನ್ನೂ ನಿಯೋಜನೆ ಮಾಡಿಕೊಳ್ಳದ ಹಿನ್ನೆಲೆ ಪ್ರಯಾಣಿಕರು ಕಂಗಾಲಾಗಿದ್ದರು. ಈ ನಡುವೆ ಸಾರ್ವಜನಿಕ ಆಸ್ತಿಪಾಸ್ತಿ ಹಾನಿಯಾಗದಂತೆ ಮುನ್ನೆಚ್ಚರಿಕಾ ಕ್ರಮವಾಗಿ ಬಸ್ ನಿಲ್ದಾಣ ವ್ಯಾಪ್ತಿಯ 1 ಕಿಮೀ ಸುತ್ತಮುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು.

ಎರಡೂ ವಿಭಾಗದಲ್ಲಿ ಬಹುತೇಕ ಸಿಬ್ಬಂದಿ ಗೈರಾಗಿದ್ದಾರೆ. ರಾತ್ರಿ ಹಾಗೂ ದೂರದ ಊರುಗಳಿಗೆ ತೆರಳಿದ್ದ ಬಸ್‌ಗಳು ಡಿಪೋಗಳಿಗೆ ವಾಪಸ್ ಆಗುತ್ತಿದ್ದು, ನಿಲ್ದಾಣದಿಂದ ಯಾವುದೇ ಬಸ್‌ಗಳು ಸಂಚಾರ ನಡೆಸಿಲ್ಲ. ಹಿನ್ನೆಲೆ ಪ್ರಯಾಣಿಕರು ನಿಲ್ದಾಣದಲ್ಲೇ ಉಳಿಯುವಂತಾಯಿತು.

ಬಳ್ಳಾರಿ: ಸಾರಿಗೆ ನೌಕರರ ಮುಷ್ಕರ ಹಿನ್ನೆಲೆ ಬಳ್ಳಾರಿ ವಿಭಾಗದ 6 ಘಟಕಗಳಲ್ಲೂ ಪರಿಣಾಮ ಬೀರಿದ್ದು, ದೂರದ ಊರುಗಳಿಗೆ ತೆರಳುವ ಪ್ರಯಾಣಿಕರು ಪರದಾಡುವಂತಾಯಿತು. ಜತೆಗೆ ಪಿಯುಸಿ ಅಡ್ಮೀಶನ್‌ಗಾಗಿ ತೆರಳಿದ್ದ ವಿದ್ಯಾರ್ಥಿನಿ ಬಸ್ ಸಂಚಾರವಿಲ್ಲದೆ ಸಮಸ್ಯೆಗೊಳಗಾಗುವಂತಾಯಿತು. ಬೆಳಗ್ಗೆ 5 ಗಂಟೆಯಿಂದಲೇ ಕಾಯುತ್ತಿದ್ದರೂ ಬಸ್ ಸಿಗದೇ ವಿದ್ಯಾರ್ಥಿನಿ ಪರದಾಡಿದ ದೃಶ್ಯವೂ ಕಂಡುಬಂದಿದೆ. ಈ ನಡುವೆ ಸುಮಾರು 100 ಖಾಸಗಿ ಬಸ್‌ಗಳು ಸಂಚಾರ ನಡೆಸಿದ್ದು, ಪ್ರಯಾಣಿಕರು ಇದರ ಅನುಕೂಲ ಪಡೆದುಕೊಂಡರು.

ತುಮಕೂರು, ಕೊಪ್ಪಳ ವಿವಿ ಪರೀಕ್ಷೆ ಮುಂದೂಡಿಕೆ

ಕೆಎಸ್‌ಆರ್‌ಟಿಸಿ ನೌಕರರ ಮುಷ್ಕರ ಹಿನ್ನೆಲೆ ಮಂಗಳವಾರ ನಿಗದಿಯಾಗಿದ್ದ ತುಮಕೂರು ಹಾಗೂ ಕೊಪ್ಪಳ ವಿವಿಯ ಸ್ನಾತಕೋತ್ತರ ಪರೀಕ್ಷೆಗಳನ್ನು ಮುಂದೂಡಿಕೆ ಮಾಡಲಾಯಿತು. ಮರು ನಿಗದಿಯಾದ ದಿನಾಂಕಗಳನ್ನು ಮುಂದೆ ತಿಳಿಸಲಾಗುವುದು ಎಂದು ವಿಶ್ವವಿದ್ಯಾನಿಲಯಗಳ ಪರೀಕ್ಷಾಂಗ ಕುಲ ಸಚಿವರು ತಿಳಿಸಿದ್ದಾರೆ.

ವಿಜಯಪುರ: ಜಿಲ್ಲೆಯಲ್ಲಿ ಬಸ್ ಬಂದ್ ಹಿನ್ನೆಲೆ ಜನ ಖಾಸಗಿ ವಾಹನಗಳ ಮೊರೆ ಹೋಗಿದ್ದು, ಇತರರು ಸ್ವಂತ ವಾಹನಗಳ ಬಳಸಿಕೊಂಡು ಸಂಚಾರ ನಡೆಸಿದ್ದಾರೆ. ಮುಷ್ಕರದ ಹಿನ್ನೆಲೆ ಪ್ರತಿನಿತ್ಯ ಜಿಲ್ಲೆಯಿಂದ ಸಂಚರಿಸುವ 131 ಬಸ್‌ಗಳ ಬದಲಾಗಿ ಕೇವಲ 43 ಬಸ್‌ಗಳು ಮಾತ್ರ ಸಂಚಾರ ನಡೆಸಿದ್ದವು. 260 ಸಿಬ್ಬಂದಿ ಪೈಕಿ, 86 ಜನ ಮಾತ್ರ ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಜಿಲ್ಲಾಡಳಿತದಿಂದ ಖಾಸಗಿ ಬಸ್ ವ್ಯವಸ್ಥೆ ಸಹ ಮಾಡದಿರುವ ಕಾರಣ ಜನ ನಿಲ್ದಾಣದಲ್ಲೇ ನಿಂತು ಕಂಗಾಲಾಗಿದ್ದಾರೆ.

ಬೆಳಗಾವಿ: ಸಾರಿಗೆ ನೌಕರರ ಮುಷ್ಕರದ ಬಿಸಿ ಗಡಿ ಜಿಲ್ಲೆ ಬೆಳಗಾವಿಗೂ ತಟ್ಟಿದೆ. ಬೆಳಗಾವಿ, ಚಿಕ್ಕೋಡಿ

ಚಿಕ್ಕಬಳ್ಳಾಪುರ: ಇಲ್ಲಿಯೂ ಬಂದ್ ಬಿಸಿ ತಟ್ಟಿದ್ದು, ಜನ ಪರದಾಡಿದರು. ಸಾಮಾನ್ಯ ದಿನಗಳಲ್ಲಿ 7 ಗಂಟೆ ವೇಳೆಗೆ 120 ಬಸ್ ಆಪರೇಟ್ ಆಗುತ್ತಿತ್ತು, ಮಂಗಳವಾರ 60 ಬಸ್‌ಗಳು ಆಪರೇಟ್ ಆಗಿದ್ದು, ಶೇ.50 ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾದರೂ ಡಿಪೋದಿಂದ ಬಸ್ ತೆಗೆಯಲು ಹಿಂದೇಟು ಹಾಕಿದ್ದರು.

ಚಿಕ್ಕಮಗಳೂರು: ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸಾರಿಗೆ ನೌಕರರು ಕರೆ ನೀಡಿರುವ ಮುಷ್ಕರಕ್ಕೆ ಕಾಫಿನಾಡಲ್ಲಿ ಸಂಪೂರ್ಣ ಬೆಂಬಲ ವ್ಯಕ್ತವಾಗಿತ್ತು. ಚಿಕ್ಕಮಗಳೂರು ವಿಭಾಗದ 6 ಡಿಪೋಗಳ 560 ಬಸ್‌ಗಳು ಸ್ಥಗಿತಗೊಂಡಿತ್ತು. ಚಾಲಕರು-ನಿರ್ವಾಹಕರು ಬಸ್‌ಗಳನ್ನು ಡಿಪೋಗೆ ಹಾಕಿ ಬಸ್ ನಿಲ್ದಾಣ ಹಾಗೂ ಡಿಪೋ ಬಳಿ ಜಮಾಯಿಸಿದ್ದಾರೆ. ಬಸ್ ಬಂದ್ ಹಿನ್ನೆಲೆ ಪ್ರಯಾಣಿಕರ ಸಂಖ್ಯೆ ಕೂಡ ಸಂಪೂರ್ಣ ಕಡಿಮೆ ಕಂಡು ಬಂದಿತ್ತು.

ಚಾಮರಾಜನಗರ: ಮಂಗಳವಾರ ಬೆಳಗ್ಗೆ ಏಳು ಗಂಟೆಯಾದರೂ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಒಂದು ಬಸ್ ಸಂಚಾರ ಕೂಡ ರಸ್ತೆಗಿಳಿದಿಲ್ಲ. ಸಾರಿಗೆ ನೌಕರರ ಮುಷ್ಕರದ ಬಂದ್ ಬಿಸಿ ತಟ್ಟಿದೆ. ಕಾಲೇಜಿಗೆ ಹೋಗುವ ವಿಧ್ಯಾರ್ಥಿಗಳು, ನೌಕರರು ಬಸ್ಸಿಲ್ಲದೇ ಪರದಾಡುವ ಸ್ಥಿತಿ ಎದುರಾಗಿತ್ತು. ಪ್ರಯಾಣಿಕರು ಖಾಸಗಿ ಬಸ್‌ನಲ್ಲೇ ಸಂಚಾರ ನಡೆಸಿದರು.

ಚಿತ್ರದುರ್ಗ/ ದಾವಣಗೆರೆ: ಬಂದ್ ಬಿಸಿ ಚಿತ್ರದುರ್ಗ/ ದಾವಣಗೆರೆಗೂ ತಟ್ಟಿದೆ. ಪ್ರತಿದಿನ ಜನ ಜಂಗುಳಿಯಿಂದ ಪ್ರಯಾಣಿಕರೇ ಗಿಜಿಗಿಡುತ್ತಿದ್ದ ಚಿತ್ರದುರ್ಗ, ದಾವಣಗೆರೆಯ್ಯೆ ಸಾರಿಗೆ ಬಸ್ ನಿಲ್ದಾಣ ಮಂಗಳವಾರ ಸಂಪೂರ್ಣ ಖಾಲಿ ಖಾಲಿಯಾಗಿದ್ದು, ಬಸ್‌ಗಳಿಲ್ಲದ ಹಿನ್ನೆಲೆ ಜನರು ಖಾಸಗಿ ಬಸ್ ಹಾಗೂ ಗೂಡ್ಸ್ ವಾಹಗಳ ಮೊರೆ ಹೋದರು. ದಾವಣಗೆರೆ ಜಿಲ್ಲೆಯಲ್ಲಿ ಮುಷ್ಕರದ ಹಿನ್ನೆಲೆ ಸಾರ್ವಜನಿಕರ ಅನುಕೂಲಕ್ಕಾಗಿ ತುರ್ತು ಸಹಾಯವಾಣಿಯನ್ನೂ ಆರಂಭಿಸಲಾಗಿತ್ತು.

ಗದಗ: ಜಿಲ್ಲೆಯಲ್ಲಿ 8 ಡಿಪೋಗಳಿಂದ ನಿತ್ಯ 561 ಬಸ್‌ಗಳು ಸಂಚರಿಸುತ್ತಿದ್ದವು. ಮಂಗಳವಾರ ಒಂದೇ ಒಂದು ಬಸ್ ರಸ್ತೆಗಿಳಿದಿಲ್ಲ. ರಾತ್ರಿ ತೆರಳಿದ್ದ ಬಸ್‌ಗಳಷ್ಟೇ ಡಿಪೋಗಳಿಗೆ ವಾಪಸ್ ಆಗಿದ್ದವು. ಇತ್ತ ಕೆಲಸಕ್ಕೆ ತೆರಳಬೇಕಿದ್ದ ಜನ ನಿಲ್ದಾಣದಲ್ಲೇ ಕಾದು ಕುಳಿತಿರುವ ದೃಶ್ಯ ಕಂಡು ಬಂದಿದೆ.

ಮೈಸೂರು ರಸ್ತೆಯ ಸ್ಯಾಟ್‌ಲೈಟ್ ನಿಲ್ದಾಣದಲ್ಲಿ ಕಾರ್ಯನಿರ್ವಹಿಸದೆ ನಿಂತಿರುವ ಬಸ್‌ಗಳು.

ಮುಷ್ಕರದ ಹಿನ್ನೆಲೆ ಗದಗ ಬಸ್‌ನಿಲ್ದಾಣದಲ್ಲಿ ಯುವಕರು ಕ್ರಿಕೆಟ್ ಆಡಿದರು.

ದಾವಣಗೆರೆಯಲ್ಲಿ ಬಸ್‌ಗಾಗಿ ಕಾದು ಕುಳಿತಿರುವ ಪ್ರಯಾಣಿಕ.

ಕೊಪ್ಪಳ ನಿಲ್ದಾಣದಲ್ಲಿ ಖಾಸಗಿ ಬಸ್‌ಗಳ ಕಾರ್ಯಾಚರಣೆ.

ಸ್ಯಾಟ್‌ಲೈಟ್ ನಿಲ್ದಾಣದಲ್ಲಿ ನಿಂತ ಖಾಸಗಿ ಬಸ್.

ವಿಶ್ವವಾಣಿ

ಸಂಪಾದಕೀಯ

ಈಗ ಬಾಲಂಗೋಚಿಯ ಸರದಿ!

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಬಾಲಲೀಲೆ ಯಾಕೋ ನಿಲ್ಲುವ ಲಕ್ಷಣಗಳು ಕಾಣುತ್ತಿಲ್ಲ. ಭಾರತದಿಂದ ಅಮೆರಿಕಕ್ಕೆ ಆಮದಾಗುವ ಸರಕು-ಸಾಮಗ್ರಿಗಳ ಮೇಲೆ ಶೇ.25ರಷ್ಟು ಸುಂಕವನ್ನು ಹೇರಿದ್ದಾಯಿತು, ಅಮೆರಿಕದ ಕಂಪನಿಗಳು ಭಾರತೀಯ ಪ್ರತಿಭೆಗಳನ್ನು ನೌಕರಿಗೆ ನೇಮಿಸಿಕೊಳ್ಳುವ ವಿಷಯದಲ್ಲಿ ಅಪಸ್ವರವೆತ್ತಿ ಎಚ್ಚರಿಕೆ ನೀಡಿದ್ದಾಯಿತು. ಇಷ್ಟು ಸಾಲದೆಂಬಂತೆ, 'ಭಾರತ ಮತ್ತು ರಷ್ಯಾ ದೇಶಗಳ ಆರ್ಥಿಕತೆಗಳು ಸದ್ಯದಲ್ಲೇ ಕುಸಿಯಲಿವೆ' ಎಂದು ಗಿಳಿಶಾಸ್ತ್ರ ಹೇಳಿದ್ದೂ ಆಯ್ತು. ಇಷ್ಟಾಗಿಯೂ ಅಮೆರಿಕಕ್ಕೆ ತೃಪ್ತಿಯಾದಂತಿಲ್ಲ, ಭಾರತದೆಡೆಗಿನ ಅದರ ಆರೋಪದ ಸೋನೆಮಳೆ ನಿಂತಿಲ್ಲ. ಆದರೆ ಈ ಸಲ ಅಂಥ ಕಸರತ್ತಿಗೆ ಕೈಹಾಕಿರುವುದು ಟ್ರಂಪ್ ಅಲ್ಲ, ಅವರ 'ಬಾಲಂಗೋಚಿ' ಎನ್ನಬಹುದಾದ ಆಪ್ತ ಸಲಹೆಗಾರ ಸ್ಟೀಫನ್ ಮಿಲ್ಲರ್. 'ರಷ್ಯಾದಿಂದ ಕಚ್ಚಾತೈಲದ ಖರೀದಿ ಮಾಡುವುದನ್ನು ನಿಲ್ಲಿಸುವಂತೆ ಟ್ರಂಪ್ ಅವರು ಒತ್ತಡ ಹೇರಿದ್ದರೂ ಲೆಕ್ಕಿಸದ ಭಾರತ ಈ ಖರೀದಿಯನ್ನು ಮುಂದುವರಿಸುವ ಮೂಲಕ, ಉಕ್ರೇನ್ ವಿರುದ್ಧದ ಯುದ್ಧದಲ್ಲಿ ರಷ್ಯಾಕ್ಕೆ ಅನುಕೂಲವಾಗಲೆಂದು ಅದಕ್ಕೆ ಹಣದ ಅನುಕೂಲವನ್ನು ಮಾಡಿಕೊಡುತ್ತಿದೆ' ಎಂಬುದು ಮಿಲ್ಲರ್ ಮಹಾಶಯರು ಹೇಳಿಕೊಂಡಿರುವ ಹರಿಕಥೆ! ಈ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿರುವ ಭಾರತ, 'ಅಮೆರಿಕದ ಒತ್ತಡ ಮತ್ತು ವಿರೋಧವಿದ್ದರೂ ರಷ್ಯಾದಿಂದ ಕಚ್ಚಾತೈಲದ ಖರೀದಿ ಮುಂದುವರಿಯಲಿದೆ' ಎನ್ನುವ ಮೂಲಕ ತಿರುಗೇಟು ನೀಡಿದೆ. ಏನಾದರೊಂದು ಕಿರಿಕಿರಿ ಮಾಡಿ ಭಾರತವನ್ನು ತನ್ನ ತಾಳಕ್ಕೆ ತಕ್ಕಂತೆ ಕುಣಿಸಬೇಕು ಎಂಬ ಹಠ ತೊಟ್ಟಂತಿರುವ ಅಮೆರಿಕದ ಅಧ್ಯಕ್ಷ ಟ್ರಂಪ್ ಅವರು, ಈ ನಿಟ್ಟಿನಲ್ಲಿ ಥರಾವರಿ ಕಸರತ್ತು ಮಾಡುತ್ತಿರುವಂತಿದೆ. ಆದರೆ, ಅಂತಾರಾಷ್ಟ್ರೀಯ ಬಾಂಧವ್ಯ, ದ್ವಿಪಕ್ಷೀಯ ರಾಜತಾಂತ್ರಿಕತೆ ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಭಾರತದ ನಿಲುವು ಸ್ಪಷ್ಟವಾಗೇ ಇದೆ, ಅಲುಗಾಡದಂತಿದೆ. ಟ್ರಂಪ್ ಮತ್ತು ಅವರ ಬಾಲಗೋಂಚಿಗಳ ಕುಹಕ ಅಥವಾ ಆರೋಪಗಳಿಂದ ಅದು ಅಲುಗಾಡುವುದಿಲ್ಲ. ಅಮೆರಿಕ ಇದನ್ನು ಆದಷ್ಟು ಬೇಗ ಅರಿತರೆ ಒಳಿತು...

ಸೊಂಪಾದಕೀಯ

ಕೋಡ್ ವರ್ಲ್ಡ್

ಇಂದಿನ ಮಕ್ಕಳಿಗೆ ವಿದ್ಯಾಭ್ಯಾಸ ಅನ್ನೋದು ಫುಲ್‌ಟೈಮ್ ಜಾಬ್ ಆಗಿಬಿಟ್ಟಿದೆ. ಇದು ಎಲ್ಲರಿಗೂ ಗೊತ್ತು. ತಂದೆ ತಾಯಂದಿರು ತಮ್ಮ ಮಕ್ಕಳನ್ನು ಪುರುಸೊತ್ತಿಲ್ಲದಂತೆ ಸ್ಕೂಲ್, ಟ್ಯೂಷನ್, ಕೋಚಿಂಗ್ ಕ್ಲಾಸ್ ಅಂತೆಲ್ಲ ಸಂಪೂರ್ಣವಾಗಿ ಬ್ಯುಸಿ ಇರುವಂತೆ ನೋಡಿಕೊಳ್ಳುತ್ತಿದ್ದಾರೆ. ಹಾಗಾಗಿ ಮಕ್ಕಳಿಗೆ ಆಟ ಆಡಲು ಕೂಡ ಸಮಯ ಸಿಗದೇ ಇರೋ ಥರ ಆಗಿದೆ. ಇನ್ನು ಇತ್ತೀಚೆಗೆ ಹುಟ್ಟಿಕೊಂಡಿರುವ ಇನ್ನೊಂದು ಎಜುಕೇಷನ್ ಭೂತ ಎಂದರೆ ಅದು 'ಕೋಡಿಂಗ್ ಕ್ಲಾಸ್'ಗಳದ್ದು. ನೆಟ್ಟಗೆ ಕಣ್ಣು ಬಿಟ್ಟಿಲ್ಲದ ಮಕ್ಕಳನ್ನೂ ಈಗ ಕೋಡಿಂಗ್ ಕಲಿಯಲು

ಕಳಿಸಲಾಗುತ್ತಿದೆ. ಕೋಡಿಂಗ್ ಕಲಿತರೆ ಸಾಕು ತಮ್ಮ ಮಕ್ಕಳಿಗೆ ಎರಡು ಕೋಡು ಅಥವಾ ಕೊಂಬು ಮೂಡುತ್ತದೆ ಅನ್ನೋದು ಬಹುತೇಕ ಪೋಷಕರ ಅಭಿಪ್ರಾಯ. ಇದೆಲ್ಲವನ್ನು ಗಮನಿಸಿರುವ ಸರಕಾರ ಮಕ್ಕಳ ಮೇಲಿನ ಹೊರೆಯನ್ನು ಕಡಿಮೆ ಮಾಡುವ ಚಿಂತನೆ ನಡೆಸಿದೆ. ಅದರ ಪರಿಣಾಮವಾಗಿ ಈಗ 16 ವರ್ಷದ ಒಳಗಿನ ಮಕ್ಕಳನ್ನು ಯಾವುದೇ ಕೋಚಿಂಗ್ ಕ್ಲಾಸ್‌ಗಳಿಗೆ ಸೇರಿಸದಂತೆ ಸರಕಾರ ನಿಯಮ ಜಾರಿ ಮಾಡಿದೆ. ಹಾಗಾಗಿ ಇನ್ನು ಮುಂದೆ ಮಣಭಾರದ ಪುಸ್ತಕಗಳನ್ನು ಶಾಲೆಗೆ ತೆಗೆದುಕೊಂಡು ಹೋಗುವುದಷ್ಟೇ ಮಕ್ಕಳ ಕೆಲಸ. ಅದನ್ನು ಬಿಟ್ಟು ಶಾಲೆಗೆ ಮುಗಿದ ನಂತರ ಆ ಟ್ಯೂಷನ್, ಈ ಟ್ಯೂಷನ್ ಎನ್ನುತ್ತಾ ಮಕ್ಕಳು ಅಲೆದಾಡುವುದನ್ನು ಬಿಟ್ಟು ಶಾಲೆ ಮುಗಿದ ನಂತರ ಆಟದ ಮೈದಾನದತ್ತ ಓಡಬಹುದು. ಆದರೆ ಇಂದಿನ ಮಕ್ಕಳು ಏನು ಕಮ್ಮಿ ಇಲ್ಲ. ಟ್ಯೂಷನ್, ಕೋಚಿಂಗ್ ಇಲ್ಲ ಅಂದ ತಕ್ಷಣ ಮೊಬೈಲ್ ಹಿಡಿದುಕೊಂಡು ಊಟ-ತಿಂಡಿ-ನೀರು ಎಲ್ಲವನ್ನೂ ಮರೆತು ಅದರಲ್ಲಿ ಮುಳುಗಿಬಿಡುತ್ತಾರೆ. ಹಾಗಾಗಿ ಈ ಟ್ಯೂಷನ್ ಕ್ಯಾನ್ಸಲ್ ಆಗಿರುವ ವಿಷಯ ಮಕ್ಕಳ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ ಎಂದು ಹೇಳುವುದು ಸ್ವಲ್ಪ ಕಷ್ಟವಾಗುತ್ತದೆ. ಆದರೆ ಸದ್ಯಕ್ಕೆ ಮಕ್ಕಳ ಮೇಲೆ ಹಾಕಲಾಗುತ್ತಿರುವ ಓದಿನ ಒತ್ತಡ ಕೊಂಚಮಟ್ಟಿಗೆ ತಗ್ಗಿದೆ ಅಂತಲೇ ಹೇಳಬಹುದು. ಸರಕಾರವೇನೋ ಸದ್ಯಕ್ಕೆ ಈ ನೀತಿಯನ್ನು ಜಾರಿಗೆ ತಂದಿದೆ. ಆದರೆ ಈ ನೀತಿಯನ್ನು ಅದೆಷ್ಟು ಸಮರ್ಪಕವಾಗಿ, ಪ್ರಾಕ್ಟಿಕಲ್ ಆಗಿ ಜಾರಿಗೆ ತರಲಾಗುತ್ತದೆ ಎಂಬುದಕ್ಕೆ ಕಾದು ನೋಡಲೇಬೇಕಿದೆ.

ಸಂಪಾದಕರ ಸದ್ಯಶೋಧನೆ

ಪೈಲಟ್ ಮತ್ತು ಪ್ರಯಾಣಿಕರು

ಪೈಲಟ್‌ಗಳು ವಿಮಾನದಲ್ಲಿ ಪ್ರಯಾಣಿಕರನ್ನು ನೋಡಲು ಸಾಧ್ಯವೇ? ಕಾಕ್‌ಪಿಟ್‌ನಲ್ಲಿ ಕುಳಿತು ಅವರು ಹಿಂದೆ ಕುಳಿತಿರುವ ಪ್ರಯಾಣಿಕರನ್ನು ನೋಡುತ್ತಾರಾ? ಈ ಪ್ರಶ್ನೆ ಪ್ರಯಾಣಿಕರಲ್ಲಿ ಮೂಡಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಅಸಲಿಗೆ, ಪೈಲಟ್‌ಗಳಿಗೆ ಪ್ರಯಾಣಿಕರು ಕಾಣಿಸುವುದಿಲ್ಲ! ಪೈಲಟ್‌ಗಳು ವಿಮಾನದಲ್ಲಿ ಕುಳಿತಿರುವಾಗ ಪ್ರಯಾಣಿಕರ ಕ್ಯಾಬಿನ್‌ನಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನೇರವಾಗಿ ನೋಡಲು ಸಾಧ್ಯವಿಲ್ಲ. ಕಾಕ್‌ಪಿಟ್ ಮತ್ತು ಪ್ರಯಾಣಿಕರ ಕ್ಯಾಬಿನ್ ಸಂಪೂರ್ಣವಾಗಿ ಭದ್ರಪಡಿಸಿದ ಬಾಗಿಲುಗಳಿಂದ ಬೇರ್ಪಟ್ಟಿವೆ. ಇದು ವಿಮಾನದ ಸುರಕ್ಷತೆಗಾಗಿ ಮತ್ತು ಪೈಲಟ್‌ಗಳು ತಮ್ಮ ಕೆಲಸದ ಮೇಲೆ ಸಂಪೂರ್ಣವಾಗಿ ಗಮನಹರಿಸಲು ಇರುವ ಒಂದು ಮುಖ್ಯ ವ್ಯವಸ್ಥೆ. ಪೈಲಟ್‌ಗಳು ನಿಮ್ಮನ್ನು ಏಕೆ ನೋಡಲು ಸಾಧ್ಯವಿಲ್ಲ ಎಂದು ಕೇಳಬಹುದು. ಆಧುನಿಕ ವಿಮಾನಗಳಲ್ಲಿ ಭದ್ರವಾದ ಕಾಕ್‌ಪಿಟ್ ಬಾಗಿಲುಗಳಿರುತ್ತವೆ. ಇದು ಕಾಕ್‌ಪಿಟ್ ಮತ್ತು ಕ್ಯಾಬಿನ್ ನಡುವಿನ ಸಂಪರ್ಕವನ್ನು ಸಂಪೂರ್ಣವಾಗಿ ಕಡಿತಗೊಳಿಸುತ್ತದೆ. ಸೆಪ್ಟೆಂಬರ್ 11ರ ದಾಳಿಯ ನಂತರ ಈ ಭದ್ರತಾ ಕ್ರಮವು ಜಗತ್ತಿನಾದ್ಯಂತ ಎಲ್ಲ ವಿಮಾನಗಳಲ್ಲಿ ಕಡ್ಡಾಯವಾಯಿತು. ಇನ್ನೊಂದು ಸಂಗತಿ ಅಂದ್ರೆ, ಕಾಕ್‌ಪಿಟ್ ಅನ್ನು ವಿಮಾನದ ಸಂಚಾರ ಮತ್ತು ನಿಯಂತ್ರಣಕ್ಕಾಗಿ ವಿನ್ಯಾಸಗೊಳಿಸಲಾಗಿದೆ. ಪೈಲಟ್‌ಗಳಿಗೆ ವಿಮಾನದ ಹೊರಗಿನ ಮತ್ತು ಮುಂದಿನ ದೃಶ್ಯ ಮುಖ್ಯ. ಹೀಗಾಗಿ, ವಿಮಾನದ ಕಾರ್ಯಾಚರಣೆಗಳಿಗೆ ಆದ್ಯತೆ ನೀಡುವಂತೆ ಕಾಕ್‌ಪಿಟ್ ಅನ್ನು ವಿನ್ಯಾಸಗೊಳಿಸಲಾಗಿದೆ, ಪ್ರಯಾಣಿಕರನ್ನು ಗಮನಿಸಲು ಅಲ್ಲ. ಒಂದು ವೇಳೆ ಕ್ಯಾಬಿನ್‌ನಲ್ಲಿ ಏನಾದರೂ ವಿಚಿತ್ರ ಅಥವಾ ಅಸಾಮಾನ್ಯ ಚಟುವಟಿಕೆಗಳು ನಡೆದರೆ, ಪೈಲಟ್‌ಗಳು ವಿಮಾನ ಸಿಬ್ಬಂದಿಯ ಮೇಲೆ ಅವಲಂಬಿತರಾಗಿರುತ್ತಾರೆ. ಆ ಸಿಬ್ಬಂದಿ ತಕ್ಷಣ ಪೈಲಟ್ ಗಮನಕ್ಕೆ ತರುತ್ತಾರೆ. ಫ್ಲೈಟ್ ಅಟೆಂಡೆಂಟ್‌ಗಳು (flight attendants) ಇಂಟರ್‌ಕಾಮ್ ಮೂಲಕ ಅಥವಾ ನೇರ ಸಂವಹನದ ಮೂಲಕ ಪೈಲಟ್‌ಗಳಿಗೆ ಮಾಹಿತಿ ನೀಡುತ್ತಾರೆ. ಪೈಲಟ್‌ಗಳು ವಿಮಾನದ ಹೊರಗಿನ ವಿಶಾಲವಾದ ದೃಶ್ಯವನ್ನು ವೀಕ್ಷಿಸುತ್ತಾರೆ. ಹಾರಿಜಾನ್, ಇತರ ವಿಮಾನಗಳು, ಹವಾಮಾನ ಪರಿಸ್ಥಿತಿಗಳು ಮತ್ತು ವಿಮಾನ ನಿಲ್ದಾಣದ ರನ್‌ವೇಗಳು ಅವರಿಗೆ ಸ್ಪಷ್ಟವಾಗಿ ಕಾಣಿಸುತ್ತವೆ. ಅವರು ಕಾಕ್‌ಪಿಟ್‌ನಲ್ಲಿ ಕುಳಿತು ನೋಡುವ, ಗಮನಿಸುವ ಅನೇಕ ಸಂಗತಿಗಳಿರುತ್ತವೆ. ಕಾಕ್‌ಪಿಟ್‌ನ ಮುಂಬದಿಯ ಗಾಜು ಪನೋರಮಿಕ್ ದೃಶ್ಯವನ್ನು ಒದಗಿಸುತ್ತದೆ, ಇದು ಪರಿಸ್ಥಿತಿಯನ್ನು ಸುಲಭವಾಗಿ ಅರಿಯಲು ಸಹಾಯ ಮಾಡುತ್ತದೆ. ಪ್ರಯಾಣಿಕರನ್ನು ಗಮನಿಸಿದರೆ, ಅವರ ಲಕ್ಷ್ಯ ಬೇರೆಡೆ ಹರಿದಂತಾಗುತ್ತದೆ. ಹೀಗಾಗಿ ಪೈಲಟ್‌ಗಳಿಗೆ ಆ ಅವಕಾಶ ನೀಡುವುದಿಲ್ಲ. ವಿಮಾನ ನಿಲ್ದಾಣದ ಒಳಭಾಗದಲ್ಲಿರುವಾಗ ಅಂದರೆ ನೆಲದಲ್ಲಿರುವಾಗ ಪೈಲಟ್‌ಗಳು ವಿಮಾನ ನಿಲ್ದಾಣದ ಸೌಲಭ್ಯಗಳು, ಟ್ಯಾಕ್ಸಿವೇಗಳು ಮತ್ತು ಕೆಲವು ನೆಲದ ಸಿಬ್ಬಂದಿಯ ಚಟುವಟಿಕೆಗಳನ್ನು ಮಾನಿಟರಿಂಗ್ ಸ್ಕ್ರೀನ್‌ನಲ್ಲಿ ನೋಡಬಹುದು. ಕಾಕ್‌ಪಿಟ್‌ನ ಒಳಗೆ, ಪೈಲಟ್‌ಗಳು ಡಿಜಿಟಲ್ ಡಿಸ್ಪ್ಲೇಗಳನ್ನು ನೋಡಬಹುದು. ಈ ಪರದೆಗಳಲ್ಲಿ ಕ್ಯಾಬಿನ್‌ನ ಸ್ಥಿತಿ, ಉದಾಹರಣೆಗೆ ಗಾಳಿಯ ಒತ್ತಡ, ತಾಪಮಾನ ಮತ್ತು ಸೀಟ್‌ಬೆಲ್ಟ್ ಸೂಚಕಗಳ ಮಾಹಿತಿ ಇರುತ್ತದೆ. ಪೈಲಟ್‌ಗಳು ಪ್ರಯಾಣಿಕರನ್ನು ನೇರವಾಗಿ ನೋಡಲು ಸಾಧ್ಯವಿಲ್ಲವಾದರೂ, ಕೆಲವು ವಿಮಾನಗಳಲ್ಲಿ ಭದ್ರತಾ ಉದ್ದೇಶಗಳಿಗಾಗಿ ಕ್ಯಾಬಿನ್ ಸರ್ವೆಯಲೆನ್ಸ್ ಕೆಮೆರಾಗಳಿರುತ್ತವೆ. ಟೇಕಾಫ್ ಮತ್ತು ಲ್ಯಾಂಡಿಂಗ್‌ನಂಥ ನಿರ್ಣಾಯಕ ಸಮಯಗಳಲ್ಲಿ ಈ ಕೆಮೆರಾಗಳನ್ನು ಮೇಲ್ವಿಚಾರಣೆ ಮಾಡಲಾಗುತ್ತದೆ. ಆದರೆ ಇದು ಪೈಲಟ್‌ಗಳ ನೇರ ವೀಕ್ಷಣೆಗಾಗಿ ಅಲ್ಲ. ಆಧುನಿಕ ವಿಮಾನಗಳಲ್ಲಿನ ಕಾಕ್‌ಪಿಟ್ ಹಳೆಯ ವಿಮಾನಗಳಿಗಿಂತ ತೀರಾ ಭಿನ್ನ. ಇತ್ತೀಚಿನ ವಿಮಾನಗಳಲ್ಲಿ ಸಾಂಪ್ರದಾಯಿಕ ಗೇಜ್‌ಗಳು ಮತ್ತು ಮೀಟರ್‌ಗಳ ಬದಲಿಗೆ ಡಿಜಿಟಲ್ ಪರದೆಗಳು ಮತ್ತು ನಿಯಂತ್ರಣ ವ್ಯವಸ್ಥೆಗಳಿವೆ. ಪೈಲಟ್‌ಗಳು ಕೇವಲ ವಿಮಾನವನ್ನು ಹಾರಿಸುವುದಲ್ಲ, ಬದಲಾಗಿ ಪ್ರಯಾಣಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಅಸಂಖ್ಯಾತ ಪರಿಶೀಲನೆಗಳು ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಅಷ್ಟಾಗಿಯೂ ಪ್ರಯಾಣಿಕರ ಚಲನವಲನ, ಚಟುವಟಿಕೆಗಳ ಮೇಲೆ ಕಣ್ಣಿಡುವುದು ಅವರ ಕೆಲಸವಲ್ಲ.

ಮಿಲಿಟರಿಯಿಂದ ತಾಯಂದಿರ ಆರೋಗ್ಯದವರೆಗೆ...

ಅಲ್ಟ್ರಾಸೌಂಡ್ ಸಾಧನಗಳು 1960-80ರವರೆಗಿನ ಅವಧಿಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಸುಧಾರಣೆಗೆ ಒಳಗಾದವು. 'ಬಿ-ಮೋಡ್' ಹಾಗೂ 'ರಿಯಲ್ ಟೈಮ್ ಅಲ್ಟ್ರಾಸೌಂಡ್' ಸಾಧನಗಳು ರೂಪುಗೊಂಡವು. ಈಗ ಭ್ರೂಣದ ರಚನೆಯನ್ನು ದ್ವಿ-ಆಯಾಮದಲ್ಲಿ ನೋಡುವುದರ ಜತೆಯಲ್ಲಿ, ಭ್ರೂಣದ ವಿವಿಧ ಭಾಗಗಳನ್ನು ಹಾಗೂ ಅವುಗಳ ಕಾರ್ಯವನ್ನು ನೋಡಲು ಸಾಧ್ಯವಾಯಿತು. ಈ ಸಾಧನಗಳು ಮಾರುಕಟ್ಟೆಯಲ್ಲಿ ಮುಕ್ತವಾಗಿ ದೊರೆಯಲಾರಂಭಿಸಿದವು.



ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
naasomeswara@gmail.com

ಶಬ್ದಪ್ರಪಂಚವು ವಿಶಾಲವಾದದ್ದು. ನಾವು ಕೇಳುವ ಶಬ್ದಗಳ ವ್ಯಾಪ್ತಿ 20 ಹರ್ಟ್ಜ್ ಇಂದ 20,000 ಹರ್ಟ್ಜ್‌ವರೆಗೆ ಮಾತ್ರ. 20 ಹರ್ಟ್ಜ್‌ಗಿಂತಲೂ ಕಡಿಮೆ ವ್ಯಾಪ್ತಿಯ ಶಬ್ದದ ಅಲೆಗಳಿಗೆ 'ಅವಶ್ರವಣ ಅಲೆಗಳು' ಅಥವಾ 'ಇನ್‌ಫ್ರಾ ಸೌಂಡ್' ಎಂದು ಹೆಸರು. ಆನೆ, ಜಿರಾಫೆ, ಹಿಪ್ಪೋಪೊಟೋಮಸ್ ಮುಂತಾದ ಪ್ರಾಣಿಗಳು ಈ ವ್ಯಾಪ್ತಿಯಲ್ಲಿ ನಡೆಸುವ ಸಂವಹನವನ್ನು ನಾವು ಕೇಳಲಾರೆವು. ಹಾಗೆಯೇ 20,000 ಹರ್ಟ್ಜ್ ಮೀರಿದ ಶಬ್ದದ ಅಲೆಗಳಿಗೆ 'ಅತಿಶ್ರವಣ ಅಲೆಗಳು' ಅಥವಾ 'ಅಲ್ಟ್ರಾಸೌಂಡ್' ಎಂದು ಹೆಸರು. ಬಾವಲಿ, ತಿಮಿಂಗಲ, ಡಾಲ್ಫಿನ್ ಮುಂತಾದ ಜೀವಿಗಳು ಈ ವ್ಯಾಪ್ತಿಯಲ್ಲಿ ಸಂವಹನವನ್ನು ನಡೆಸುತ್ತವೆ. ಅದನ್ನು ನಾವು ಕೇಳಲಾರೆವು.

- **ಲಜಾರೋ ಸ್ಪೆಲಾಂಜಿನಿ (1729-1799):** ಓರ್ವ ಇಟಾಲಿಯನ್ ಜೀವವಿಜ್ಞಾನಿ ಹಾಗೂ ಅಂಗಕ್ರಿಯಾ ವಿಜ್ಞಾನಿಯಾಗಿದ್ದ ಇವನು ಆಹಾರ ಜೀರ್ಣಕ್ರಿಯೆ, ಸಂತಾನವರ್ಧನೆ ಹಾಗೂ ಪ್ರಾಣಿಗಳ ಸಂವೇದನಾ ಸಾಮರ್ಥ್ಯಗಳನ್ನು ಕುರಿತು ಅಧ್ಯಯನ ಮಾಡುತ್ತಿದ್ದ. ಬಾವಲಿಗಳು ಹೇಗೆ ಕಗ್ಗತ್ತಲಿನಲ್ಲಿ ಹಾರಾಡುತ್ತವೆ ಎನ್ನುವ ವಿಷಯದ ಬಗ್ಗೆ ಇವನಿಗೆ ಕುತೂಹಲವುಂಟಾಯಿತು. ಹಾಗಾಗಿ ಅತ್ಯಂತ ತೆಳುವಾದ ಒಂದು ತಂತಿಯನ್ನು ಕಟ್ಟಿದ. ಬಾವಲಿಗಳನ್ನು ಹಾರಲು ಬಿಟ್ಟ. ಅವು ತಂತಿಗೆ ಡಿಕ್ಕಿ ಹೊಡೆಯದ ಹಾಗೆ ಹಾರಿದವು. ಇವು ಹೇಗೆ ಹಾರಿದವು ಎನ್ನುವುದನ್ನು ತಿಳಿಯಲು ಆತ 1793ರಲ್ಲಿ ಸರಣಿ ಪ್ರಯೋಗಗಳನ್ನು ಕೈಗೊಂಡ. ಇವು ಅತ್ಯಂತ ಕ್ರೂರ ಪ್ರಯೋಗಗಳಾಗಿದ್ದವು.

- ಬಾವಲಿಗಳ ಕಣ್ಣನ್ನು ಬಟ್ಟೆಯಿಂದ ಕಟ್ಟಿದ. ಹಾರಲು ಬಿಟ್ಟ. ಅವು ತಂತಿಗೆ ತಾಗದೇ ಹಾರಾಡಿದವು. ಬಾವಲಿಗಳ ಕಣ್ಣನ್ನು ಕಿತ್ತು ಹಾಕಿ ಹಾರಲು ಬಿಟ್ಟ. ಅವು ಕಣ್ಣುಗಳು ಇಲ್ಲದಿದ್ದರೂ ಯಶಸ್ವಿಯಾಗಿ ಹಾರಾಟವನ್ನು ನಡೆಸಿದವು.
- ಸ್ಪೆಲಾಂಜಿನಿಗೆ ಬಾವಲಿಗಳು ತಮ್ಮ ಮೂಗು ಅಥವಾ ನಾಲಿಗೆಯ ನೆರವಿನಿಂದ ಹಾರುತ್ತಿರಬಹುದೇ ಎಂಬ ಗುಮಾನಿಯುಂಟಾಯಿತು. ಬಾವಲಿಗಳ ನಾಲಿಗೆಯನ್ನು ಕತ್ತರಿಸಿದ. ಮೂಗಿಗೆ ಬಟ್ಟೆಯನ್ನು ತುರುಕಿ ಹಾರಲು ಬಿಟ್ಟ. ಅವು ಸರಾಗವಾಗಿ ಹಾರಾಡಿದವು.
- ಸ್ಪರ್ಶಜ್ಞಾನದಿಂದ ಇವು ಹಾರಾಡುತ್ತಿರಬಹುದೇ ಎನ್ನುವ ಅನುಮಾನ ಬಂದಿತು. ಬಾವಲಿಗಳ ಮುಖ ಮತ್ತು ಮೈಕೈಗಳಲ್ಲಿ ಸ್ಪರ್ಶದರಿವು ತಿಳಿಯದಂತೆ ಕೆಲವು ಲೇಪನಗಳನ್ನು ಹಚ್ಚಿ ಬಿಟ್ಟ. ಅವು ಆರಾಮವಾಗಿ ಹಾರಾಡುತ್ತಿದ್ದವು.
- ಬಾವಲಿಗಳ ಕಿವಿಗೆ ಮೇಣವನ್ನು ಸುರಿದ. ಹಾರಲು ಬಿಟ್ಟ. ಅವು ಸರಾಗವಾಗಿ ಹಾರಲು ವಿಫಲವಾದವು. ಬಾವಲಿಗಳ ಕಿವಿಗಳನ್ನು ಶಸ್ತ್ರಚಿಕಿತ್ಸೆಯಿಂದ ನಾಶಪಡಿಸಿದ. ಬಾವಲಿಗಳು ತಂತಿಗೆ ತಾಗಿಸಿಕೊಂಡು ಕೆಳಗೆ ಬೀಳುತ್ತಿದ್ದವು. ಅವುಗಳ ಸರಾಗ ಹಾರಾಟ ಸಾಮರ್ಥ್ಯವು ಪೂರ್ಣವಾಗಿ ನಷ್ಟವಾಗಿತ್ತು.
- ಆಗ ಸ್ಪೆಲಾಂಜ್ಹಿನಿ 'ಬಾವಲಿಗಳು ಆರನೆಯ ಇಂದ್ರಿಯದ ನೆರವಿನಿಂದ ಹಾರುತ್ತವೆ' ಎನ್ನುವ ತೀರ್ಮಾನಕ್ಕೆ ಬಂದ.

ಸ್ಪೆಲಾಂಜ್ಹಿನಿ, ಲೂಯಿಸ್ ಜೂರಿನ್, ಪಾಲೋ ಸ್ಪಾಂಡೆನಿ ಮುಂತಾದವರ ಪ್ರಯೋಗಗಳಿಂದ ಸ್ಫೂರ್ತಿಯನ್ನು ಪಡೆದ ಡೊನಾಲ್ಡ್ ರೆಡ್ ಫೀಲ್ಡ್ ಗ್ರಿಫ್ಫಿನ್ (1915-2003) ಹಾಗೂ ರಾಬರ್ಟ್ ಕಾರ್ಲ್ ಗ್ಯಾಲಂಬೋಸ್ (1914-2010) ಎಂಬ ವಿಜ್ಞಾನಿಗಳು, 'ಬಾವಲಿಗಳು ತಮ್ಮ ಧ್ವನಿಪೆಟ್ಟಿಗೆಗಲ್ಲಿರುವ ಧ್ವನಿತಂತುಗಳಿಂದ (ವೋಕಲ್ ಕಾರ್ಡ್ಸ್) ಅತಿಶ್ರವಣ ಅಲೆಗಳನ್ನು ಉತ್ಪಾದಿಸುತ್ತವೆ. ಈ ಅಲೆಗಳು ಯಾವುದಾದರೂ ಅಡಚಣೆಗೆ ತಾಗಿ ಪ್ರತಿಫಲಿಸಿದಾಗ, ಅದನ್ನು ತಮ್ಮ ಕಿವಿಗಳಿಂದ ಆಲಿಸುವ ಬಾವಲಿಗಳು, ಆ ಅಡಚಣೆಗಳನ್ನು ತಪ್ಪಿಸಿಕೊಂಡು ಹಾರುತ್ತವೆ' ಎನ್ನುವುದನ್ನು ಸಾಧಾರವಾಗಿ ನಿರೂಪಿಸಿದರು.

- **ಜಾಕ್ವೆಸ್ ಕ್ಯೂರಿ (1855-1941) ಮತ್ತು ಪಿಯರಿ ಕ್ಯೂರಿ (1859-1906):** ಪ್ರಕೃತಿಯಲ್ಲಿ ಕೆಲವು ಜೀವಿಗಳು ಅತಿಶ್ರವಣ ಧ್ವನಿಯ ಅಲೆಗಳನ್ನು ಬಳಸಿ ತಮ್ಮ ಬದುಕನ್ನು ನಡೆಸುವುದನ್ನು ಮನಗಂಡ ಈ ವಿಜ್ಞಾನಿಗಳು, ಆ ಅತಿಶ್ರವಣ ಅಲೆಗಳನ್ನು ಕೃತಕವಾಗಿ ಉತ್ಪಾದಿಸಲು ಸಾಧ್ಯವೇ, ಹಾಗೆ ಉತ್ಪಾದಿಸಲು ಸಾಧ್ಯವಾದರೆ, ಅವನ್ನು ಸ್ವಯಮಿಚ್ಛೆಯಿಂದ ನಿಯಂತ್ರಿಸಲು ಸಾಧ್ಯವೇ ಎಂದು ಯೋಚಿಸಿದರು. ಕೊನೆಗೆ ಕ್ಯೂರಿ ಸೋದರರು, ಬೆಣಚುಕಲ್ಲು ಅಥವಾ ಕ್ವಾರ್ಟ್ಜ್ ಹರಳುಗಳನ್ನು ಅಧಿಕ ಒತ್ತಡಕ್ಕೆ ಒಳಪಡಿಸಿದರು. ಆಗ ಆ ಹರಳುಗಳು ವಿದ್ಯುತ್ ವೋಲ್ಟೇಜನ್ನು ಉತ್ಪಾದಿಸುತ್ತವೆ ಎನ್ನುವುದನ್ನು ಗಮನಿಸಿದರು. ಹಾಗೆಯೇ ಹರಳುಗಳಿಗೆ ವಿದ್ಯುತ್ ವೋಲ್ಟೇಜನ್ನು ಹರಿಸಿದಾಗ, ಹರಳುಗಳು ಕಂಪಿಸಲಾರಂಭಿಸಿದವು. ಶಬ್ದದಲೆಗಳನ್ನು ಹೊರಡಿಸಿದವು. ಈ ಅಲೆಗಳು ಅತಿಶ್ರವಣ ಅಲೆಗಳಾಗಿದ್ದವು. ಇದನ್ನು 'ಪಿಯಾಝೋ ವಿದ್ಯುತ್ ಪರಿಣಾಮ' (ಪಿಯಾಝೋ ಇಲೆಕ್ಟ್ರಿಕ್ ಎಫೆಕ್ಟ್) ಎಂದು ಕರೆದರು.
- **ಸೋನಾರ್:** ವಿಶ್ವದ ಮೊದಲನೆಯ ಮಹಾಯುದ್ಧದ ಕಾಲ. ನೀರಿನಲ್ಲಿರುವ ಮಂಜುಗಡ್ಡೆಯನ್ನು ಗುರುತಿಸಲಾಗದೆ, 1912ರಲ್ಲಿ ಟೈಟಾನಿಕ್ ಹಡಗು ಮುಳುಗಿತ್ತು. ಹಾಗಾಗಿ ನೀರಿನ ಒಳಗಿರುವ ವಸ್ತುಗಳನ್ನು ಪತ್ತೆಹಚ್ಚುವ ಪ್ರಯತ್ನಗಳನ್ನು ಹಲವು ದೇಶದ ವಿಜ್ಞಾನಿಗಳು ಕೈಗೊಂಡಿದ್ದರು. ಅವರಲ್ಲಿ ಫ್ರೆಂಚ್ ವಿಜ್ಞಾನಿ ಪಾಲ್ ಲಾಂಜೆವಿನ್ (1872-1946) ಮುಖ್ಯನಾದವನು. ಇವನು ಪಿಯಾಝೋ ಇಲೆಕ್ಟ್ರಿಕ್ ಪರಿಣಾಮವನ್ನು ಬಳಸಿಕೊಂಡು ಮೊದಲ 'ಹೈಡ್ರೋಫೋನ್' ರೂಪಿಸಿದ. ಇದು ಸಮುದ್ರದ ಒಳಗೆ ಸಾಗುವ ಜಲಾಂತರ್ಗತ ನೌಕೆಗಳನ್ನು ಪತ್ತೆಹಚ್ಚಲು ನೆರವಾಯಿತು. ಈ ತಂತ್ರಜ್ಞಾನವು ಸಾಕಷ್ಟು ಸುಧಾರಣೆಯಾಗಿ 'ಸೋನಾರ್' (ಸೌಂಡ್ ನ್ಯಾವಿಗೇಶನ್ ಆ್ಯಂಡ್ ರೇಂಜಿಂಗ್) ಎಂಬ ಸಾಧನದ ಆವಿಷ್ಕಾರಕ್ಕೆ ಕಾರಣವಾಯಿತು. ಈ ಸಾಧನವು ಇಂದಿಗೂ ಬಳಕೆಯಲ್ಲಿದೆ.
- **ವೈದ್ಯಕೀಯ ಕ್ಷೇತ್ರ:** ಮಿಲಿಟರಿಯಲ್ಲಿ ಬಳಕೆಯಲ್ಲಿದ್ದ ಅತಿಶ್ರವಣ ಅಲೆಗಳನ್ನು ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಹಾಗೆ, ಬಳಸಿದ ಕೀರ್ತಿ ಆಸ್ಟ್ರಿಯಾ ದೇಶದ ಡಾ.ಕಾರ್ಲ್ ಥಿಯೋಡರ್ ಡಸಿಕ್‌ಗೆ ಸಲ್ಲುತ್ತದೆ. ಈತ 'ಹೈಪರ್ ಫೋನೋಗ್ರಫಿ' ಎಂಬ ಸಾಧನದ ಮೂಲಕ, ಅತಿಶ್ರವಣದ ಅಲೆಗಳನ್ನು ಹಾಯಿಸಿ ಮಿದುಳಿನಲ್ಲಿರುವ ಕುಹುರಗಳ ವಿವರಗಳನ್ನು (ವೆಂಟ್ರಿಕಲ್ಸ್) ತಿಳಿಯುವ ಪ್ರಯತ್ನವನ್ನು ಮಾಡಿದ. ಈ ಸಾಧನವು ಇನ್ನೂ ಶೈಶವಾವಸ್ಥೆಯಲ್ಲಿತ್ತು. ಹಾಗಾಗಿ ಅಂಥ ಉತ್ತಮ ಚಿತ್ರಗಳೇನೂ ಮೂಡಲಿಲ್ಲ. ಆದರೆ ಇಂಥ ಒಂದು ಸಾಧ್ಯತೆಯನ್ನು ವೈದ್ಯಕೀಯ ಲೋಕದ ಮುಂದಿಟ್ಟ ಕೀರ್ತಿ ಡಸಿಕನಿಗೆ ಸಲ್ಲುತ್ತದೆ.

1948ರಲ್ಲಿ ಅಮೆರಿಕದ ವೈದ್ಯ ಜಾರ್ಜ್ ಲಡ್ವಿಗ್ (1922-1973) ಏಕ ಆಯಾಮದ (ಒನ್ ಡೈಮೆನ್ಷನಲ್) ಸಾಧನವನ್ನು ರೂಪಿಸಿ ಪಿತ್ತಕೋಶದ ಕಲ್ಲುಗಳನ್ನು ಪತ್ತೆಹಚ್ಚಿದ. 1950ರ ದಶಕದಲ್ಲಿ ಸ್ವೀಡನ್ನಿನ ಡಾ.ಕಾರ್ಲ್ ಹೆಲ್ಮುತ್ ಹರ್ಟ್ಜ್ (1920-1990), ಸೀಮನ್ಸ್ ಸಂಸ್ಥೆಯವರು ಒದಗಿಸಿದ ಸಾಧನವನ್ನು ಬಳಸಿ ಮಿಡಿಯುತ್ತಿರುವ ಹೃದಯದ ಚಿತ್ರಣವನ್ನು ದ್ವಿ-ಆಯಾಮದಲ್ಲಿ ಮೂಡಿಸಿದ. ಮೊದಲ ಬಾರಿಗೆ ಅತಿಶ್ರವಣ ಅಲೆಗಳನ್ನು ಬಳಸಿ, ಅಂಗವೊಂದನ್ನು ಅದು ಕೆಲಸ ಮಾಡುತ್ತಿರುವಂತೆಯೇ ಅದರ ಎಲ್ಲ ವಿವರಗಳನ್ನು ಅಧ್ಯಯನ ಮಾಡಲು ಸಾಧ್ಯವಾಯಿತು. ಇದು ಮುಂದಿನ ದಿನಗಳಲ್ಲಿ ಪ್ರಮಾಣಬದ್ಧ ಯಂತ್ರಕ್ಕೆ ಜನ್ಮವನ್ನು ನೀಡಿ, ಹೃದಯ ವಿಜ್ಞಾನದಲ್ಲಿ ಈಗ ಬಳಕೆಯಾಗುತ್ತಿರುವ 'ಇಕೋಕಾರ್ಡಿಯೋಗ್ರಫಿ' ಎನ್ನುವ ತಪಾಸಣೆ ಸರ್ವತ್ರ ದೊರೆಯುವಂತಾಗಿದೆ.

1958ರಲ್ಲಿ ಸ್ಕಾಟಿಶ್ ಪ್ರಸೂತಿ ತಂತ್ರ ತಜ್ಞನಾಗಿದ್ದ ಡಾ.ಅಯಾನ್ ಡೊನಾಲ್ಡ್ (1910-1987) ಮತ್ತು ತಂಡದವರು 'ಬಿ-ಮೋಡ್ ಇಮೇಜ್' ಅಥವಾ 'ಪ್ರಜ್ವಲ ಚಿತ್ರ'ವನ್ನು ಗ್ರಹಿಸಬಹುದಾದಂಥ ಸುಧಾರಿತ ಯಂತ್ರಕ್ಕೆ ಕಾರಣರಾದರು. ಕಾರ್ಖಾನೆಗಳಲ್ಲಿ ಲೋಹದಲ್ಲಿರುವ ದೋಷಗಳನ್ನು ಪತ್ತೆಹಚ್ಚುವ ಪರಿವರ್ತಕವನ್ನು ಬಳಸಿ, ಅವರು ಓರ್ವ ಗರ್ಭಿಣಿಯ ಉದರವನ್ನು ಪರೀಕ್ಷಿಸಿದರು. ಆಗ ಅವರಿಗೆ ಬೆಳೆಯುತ್ತಿರುವ ಭ್ರೂಣದ ತಲೆಯಲ್ಲಿ ಒಂದು ಗಂತಿ ಇರುವುದು ಕಂಡುಬಂದಿತು. ಮೊದಲ ಬಾರಿಗೆ ವೈದ್ಯರು ಗರ್ಭದಲ್ಲಿ ಬೆಳೆಯುತ್ತಿರುವ ಭ್ರೂಣದ ದೋಷವನ್ನು ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿದ್ದರು. ಇದು ಜಗತ್ತಿನ ಪ್ರಖ್ಯಾತ ವೈದ್ಯಕೀಯ ನಿಯಕಾಲಿಕ 'ಲ್ಯಾನ್ಸೆಟ್'ನಲ್ಲಿ ಪ್ರಕಟವಾಯಿತು. ಕೂಡಲೇ ಜಗತ್ತಿನ ಎಲ್ಲ ಪ್ರಸೂತಿ ತಂತ್ರ ಪರಿಣತರು ಅತಿಶ್ರವಣ ಅಲೆಗಳನ್ನು ಬಳಸಿ ಭ್ರೂಣದ ಆರೋಗ್ಯವನ್ನು ತಿಳಿಯಲು ಮುಂದಾದರು.

1960-80ರವರೆಗಿನ ಅವಧಿಯಲ್ಲಿ ಅಲ್ಟ್ರಾಸೌಂಡ್ ಸಾಧನಗಳು ಬಹಳ ದೊಡ್ಡ ಪ್ರಮಾಣದಲ್ಲಿ ಸುಧಾರಣೆಗೆ ಒಳಗಾದವು. 'ಬಿ-ಮೋಡ್' ಹಾಗೂ 'ರಿಯಲ್ ಟೈಮ್ ಅಲ್ಟ್ರಾಸೌಂಡ್' ಸಾಧನಗಳು ರೂಪುಗೊಂಡವು. ಈಗ ಭ್ರೂಣದ ರಚನೆಯನ್ನು ದ್ವಿ-ಆಯಾಮದಲ್ಲಿ ನೋಡುವುದರ ಜತೆಯಲ್ಲಿ, ಭ್ರೂಣದ ವಿವಿಧ ಭಾಗಗಳನ್ನು ಹಾಗೂ ಅವುಗಳ ಕಾರ್ಯವನ್ನು ನೋಡಲು ಸಾಧ್ಯವಾಯಿತು. ಈ ಸಾಧನಗಳು ಮಾರುಕಟ್ಟೆಯಲ್ಲಿ ಮುಕ್ತವಾಗಿ ದೊರೆಯಲಾರಂಭಿಸಿದವು.

1970ರ ದಶಕದಲ್ಲಿ 'ಗ್ರೇ ಸ್ಕೇಲ್' ಮತ್ತು 'ಡಾಪ್ಲರ್' ಸೌಲಭ್ಯಗಳು ದೊರೆತವು. ಗ್ರೇ-ಸ್ಕೇಲ್ ಇಮೇಜಿಂಗ್ ಅತ್ಯಂತ ಸ್ಪಷ್ಟವಾದ ಚಿತ್ರಗಳನ್ನು ನೀಡಿತು. ಡಾಪ್ಲರ್ ತಂತ್ರಜ್ಞಾನವನ್ನು ಅಳವಡಿಸಿ, ಭ್ರೂಣದ ಒಡಲಿನಲ್ಲಿರುವ ರಕ್ತನಾಳಗಳ ಪ್ರವಾಹದ ಸ್ಥಿತಿಗತಿಯನ್ನು ತಿಳಿಯುವುದು ಸುಲಭವಾಯಿತು. ಇದು ಹೃದಯ ಮತ್ತು ರಕ್ತನಾಳಗಳ ಆರೋಗ್ಯವನ್ನು ಕರಾರುವಾಕ್ಕಾಗಿ ನೀಡಿತು.

- **3-ಡಿ ಮತ್ತು 4-ಡಿ:** 1980ರ ದಶಕದಲ್ಲಿ ಡಿಜಿಟಲ್ ತಂತ್ರಜ್ಞಾನವು ಸುಧಾರಣೆಗೊಂಡಿತು. ಹಾಗಾಗಿ ಬಿ-ಮೋಡ್ ಡಾಪ್ಲರ್ ಅಲ್ಟ್ರಾಸೌಂಡಿನ ಜತೆಯಲ್ಲಿ ಭ್ರೂಣವನ್ನು ತ್ರಯಾಕೃತಿಯಲ್ಲಿ, ಮೂರೂ ಆಯಾಮಗಳಲ್ಲಿ (3-ಡೈಮೆನ್ಷನಲ್) ನೋಡಲು ಸಾಧ್ಯವಾಯಿತು. 90ರ ದಶಕದಲ್ಲಿ '4-ಡಿ ತಂತ್ರಜ್ಞಾನ'ವನ್ನು ಒಳಗೊಂಡ ಯಂತ್ರಗಳು ದೊರೆಯಲಾರಂಭಿಸಿದವು. ಹಾಗೆಯೇ 'ಪೋಕಸ್ ಅಥವಾ ಪಾಯಿಂಟ್ ಆಫ್ ಕೇರ್ ಅಲ್ಟ್ರಾಸೌಂಡ್' ಅಂದರೆ ಸಂಚಾರಿ ಅಲ್ಟ್ರಾಸೌಂಡ್ ಸಾಧನಗಳು ಮಾರುಕಟ್ಟೆಗೆ ಬಂದವು. ವೈದ್ಯರು ತಮ್ಮೊಡನೆ ಒಯ್ಯಬಹುದಾದ ಸಾಧನಗಳನ್ನು ರೂಪುಗೊಳ್ಳುತ್ತಲೇ, ವೈದ್ಯರು ಅವನ್ನು ತುರ್ತುಸ್ಥಿತಿಗಳಲ್ಲಿ ಬಳಸಲಾರಂಭಿಸಿದರು. ಆ್ಯಂಬುಲೆನ್ಸ್‌ನಲ್ಲಿಯೂ ಅಲ್ಟ್ರಾಸೌಂಡ್ ಪರೀಕ್ಷೆಯನ್ನು ನಡೆಸಿ, ಚಿತ್ರಗಳನ್ನು 5-ಜಿ ತಂತ್ರಜ್ಞಾನದ ಮೂಲಕ ಆಸ್ಪತ್ರೆಯ ಪ್ರಧಾನ ಕೇಂದ್ರಕ್ಕೆ ರವಾನಿಸುವುದು ಸಾಧ್ಯವಾಯಿತು. ಈ ಚಿತ್ರವನ್ನು ಅಧ್ಯಯನ ಮಾಡಿ, ಅಗತ್ಯ ಪ್ರಥಮ ಚಿಕಿತ್ಸೆ ಅಥವಾ ಸೂಚನೆಗಳನ್ನು ನೀಡುವುದು ಸಾಧ್ಯವಾಯಿತು.



ಈಗ ಮಾರುಕಟ್ಟೆಯಲ್ಲಿ ದೊರೆಯುತ್ತಿರುವ ಅಲ್ಟ್ರಾಸೌಂಡ್ ಯಂತ್ರಗಳಲ್ಲಿ ಕೃತಕ ಬುದ್ಧಿಮತ್ತೆಯನ್ನು ಅಳವಡಿಸಲಾಗಿದೆ. ಹಾಗಾಗಿ ಯಂತ್ರಗಳು 'ಬುದ್ಧಿವಂತ' ಯಂತ್ರಗಳಾಗಿ ಪರಿಣಮಿಸಿವೆ. ಇವು ಸ್ಕ್ಯಾನ್ ಮಾಡುತ್ತಿದ್ದ ಹಾಗೆ, ಚಿತ್ರವನ್ನು ವಿಶ್ಲೇಷಿಸುತ್ತವೆ, ಭ್ರೂಣದ ಅಂಗಾಂಗಗಳ ಉದ್ದಳತೆಗಳನ್ನು ಸ್ವಯಂ ಲೆಕ್ಕಹಾಕಿ ದಾಖಲಿಸುತ್ತವೆ ಹಾಗೂ ನಿಖರವಾದ ರೋಗನಿದಾನವನ್ನು ಮಾಡಲು ಸಹಾಯ ಮಾಡುತ್ತವೆ.

- **ಮಾದರಿ ಯಂತ್ರ:** ಸ್ತ್ರೀರೋಗ ಹಾಗೂ ಪ್ರಸೂತಿ ತಂತ್ರ ವಿಜ್ಞಾನದಲ್ಲಿ ಬಳಸುವ ಒಂದು ಮಾದರಿ ಅಲ್ಟ್ರಾಸೌಂಡ್ ಯಂತ್ರದ ರಚನೆ ಹಾಗೂ ಕಾರ್ಯ ಈ ಕೆಳಕಂಡಂತಿದೆ.

1. **ಪರಿವರ್ತಕ (ಟ್ರಾನ್ಸ್‌ಡ್ಯೂಸರ್):** ಇದು ಕೈಯಲ್ಲಿ ಹಿಡಿದುಕೊಳ್ಳಬಹುದಾದ ಪುಟ್ಟ ಸಾಧನ. ಅತಿಶ್ರವಣಯಂತ್ರತಜ್ಞ ಅಥವಾ ಸೋನಾಲಜಿಸ್ಟ್, ಈ ಸಾಧನವನ್ನು ಗರ್ಭವತಿಯ ಉದರದ ಚರ್ಮದ ಮೇಲೆ ಒತ್ತಿ ಹಿಡಿಯುತ್ತಾರೆ. ಆಗ ಈ ಸಾಧನವು ಉಚ್ಚಾವರ್ತನ ಶಬ್ದದ ಅಲೆಗಳನ್ನು (ಹೈ-ಫ್ರೀಕ್ವೆನ್ಸಿ ಸೌಂಡ್ ವೇವ್) ಉತ್ಪಾದಿಸಿ, ಅದನ್ನು ಹಾಯಿಸುತ್ತದೆ. ಈ ಶಬ್ದದ ಅಲೆಗಳು ತಾಯಿಯ ಗರ್ಭಕೋಶದಲ್ಲಿರುವ ಭ್ರೂಣವನ್ನು ತಲುಪುತ್ತವೆ. ಅಲ್ಲಿಂದ ಪ್ರತಿಫಲಿತಗೊಂಡು, ಭ್ರೂಣದ ಎಲ್ಲ ವಿವರಗಳೊಡನೆ ಮತ್ತೆ ಪರಿವರ್ತಕಕ್ಕೆ ಬರುತ್ತವೆ.
2. **ಕೇಂದ್ರ ಸಂಸ್ಕರಣ ಘಟಕ (ಸೆಂಟ್ರಲ್ ಪ್ರೋಸೆಸ್ ಯೂನಿಟ್, ಸಿಪಿಯು):** ಇದು ಅಲ್ಟ್ರಾಸೌಂಡ್ ಯಂತ್ರದ 'ಮಿದುಳು'. ಪ್ರತಿಫಲಿತ ಶಬ್ದದ ಅಲೆಗಳನ್ನು ಸ್ವೀಕರಿಸಿದ ಪರಿವರ್ತಕವು, ಅವನ್ನು ಈ ಘಟಕಕ್ಕೆ ರವಾನಿಸುತ್ತದೆ. ಆ ಅಲೆಗಳನ್ನು 'ಅರ್ಥ' ಮಾಡಿಕೊಂಡು, ಅವನ್ನು ಚಿತ್ರರೂಪಕ್ಕೆ ಪರಿವರ್ತಿಸುತ್ತದೆ. ಹಾಗೆಯೇ ಎಲ್ಲ ದತ್ತಾಂಶವನ್ನು ಸಂಗ್ರಹಿಸಿಡುತ್ತದೆ.
3. **ಪ್ರದರ್ಶಕ (ಡಿಸ್‌ಪ್ಲೇ):** ಡಿಸ್‌ಪ್ಲೇ ಎನ್ನುವುದು ಒಂದು ಕಂಪ್ಯೂಟರ್ ಪರದೆ. ಸಿಪಿಯುವಿನಲ್ಲಿ ಸಂಗ್ರಹವಾಗಿರುವ ಚಿತ್ರಗಳನ್ನು ನೋಡಲು ಅವಕಾಶವನ್ನು ಮಾಡಿಕೊಡುತ್ತದೆ. ಭ್ರೂಣದ ವಿವರಗಳನ್ನು 2-ಡಿ, 3-ಡಿ ಅಥವಾ 4-ಡಿಗಳಲ್ಲಿ ನೋಡಲು ಸಾಧ್ಯವಾಗುತ್ತದೆ. 4-ಡಿ ತಂತ್ರಜ್ಞಾನವು ಗರ್ಭದೊಳಗಿರುವ ಜೀವಂತ ಮಗುವಿನ ಚಲನವಲನಗಳನ್ನು ನೋಡಲು ಅನುಕೂಲ ಮಾಡಿಕೊಡುವುದರ ಜತೆಯಲ್ಲಿ ಅದನ್ನು ಸಿಡಿ ಇಲ್ಲವೇ ಡಿವಿಡಿ ರೂಪದಲ್ಲಿ ದಾಖಲಿಸಲು ಅವಕಾಶವನ್ನು ಮಾಡಿಕೊಡುತ್ತದೆ.
4. **ನಿಯಂತ್ರಕ ಗುಂಡಿಗಳು (ಕಂಟ್ರೋಲಿಂಗ್ ನಾಬ್ಸ್) ಮತ್ತು ಕೀಲಿಮಣೆ (ಕೀ-ಬೋರ್ಡ್):** ಅತ್ಯುತ್ತಮ ಚಿತ್ರಗಳನ್ನು ಪಡೆಯಲು ಅನುಕೂಲವನ್ನು ಮಾಡಿಕೊಡುವ ಹಲವು ರೀತಿಯ ಗುಂಡಿಗಳು ಈ ಸಾಧನದಲ್ಲಿರುತ್ತವೆ.
   - **ಆಳ (ಡೆಪ್ತ್):** ಶರೀರದ ಒಳಗೆ ಎಷ್ಟು ಆಳದವರೆಗೆ ಶಬ್ದದ ಅಲೆಗಳನ್ನು ರವಾನಿಸಬೇಕು ಎನ್ನುವುದನ್ನು ನಿರ್ಧರಿಸುವ ಗುಂಡಿ.
   - **ಪ್ರಖರತೆ (ಬ್ರೈಟ್‌ನೆಸ್):** ಪರದೆಯ ಮೇಲೆ ಮೂಡುವ ಚಿತ್ರಗಳು ಎಷ್ಟು ಪ್ರಖರವಾಗಿರಬೇಕು ಹಾಗೂ ನಿಚ್ಚಳವಾಗಿರಬೇಕು ಎನ್ನುವುದನ್ನು ನಿಯಂತ್ರಿಸುವ ಗುಂಡಿ.
   - **ಸ್ಥಗಿತ (ಫ್ರೀಝ್):** ಚಲಿಸುತ್ತಿರುವ ಭ್ರೂಣದ ಅಗತ್ಯ ಚಿತ್ರಗಳನ್ನು ತೆಗೆದುಕೊಳ್ಳಲು ಸ್ಥಗಿತಗೊಳಿಸುವ ಅವಕಾಶವಿರುತ್ತದೆ. ಹೀಗೆ ಸ್ಥಗಿತಗೊಳಿಸಿ, ಭ್ರೂಣದ ಅಳತೆಯನ್ನು ತೆಗೆದುಕೊಳ್ಳುವುದರ ಜತೆಯಲ್ಲಿ, ಅಗತ್ಯ ಟಿಪ್ಪಣಿಯನ್ನು ಮಾಡಲು ಅವಕಾಶ ಮಾಡಿಕೊಡುತ್ತದೆ.
   - **ಹಿಗ್ಗಲಿಕೆ (ಝೂಮ್):** ಭ್ರೂಣದ ನಿಗದಿತ ಭಾಗವನ್ನು ಹಿಗ್ಗಲಿಸಿ, ಸಮೀಪ ನೋಟದಲ್ಲಿ ವಿವರಗಳನ್ನು ಅಧ್ಯಯನ ಮಾಡಲು ಅವಕಾಶ ಮಾಡಿಕೊಡುವ ಸೌಲಭ್ಯ.
5. **ಕಲಿಲ (ಜೆಲ್):** ಕಲಿಲವು ಅಲ್ಟ್ರಾಸೌಂಡ್ ಯಂತ್ರದ ಒಂದು ಭಾಗವಲ್ಲ, ಆದರೆ ಇದಿಲ್ಲದೆ ಸ್ಪಷ್ಟವಾದ ಚಿತ್ರಗಳನ್ನು ಪಡೆಯುವುದು ಅಸಾಧ್ಯ. ಇದು ಚರ್ಮ ಮತ್ತು ಪರಿವರ್ತಕದ ನಡುವೆ ಗಾಳಿಯು ಇರದಂತೆ ನೋಡಿಕೊಳ್ಳುತ್ತದೆ. ಆಗ ಶಬ್ದದ ಅಲೆಗಳು ಅತ್ತಿತ್ತ ಚಲಿಸದೆ ನೇರವಾಗಿ ಚರ್ಮದ ಒಳಗೆ ಸಾಗುತ್ತವೆ.

- **ಮೂರನೆಯ ಕಣ್ಣು:** ಜಲಾಂತರ್ಗತ ನೌಕೆಗಳನ್ನು ಪತ್ತೆಹಚ್ಚಲು ಆವಿಷ್ಕರಿಸಿದ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ತಂತ್ರಜ್ಞಾನವು ಇಂದು ವೈದ್ಯರಿಗೆ ಮೂರನೆಯ ಕಣ್ಣನ್ನು ನೀಡಿದೆ. ಕೋಟಿ ಕೋಟಿ ತಾಯಂದಿರ ಗರ್ಭದಲ್ಲಿ ಬೆಳೆಯುತ್ತಿರುವ ಶಿಶುವಿನ ಆರೋಗ್ಯವನ್ನು ಮುಂಚಿತವಾಗಿಯೇ ತಿಳಿಸುವ ಒಂದು ಅದ್ಭುತ ಅವಕಾಶವನ್ನು ಇದು ಮಾಡಿಕೊಟ್ಟಿದೆ. ನಾನಾ ರೀತಿಯ ಜನ್ಮದತ್ತ ವೈಕಲ್ಯಗಳಿರುವ ಭ್ರೂಣಗಳನ್ನು ಸಕಾಲದಲ್ಲಿ ಗುರುತಿಸಲು ಇದರಿಂದಾಗಿ ಸಾಧ್ಯವಾಗಿದೆ. ಇಂಥ ಒಂದು ಉಪಕರಣವನ್ನು ವೈದ್ಯರಿಗೆ ನೀಡಿದ ಎಲ್ಲ ವಿಜ್ಞಾನಿಗಳಿಗೂ ಹಾಗೂ ತಂತ್ರಜ್ಞಾನಿಗಳಿಗೂ ನಮೋನ್ನಮಃ...

ಕರುಣ್, ಇನ್ನೊಂದು ಅವಕಾಶ ಕೇಳಬೇಡಿ

ಅಖಾಡ

ರಮೇಶ್ ಕೋಟೆ
vveditoped@gmail.com

ಮೇಲಿನ ಮಾತನ್ನು ನಾನು ಹೇಳುತ್ತಿಲ್ಲ! ಸ್ವತಃ ಟೀಮ್ ಇಂಡಿಯಾ ಹೆಡ್ ಕೋಚ್ ಗೌತಮ್ ಗಂಭೀರ್ ಅವರೇ ಹೇಳುತ್ತಿರಬಹುದು. ನಾಲ್ಕು ಪಂದ್ಯಗಳಲ್ಲಿ ಅವಕಾಶ ನೀಡಿದ ಬಳಿಕ ಡ್ರೆಸ್ಸಿಂಗ್ ರೂಂನಲ್ಲಿ ಕರುಣ್ ಕಂಡಾಗ ಗಂಭೀರ್‌ಗೆ ಈ ಮಾತು ಮನಸಿನಲ್ಲಿ ಸುಳಿದಿರಬಹುದು. ಈ ಮಾತುಗಳಲ್ಲಿ ನ್ಯಾಯ ಇದೆ ಅಲ್ಲವೇ? ಬರೋಬ್ಬರಿ ಎಂಟು ವರ್ಷಗಳ ಬಳಿಕ ಭಾರತ ತಂಡಕ್ಕೆ ಮರಳಿದಾಗ ಆಡಬೇಕು, ರನ್ ಗಳಿಸಬೇಕು, ಆಯ್ಕೆಗಾರರ ನಂಬಿಕೆಯನ್ನು ಉಳಿಸಿಕೊಳ್ಳಬೇಕು ಅಲ್ಲವೇ?

ಕರುಣ್ ನಾಯರ್‌ಗೆ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಲು ಒಂದಲ್ಲ, ಎರಡಲ್ಲ ಎಂಟು ಇನ್ನಿಂಗ್ಸ್‌ಗಳಲ್ಲಿ ಅವಕಾಶ ಸಿಕ್ಕಿತ್ತು. ಆದರೆ ಆತ ದೇಸಿ ಕ್ರಿಕೆಟ್‌ನಲ್ಲಿ ಹರಿಸಿದ ರನ್ ಹೊಳೆಯನ್ನು ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಹರಿಸಲಿಲ್ಲ. ಕನಿಷ್ಠ ಎಂಟು ಇನ್ನಿಂಗ್ಸ್‌ಗಳ ಪೈಕಿ ಒಂದೇ ಒಂದರಲ್ಲಿಯೂ ಮೂರಂಕಿ ವೈಯಕ್ತಿಕ ಮೊತ್ತವನ್ನೂ ಕಲೆಹಾಕಲು ಸಾಧ್ಯವಾಗಲಿಲ್ಲ. ಇದು ಟೀಮ್ ಮ್ಯಾನೇಜ್ಮೆಂಟ್‌ಗೆ ಮಾತ್ರವಲ್ಲದೆ, ಕೋಟ್ಯಂತರ ಕನ್ನಡಿಗರಿಗೂ ಬೇಸರ ತಂದಿತು. ಏಕೆಂದರೆ ಕರುಣ್ ನಾಯರ್ ಎಂಟು ವರ್ಷಗಳ ಬಳಿಕ ಭಾರತ ತಂಡಕ್ಕೆ ಕಮ್‌ಬ್ಯಾಕ್ ಮಾಡಿದ ಹಾದಿ ಅಷ್ಟೊಂದು ಸುಲಭವಾಗಿರಲಿಲ್ಲ.

ಎಂಟು ವರ್ಷಗಳ ಹಿಂದೆ ಚೆನ್ನೈನ ಮರೀನಾ ಕಡಲತೀರದಲ್ಲಿ ತ್ರಿಶತಕ ಸಿಡಿಸಿದಾಗ 'ಕರುಣ್ ನಾಯರ್ ಭಾರತೀಯ ಕ್ರಿಕೆಟ್‌ನ ದೊಡ್ಡ ಭವಿಷ್ಯ' ಎಂದೇ ಅಭಿಪ್ರಾಯ ವ್ಯಕ್ತವಾಗಿತ್ತು. ಏಕೆಂದರೆ, ಅಂದು ಆತನ ಬ್ಯಾಟಿಂಗ್ ಇಡೀ ವಿಶ್ವ ಕ್ರಿಕೆಟ್ ತಿರುಗಿ ನೋಡುವಂತೆ ಮಾಡಿತ್ತು. ವಿಶೇಷವಾಗಿ ವೀರೇಂದ್ರ ಸೆಹ್ವಾಗ್ ಬಳಿಕ ಟೆಸ್ಟ್ ಕ್ರಿಕೆಟ್‌ನಲ್ಲಿ ತ್ರಿಶತಕ ಸಿಡಿಸಿದ ಎರಡನೇ ಭಾರತೀಯ ಬ್ಯಾಟ್ಸ್‌ಮನ್ ಎಂಬ ಐತಿಹಾಸಿಕ ದಾಖಲೆಯನ್ನು ಕರುಣ್ ಬರೆದಿದ್ದರು. ಅಲ್ಲದೇ ಎರಡು ದಶಕಕ್ಕೂ ಹೆಚ್ಚು ಕಾಲ ಕ್ರಿಕೆಟ್ ಲೋಕವನ್ನು ಆಳಿದ್ದ 'ಮಾಸ್ಟರ್ ಬ್ಲಾಸ್ಟರ್' ಸಚಿನ್ ತೆಂಡೂಲ್ಕರ್ ರಿಂದಾಗಲಿ ಅಥವಾ ಆಧುನಿಕ ಕ್ರಿಕೆಟ್ ದಿಗ್ಗಜ ವಿರಾಟ್ ಕೊಹ್ಲಿಯಿಂದಾಗಲಿ ಸಾಧ್ಯವಾಗದ ದೊಡ್ಡ ದಾಖಲೆಯನ್ನು ಕನ್ನಡಿಗ ಕರುಣ್ ಅಂದು ಬರೆದಿದ್ದರು. ಆದರೆ ಮುಂದಿನ ಸರಣಿಗಳಲ್ಲಿ ಸತತ ವೈಫಲ್ಯದ ಕಾರಣ ಹಾಗೂ ಅಜಿಂಕ್ಯ ರಹಾನೆ ತಂಡಕ್ಕೆ ಮರಳಿದ ಬಳಿಕ ಕರುಣ್ ಟೀಮ್ ಇಂಡಿಯಾದಿಂದ ಹೊರಬೀಳಬೇಕಾಯಿತು.

ನಂತರ ಅವರು ಸಾಕಷ್ಟು ಹಿನ್ನಡೆ ಅನುಭವಿಸಿದ್ದರು. ಕರ್ನಾಟಕ ತಂಡ ಕೂಡ ಅವರ ಮೇಲೆ ನಂಬಿಕೆಯನ್ನು ಕಳೆದುಕೊಂಡು ಕೈ ಬಿಟ್ಟಿತ್ತು. ಇದರಿಂದಾಗಿ ಕರುಣ್ ತೀವ್ರ ಮಾನಸಿಕ ಹಿನ್ನಡೆ ಅನುಭವಿಸಿದ್ದರು. 2022ರಲ್ಲಿ ಅವರು 'ಡಿಯರ್ ಕ್ರಿಕೆಟ್, ದಯವಿಟ್ಟು ಮತ್ತೊಂದು ಅವಕಾಶ ಕೊಡು' ಎಂದು ಮನವಿ ಮಾಡಿದ್ದರು. ನಂತರ ವಿದರ್ಭ ತಂಡಕ್ಕೆ ಸೇರ್ಪಡೆಯಾದ ಬಳಿಕ ಕರುಣ್ ಅವರ ಅದೃಷ್ಟ ಬದಲಾಯಿತು. ಅವರು ಕಳೆದ 2024-25ರ ಋತುವಿನ ರಣಜಿ ಟ್ರೋಫಿ ಟೂರ್ನಿಯಲ್ಲಿ 9 ಪಂದ್ಯಗಳಿಂದ 4 ಶತಕಗಳ ನೆರವಿನಿಂದ 863 ರನ್‌ಗಳನ್ನು ಕಲೆಹಾಕಿದ್ದರು. ಅಲ್ಲದೇ ವಿಜಯ್ ಹಜಾರೆ ಟ್ರೋಫಿ 50 ಓವರ್‌ಗಳ ಟೂರ್ನಿಯಲ್ಲಿಯೂ ರನ್ ಹೊಳೆ ಹರಿಸಿ ಎಂಟು ಇನ್ನಿಂಗ್ಸ್‌ಗಳಿಂದ 5 ಶತಕಗಳ ಜತೆಗೆ 779 ರನ್‌ಗಳನ್ನು ಕಲೆಹಾಕಿದ್ದರು. ಅಂದರೆ 7 ವರ್ಷಗಳಲ್ಲಿ, ಅವಕಾಶವನ್ನು ಅರಸುತ್ತ ವನವಾಸದಲ್ಲಿ ಕಲ್ಲು-ಮುಳ್ಳು ತುಳಿದು, ಹಳ್ಳ-ಕೊಳ್ಳ ದಾಟಿ ಈ ಬಲಗೈ ಬ್ಯಾಟ್ಸ್‌ಮನ್ ಇಲ್ಲಿಗೆ ಬಂದಿದ್ದರು. ಹಾಗಾಗಿ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಅವರ ಸ್ಥಾನ ಅತ್ಯಂತ ಮೌಲ್ಯಯುತವಾಗಿತ್ತು. ಆದರೆ ಕರುಣ್ ಈ ಸರಣಿಯಲ್ಲಿ ಆಡುವಾಗ ತಾವು ಕಮ್‌ಬ್ಯಾಕ್ ಮಾಡಿದ ಹಾದಿಯನ್ನು ಮರೆತರೆ? ಏಕೆಂದರೆ ಅವರ ಡೊಮೆಸ್ಟಿಕ್ ಕ್ರಿಕೆಟ್ ಹಾಗೂ 'ಲಿಸ್ಟ್-ಎ' ಕ್ರಿಕೆಟ್‌ನಲ್ಲಿದ್ದ ಫಾರ್ಮ್ ನೋಡಿದಾಗ ಅವರು, ಅತಿ ಹೆಚ್ಚು ರನ್ ಗಳಿಸಿದವರ ಪಟ್ಟಿಯಲ್ಲಿ ಶುಭಮನ್ ಗಿಲ್ ಸ್ಥಾನದಲ್ಲಿ ಇರಬೇಕಿತ್ತು. ಆದರೆ ಹಾಗೆ ಆಗಲಿಲ್ಲ.

ಹಾಗಂತ ಅವರ ಬ್ಯಾಟಿಂಗ್‌ನಲ್ಲಿನ ತಂತ್ರ, ಪ್ರತಿಭೆ, ಕೌಶಲದ ಬಗ್ಗೆ ಯಾವುದೇ ಅನುಮಾನವಿಲ್ಲ. ಆದರೆ, ಅವರು ತಮ್ಮ ಪ್ರತಿಭೆಗೆ ಸೂಕ್ತ ನ್ಯಾಯ ಒದಗಿಸುವಲ್ಲಿ ವಿಫಲರಾಗಿದ್ದಾರೆ. ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯ ಮೊದಲ ಮತ್ತು ಕೊನೆಯ ಪಂದ್ಯದಲ್ಲಿ ಮಧ್ಯಮ ಕ್ರಮಾಂಕದಲ್ಲಿ ಆಡಿದ್ದ ಅವರು, ಇನ್ನುಳಿದ ಎರಡು ಪಂದ್ಯಗಳಲ್ಲಿ ಸಾಯಿ ಸುದರ್ಶನ್ ಬದಲಿಗೆ ಮೂರನೇ ಕ್ರಮಾಂಕದಲ್ಲಿ ಆಡಿದ್ದರು. ಇದರೊಂದಿಗೆ ಮೂರನೇ ಕ್ರಮಾಂಕದಲ್ಲಿ ತಮ್ಮ ಸ್ಥಾನವನ್ನು ಗಟ್ಟಿ ಮಾಡಿಕೊಳ್ಳುವ ಅವಕಾಶ ಅವರಿಗಿತ್ತು. ಆದರೆ ಇದನ್ನು ಅವರು ಸದುಪಯೋಗಪಡಿಸಿಕೊಳ್ಳಲಿಲ್ಲ.

ಅವರು ಈ ಸರಣಿಯ ಕೆಲ ಪಂದ್ಯಗಳಲ್ಲಿ ಉತ್ತಮ ಆರಂಭ ಪಡೆದರೂ ಅದನ್ನು ಸದುಪಯೋಗ ಪಡಿಸಿಕೊಳ್ಳುವಲ್ಲಿ ವಿಫಲರಾಗಿದ್ದರು. ಈ ಕಾರಣದಿಂದಲೇ ಅವರನ್ನು ಮ್ಯಾಂಚೆಸ್ಟರ್ ಟೆಸ್ಟ್‌ನಿಂದ ಕೈ ಬಿಟ್ಟು ಪುನಃ ಸಾಯಿ ಸುದರ್ಶನ್‌ಗೆ ಅವಕಾಶ ನೀಡಲಾಗಿತ್ತು. ಅದರಂತೆ ಸುದರ್ಶನ್ ಪ್ರಥಮ ಇನ್ನಿಂಗ್ಸ್‌ನಲ್ಲಿ ಅರ್ಧಶತಕ ಗಳಿಸಿದ್ದರು ಹಾಗೂ ತಮ್ಮ ಸ್ಥಾನವನ್ನು ಗಟ್ಟಿ ಮಾಡಿಕೊಂಡರು.

ಐದನೇ ಹಾಗೂ ಓವಲ್ ಟೆಸ್ಟ್‌ನಲ್ಲಿಯೂ ಕರುಣ್ ಬೆಂಚ್ ಕಾಯುವುದು ಬಹುತೇಕ ಖಚಿತ ಎಂದೇ ಭಾವಿಸಲಾಗಿತ್ತು. ಆದರೆ ಹೆಡ್ ಕೋಚ್ ಗೌತಮ್ ಗಂಭೀರ್, ಈ ಕನ್ನಡಿಗನಿಗೆ ಮತ್ತೊಂದು ಅವಕಾಶ ನೀಡಿದರು. ಅದರಂತೆ ಪಂದ್ಯದ ಪ್ರಥಮ ಇನಿಂಗ್ಸ್‌ನಲ್ಲಿ ಇತರೆ ಎಲ್ಲಾ ಬ್ಯಾಟ್ಸ್‌ಮನ್‌ಗಳು ಒಂದೆಡೆ ಪೆವಿಲಿಯನ್‌ಗೆ ಪರೇಡ್ ನಡೆಸುತ್ತಿದ್ದರೆ, ಕರುಣ್ ಮಾತ್ರ ಒಂದು ತುದಿಯಲ್ಲಿ ಗಟ್ಟಿಯಾಗಿ ನಿಂತು ಇಂಗ್ಲೆಂಡ್‌ನ ಮಾರಕ ಬೌಲಿಂಗ್ ದಾಳಿಯನ್ನು ಸಮರ್ಥವಾಗಿ ಎದುರಿಸಿ, ಎರಡನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದರು. ಆದರೆ ಎರಡನೇ ದಿನ ಶತಕ ಬಾರಿಸಬಹುದೆಂದು ಎದುರು ನೋಡುತ್ತಿದ್ದ ಅಭಿಮಾನಿಗಳಿಗೆ ಆರಂಭದಲ್ಲಿಯೇ ಕರುಣ್ ನಿರಾಸೆ ಮೂಡಿಸಿದರು. ಕನಿಷ್ಠ ದ್ವಿತೀಯ ಇನ್ನಿಂಗ್ಸ್‌ನಲ್ಲಿಯಾದರೂ ಅವರು ಭಾರಿ ಪ್ರದರ್ಶನ ನೀಡುತ್ತಾರೆಂದು ಭಾವಿಸಲಾಗಿತ್ತು. ಅದರಂತೆ ಅವರಿಗೆ ಒಳ್ಳೆಯ ವೇದಿಕೆ ಸಿಕ್ಕಿತ್ತು ಆದರೆ ಪಿಚ್ ಸ್ಥಿತಿಗೆ ಹೊಂದಿಕೊಳ್ಳುವಲ್ಲಿ ಆರಂಭದಲ್ಲಿಯೇ ಎಡವಿ ವಿಕೆಟ್ ಕೈ ಚೆಲ್ಲಿದರು.

ಒಟ್ಟಾರೆ ಕರುಣ್ ಆಡಿದ 4 ಟೆಸ್ಟ್ ಪಂದ್ಯಗಳ 8 ಇನ್ನಿಂಗ್ಸ್‌ಗಳಿಂದ 25ರ ಸರಾಸರಿಯಲ್ಲಿ ಗಳಿಸಿದ್ದು 205 ರನ್‌ಗಳು ಮಾತ್ರ. ಇದರಲ್ಲಿ ಒಂದೇ ಒಂದು ಅರ್ಧ ಶತಕ ಗಳಿಸಿದ್ದರು ಅಷ್ಟೇ. ನೀವೇ ಹೇಳಿ ಕರುಣ್ ನಾಯರ್‌ಗೆ ಮತ್ತೊಂದು ಅವಕಾಶ ನೀಡಬೇಕಾ? ಹೌದು! ಒಂದು ವೇಳೆ ಕರುಣ್ ಆಡಿದ ಎಂಟು ಇನ್ನಿಂಗ್ಸ್‌ಗಳ ಪೈಕಿ ಒಂದರಲ್ಲಿ ಒಂದು ದೊಡ್ಡ ಇನಿಂಗ್ಸ್ ಆಡಿದ್ದರೂ ಅವರಿಗೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಈಗ ನೋಡಿ ತಂಡದಿಂದ ಸ್ಥಾನ ಕಳೆದುಕೊಳ್ಳುವ ಸ್ಥಿತಿಗೆ ಬಂದು ನಿಂತಿದ್ದಾರೆ.

ನೀವು ವಾದ ಮಾಡಬಹುದು- 'ಕರುಣ್‌ಗೆ ಇನ್ನೊಂದು ಸರಣಿಯಲ್ಲಿ ಅವಕಾಶ ನೀಡಬೇಕು' ಅಂತ. ಆದರೆ ಇಂಗ್ಲೆಂಡ್ ಸರಣಿಯಲ್ಲಿದ್ದ ಅಭಿಮನ್ಯು ಈಶ್ವರನ್‌ಗೆ ಒಂದೇ ಒಂದು ಪಂದ್ಯದಲ್ಲಿಯೂ ಅವಕಾಶ ಸಿಕ್ಕಿರಲಿಲ್ಲ. ಈ ಹಿನ್ನಲೆಯಲ್ಲಿ ಗೌತಮ್ ಗಂಭೀರ್ ಮಾರ್ಗದರ್ಶನದ ಟೀಮ್ ಮ್ಯಾನೇಜ್ಮೆಂಟ್ ಸಾಕಷ್ಟು ಟೀಕೆಗಳಿಗೆ ಗುರಿಯಾಗಿದೆ. ಮತ್ತೊಂದು ಕಡೆ ಸ್ಪಿನ್ನರ್ ಕುಲ್ದೀಪ್ ಯಾದವ್‌ಗೂ ಅವಕಾಶ ಸಿಕ್ಕಿರಲಿಲ್ಲ. ಹಾಗಾಗಿ ಮುಂದಿನ ಟೆಸ್ಟ್ ಸರಣಿಗೆ ಇವರು ತಮ್ಮ ಸ್ಥಾನವನ್ನೂ ಉಳಿಸಿಕೊಳ್ಳುವುದು ಕಷ್ಟ. ಒಂದು ವೇಳೆ ಅವರು ಭಾರತ ತಂಡದಿಂದ ಹೊರಬಿದ್ದರೆ, ಅವರ ಟೆಸ್ಟ್ ವೃತ್ತಿಜೀವನ ಇಲ್ಲಿಗೆ ಮುಗಿದಂತೆ, ಏಕೆಂದರೆ ಅವರಿಗೆ ಆಗಲೇ 33 ವರ್ಷ ವಯಸ್ಸು. ಒಂದು ವೇಳೆ 30 ವರ್ಷ ಒಳಗಡೆ ವಯಸ್ಸು ಇದ್ದಿದ್ದರೆ, ಅವರನ್ನು ಉಳಿಸಿಕೊಳ್ಳಬಹುದಾಗಿತ್ತು. ಆದರೆ ಈಗಿನ ಸನ್ನಿವೇಶದಲ್ಲಿ ಭಾರತದಲ್ಲಿ ಪ್ರತಿಭೆಗಳಿಗೆ ಕೊರತೆ ಇಲ್ಲ.

ಮತ್ತೊಂದು ಕಡೆ ಶ್ರೇಯಸ್ ಅಯ್ಯರ್, ಸರ್ಫರಾಜ್ ಖಾನ್ ಟೆಸ್ಟ್‌ಗೆ ಕಮ್‌ಬ್ಯಾಕ್ ಮಾಡುವ ಹೊಸ್ತಿಲಲ್ಲಿ ಇದ್ದಾರೆ. ಋತುರಾಜ್ ಗಾಯಕ್ವಾಡ್, ಇಶಾನ್ ಕಿಶನ್ ಅವರಂಥ ಪ್ರತಿಭೆಗಳು ಟೆಸ್ಟ್ ತಂಡದಲ್ಲಿನ ಅವಕಾಶಕ್ಕಾಗಿ ಬಕಪಕ್ಷಿಗಳಂತೆ ಕಾಯುತ್ತಿದ್ದಾರೆ. ಸನ್ನಿವೇಶ ಹೀಗಿರುವಾಗ ಹೆಡ್ ಕೋಚ್ ಗೌತಮ್ ಗಂಭೀರ್ ತಾನೇ ಏಕೆ ಕರುಣ್ ನಾಯರ್‌ಗೆ ಮತ್ತೊಂದು ಅವಕಾಶ ನೀಡುತ್ತಾರೆ ನೀವೇ ಹೇಳಿ?

ಒಂದು ವೇಳೆ ಗಂಭೀರ್ ಜಾಗದಲ್ಲಿ ರಾಹುಲ್ ದ್ರಾವಿಡ್ ಇದ್ದಿದ್ದರೆ 'ನಮ್ಮ ಹುಡುಗ' ಎಂಬ ಭಾವನೆಯಿಂದ ಮತ್ತೊಂದು ಸರಣಿಗೂ ಉಳಿಸಿಕೊಳ್ಳಲು ಮನಸು ಮಾಡುತ್ತಿದ್ದರು ಎನ್ನಬಹುದಿತ್ತು. ಆದರೆ ಗಂಭೀರ್ ಮೊದಲೇ ಪ್ರಾಯೋಗಿಕ ಮನುಷ್ಯ, 'ನೀನ್ ಇಲ್ಲಾಂದ್ರೆ ಇನ್ನೊಬ್ಬ' ಅನ್ನೋ ಮನಸ್ಥಿತಿ ಅವರದ್ದು. ಈ ಕಾರಣದಿಂದಲೇ ಅಲ್ಲವೇ ಆರ್. ಅಶ್ವಿನ್, ರೋಹಿತ್ ಶರ್ಮಾ ಹಾಗೂ ವಿರಾಟ್ ಕೊಹ್ಲಿ ಯಾವುದೇ ಸುಳಿವು ಇಲ್ಲದೆ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ್ದು!

(ಲೇಖಕರು ಪತ್ರಕರ್ತರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಇವು ಕೃಷಿಗೂ ಪೂರಕ

ದ್ವಿದಳ ಧಾನ್ಯಗಳು ಭಾರತೀಯ ಆಹಾರ ಪದ್ಧತಿಯ ಮಹತ್ವದ ಭಾಗವಾಗಿವೆ. ಪ್ರೋಟೀನ್‌ನ ಸಮೃದ್ಧ ಮೂಲವಾಗಿರುವ ಇವು, ವಿಶೇಷವಾಗಿ ಸಸ್ಯಾಹಾರಿಗಳಿಗೆ ಪೌಷ್ಟಿಕತೆಯನ್ನು ಒದಗಿಸುತ್ತವೆ. ತೊಗರಿ, ಹೆಸರು, ಕಡಲೆ, ಅವರೆ ಮುಂತಾದ ಪ್ರಮುಖ ದ್ವಿದಳ ಧಾನ್ಯಗಳಲ್ಲಿ ವಿಟಮಿನ್, ಖನಿಜಾಂಶ ಮತ್ತು ನಾರಿನ ಅಂಶಗಳು ಇದ್ದು, ದೇಹದ ಆರೋಗ್ಯವನ್ನು ಕಾಪಿಡುವಲ್ಲಿ ಇವು ಮಹತ್ವದ ಪಾತ್ರವನ್ನು ವಹಿಸುತ್ತವೆ.

ಇಂಥ ಧಾನ್ಯಗಳು ಕೃಷಿ ವಲಯಕ್ಕೂ ತಮ್ಮದೇ ಆದ ರೀತಿಯಲ್ಲಿ ಕೊಡುಗೆಯನ್ನು ನೀಡುತ್ತವೆ. ಇವು ಮಣ್ಣಿನಲ್ಲಿನ ನೈಟ್ರೋಜೆನ್ ಪ್ರಮಾಣವನ್ನು ಹೆಚ್ಚಿಸುವ ಮೂಲಕ ಮಣ್ಣಿನ ಫಲವತ್ತತೆಯನ್ನು ಸುಧಾರಿಸುತ್ತವೆ. ಇವಕ್ಕೆ ನೀರಿನ ಅಗತ್ಯ ಕಡಿಮೆಯಿರುವುದರಿಂದ ಶುಷ್ಕ ಮಣ್ಣಿನ ಪ್ರದೇಶದಲ್ಲೂ ಈ ಧಾನ್ಯಗಳನ್ನು ಸುಲಭವಾಗಿ ಬೆಳೆಯಬಹುದು. ದ್ವಿದಳ ಧಾನ್ಯದ ಸಸ್ಯಗಳು ಅತಿವೃಷ್ಟಿ ಅಥವಾ ಅನಾವೃಷ್ಟಿಯಂಥ ವಾತಾವರಣವನ್ನೂ ತಾಳಿಕೊಳ್ಳಬಲ್ಲ ಶಕ್ತಿಯನ್ನು ಹೊಂದಿವೆ. ಕಡಿಮೆ ಬಂಡವಾಳದಲ್ಲಿ ಹೆಚ್ಚು ಲಾಭ ನೀಡುವ ಈ ಬೆಳೆಗಳು ರೈತರಿಗೆ ಆರ್ಥಿಕವಾಗಿ ಪ್ರಯೋಜನಕಾರಿಯಾಗಿರುವುದರ ಜತೆಗೆ, ಪರಿಸರ ರಕ್ಷಣೆಯ ವಿಷಯದಲ್ಲೂ ದಾರಿ ತೋರುತ್ತವೆ. ಆದ್ದರಿಂದ, ದ್ವಿದಳ ಧಾನ್ಯ ಬೆಳೆಗಳ ಬಗ್ಗೆ ರೈತರಿಗೆ ಹೆಚ್ಚೆಚ್ಚು ಮಾಹಿತಿ ನೀಡುವ ನಿಟ್ಟಿನಲ್ಲಿ ಸರಕಾರಗಳು, ಕೃಷಿ ಇಲಾಖೆ ಮತ್ತು ಸಂಶೋಧನಾ ಸಂಸ್ಥೆಗಳು ಗಮನ ಹರಿಸಬೇಕು. ಗುಣಮಟ್ಟದ ಬೀಜದ ವಿತರಣೆಯಿಂದ ಮೊದಲ್ಗೊಂಡು, ಸಸ್ಯಗಳ ಉಪಚಾರ, ಕಟಾವು, ಸಂಗ್ರಹಣೆ ಮತ್ತು ಮಾರುಕಟ್ಟೆ ಸೌಲಭ್ಯಗಳವರೆಗಿನ ವಿವಿಧ ಹಂತದ ಚಟುವಟಿಕೆಗಳ ಕುರಿತು ಅವು ಕೃಷಿಕರನ್ನು ಮಾಹಿತಿವಂತರನ್ನಾಗಿಸಬೇಕು.

- ಡಾ.ವಿಜಯಕುಮಾರ್ ಎಚ್.ಕೆ., ರಾಯಚೂರು

ಅವಗಣನೆ ಏಕೆ?

ಕರ್ನಾಟಕದ ಎರಡು ಸುಪ್ರಸಿದ್ಧ ದೇವಾಲಯಗಳಿಗೆ ಇತ್ತೀಚೆಗೆ ಅಂತರ್ಜಾಲದ ಮುಖಾಂತರ ನಮ್ಮ ಯಥಾಶಕ್ತಿ ಕಾಣಿಕೆಯನ್ನು ಕಳುಹಿಸಿದೆವು. ಅದಕ್ಕೆ ಸಂಬಂಧಿಸಿದ ಸ್ವೀಕೃತಿ ರಸೀದಿಯೂ ಒಡನೆಯೇ ಬಂದಿತು. ಆದರೆ ಆ ಎರಡೂ ರಸೀದಿಗಳು ಸಂಪೂರ್ಣ ಆಂಗ್ಲಮಯವಾಗಿದ್ದುದು ಕಂಡು ಕೊಂಚ ಬೇಸರವಾಯಿತು. ರಸೀದಿಯನ್ನು ಕನ್ನಡ ಭಾಷೆಯಲ್ಲಿ ನೀಡುವುದಕ್ಕೆ ಇರುವ ಅಡ್ಡಿಯಾದರೂ ಏನು? ಪರರಾಜ್ಯಗಳು ಮತ್ತು ಹೊರದೇಶಗಳಿಂದಲೂ ಬರುವ ದೇಣಿಗೆ/ಕಾಣಿಕೆಗಳನ್ನು ಗಮನದಲ್ಲಿಟ್ಟುಕೊಂಡು ಈ ವ್ಯವಸ್ಥೆಯಿರಬಹುದು ಎಂಬುದನ್ನು ಒಪ್ಪೋಣ. ಆದರೆ ಕನ್ನಡ ಮತ್ತು ಆಂಗ್ಲ ಎರಡೂ ಭಾಷೆಗಳು ಅಡಕವಾಗಿರುವ ರೀತಿಯಲ್ಲಿ ರಸೀದಿ ಮಾದರಿಯನ್ನು ಸಿದ್ಧಪಡಿಸಲು ಸಾಧ್ಯವಿದೆಯಲ್ಲವೇ? ಇದು ಕಾಗದರಹಿತ ರಸೀದಿ ಆಗಿರುವುದರಿಂದ ನಷ್ಟವೇನೂ ಆಗುವುದಿಲ್ಲ. ಇನ್ನು ಮುಂದಾದರೂ ಕರ್ನಾಟಕದ ಎಲ್ಲ ದೇಗುಲಗಳು ಮತ್ತು ದೇಣಿಗೆ ಪಡೆವ ಸಂಘ-ಸಂಸ್ಥೆಗಳು ಕನ್ನಡದಲ್ಲೇ ರಸೀದಿ ನೀಡಲಿ. ಈ ಕುರಿತು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಗಮನಹರಿಸುವಂತಾಗಲಿ.

- ಪತ್ತಂಗಿ ಎಸ್.ಮುರಳಿ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಬಿ.ಮು.ಮಾರುತಿ, ಬೆಂಗಳೂರು**
ಭಟ್ರೇ, ಪ್ರಜ್ವಲ್ ಜೀವಮಾನ ಜೈಲುಶಿಕ್ಷೆ ತಡೆಯೋದಕ್ಕೆ ರೇವಣ್ಣ ನಿಂಬೆಹಣ್ಣು ಪ್ರಯೋಗ ಮಾಡಬಹುದಿತ್ತಲ್ವೇ?
- **ತೀರ್ಪು ನೋಡಿದ್ಮೇಲೆ, ಕುಂಬಳಕಾಯಿ ಕೊಟ್ರೂ ಪ್ರಯೋಜನ ಆಗ್ತಿರಲಿಲ್ಲ!**

- **ರೂಪ, ಡಾಲರ್ಸ್ ಕಾಲನಿ**
ಭಟ್ರೇ, ನನ್ನ ಬಡಾವಣೆಯ ಜನರು ನನ್ನನ್ನು ಒಂದು ದಿನದ ಮಟ್ಟಿಗೆ ನೋಡದಿದ್ದರೂ ಮಾತಾಡುವ ಸಾರಾಸಗಟು ಆಹಾರವೇ?
- **ನೀವು ಈಚೀಚೆಗೆ ತುಂಬ ಅಪ'ರೂಪ' ಆಗಿಬಿಟ್ಟಿದ್ದೀರಿ!**

- **ರುಕ್ಕು, ಚಾಮರಾಜಪೇಟೆ**
ಭಟ್ರೇ, ನನ್ನನ್ನು ನೋಡಿದ ಜನರ ಕಣ್ಣಿಗೆ ತಾಯಿಯ ಭಾವನೆ ಬರಬೇಕಾದರೆ ಏನು ಬದಲಾವಣೆ ಮಾಡ್ಕೋಬೇಕು?
- **'ರುಕ್ಮ' ಅಂತ ಹೆಸರು ಬದಲಿಸಿಕೊಳ್ಳಿ!**

- **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, ಎಲ್ಲವೂ ನಾನು ಅಂದುಕೊಂಡಂತೆ ನಡೆದರೆ ಆ ಹುಡುಗಿ ಕೊರಳಿಗೆ ಮಾಂಗಲ್ಯ ಬಂಧನ ನಿಶ್ಚಿತ. ಸ್ವಲ್ಪ ಯಾಮಾರಿದರೆ?
- **ರಕ್ಷಾ ಬಂಧನ!**

- **ಎಂ.ಕೆ.ಶ್ರೀನಿವಾಸ, ಜಯನಗರ 4ನೇ ಬ್ಲಾಕ್**
ಭಟ್ರೇ, ಪ್ರಜ್ವಲ್ ರೇವಣ್ಣಗೆ ಭವಿಷ್ಯವಿದೆ ಅಂತೀರಾ?
- **ನಾಳೆ ಚುನಾವಣೆಗೆ ನಿಂತರೆ ಅನುಕಂಪದ ಅಲೆಯಲ್ಲಿ ಆರಿಸಿ ಬರುವ ಅಪಾಯವಿದೆ!**

- **ಇಂದಿರಾ ರಾಮಣ್ಣ, ವರ್ತೂರು**
ಭಟ್ರೇ, ಪ್ರೀತಿಗೆ ಬೀಳದವರು ಯಾರಾದರೂ ಇದ್ದಾರಾ?
- **ಪ್ರೀತಿಯಲ್ಲಿ ಎದ್ದವರ ಬಗ್ಗೆ ಮಾತ್ರ ಆಸ್ತೆ!**

- **ಭರತ್, ಕೋರಮಂಗಲ**
ಭಟ್ರೇ, ತನಿಖಾ ಪತ್ರಕರ್ತ ಆಗಬೇಕು ಅಂದ್ರೆ ಏನು ಮಾಡಬೇಕು?
- **ಧರ್ಮಸ್ಥಳದ ಹೂತಿಟ್ಟ ಶವ ಪ್ರಕರಣದ ಬಗ್ಗೆ ಏನೇ ಮಾತಾಡಿದರೂ ಆದೀತು!**

ದೇಶದ ಏಕತೆ ವಿಷಯದಲ್ಲಿ ಒಡಕು ಧ್ವನಿ ಬೇಡ

ಲೋಕಮತ

ಲೋಕೇಶ್ ಕಾಯರ್ಗ
vveditoped@gmail.com
kaayarga@gmail.com

ಭಾರತ-ಅಮೆರಿಕ ಸಂಬಂಧದ ಇತಿಹಾಸ ತಿಳಿದಿರುವ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿಚಿತ್ರವರ್ತನೆ ಗೊತ್ತಿರುವ ಯಾರಿಗಾದರೂ, ಅವರ ಹೇಳಿಕೆ ಬಗ್ಗೆ ಅಚ್ಚರಿ ಪಡುವಂಥದ್ದು ಏನೂ ಇಲ್ಲ. 'ಭಾರತ ಮತ್ತು ರಷ್ಯಾ ತಮ್ಮ ಸತ್ತ ಆರ್ಥಿಕತೆಗಳನ್ನು ಒಟ್ಟಿಗೆ ಹೂಳಲಿ' ಎಂಬ ಟ್ರಂಪ್ ಹೇಳಿಕೆಯಲ್ಲಿ ಎಚ್ಚರಿಕೆಗಿಂತ ಹತಾಶೆ ಎದ್ದು ಕಾಣುತ್ತಿದೆ. ಆದರೆ ಈ ಹೇಳಿಕೆಯನ್ನು ಸಮರ್ಥಿಸಲು ಮುಖ್ಯ ಪ್ರತಿಪಕ್ಷ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಅರೆಗಣಿಸಿರುವುದು ಯೋಚಿಸಬೇಕಿತ್ತು.

ಮೋದಿ ನೇತೃತ್ವದ ಬಿಜೆಪಿ ಸರಕಾರವನ್ನು ಟೀಕಿಸಲು ಪ್ರತಿಪಕ್ಷಗಳಿಗೆ, ವಿಶೇಷವಾಗಿ ರಾಹುಲ್ ಗಾಂಧಿ ಅವರಿಗೆ ನೂರು ಕಾರಣಗಳಿರಬಹುದು. ಆದರೆ ವಿದೇಶಿ ರಾಷ್ಟ್ರವೊಂದು ನಮ್ಮ ದೇಶದ ವಿರುದ್ಧ ಹೇಳಿಕೆ ನೀಡಿದಾಗ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮರೆತು, ಅವರ ನಿಶಾರಿ ಮಾತನ್ನು ಖಂಡಿಸುವುದು ಭಾರತೀಯರಾಗಿ ನಮ್ಮ ಕರ್ತವ್ಯ. ಆದರೆ ರಾಹುಲ್ ವಿಶಾಲ್, ಟ್ರಂಪ್ ಅವರ ಮಾತನ್ನು ಸಮರ್ಥಿಸಿ ಮಾತನಾಡಿರುವುದು. ರಾಹುಲ್ ಪ್ರಕರಣದಲ್ಲಿ ನೀಡಿದ ಹೇಳಿಕೆಗಳಿಗೆ ಸುಪ್ರೀಂಕೋರ್ಟ್ ಕೆಂಗಣ್ಣಿಗೆ ಗುರಿಯಾಗಿರುವ ರಾಹುಲ್, ಈ ವಿಚಾರದಲ್ಲೂ ಎಡವಿರುವುದು ಸ್ಪಷ್ಟ.

ಆಡಳಿತ ಪಕ್ಷದ ಹುಳುಕುಗಳನ್ನು ಎತ್ತಿ ತೋರಿಸುವುದು ಪ್ರತಿಪಕ್ಷದ ಕರ್ತವ್ಯ. ಆದರೆ ರಾಷ್ಟ್ರದ ಹಿತಾಸಕ್ತಿ, ಘನತೆ, ಗೌರವದ ವಿಚಾರ ಬಂದಾಗ ಆಡಳಿತ ಪಕ್ಷ-ಪ್ರತಿಪಕ್ಷ ಎಂಬ ಭೇದ ಇರುವುದಿಲ್ಲ. ಹೊರಗಿನ ವೈರಿಯನ್ನು ಎದುರಿಸುವಾಗ ಇಡೀ ದೇಶ ಒಂದಾಗಬೇಕಿರುವುದು ನಾವು ಕಲಿತ ಪಾಠ. ಸಂದರ್ಭ, ಸನ್ನಿವೇಶಗಳನ್ನು ಮರೆತು ಅವಸರದಲ್ಲಿ ಮಾತನಾಡುವ ರಾಹುಲ್ ಪದೇ ಪದೇ ಈ ಪಾಠ ಮರೆತು ಇಕ್ಕಟ್ಟಿಗೆ ಸಿಲುಕುತ್ತಿದ್ದಾರೆ.

ಟ್ರಂಪ್ ಬೂಟಾಟಿಕೆಯ ಮಾತನ್ನು ಸಮರ್ಥಿಸುವ ಭರದಲ್ಲಿ ರಾಹುಲ್, ದೇಶವಾಸಿಗಳ ಭಾವನೆ, ಅಭಿಪ್ರಾಯಗಳನ್ನು ಗಮನಿಸಿದಂತೆ ಕಾಣುತ್ತಿಲ್ಲ. ದೇಶದ ಆರ್ಥಿಕತೆ ಕುಸಿದಿದೆ ಎಂದು ಹೇಳಲು ರಾಹುಲ್‌ಗೆ ಟ್ರಂಪ್ ಹೇಳಿಕೆಯ ಅವಶ್ಯಕತೆ ಇರಲಿಲ್ಲ. ಟಿಸಿಎಸ್‌ನಂತಹ ಐಟಿ ದೈತ್ಯ ಕಂಪನಿ 12 ಸಾವಿರಕ್ಕೂ ಹೆಚ್ಚು ಉದ್ಯೋಗಿಗಳನ್ನು ಮನೆಗೆ ಕಳುಹಿಸಲು ಮುಂದಾಗಿರುವುದನ್ನು ರಾಹುಲ್ ಉಲ್ಲೇಖಿಸಬಹುದಿತ್ತು. ಚೀನಾದ ಅಗ್ಗದ ಉತ್ಪನ್ನಗಳ ಮುಂದೆ ಸ್ಪರ್ಧಿಸಲಾರದೆ ಬಾಗಿಲು ಮುಚ್ಚಿದ ಸಾವಿರಾರು ಸಣ್ಣ ಕೈಗಾರಿಕೆಗಳ ಉದಾಹರಣೆಯನ್ನು ನೀಡಬಹುದಿತ್ತು.

'ಮೋದಿ ಮತ್ತು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಬಿಟ್ಟು ಭಾರತದ ಆರ್ಥಿಕತೆ ನಿರ್ಜೀವವಾಗಿರುವುದು ಇಡೀ ಜಗತ್ತಿಗೆ ಗೊತ್ತು' ಎಂದು ಹೇಳಿಕೆ ನೀಡುವ ಮುನ್ನ ಅಮೆರಿಕ ಅಧ್ಯಕ್ಷರ ಘನತೆಗೆ ತಕ್ಕುದಲ್ಲದ ಬೆದರಿಕೆ ಮತ್ತು ಮೂದಲಿಕೆಯ ಮಾತುಗಳನ್ನು ರಾಹುಲ್ ಖಂಡಿಸಬೇಕಿತ್ತು. ಈ ನಿಟ್ಟಿನಲ್ಲಿ ಮಾಜಿ ಪ್ರಧಾನಿ ದೇವೇಗೌಡರ ನಡೆಯನ್ನು ಅನುಸರಿಸಿದ್ದರೆ, ಇಡೀ ದೇಶ ಒಂದಾಗಿದೆ ಎಂಬ ಸ್ಪಷ್ಟ ಸಂದೇಶವನ್ನು ರವಾನಿಸಬಹುದಿತ್ತು.

ಅತ್ಯಾಚಾರ ಪ್ರಕರಣದಲ್ಲಿ ಮೊಮ್ಮಗ ಪ್ರಜ್ವಲ್‌ಗೆ ಜೀವಾವಧಿ ಸಜೆಯಾದ ಸಂದರ್ಭದಲ್ಲೂ ಮಾಜಿ ಪ್ರಧಾನಿ ದೇವೇಗೌಡರು ಟ್ರಂಪ್ ಹೇಳಿಕೆಯನ್ನು ಖಂಡಿಸಿ ಪತ್ರ ಬರೆಯುವ ವಿವೇಚನೆ ಪ್ರದರ್ಶಿಸಿದ್ದರು. ವಿಶ್ವದ ಮೂರನೇ ಅತಿ ದೊಡ್ಡ ಆರ್ಥಿಕ ರಾಷ್ಟ್ರವಾಗುವತ್ತ ಮುನ್ನಡೆದಿರುವ ಭಾರತದ ಪ್ರಗತಿಯನ್ನು ಕಾಣಲಾರದಷ್ಟು ಟ್ರಂಪ್ ಕುರುಡಾಗಿದ್ದಾರೆಯೇ ಎಂದು ದೇವೇಗೌಡರು ಕಟು ಶಬ್ದಗಳಲ್ಲಿ ಅಮೆರಿಕದ ಅಧ್ಯಕ್ಷರ ನಡೆಯನ್ನು ಖಂಡಿಸಿದ್ದರು.

ಇಷ್ಟಕ್ಕೂ ಟ್ರಂಪ್ ಭಾರತ ಮಾತ್ರವಲ್ಲ, ವಿಶ್ವದ ಶೇ. 90ಕ್ಕಿಂತ ಹೆಚ್ಚು ದೇಶಗಳ ಮೇಲೆ ಸುಂಕ ವಿಧಿಸಲು ಮುಂದಾಗಿದ್ದಾರೆ. ಇದರಲ್ಲಿ ಹೆಸರೇ ಕೇಳದ ಕೆಲವು ದ್ವೀಪರಾಷ್ಟ್ರಗಳೂ ಸೇರಿವೆ. 'ಭಾರತ ಮಿತ್ರ ರಾಷ್ಟ್ರ, ಮೋದಿ ಆತ್ಮೀಯ ಸ್ನೇಹಿತ' ಎಂದು ಹೇಳುತ್ತಲೇ ಬಂದ ಟ್ರಂಪ್ ಅವರಿಗೆ ಅವರ ರಾಷ್ಟ್ರದ ಹಿತಾಸಕ್ತಿ ಮುಖ್ಯ. ನಮಗೆ ನಮ್ಮ ದೇಶದ ಹಿತಾಸಕ್ತಿ ಮುಖ್ಯ. ಯಾವುದೇ ರಾಷ್ಟ್ರದ ವಿದೇಶಾಂಗ ನೀತಿಯ ಬುನಾದಿ ರಾಷ್ಟ್ರೀಯ ಹಿತಾಸಕ್ತಿ. ಆದರೆ ಟ್ರಂಪ್ ಈಗ ಕೈಗೊಳ್ಳುತ್ತಿರುವ ಕ್ರಮಗಳು ಅತಿರೇಕದ್ದು. ಅವರಾಡುತ್ತಿರುವ ಮಾತುಗಳು ಯಾವುದೇ ದೇಶದ ಮುಖ್ಯಸ್ಥರಿಗೆ ಶೋಭೆ ಯಲ್ಲ.

ಟ್ರಂಪ್ ಅಧಿಕಾರಕ್ಕೆ ಬಂದ ಬಳಿಕ ಭಾರತ ಮಾತ್ರವಲ್ಲ ನೆರೆಯ ಕೆನಡಾ, ಐರೋಪ್ಯ ಒಕ್ಕೂಟದ ಮಿತ್ರ ರಾಷ್ಟ್ರಗಳು, ಬ್ರೆಜಿಲ್, ಇಸ್ರೇಲ್ ಸೇರಿದಂತೆ ಹಲವು ರಾಷ್ಟ್ರಗಳ ಮೇಲೆ ಬಾಯಿಗೆ ಬಂದಂತೆ ಮಾತನಾಡಿದ್ದಾರೆ. ನೆರೆ ರಾಷ್ಟ್ರ ಕೆನಡಾ ಅಮೆರಿಕದ ಭಾಗ ಎಂದು ಟ್ರಂಪ್ ಅಬ್ಬರಿಸಿದ್ದರು. ಮೂರೇ ತಿಂಗಳಲ್ಲಿ ರಷ್ಯಾ- ಉಕ್ರೇನ್ ಯುದ್ಧ ನಿಲ್ಲಿಸುವುದಾಗಿ ಹೇಳಿದ್ದರು. ಆದರೆ ಯಾವುದೂ ಟ್ರಂಪ್ ಎಣಿಕೆಯಂತೆ ನಡೆದಿಲ್ಲ. ಚೀನಾದ ವಿರುದ್ಧ ಶೇ. 100ರ ಮೇಲಿನ ತೆರಿಗೆ ವಿಧಿಸಿ ಟ್ರಂಪ್, ಕೆಲವೇ ದಿನಗಳಲ್ಲಿ ಆ ರಾಷ್ಟ್ರದ ಜತೆ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

ಭಾರತದ ಮೇಲೆ ಟ್ರಂಪ್ ಮುನಿಸಿಗೆ ರಷ್ಯಾದೊಂದಿಗಿನ ಸ್ನೇಹ ಸಂಬಂಧ ಒಂದೇ ಕಾರಣವಲ್ಲ. ಭಾರತವು ಅಮೆರಿಕ ಮತ್ತು ಚೀನಾ ಬಳಿಕ ಮೂರನೇ ಅತಿ ದೊಡ್ಡ ಆರ್ಥಿಕ ರಾಷ್ಟ್ರವಾಗಿ ಹೊರ ಹೊಮ್ಮುವುದು ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳ ಕಣ್ಣು ಕುಕ್ಕುತ್ತಿದೆ. ಈ ಕಾರಣಕ್ಕಾಗಿಯೇ ನ್ಯಾಟೋ ರಾಷ್ಟ್ರಗಳನ್ನೂ ಟ್ರಂಪ್ ಭಾರತದ ಮೇಲೆ ಛೂ ಬಿಡುತ್ತಿದ್ದಾರೆ. ಪಾಕಿಸ್ತಾನವನ್ನು ಮತ್ತೆ, ಮತ್ತೆ ಓಲೈಸುತ್ತಿದ್ದಾರೆ. ಹೊಸ ವಲಸೆ ನೀತಿಯ ನೆಪದಲ್ಲಿ ಭಾರತೀಯ ವಿದ್ಯಾರ್ಥಿಗಳ ವೀಸಾ ಪ್ರಮಾಣವನ್ನು ಕಡಿತಗೊಳಿಸಿದ್ದಾರೆ.

ವ್ಯಾಪಾರ ಸ್ಥಗಿತದ ಬೆದರಿಕೆ ಹಾಕಿ ಭಾರತ-ಪಾಕ್ ಯುದ್ಧ ನಿಲ್ಲಿಸಿದ್ದು ನಾನೇ ಎಂದು ಟ್ರಂಪ್ ಪದೇ ಪದೇ ಹೇಳುತ್ತಿದ್ದಾರೆ. 'ಮಿತ್ರರಾಷ್ಟ್ರ' ಭಾರತ ಮತ್ತು 'ಸ್ನೇಹಿತ' ಮೋದಿಗೆ ಮುಜುಗರ ಉಂಟು ಮಾಡುವುದು ಬಿಟ್ಟರೆ ಇದರ ಹಿಂದೆ ಬೇರೆ ಯಾವ ಕಾರಣಗಳೂ ಕಾಣಿಸುತ್ತಿಲ್ಲ. ಪಹಲ್ಗಾಮ್ ದಾಳಿಯ ಹಿಂದಿರುವ ಪಾಕಿಸ್ತಾನದ ಸೇನಾ ಮುಖ್ಯಸ್ಥನನ್ನು ಅಮೆರಿಕಕ್ಕೆ ಕರೆಸಿಕೊಂಡು ಔತಣ ನೀಡಿರುವ ಹಿಂದೆಯೂ ಭಾರತವನ್ನು ಕೆಣಕುವ ಉದ್ದೇಶವಷ್ಟೇ ಕಾಣುತ್ತಿದೆ.

ಅಮೆರಿಕದ ಅಧ್ಯಕ್ಷರ ಹತಾಶೆಯ ಕ್ರಮಗಳಿಗೆ ಭಾರತದ ಬದಲಾದ ವಿದೇಶಾಂಗ ನೀತಿಯೂ ಪ್ರಮುಖ ಕಾರಣ. 2016ರ ಉರಿ ಸರ್ಜಿಕಲ್ ಸ್ಟ್ರೈಕ್, 2019ರ ಬಾಲಕೋಟ್ ಏರ್ ಸ್ಟ್ರೈಕ್ ಮತ್ತು ಇತ್ತೀಚಿನ ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಬಳಿಕ ಭಾರತ, ಮೃದು ರಾಷ್ಟ್ರವೆಂಬ ತನ್ನ ಹಣೆಪಟ್ಟಿ ಕಳಚಿಕೊಂಡಿದೆ. ಪಾಕಿಸ್ತಾನ ಸೇರಿದಂತೆ ಯಾವುದೇ ವೈರಿ ರಾಷ್ಟ್ರದ ದಾಳಿ ಎದುರಿಸಲು ಮಾತ್ರವಲ್ಲ, ಸಂದರ್ಭ ಬಂದಾಗ ಮುನ್ನುಗ್ಗಿ ದಾಳಿ ನಡೆಸಲು ಭಾರತ ಸಿದ್ಧವಿದೆ ಎಂಬ ಸಂದೇಶ ಇಡೀ ಜಗತ್ತಿಗೆ ರವಾನೆಯಾಗಿದೆ. ಅಮೆರಿಕ ಮತ್ತು ರಷ್ಯಾದಿಂದ ಸಮಾನ ಅಂತರ ಕಾಯ್ದುಕೊಳ್ಳಲು ಬಯಸುವ ರಾಷ್ಟ್ರಗಳು ಈಗ ಭಾರತದತ್ತ ನೋಡುತ್ತಿವೆ.

ಇತ್ತೀಚಿನ ದಿನಗಳಲ್ಲಿ ಭಾರತವು ಆಸಿಯಾನ್ ಸೇರಿದಂತೆ ಹಲವು ರಾಷ್ಟ್ರಗಳ ಒಕ್ಕೂಟದ ಜತೆ ವ್ಯಾಪಾರ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕುತ್ತಿವೆ. ಅದರಲ್ಲೂ ಭಾರತ, ರಷ್ಯಾ, ಚೀನಾ, ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾ ದೇಶಗಳ ಬ್ರಿಕ್ಸ್ ಸಂಘಟನೆಯ ಹೊಸ ವ್ಯಾಪಾರ ವಹಿವಾಟು ಒಪ್ಪಂದ ಅಮೆರಿಕದ ಕಣ್ಣು ಕುಕ್ಕಿದೆ. ಇತ್ತೀಚೆಗೆ ಈಜಿಪ್ಟ್, ಇಥಿಯೋಪಿಯಾ, ಇರಾನ್, ಸೌದಿ ಅರೇಬಿಯಾ, ಯುಎಇ ಮತ್ತು ಇಂಡೋನೇಷ್ಯಾ ಕೂಡ ಈ ಸಂಘಟನೆ ಸೇರಿಕೊಂಡಿವೆ.

ಪಾಶ್ಚಿಮಾತ್ಯ ದೇಶಗಳ ಪ್ರಭಾವವನ್ನು ಕಡಿಮೆ ಮಾಡಿ, ಅಭಿವೃದ್ಧಿಶೀಲ ರಾಷ್ಟ್ರಗಳ ಧ್ವನಿಗೆ ಹೆಚ್ಚು ಪ್ರಾಮುಖ್ಯತೆ ನೀಡುವ ಬ್ರಿಕ್ಸ್‌ನ ಉದ್ದೇಶವೇ ಟ್ರಂಪ್ ಆಕ್ರೋಶಕ್ಕೆ ಮುಖ್ಯ ಕಾರಣ. ಇದನ್ನು ಸ್ವತಃ ಟ್ರಂಪ್ ಹೇಳಿಕೊಂಡಿದ್ದಾರೆ. ವಿಶ್ವಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್)ಗೆ ಪರ್ಯಾಯವಾಗಿ ನ್ಯೂ ಡೆವಲಪ್‌ಮೆಂಟ್ ಬ್ಯಾಂಕ್ ಸ್ಥಾಪಿಸಿರುವ ಬ್ರಿಕ್ಸ್ ನೇರವಾಗಿ ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳಿಗೆ ಸಡ್ಡು ಹೊಡೆಯಲು ಮುಂದಾಗಿದೆ.

ಬ್ರಿಕ್ಸ್ ಸಭೆಯ ಬಳಿಕ ಚೀನಾದೊಂದಿಗೂ ಭಾರತದ ಸಂಬಂಧ ಸುಧಾರಣೆ ಕಂಡಿದೆ. ಡ್ರ್ಯಾಗನ್ ರಾಷ್ಟ್ರ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡಿ, ತನ್ನ ಯುದ್ಧೋಪಕರಣಗಳ ಪ್ರಾಯೋಗಿಕ ಪರೀಕ್ಷೆ ಮಾಡಿದರೂ ಆಪರೇಷನ್ ಸಿಂದೂರ ಕಾರ್ಯಾಚರಣೆ ವೇಳೆ ಭಾರತದ ವಿರುದ್ಧ ಯಾವುದೇ ಖಂಡನಾ ಹೇಳಿಕೆ ನೀಡಿರಲಿಲ್ಲ. ಅಮೆರಿಕವು ಮುಂದೊಂದು ದಿನ ಪಾಕಿಸ್ತಾನವನ್ನು ತನ್ನ ಸೇನಾ ನೆಲೆಯಾಗಿ ಬಳಸಿಕೊಂಡರೆ ಚೀನಾಗೆ ಬೆದರಿಕೆಯಿರುವುದು ಖಚಿತ.

ಭಾರತ ಮಾತ್ರವಲ್ಲ ಜಗತ್ತಿನ ಯಾವುದೇ ರಾಷ್ಟ್ರವೂ ಅಮೆರಿಕ ನಂಬಿಕಸ್ಥ ರಾಷ್ಟ್ರ ಎಂದು ಭಾವಿಸುವುದಿಲ್ಲ. ಆದರೆ ಜಗತ್ತಿನ ಅತಿ ಪ್ರಬಲ ರಾಷ್ಟ್ರ ಎಂಬ ಕಾರಣಕ್ಕೆ ಪ್ರತಿಯೊಂದು ದೇಶವೂ 'ದೊಡ್ಡಣ್ಣನ' ಸ್ನೇಹ ಸಂಬಂಧವನ್ನು ಬಯಸುತ್ತವೆ. ಭಾರತವೂ ಇದಕ್ಕೆ ಹೊರತಲ್ಲ. ಸದ್ಯದ ಕಾಲಘಟ್ಟದಲ್ಲಿ ಅಮೆರಿಕ ನಮಗೆ ಎಷ್ಟು ಅಗತ್ಯವೋ, ಅಮೆರಿಕಕ್ಕೆ ನಮ್ಮ ಅವಶ್ಯಕತೆಯೂ ಅಷ್ಟೇ ಇದೆ. ಅಮೆರಿಕದ ಜನಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯ ಮಧ್ಯಮ ವರ್ಗ ಭಾರತದಲ್ಲಿದೆ. ಇವರಲ್ಲಿ ಹೆಚ್ಚಿನವರು ಅಮೆರಿಕನ್ ಕಂಪನಿಗಳ ಉತ್ಪನ್ನಗಳಿಗೆ ಗ್ರಾಹಕರು. ಭಾರತವನ್ನು ದೂರವಿಡುವುದೆಂದರೆ ಅಮೆರಿಕ ಈ ಗ್ರಾಹಕರನ್ನೂ ದೂರವಿಟ್ಟಂತೆ. ಅಮೆರಿಕ ತನ್ನ ವಾಣಿಜ್ಯ ಹಿತಾಸಕ್ತಿಗಳಿಗೆ ಧಕ್ಕೆ ತಂದುಕೊಂಡ ಇತಿಹಾಸವೇ ಇಲ್ಲ.

ಎರಡೂ ರಾಷ್ಟ್ರಗಳ ಸಂಬಂಧ ಈಗ ರಾಜತಾಂತ್ರಿಕತೆಗೆ ಸೀಮಿತವಾಗಿಲ್ಲ. ಅಮೆರಿಕದ ಜನಸಂಖ್ಯೆಯಲ್ಲಿ, ಅಲ್ಲಿನ ಆಡಳಿತದಲ್ಲಿ, ನಾಸಾದಂತಹ ಸಂಶೋಧನಾ ಸಂಸ್ಥೆಗಳಲ್ಲಿ, ಗೂಗಲ್, ಮೈಕ್ರೊಸಾಫ್ಟ್‌ನಂತಹ ಐಟಿ ದಿಗ್ಗಜ ಕಂಪನಿಗಳಲ್ಲಿ ಭಾರತೀಯರು ನಿರ್ಣಾಯಕ ಸ್ಥಾನದಲ್ಲಿದ್ದಾರೆ. ಟ್ರಂಪ್ ಭಾರತವನ್ನು ದೂರವಿಡಬಹುದು. ಆದರೆ ಭಾರತೀಯರನ್ನು ದೂರವಿಡಲು ಸಾಧ್ಯವಿಲ್ಲ. ಈ ಹಿಂದೆ ಅಮೆರಿಕವು ಭಾರತಕ್ಕೆ ಕ್ರಯೋಜನಿಕ್ ತಂತ್ರಜ್ಞಾನ ನಿರಾಕರಿಸಿ ಉಪಗ್ರಹ ತಂತ್ರಜ್ಞಾನವನ್ನು ತಡೆಯುವ ಪ್ರಯತ್ನ ನಡೆಸಿತ್ತು. ಅದೇ ರಾಷ್ಟ್ರ ಇಂದು ಉಪಗ್ರಹಗಳನ್ನು ಹಾರಿಸಲು ಇಸ್ರೋ ಜತೆ ಪಾಲುದಾರಿಕೆ ಹೊಂದಿದೆ.

ರಾಜಕೀಯ ನಿರ್ಧಾರಗಳು ಏನೇ ಇರಲಿ ನಿರ್ಬಂಧಗಳ ಮೂಲಕ ಭಾರತವನ್ನು ಕಟ್ಟಿ ಹಾಕಲು ಸಾಧ್ಯವಿಲ್ಲ ಎನ್ನುವುದು ಟ್ರಂಪ್‌ಗೂ ಗೊತ್ತು. ಇದೀಗ ಆಸ್ಟ್ರೇಲಿಯಾದ ಆಟಗಾರರಂತೆ ನಿಂದನೀಯ ಭಾಷೆ ಬಳಸಿ ಭಾರತದ ತಾಳ್ಮೆಯನ್ನು ಕೆಣಕುವ ಪ್ರಯತ್ನ ಮಾಡುತ್ತಿದ್ದಾರೆ. ನಮ್ಮ ರಾಜಕೀಯ ನಾಯಕರು ಟ್ರಂಪ್ ದಾಳಕ್ಕೆ ಸಿಲುಕದೆ, ಪಕ್ಷ ಭೇದ ಮರೆತು ಬಿಕ್ಕಟ್ಟಿನ ವಿರುದ್ಧ ಸೆಟೆದು ನಿಲ್ಲಬೇಕು. ಯಾವುದೇ ರಾಷ್ಟ್ರದ ಮೇಲೆ ಯುದ್ಧ ಸಾರಲು ಶಸ್ತ್ರಾಸ್ತ್ರವೇ ಬೇಕಾಗಿಲ್ಲ. ಟ್ರಂಪ್ ಈಗ ಸುಂಕ ಹೇರುವ ಮೂಲಕ ಭಾರತದ ಮೇಲೆ ಸಮರ ಸಾರಿದ್ದಾರೆ. ನಾವು ಇದನ್ನು ಸಮರ್ಥವಾಗಿ ಬಳಸಿಕೊಂಡು ಪ್ರಗತಿಯ ಹೊಸ ಮಾರ್ಗ ಕಂಡುಕೊಳ್ಳಬೇಕು. ಇಲ್ಲಿನ ಪ್ರತಿಭೆಗಳ ವಿದೇಶ ಪಲಾಯನವನ್ನು ತಡೆದು ದೇಶದ ಅಭಿವೃದ್ಧಿಯಲ್ಲಿ ಬಳಸಿಕೊಳ್ಳಬೇಕು. ಪ್ರತಿಪಕ್ಷ ನಾಯಕನಾಗಿ ರಾಹುಲ್ ಗಾಂಧಿ ಈ ದಿಶೆಯಲ್ಲಿ ಕೈ ಜೋಡಿಸಬೇಕು. ವಿರೋಧ ಪಕ್ಷ ಎಂದಾಕ್ಷಣ ಎಲ್ಲವನ್ನೂ ವಿರೋಧಿಸಬೇಕಿಲ್ಲ. ರಚನಾತ್ಮಕ ಸಲಹೆಗಳ ಮೂಲಕವೂ ಪ್ರತಿಪಕ್ಷದ ಕೆಲಸ ಮಾಡಬಹುದು.

ಅಭಿಮತ

ಎಚ್.ಆರ್. ಶ್ರೀಪಾದ ಭಾಗಿ

ಏಕಿಂಥ ಮನಸ್ಥಿತಿ?

ಎರಡನೇ ಬಾರಿಗೆ ಅಧಿಕಾರಕ್ಕೆ ಬಂದ ನಂತರದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನಡೆ-ನುಡಿಯನ್ನು ನೋಡಿದರೆ, 7 ಶತಮಾನಗಳ ಹಿಂದೆ ದೆಹಲಿಯ ಸುಲ್ತಾನನಾಗಿದ್ದ ಮುಹಮ್ಮದ್ ಬಿನ್ ತುಘಲಕ್ ಎಂಬ ಹುಚ್ಚುರಾಜನ ನೆನಪು ಪದೇಪದೆ ಬರುತ್ತದೆ. ಟ್ರಂಪ್ ತಮ್ಮ ದೇಶವನ್ನು ಉದ್ಧಾರ ಮಾಡುವ ಹುಮ್ಮಸ್ಸಿನೊಂದಿಗೆ ದಿನಕ್ಕೊಂದು ನಿರ್ಧಾರವನ್ನು ಪ್ರಕಟಿಸುತ್ತಿದ್ದಾರೆ. ಪ್ರಪಂಚದಲ್ಲಿ ತಾವು ಮತ್ತು ತಮ್ಮ ದೇಶ ಮಾತ್ರವೇ ಸರಿ, ಮಿಕ್ಕವರೆಲ್ಲರೂ ಮುಠ್ಠಾಳರು. ಈ ಮಿಕ್ಕವರು ತಮ್ಮ ಆದೇಶವನ್ನು ಪಾಲಿಸಬೇಕು ಎಂಬ ಹುಂಬತನವನ್ನು ತೋರುತ್ತಿದ್ದಾರೆ. ಪ್ರಪಂಚದಲ್ಲಿ ಯಾವ ದೇಶಗಳ ನಡುವೆ ಸಮರ ಶುರುವಾದರೂ, ತಾವೊಬ್ಬರೇ ಪಂಚಾಯ್ತಿದಾರರು ಎಂಬ ಸ್ವಘೋಷಿತ ಹಣೆಪಟ್ಟಿಯನ್ನು ಕಟ್ಟಿಕೊಂಡಿದ್ದಾರೆ ಟ್ರಂಪ್!

ಟ್ರಂಪ್ ತಾವು 'ವಿಶ್ವನಾಯಕ' ಎನಿಸಿಕೊಳ್ಳಬೇಕೆಂಬ ಹುಕಿಯಲ್ಲಿ ಹೀಗೆಲ್ಲಾ ವಿಚಿತ್ರವಾಗಿ ವರ್ತಿಸುತ್ತಿರಬಹುದು. ಆದರೆ, ಭಾರತವೆಂಬ ಪ್ರಪಂಚದ ಅತಿದೊಡ್ಡ ಪ್ರಜಾಪ್ರಭುತ್ವ ದೇಶದ ಪ್ರಮುಖ ರಾಜಕೀಯ ಪಕ್ಷವೊಂದರ ನಾಯಕರೂ, ಲೋಕಸಭೆಯಲ್ಲಿ ಪ್ರತಿಪಕ್ಷ ನಾಯಕರೂ ಆಗಿರುವ ರಾಹುಲ್ ಗಾಂಧಿಯವರಿಗೆ ಏನಾಗಿದೆ? ದೇಶದ ಒಳಿತಿಗಾಗಿ, ಜನರ ಸುರಕ್ಷತೆಗಾಗಿ ಕೇಂದ್ರ ಸರಕಾರ ಮತ್ತು ಭಾರತದ ಸುರಕ್ಷಾ ಪಡೆಗಳು ಏನು ಮಾಡಿದರೂ ಅದನ್ನು ವಿರೋಧಿಸುವುದನ್ನೇ ತಮ್ಮ ಕಸುಬಾಗಿಸಿಕೊಂಡಿರುವ ರಾಹುಲ್, ಮಾಧ್ಯಮಗಳೊಂದಿಗೆ ಮಾತಾಡುವಾಗ ಮತ್ತು ಪರದೇಶಗಳಿಗೆ ಹೋದಾಗ, ಭಾರತವನ್ನು ಮತ್ತು ಕೇಂದ್ರ ಸರಕಾರವನ್ನು ದೂಷಿಸುವುದರಲ್ಲಿ ಮುಂಚೂಣಿಯಲ್ಲಿದ್ದಾರೆ. ಇದು ತರವೇ?

ಮತ್ತೊಂದೆಡೆ, ರಾಹುಲರ ಮಾತುಗಳನ್ನು ಸಮರ್ಥಿಸಿಕೊಳ್ಳುವ ಭರದಲ್ಲಿ, ಅವರಿಗಿಂತ ಹಲವು ಹೆಜ್ಜೆ ಮುಂದಿಟ್ಟು ನಮ್ಮ ಶತ್ರುರಾಷ್ಟ್ರವನ್ನು ಬೆಂಬಲಿಸುವ ಅವರದೇ ಪಕ್ಷದ ಒಂದಿಷ್ಟು ರಾಜಕಾರಣಿಗಳಿದ್ದಾರೆ! ಭಾರತೀಯ ಸೈನಿಕರ ವಿಷಯದಲ್ಲಿ ಅವಮಾನಕರವಾಗಿ ಮಾತಾಡಿ ಅವರ ಮನೋಸ್ಥೈರ್ಯವನ್ನು ಕುಗ್ಗಿಸಲು ಯತ್ನಿಸಿದ್ದಕ್ಕೆ ರಾಹುಲ್‌ರಿಗೆ ನಮ್ಮ ಸರ್ವೋಚ್ಚ ನ್ಯಾಯಾಲಯವು ಇತ್ತೀಚೆಗಷ್ಟೇ ಛೀಮಾರಿಹಾಕಿದೆ. ಇಷ್ಟಾದರೂ ರಾಹುಲ್ ಮತ್ತು ಅವರ ಅನುಯಾಯಿಗಳು ಸುಧಾರಿಸಿಕೊಳ್ಳುವ ಹಾಗೂ ದೇಶಭಕ್ತರಾಗಿ ಬದಲಾಗುವ ಲಕ್ಷಣಗಳು ಕಾಣುತ್ತಿಲ್ಲ. 'ಕೇಂದ್ರ ಸರಕಾರವು ಸಂವಿಧಾನವನ್ನು ಅಗೌರವಿಸುತ್ತಿದೆ' ಎಂದು ಪದೇಪದೆ ಹೇಳುತ್ತಿರುವ ರಾಹುಲ್ ಮತ್ತು ಇತರ ರಾಜಕೀಯ ಧುರೀಣರು, ತುರ್ತು ಪರಿಸ್ಥಿತಿಯ ಕಾಲಘಟ್ಟದ ಒಂದಿಷ್ಟು ಘಟನೆಗಳನ್ನು ಅವಲೋಕಿಸಿದರೆ, ಯಾವ ಪಕ್ಷದ ಯಾವ ವ್ಯಕ್ತಿಗಳು ಸಂವಿಧಾನವನ್ನು ಅತಿಹೆಚ್ಚು ದುರುಪಯೋಗಪಡಿಸಿಕೊಂಡಿದ್ದಾರೆ ಎಂಬುದು ಅರ್ಥವಾಗುತ್ತದೆ!

(ಲೇಖಕರು ಆರ್ಥಿಕ ತಜ್ಞರು)

ಚುನಾವಣಾ ಆಯೋಗಕ್ಕೆ ಮಸಿ ಬಳಿಯುವ ಹುನ್ನಾರ

ಮತದಾರರ ಪಟ್ಟಿಯ ದೋಷವನ್ನು ಸಮರ್ಥಿಸುವ ಪುರಾವೆಯನ್ನು ರಾಹುಲ್ ಗಾಂಧಿಯವರು ನೀಡಿಲ್ಲ. ಕೇವಲ 'ಮತದಾರರ ಸಂಖ್ಯೆ ಹೆಚ್ಚಳವಾಗಿದೆ' ಎಂಬ ಆರೋಪವು ಯಾವುದೇ ಅಕ್ರಮವನ್ನು ಸಾಬೀತುಪಡಿಸುವುದಿಲ್ಲ. ಚುನಾವಣೆಗೆ ಮುನ್ನ ಆಯೋಗವು, ಅಂತಿಮ ಮತದಾರರ ಪಟ್ಟಿಯನ್ನು ಪ್ರತಿಯೊಬ್ಬ ಅಭ್ಯರ್ಥಿಗೂ ನೀಡುತ್ತದೆ. ಅದರಲ್ಲಿ ದೋಷವಿದ್ದರೆ ಲಿಖಿತ ರೂಪದಲ್ಲಿ ಆಯೋಗಕ್ಕೆ ದೂರು ಸಲ್ಲಿಸಬಹುದು. ಆದರೆ ಕಾಂಗ್ರೆಸ್‌ನ ಸೋತ ಅಭ್ಯರ್ಥಿಗಳು ಈತನಕ ಯಾವುದೇ ದೂರು ಸಲ್ಲಿಸಿಲ್ಲ.

ಪ್ರಕಾಶಪಥ

ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ಕಾಂಗ್ರೆಸ್ ಪಕ್ಷವು 2014ರ ತರುವಾಯ, ಪ್ರತಿ ಚುನಾವಣೆಯಲ್ಲಿ ಸೋತ ನಂತರ 'ಆ ಸೋಲಿಗೆ ನಾಯಕತ್ವದ ವೈಫಲ್ಯವೇ ಕಾರಣ' ಎಂಬುದನ್ನು ಮರೆಮಾಚಿ, 'ಬಿಜೆಪಿಯು ವಿದ್ಯುನ್ಮಾನ ಮತಯಂತ್ರವನ್ನು (ಇವಿಎಂ ಅನ್ನು) ತಿರುಚಿ ಗೆಲ್ಲುತ್ತಿದೆ' ಎಂದು ರೋದಿಸಲು ಆರಂಭಿಸಿತು. ಆದರೆ, 'ಇವಿಎಂ ಅನ್ನು ತಿರುಚಬಹುದಾಗಿದ್ದರೆ, ಚುನಾವಣಾ ಆಯೋಗದ ಕಚೇರಿಗೆ ಬಂದು ಅದನ್ನು ಸಾಬೀತುಪಡಿಸಿ' ಎಂದು ಪಂಥಾಹ್ವಾನ ನೀಡಿದಾಗ ಕಾಂಗ್ರೆಸ್ ಪಕ್ಷದ ಯಾರೊಬ್ಬರೂ ಮುಂದೆ ಬರಲಿಲ್ಲ. ಆ ಪಕ್ಷವು ಸರ್ವೋಚ್ಚ ನ್ಯಾಯಾಲಯದಲ್ಲಿ ಪದೇ ಪದೆ ಸಲ್ಲಿಸಿದ ಎಲ್ಲಾ ಅರ್ಜಿಗಳು ತಿರಸ್ಕೃತಗೊಂಡವು. ಇಷ್ಟಾಗಿಯೂ, ಚುನಾವಣಾ ಆಯೋಗವು ಸಂವಿಧಾನಬದ್ಧ ಸಂಸ್ಥೆ ಎಂಬುದನ್ನು ಮರೆತು, ತಲೆಬುಡವಿಲ್ಲದ ರಾಜಕೀಯ ಪ್ರೇರಿತ ಆರೋಪಗಳ ಮೂಲಕ ಆ ಪಕ್ಷದವರು ಮಸಿ ಬಳಿಯಲು ಸತತವಾಗಿ ಪ್ರಯತ್ನಿಸುತ್ತಲೇ ಇದ್ದಾರೆ.

2024ರ ಮೇ ತಿಂಗಳಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ, ಮಹಾರಾಷ್ಟ್ರದಲ್ಲಿ 'ಮಹಾವಿಕಾಸ್ ಅಘಾಡಿ' ಮೈತ್ರಿಕೂಟವು 48 ಸ್ಥಾನಗಳ ಪೈಕಿ 27ರಲ್ಲಿ ಗೆದ್ದರೆ, 'ಮಹಾಯುತಿ' ಮೈತ್ರಿಕೂಟವು 21ರಲ್ಲಿ ಗೆದ್ದು ಹಿನ್ನಡೆಯನ್ನು ಅನುಭವಿಸಿತು. ಅದೇ ವರ್ಷ ನಡೆದ ವಿಧಾನಸಭಾ ಚುನಾವಣೆಯಲ್ಲಿ ಫಲಿತಾಂಶವು ತಿರುವುಮುರುವಾಗಿ, 'ಮಹಾವಿಕಾಸ್ ಅಘಾಡಿ' ಮೈತ್ರಿಕೂಟವು ಭಾರಿ ಪರಾಭವವನ್ನು ಅನುಭವಿಸಿತು. ಈ ಸೋಲನ್ನು ಜೀರ್ಣಿಸಿಕೊಳ್ಳಲು ರಾಹುಲ್ ಗಾಂಧಿಯವರಿಗೆ ಸಾಧ್ಯವಾಗಲಿಲ್ಲ. 'ಮತಪಟ್ಟಿಯು ದೋಷಪೂರಿತವಾಗಿದೆ' ಎಂಬ ಹೊಸ ವರಸೆ ಅವರ ಕಡೆಯಿಂದ ಆರಂಭವಾಗಿದ್ದು ಈ ಕಾರಣಕ್ಕೇ.

ರಾಹುಲ್ ಗಾಂಧಿಯವರು ನಿದ್ರೆಯಿಂದ ಈಗ ಎದ್ದವರಂತೆ, ''ಮಹಾರಾಷ್ಟ್ರ ಚುನಾವಣೆಯಲ್ಲಿ ಭಾರಿ ಪ್ರಮಾಣದ ಮೋಸ ನಡೆದಿದೆ. 2024ರ ಮೇ ತಿಂಗಳಲ್ಲಿ ನಡೆದ ಲೋಕಸಭಾ ಚುನಾವಣೆ ಮತ್ತು ನವೆಂಬರ್‌ನಲ್ಲಿ ನಡೆದ ವಿಧಾನಸಭಾ ಚುನಾವಣೆಗಳ ನಡುವೆ ಮತದಾರರ ಪಟ್ಟಿಗೆ ಒಂದು ಕೋಟಿಗೂ ಹೆಚ್ಚು ಹೊಸ ಮತದಾರರನ್ನು ಅನುಮಾನಾಸ್ಪದವಾಗಿ ಸೇರಿಸಲಾಗಿದೆ; ಬಿಜೆಪಿಯು ಕಡಿಮೆ ಪ್ರದರ್ಶನ ನೀಡಿದ್ದ ಕ್ಷೇತ್ರಗಳಲ್ಲಿ ಈ ಹೆಚ್ಚಳ ಕೇಂದ್ರೀಕೃತವಾಗಿದೆ'' ಎಂದು ದೂರಿದ್ದಾರೆ ಮತ್ತು ತಮಗೆ ಡಿಜಿಟಲ್ ಮತದಾರರ ಪಟ್ಟಿಯನ್ನು ನೀಡಬೇಕು ಹಾಗೂ ಮತಗಟ್ಟೆಯ ಸಿಸಿಟಿವಿ ತುಣುಕನ್ನು ನೀಡಬೇಕು ಎಂದು ಆಗ್ರಹಿಸುತ್ತಿದ್ದಾರೆ.

ಸಂಸತ್ತಿನಲ್ಲಿ ಅಂಗೀಕರಿಸಿದ ಕಾನೂನುಗಳು ಮತ್ತು ಸ್ಥಾಪಿತ ನಿಯಮಗಳಿಗೆ ಅನುಸಾರವಾಗಿ ಚುನಾವಣಾ ಆಯೋಗವು ಚುನಾವಣೆಗಳನ್ನು ನಡೆಸುತ್ತದೆ. ಚುನಾವಣಾ ಪ್ರಕ್ರಿಯೆಯು ವಿಕೇಂದ್ರೀಕೃತವಾಗಿದೆ ಮತ್ತು ಸಾವಿರಾರು ಸಿಬ್ಬಂದಿಗಳು ಇದರಲ್ಲಿ ತೊಡಗಿಸಿಕೊಳ್ಳುತ್ತಾರೆ. ಮತದಾರರ ಪಟ್ಟಿಗಳ ಡಿಜಿಟಲ್ ಪ್ರತಿಗಾಗಿನ ಬೇಡಿಕೆಗಳು, ಚಾಲ್ತಿಯಲ್ಲಿರುವ ಕಾನೂನಿನ ಚೌಕಟ್ಟಿನೊಳಗೆ ಸ್ವೀಕಾರಾರ್ಹವಲ್ಲ ಎಂದು ಭಾರತದ ಚುನಾವಣಾ ಆಯೋಗವು ಸ್ಪಷ್ಟನೆ ನೀಡಿದೆ. ಕಾಂಗ್ರೆಸ್‌ನ ಇಂಥದೇ ಮನವಿಯನ್ನು ಸುಪ್ರೀಂ ಕೋರ್ಟ್ 2019ರಲ್ಲಿ ತಿರಸ್ಕರಿಸಿದ್ದನ್ನು ಅದು ಉಲ್ಲೇಖಿಸಿ, ಕರಡು ಮತದಾರರ ಮುದ್ರಿತ ಪಟ್ಟಿಯನ್ನು ಎಲ್ಲಾ ರಾಜಕೀಯ ಪಕ್ಷಗಳಿಗೂ ಒದಗಿಸಲಾಗಿದೆ ಎಂದು ಮಾಹಿತಿ ನೀಡಿದೆ.

ಬಿಹಾರದಲ್ಲಿ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'ಯನ್ನು (Special Intensive Revision- SIR) ಕೈಗೆತ್ತಿಕೊಂಡ ತರುವಾಯ, ಚುನಾವಣಾ ಆಯೋಗದ ಮೇಲಿನ ರಾಹುಲ್ ಗಾಂಧಿಯವರ ದಾಳಿಯು ತಾರಕಕ್ಕೇರಿತು. SIR ಮಾರ್ಗಸೂಚಿಗಳ ಅಡಿಯಲ್ಲಿ, 2003ರ ಮತದಾರರ ಪಟ್ಟಿಯಲ್ಲಿ ಇಲ್ಲದ ಮತದಾರರು ಭಾರತೀಯ ಪೌರತ್ವದ ಪುರಾವೆಯನ್ನು ಒದಗಿಸಬೇಕೆಂದು ಚುನಾವಣಾ ಆಯೋಗ ಆದೇಶಿಸಿದೆ. 2004ರ ಡಿಸೆಂಬರ್ ನಂತರ ಜನಿಸಿದವರಿಗೆ, ಇಬ್ಬರೂ ಪೋಷಕರ ದಾಖಲೆಗಳ ಅಗತ್ಯವಿದೆ ಮತ್ತು ಪೋಷಕರು ವಿದೇಶಿ ಪ್ರಜೆಯಾಗಿದ್ದರೆ ಅವರ ಪಾಸ್‌ಪೋರ್ಟ್ ಮತ್ತು ವೀಸಾ ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ.

ವಾಸ್ತವವಾಗಿ ಚುನಾವಣಾ ಆಯೋಗವು ಮತದಾರರ ಪಟ್ಟಿಯ ಪರಿಷ್ಕರಣೆಯ ಮೂಲಕ ಅದನ್ನು ಸ್ವಚ್ಛಮಾಡುವ ಕೆಲಸಕ್ಕೆ ಮುಂದಾಗಿದೆ. ಮೃತಪಟ್ಟವರ ಹೆಸರು, ವಿಳಾಸದಲ್ಲಿ ಇಲ್ಲದವರು ಮತ್ತು ಎರಡೆರಡು ಕಡೆಗಳಲ್ಲಿ ನೋಂದಾಯಿಸಿಕೊಂಡವರ ಹೆಸರುಗಳು ಈಗ ಪಟ್ಟಿಯಿಂದ ಹೊರಬಂದಿವೆ. ಹೀಗೆ 17 ಲಕ್ಷದಷ್ಟು ಮೃತರ ಹೆಸರುಗಳು ಪತ್ತೆಯಾಗಿರುವುದು ಗಮನಾರ್ಹ. ಈ ಪರಿಷ್ಕರಣೆಯ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಹೂಡಿದ್ದ ಅರ್ಜಿಗಳ ವಿಚಾರಣೆ ನಡೆದು, ಈ ಪ್ರಕ್ರಿಯೆಗೆ ತಡೆ ನೀಡಲು ನಿರಾಕರಿಸಿದ ನ್ಯಾಯಾಲಯವು ಪರಿಷ್ಕೃತ ಮತದಾರರ ಕರಡು ಪ್ರತಿಯನ್ನು ಪ್ರಕಟಿಸಲು ಅನುಮತಿ ನೀಡಿದೆ.

ಮಹಾರಾಷ್ಟ್ರದಲ್ಲಿ ಮತದಾರರ ಪಟ್ಟಿಯಲ್ಲಿ ಮತದಾರರ ಹೆಚ್ಚಳವಾಗಿದೆ ಎಂಬುದು ರಾಹುಲ್ ಗಾಂಧಿಯವರ ತಕರಾರು ಆಗಿದ್ದರೆ, ಬಿಹಾರದಲ್ಲಿ ಮತದಾರರ ಪಟ್ಟಿಯಿಂದ ಹೆಸರು ತೆಗೆಯಲಾಗುತ್ತಿದೆ ಎಂದು ಆರೋಪಿಸಿ, ತಮ್ಮ ಅನುಕೂಲಕ್ಕೆ ತಕ್ಕ ನಿಲುವನ್ನು ಅನುಸರಿಸಿ ಚುನಾವಣಾ ಆಯೋಗದ ಮೇಲೆ ಗೂಬೆ ಕೂರಿಸುವುದು ಅವರ ಹುನ್ನಾರವಾಗಿದೆ. ಮಹಾರಾಷ್ಟ್ರದ ನಂತರ ಈಗ 'ಕರ್ನಾಟಕದಲ್ಲಿಯೂ ಮತದಾರರ ಪಟ್ಟಿಯಲ್ಲಿನ ಮತದಾರರ ಹೆಚ್ಚಳದ ಮೂಲಕ ಬಿಜೆಪಿಯು ಚುನಾವಣೆಯನ್ನು ಗೆದ್ದಿದೆ ಎಂದು ಹೊಸ ಬಾಂಬ್ ಸಿಡಿಸಿದ್ದಾರೆ. ತದನಂತರ ಇವರ ಆರೋಪ ಸರಣಿ ಮುಂದುವರಿದು, 'ಇಡೀ ಲೋಕಸಭಾ ಚುನಾವಣೆಯಲ್ಲಿ ಅಕ್ರಮ ನಡೆಸಿಯೇ ಬಿಜೆಪಿಯು ಗೆದ್ದಿರುವುದು' ಎಂಬ ಹೊಸರಾಗ ಪ್ರಾರಂಭವಾಗಿದೆ.

2024ರ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ 9 ಸ್ಥಾನ ಗೆದ್ದಿದ್ದೇ ಬಹುದೊಡ್ಡ ಸಾಧನೆಯೆಂದು ಕಾಂಗ್ರೆಸ್ ಸಮಾಧಾನ ಪಟ್ಟುಕೊಂಡಿತ್ತು. ಈಗ ರಾಹುಲ್ ಗಾಂಧಿಯವರು ಆರೋಪ ಮಾಡಿದ ಕೂಡಲೇ ಅದಕ್ಕೆ ಅನಿವಾರ್ಯವಾಗಿ ಧ್ವನಿಗೂಡಿಸಿ, 'ರಾಜ್ಯದಲ್ಲಿ ಬಿಜೆಪಿಯ ಗೆಲುವು ಆಗಿದ್ದು ಚುನಾವಣಾ ಆಯೋಗದ ದೋಷಪೂರಿತ ಪಟ್ಟಿಯಿಂದಾಗಿ' ಅಂತ ಕಾಂಗ್ರೆಸ್ ಕೂಗಲು ಆರಂಭಿಸಿದೆ. ಮತದಾರರ ಪಟ್ಟಿಗೆ ಹಾಗೆ ಮನಬಂದಂತೆ ಹೆಸರುಗಳನ್ನು ಸೇರಿಸಲು ಸಾಧ್ಯವಾ? ಅಥವಾ ಮನಸೋ ಇಚ್ಛೆ ತೆಗೆಯುವ ಮೂಲಕ ಚುನಾವಣೆಯನ್ನು ಗೆಲ್ಲಲು ಸಾಧ್ಯವಾ? ಲಕ್ಷಾಂತರ ಮತದಾರರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡುವುದು ಸುಲಭಸಾಧ್ಯ ಕೆಲಸವಲ್ಲ. 'ಬೂತ್ ಮಟ್ಟದ ಏಜೆಂಟರನ್ನು' (ಬಿಎಲ್‌ಎ-2) ನೇಮಕ ಮಾಡಿಕೊಳ್ಳಲು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಗೆ ಚುನಾವಣಾ ಆಯೋಗವು ಅವಕಾಶ ನೀಡುತ್ತದೆ. ಈ ಏಜೆಂಟರು ತಮ್ಮ ಬೂತ್‌ನಲ್ಲಿ ಮತದಾರರ ಸೇರ್ಪಡೆ ಆಗುವಾಗ ಅಥವಾ ಪಟ್ಟಿಯಿಂದ ತೆಗೆಯುವಾಗ, ಅದರ ಸತ್ಯಾಸತ್ಯತೆಯನ್ನು ಪರೀಕ್ಷಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಮಾತ್ರವಲ್ಲ, ಹಾಗೆ ಸೇರಿಸುವ ಅಥವಾ ತೆಗೆಯುವ ಮುನ್ನ ಸಂಬಂಧಪಟ್ಟ ಅಧಿಕಾರಿಯು ಈ ಏಜೆಂಟರ ಸಹಿಯನ್ನು ಪಡೆದುಕೊಳ್ಳುವುದು ಕಡ್ಡಾಯ. ಅಂತೆಯೇ ಬೂತ್‌ಗಳಿಗೆ ಕಾಂಗ್ರೆಸ್ ಪಕ್ಷದ 'ಬೂತ್ ಮಟ್ಟದ ಏಜೆಂಟರು' ಕೂಡ ನೇಮಕವಾಗಿರುತ್ತಾರೆ.

ಮತದಾರರ ಪಟ್ಟಿಗೆ ಸೇರ್ಪಡೆ ಮಾಡಬೇಕಾದ ವ್ಯಕ್ತಿಯ ಫೋಟೋ ಗುರುತಿನ ಚೀಟಿ ಬೇಕಾಗುತ್ತವೆ. 60 ಲಕ್ಷ ಹೆಸರುಗಳನ್ನು ಏಕಾಏಕಿ ಸೇರ್ಪಡೆ ಮಾಡಲು ಅಸಾಧ್ಯ. ಚುನಾವಣೆಯ ದಿನದಂದು, ಫೋಟೋದಲ್ಲಿರುವ ವ್ಯಕ್ತಿಯೇ ಮತಗಟ್ಟೆಗೆ ಬಂದು ಮತವನ್ನು ಚಲಾಯಿಸಬೇಕು. ಒಬ್ಬಾತ ಹತ್ತಾರು ಕಡೆ ಮತವನ್ನು ಚಲಾಯಿಸುವ ಕಾಲ ಈಗಿಲ್ಲ. ಪ್ರತಿಯೊಂದು ಬೂತ್‌ನಲ್ಲಿಯೂ, ಸ್ಪರ್ಧಿಸಿರುವ ಪಕ್ಷದ ಬೂತ್ ಏಜೆಂಟರು ಕುಳಿತಿರುತ್ತಾರೆ. ಪ್ರತಿಯೊಂದು ಪ್ರಕ್ರಿಯೆಯೂ ಅವರ ಸಮ್ಮುಖದಲ್ಲೇ ನಡೆಯುವುದು.

ಮತದಾರರ ಪಟ್ಟಿಯ ದೋಷವನ್ನು ಸಮರ್ಥಿಸುವ ಒಂದೇ ಒಂದು ಪುರಾವೆಯನ್ನೂ ರಾಹುಲ್ ಗಾಂಧಿಯವರು ನೀಡಿಲ್ಲ. ಕೇವಲ 'ಮತದಾರರ ಸಂಖ್ಯೆ ಹೆಚ್ಚಳವಾಗಿದೆ' ಎಂಬ ಆರೋಪವು ಯಾವುದೇ ಅಕ್ರಮವನ್ನು ಸಾಬೀತುಪಡಿಸುವುದಿಲ್ಲ. ಚುನಾವಣೆಗೆ ಮುನ್ನ ಆಯೋಗವು, ಅಂತಿಮ ಮತದಾರರ ಪಟ್ಟಿಯನ್ನು ಪ್ರತಿಯೊಬ್ಬ ಅಭ್ಯರ್ಥಿಗೂ ನೀಡುತ್ತದೆ. ಆ ಪಟ್ಟಿಯಲ್ಲಿ ದೋಷವಿದ್ದರೆ ಲಿಖಿತ ರೂಪದಲ್ಲಿ ಆಯೋಗಕ್ಕೆ ದೂರು ಸಲ್ಲಿಸಬಹುದು. ಆದರೆ ಕಾಂಗ್ರೆಸ್‌ನ ಸೋತ ಅಭ್ಯರ್ಥಿಗಳು ಈತನಕ ಯಾವುದೇ ದೂರು ಸಲ್ಲಿಸಿಲ್ಲ. ಹಾಸ್ಯಾಸ್ಪದ ಸಂಗತಿಯೆಂದರೆ ರಾಹುಲ್‌ರವರು, 'ಕರ್ನಾಟಕದಲ್ಲಿಯೂ ಮತದಾರರ ಪಟ್ಟಿಯಲ್ಲಿ ಅಕ್ರಮ ನಡೆದಿರುವ ಕಾರಣ, ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಜಯ ಸಾಧಿಸಿತು' ಎಂದು ಹೇಳಿ ರಾಜಾಜಿನಗರ ಮತ್ತು ಮಹದೇವಪುರ ಕ್ಷೇತ್ರದ ಮತದಾರರ ಪಟ್ಟಿಯನ್ನು ಉಲ್ಲೇಖಿಸಿದ್ದಾರೆ. ಬೆಂಗಳೂರು ಸೆಂಟ್ರಲ್ ಕ್ಷೇತ್ರದ್ದೇ ಭಾಗವಾದ ಶಿವಾಜಿನಗರ ಮತ್ತು ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರಗಳ ನೆನಪೇ ಇವರಿಗೆ ಆಗಿಲ್ಲ!

ಕಾಂಗ್ರೆಸ್ ಸರಕಾರದ ಅವಧಿಯಲ್ಲಿ, ಗಾಂಧಿ ಕುಟುಂಬಕ್ಕೆ ಅತಿ ನಿಕಟವಾಗಿದ್ದ ನವೀನ್ ಚಾವ್ಲಾರವರನ್ನು ಚುನಾವಣಾ ಆಯೋಗದ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿತ್ತು. ಇವರ ಕಾರ್ಯಚಟುವಟಿಕೆಯ ವಿರುದ್ಧ ದನಿಯೆತ್ತಿದ್ದ ಎನ್‌ಡಿಎ ಮೈತ್ರಿಕೂಟವು, ಇವರನ್ನು ಉಚ್ಚಾಟಿಸಬೇಕು ಎಂಬುದಾಗಿ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿತ್ತು. ಚುನಾವಣಾ ಆಯೋಗಕ್ಕೆ ಹಲ್ಲಿದೆ ಎಂದು ಸಾಬೀತುಪಡಿಸಿದ್ದ ಟಿ.ಎನ್. ಶೇಷನ್‌ರವರು 1999ರಲ್ಲಿ ಗುಜರಾತಿನ ಗಾಂಧಿನಗರ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಮುಖ್ಯ ಚುನಾವಣಾ ಆಯುಕ್ತರಾಗಿದ್ದ ಎಂ.ಎಸ್.ಗಿಲ್‌ರವರನ್ನು ಕಾಂಗ್ರೆಸ್ ಪಕ್ಷವು ರಾಜ್ಯಸಭಾ ಸದಸ್ಯರನ್ನಾಗಿಸಿ ಕೇಂದ್ರ ಸಚಿವ ಸಂಪುಟಕ್ಕೆ ಅವರನ್ನು ಸೇರ್ಪಡೆ ಮಾಡಿಕೊಂಡಿತ್ತು. ಟಿ.ಎನ್.ಶೇಷನ್ ಅವರು ಮುಖ್ಯ ಚುನಾವಣಾಧಿಕಾರಿ ಆಗುವ ಮುನ್ನ, 'ಚುನಾವಣಾ ಆಯೋಗವು ಕಾಂಗ್ರೆಸ್ ಪಕ್ಷದ ಬ್ರಾಂಚ್ ಆಫೀಸ್ ರೀತಿಯಲ್ಲಿ ಕೆಲಸ ಮಾಡುತ್ತಿದೆ' ಎಂದು ಆರೋಪಿಸಿದ್ದ ಸಂಗತಿಯನ್ನು ಕಾಂಗ್ರೆಸ್ ಮರೆತಿದೆ.

ರಾಹುಲ್ ಗಾಂಧಿಯವರು ಚುನಾವಣಾ ಆಯೋಗದ ವಿರುದ್ಧ ಬಳಸುತ್ತಿರುವ ಭಾಷೆಯು, ದೇಶದ ವಿರೋಧ ಪಕ್ಷದ ನಾಯಕನ ಘನತೆಗೆ ತಕ್ಕಂತಿಲ್ಲ. ಸಂಸತ್ ಭವನದ ಆವರಣದಲ್ಲಿ ಚುನಾವಣಾ ಆಯೋಗಕ್ಕೆ

ಅವರು ಬೆದರಿಕೆ ಹಾಕಿರುವುದು ಮತ್ತು 'ನಾನು ಆಟಂಬಾಂಬ್ ಸಿಡಿಸಿದರೆ ಆಯೋಗಕ್ಕೆ ಅಡಗಿಕೊಳ್ಳಲೂ ಜಾಗವಿರುವುದಿಲ್ಲ' ಎಂದು ಅವರು ನುಡಿದಿರುವುದು ಇದಕ್ಕೆ ಸಾಕ್ಷಿ. ತನ್ಮೂಲಕ, ಸಂವಿಧಾನಬದ್ಧ ಸಂಸ್ಥೆಯೊಂದರ ಮೇಲೆ ಅವರು ಅತ್ಯಂತ ಕ್ಷುಲ್ಲಕವಾಗಿ, ಅವಹೇಳನಕಾರಿಯಾಗಿ ಟೀಕೆ ಮಾಡಿದ್ದಾರೆ ಎನ್ನಲಡ್ಡಿಯಿಲ್ಲ.

2002ರಲ್ಲಿ ಗುಜರಾತ್ ವಿಧಾನಸಭಾ ಚುನಾವಣೆಯ ವಿಷಯದಲ್ಲಿ, ಅಂದಿನ ಮುಖ್ಯಮಂತ್ರಿ ನರೇಂದ್ರ ಮೋದಿಯವರು ಚುನಾವಣಾ ಆಯುಕ್ತರಾಗಿದ್ದ ಲಿಂಗ್ಡೋರವರನ್ನು ಓರ್ವ 'ಕ್ರಿಶ್ಚಿಯನ್' ಎಂದು ಕರೆದು, 'ಇವರು ಇಟಲಿಯಿಂದ ಬಂದಿರಬೇಕು' ಎಂದು ಟೀಕೆ ಮಾಡಿದಾಗ ವಿರೋಧ ಪಕ್ಷದವರು, 'ಮೋದಿಯವರು ಸಂವಿಧಾನಬದ್ಧ ಸಂಸ್ಥೆಗೆ ಅಪಮಾನ ಮಾಡಿದ್ದಾರೆ, ಅವರು ಕೂಡಲೇ ರಾಜೀನಾಮೆ ನೀಡಬೇಕು' ಎಂದು ಹುಯಿಲೆಬ್ಬಿಸಿದ್ದರು. ಇಂದು ರಾಹುಲ್ ಗಾಂಧಿಯವರು ಚುನಾವಣಾ ಆಯೋಗದವರನ್ನು 'ಮತಗಳ್ಳರು' ಎಂದು ಆರೋಪಿಸಿದ್ದರೂ, ಆ ಹೇಳಿಕೆಯ ವಿರುದ್ಧ ಇವರು ಸೊಲ್ಲೆತ್ತದೆ ಬಾಯಿಗೆ ಗೋಂದು ಹಾಕಿಕೊಂಡು ತೆಪ್ಪಗಿದ್ದು ತಮ್ಮ ಅನುಕೂಲಸಿಂಧು ನಿಲುವನ್ನು ನಿಚ್ಚಳವಾಗಿ ಹೊರಹೊಮ್ಮಿಸಿದ್ದಾರೆ.

ಚುನಾವಣೆಯಲ್ಲಿ ಗೆಲ್ಲಲು ಬೇಕಾಗಿರುವುದು ಕಾರ್ಯಯೋಜನೆ, ದೂರದೃಷ್ಟಿಯ ಸಮರ್ಥ ನಾಯಕತ್ವ ಮತ್ತು ಎದುರಾಳಿಯನ್ನು ಕಟ್ಟಿಹಾಕುವಂಥ ರಣತಂತ್ರ; ಆದರೆ ಸತತ ಸೋಲಿನಿಂದ ಕಂಗೆಟ್ಟಿರುವ ರಾಹುಲ್ ತಮ್ಮ ಹತಾಶೆಯನ್ನು ಹತ್ತಿಕ್ಕುವ ಭರದಲ್ಲಿ ಚುನಾವಣಾ ಆಯೋಗಕ್ಕೆ ಮಸಿ ಬಳಿದು, ಅದರ ವಿಶ್ವಾಸಾರ್ಹತೆಯನ್ನು ಕುಗ್ಗಿಸಲು ಪ್ರಯತ್ನ ಮಾಡುತ್ತಿರುವುದು ಪ್ರಜಾಪ್ರಭುತ್ವದ ದುರಂತವಾಗಿದೆ.

(ಲೇಖಕರು ಬಿಜೆಪಿಯ ವಕ್ತಾರರು)

ಪ್ರತಿಸ್ಪಂದನ

ಹೊಸೂರು ರತ್ನಾಕರ ಶೆಟ್ಟಿ, ಹಿರಿಯಡ್ಕ

ಸಂಕಷ್ಟಗಳ ಸರಮಾಲೆ

'ನೆಲದ ಸಿರಿ' ಅಂಕಣದಲ್ಲಿ (ಆ.4) ಪ್ರಕಟವಾದ ಆದರ್ಶ್ ಶೆಟ್ಟಿಯವರ 'ರೈತರನ್ನು ಕಾಡುತ್ತಿದೆ ಹಲವು ಸಂಕಷ್ಟಗಳು' ಎಂಬ ಬರಹವು ಬಹಳ ಚೆನ್ನಾಗಿ ಮೂಡಿಬಂದಿದೆ. ಸಂಕಷ್ಟಗಳ ನಡುವೆ ಹುಟ್ಟಿ, ಸಂಕಷ್ಟಗಳ ನಡುವೆಯೇ ಬೆಳೆದು ದಯನೀಯ ಬದುಕು ಸಾಗಿಸುವುದೇ ಭಾಗ್ಯವಿಧಾತನು ರೈತರಿಗೆ ನೀಡಿರುವ ವರವೆನಿಸುತ್ತಿದೆ.

ಭಾರತದ ಒಟ್ಟು ಜನಸಂಖ್ಯೆಯ ಬಹುಭಾಗವು ಕೃಷಿ ಕಾರ್ಮಿಕರು ಮತ್ತು ರೈತರನ್ನೇ ಒಳಗೊಂಡಿದ್ದರೂ, ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ಅನುವು ಮಾಡಿಕೊಡುವ ಸಂಘಟನಾ ಶಕ್ತಿ ಇವರಿಗಿಲ್ಲ. ಅದೇ ಸರಕಾರಿ ಉದ್ಯೋಗಿಗಳು, ಕಾರ್ಮಿಕರು ಒಟ್ಟು ಜನಸಂಖ್ಯೆಯಲ್ಲಿ ಸಣ್ಣ ಭಾಗವಾಗಿದ್ದರೂ, ಮುಷ್ಕರ, ಸಂಘಟಿತ ಹೋರಾಟಗಳ ಮೂಲಕ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುತ್ತಾ ಬಂದಿದ್ದಾರೆ. ಆದರೆ ರೈತರ ಗೋಳನ್ನು ಕೇಳುವವರೇ ಇಲ್ಲ. ನಮ್ಮ ಒಂದಿಷ್ಟು ಚುನಾಯಿತ ಪ್ರತಿನಿಧಿಗಳು 'ನಾವು ರೈತ ಕುಟುಂಬದವರು' ಎಂದು ಬಡಬಡಾಯಿಸುವುದನ್ನು ಬಿಟ್ಟರೆ, ಮತ್ತೇನೂ ಫಲಪ್ರದ ಕೆಲಸವನ್ನು ಮಾಡಿಲ್ಲವೆನ್ನುವುದು ವಾಸ್ತವ. ರೈತರು ಎದುರಿಸುತ್ತಿರುವ ಕೆಲವು ಮುಖ್ಯ ಸಮಸ್ಯೆಗಳತ್ತ ನೋಡೋಣ ಬನ್ನಿ:

- **ಮಾರುಕಟ್ಟೆ ವ್ಯವಸ್ಥೆ:** ರೈತರ ಸರ್ವಸಮಸ್ಯೆಗಳ ಕೇಂದ್ರಬಿಂದುವೇ ಮಾರುಕಟ್ಟೆ. ಕಷ್ಟಪಟ್ಟು ಬೆಳೆ ಬೆಳೆದ ರೈತರು ಅದನ್ನು ಹೊತ್ತು ಮಾರುಕಟ್ಟೆಯನ್ನು ತಲುಪಿದಾಗ, ಅಲ್ಲಿ ಮಧ್ಯವರ್ತಿಗಳ ಕೈಗೆ ಸಿಲುಕಿ ಅವರು ನಿರ್ಧರಿಸಿದ ಬೆಲೆಗೆ ಬೆಳೆಯನ್ನು ಅನಿವಾರ್ಯವಾಗಿ ಮಾರಬೇಕಾಗುತ್ತದೆ. ಈ ನಿಟ್ಟಿನಲ್ಲಿ ಸಹಕಾರಿ ಸಂಘಗಳು ಆಶಾಕಿರಣವಾಗಬಲ್ಲವಾದರೂ, ಭ್ರಷ್ಟಾಚಾರ, ರಾಜಕೀಯ ಹಸ್ತಕ್ಷೇಪಗಳಿಂದಾಗಿ ರೈತರ ವಿಶ್ವಾಸ ಗಳಿಸಲು ಅವು ವಿಫಲವಾಗುತ್ತಿವೆ. ಕೃಷಿ ಉತ್ಪನ್ನಗಳಿಗೆ ಬಲಾಢ್ಯ ವಾಣಿಜ್ಯ ಕಂಪನಿಗಳು ನೀಡುವಂಥ ಸ್ಪರ್ಶ ಬೇಕಾಗಿದೆ. ತೀರಾ ಕಳಪೆ ವಸ್ತುಗಳನ್ನೂ 'ಮಾರುಕಟ್ಟೆ ತಂತ್ರ'ದ ಮೂಲಕ ಆಕರ್ಷಕ ಬೆಲೆಗೆ ಮಾರಬಲ್ಲ ಚಾಕಚಕ್ಯತೆ ಈ ಕಂಪನಿಗಳಿಗಿದೆ. ಅಲ್ಲದೆ ಕೃಷಿ ವಲಯದಲ್ಲಿ ಅಗಾಧ ಪ್ರಮಾಣದ ಬಂಡವಾಳವನ್ನು ಹೂಡಬೇಕಾಗಿದೆ; ಮೂಲ ಸೌಕರ್ಯ ಒದಗಿಸುವುದಾಗಲಿ, ವ್ಯವಸ್ಥಿತ ಮಾರುಕಟ್ಟೆ ಕಲ್ಪಿಸುವುದಾಗಲಿ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಪೂರಕ ಉದ್ಯೋಗ ಕಲ್ಪಿಸುವುದಾಗಲಿ ಹೀಗೆ ಹಲವು ಬಾಬತ್ತುಗಳಲ್ಲಿ ಬೃಹತ್ ಹೂಡಿಕೆಯ ಅವಶ್ಯಕತೆಗಳಿವೆ. ಹಾಗಾಗಿ ರೈತರು ಕಾರ್ಪೊರೇಟ್ ವಲಯದೊಂದಿಗೆ ಕೈಜೋಡಿಸಿದರೆ, ಸಮಗ್ರ ಹಾಗೂ ಗಮನಾರ್ಹ ಸಾಧನೆ ಮಾಡಬಹುದು. ಈ ಉದ್ದೇಶದೊಂದಿಗೆ ಕೇಂದ್ರ ಸರಕಾರವು 2019ರಲ್ಲಿ ಜಾರಿಗೆ ತಂದ ಕೃಷಿ ಸುಧಾರಣಾ ಕಾನೂನುಗಳು ಅನುಷ್ಠಾನವಾಗದಂತೆ ಕೆಲವೊಂದು ಪಟ್ಟಭದ್ರ ಹಿತಾಸಕ್ತಿಗಳು ನೋಡಿಕೊಂಡಿರುವುದು ವಿಪರ್ಯಾಸವೇ ಸರಿ.
- **ಸಕಾಲಿಕ ಆರ್ಥಿಕ ನೆರವು:** ದೇಶದಲ್ಲಿ ಮೂರು ಸ್ತರದ ಹಣಕಾಸು ಸಂಸ್ಥೆಗಳು ಕೆಲಸ ಮಾಡುತ್ತಿದ್ದರೂ, ವಿಶೇಷವಾಗಿ ಸಣ್ಣ ಮತ್ತು ಅತಿಸಣ್ಣ ರೈತರು ಸಾಲಕ್ಕಾಗಿ ಇಂದಿಗೂ ಗ್ರಾಮೀಣ ಪ್ರದೇಶದ ಮಧ್ಯವರ್ತಿಗಳ ಕಡೆಗೆ ಕೈಚಾಚುತ್ತಿರುವುದು ಖೇದನೀಯ. ಸರಕಾರಿ ವ್ಯವಸ್ಥೆಯಲ್ಲಿ ಸಾಲ ವಿತರಣೆಯನ್ನು ಸರಳ ಹಾಗೂ ಕ್ಷಿಪ್ರಗೊಳಿಸಬೇಕಾಗಿದೆ. ವಾಸ್ತವವಾಗಿ ಬೀಜ ಬಿತ್ತನೆ ಮತ್ತು ಕಟಾವು ಮಾಡಿದ ನಂತರ ರೈತರು ಹಣಕ್ಕಾಗಿ ಕಾಯುವ ಸ್ಥಿತಿಯಲ್ಲಿರುವುದಿಲ್ಲ. ಅವರ ಈ ಅಸಹಾಯಕತೆಯೇ ಮಧ್ಯವರ್ತಿಗಳ ಪಾಲಿಗೆ ವರವಾಗುತ್ತಿದೆ.

- **ಶೇಖರಣಾ ವ್ಯವಸ್ಥೆ:** ರೈತರು ಬೆಳೆದ ಹಲವು ಉತ್ಪನ್ನಗಳ ಪೈಕಿ ವಿಶೇಷವಾಗಿ ಹಣ್ಣು-ಹಂಪಲು, ತರಕಾರಿಗಳ ಬಹುಪಾಲು ಸೂಕ್ತ ಶೇಖರಣಾ ವ್ಯವಸ್ಥೆಯಿಲ್ಲದೆ ಹಾಳಾಗುತ್ತಿವೆ. ಹೀಗಾಗಿ, ರಾಜ್ಯದ ವಿವಿಧೆಡೆ ಶೈತ್ಯಾಗಾರಗಳನ್ನು ಸಜ್ಜುಗೊಳಿಸಬೇಕಾದ ಅಗತ್ಯವಿದೆ. ಮಾತ್ರವಲ್ಲದೆ, ಆಯಾ ಪ್ರದೇಶದಲ್ಲಿ ಬೆಳೆಯಬಹುದಾದ ಮುಖ್ಯ ಬೆಳೆಗಳ ಕುರಿತು ನಮ್ಮ ಕೃಷಿ ಇಲಾಖೆಯು ಕಾಲಕಾಲಕ್ಕೆ ತಾಂತ್ರಿಕ ಮಾಹಿತಿ ನೀಡುವುದರ ಜತೆಗೆ ಅಂಥ ಕೃಷಿ ಉತ್ಪನ್ನಗಳಿಗೆ ಸ್ಥಿರ ಮಾರುಕಟ್ಟೆ ದೊರಕುವಂತಾಗುವ ನಿಟ್ಟಿನಲ್ಲಿ ರೈತರಿಗೆ ಹೆಗಲಾಗಿ ನಿಲ್ಲಬೇಕಿದೆ.
- **ಸಾಮಾಜಿಕ ಹೊಣೆಗಾರಿಕೆ:** ಬೃಹತ್ ವಾಣಿಜ್ಯ ಕಂಪನಿಗಳು ತಮ್ಮ ಲಾಭದ ಒಂದು ಭಾಗವನ್ನು ಸಮಾಜಕ್ಕೆ ಕೊಡಮಾಡುವುದುಂಟು. ಇದಕ್ಕೆ 'ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ' (CSR- Corporate Social Responsibility) ಎನ್ನಲಾಗುತ್ತದೆ. ಕಂಪನಿಗಳು ಹೀಗೆ ನೀಡುವ ನೆರವು, ಸಣ್ಣ ಮತ್ತು ಅತಿ ಸಣ್ಣ ರೈತರು ಕೈಗೊಳ್ಳುವ ಕ್ರಾಂತಿಕಾರಕ ಕೃಷಿ ಚಟುವಟಿಕೆಗಳಿಗೆ ಕೃಷಿ ಇಲಾಖೆಯ ಮಾರ್ಗದರ್ಶನದಲ್ಲಿ ವಿನಿಯೋಗವಾಗುವಂತಾಗಬೇಕು. 'ರೈತರು ಪ್ರಗತಿ ಕಾಣದೆ ದೇಶದ ಪ್ರಗತಿ ಅಸಾಧ್ಯ' ಎಂಬ ಸತ್ಯವನ್ನು ನಾವೆಲ್ಲರೂ ನೆನಪಿನಲ್ಲಿಟ್ಟುಕೊಳ್ಳಬೇಕು.

ವೇದಿಕೆಗಳ ಮೇಲೆ ನಿಂತು ''ಭಾರತವು ಹಳ್ಳಿಗಳ ದೇಶ. ರೈತನೇ ಈ ದೇಶದ ಬೆನ್ನೆಲುಬು ಮತ್ತು ಅನ್ನದಾತ. ಹಳ್ಳಿಗಳ ಮತ್ತು ರೈತರ ಉದ್ಧಾರವಾಗದೆ ಭಾರತದ ಉದ್ಧಾರವಾಗದು'' ಎಂದು ತೌಡು ಕುಟ್ಟುವವರು ಅಥವಾ ರೈತರ ಕಲ್ಯಾಣದ ಮತ್ತು ಕೃಷಿ ಕ್ಷೇತ್ರದ ಅಭ್ಯುದಯದ ಕುರಿತು ಹುಸಿ ಭರವಸೆಗಳನ್ನು ನೀಡುವವರು, ಈ ನಿಟ್ಟಿನಲ್ಲಿ ನಿಜಾರ್ಥದಲ್ಲಿ ತೊಡಗಿಸಿಕೊಳ್ಳಬೇಕಿದೆ. ಕಾರಣ, 'ಅನ್ನದಾತ' ಎಂದು ಅವರಿವರಿಂದ ಬಾಯಿತುಂಬಾ ಕರೆಸಿಕೊಳ್ಳುವ ರೈತನ ಹೊಟ್ಟೆಯು ಬೆನ್ನಿಗೆ ಅಂಟಿಕೊಂಡು ಯಾವುದೋ ಕಾಲವಾಗಿದೆ. ಕೃಷಿಕ ಮತ್ತು ಕೃಷಿ ವಲಯ ಎದುರಿಸುತ್ತಿರುವ ಸಮಸ್ಯೆಗಳಿಗೆ ಸಂಬಂಧಪಟ್ಟವರು ಇನ್ನಾದರೂ ಸ್ಪಂದಿಸಬೇಕಿದೆ. ಆಗ ಮಾತ್ರವೇ ರೈತ ನೆಮ್ಮದಿಯ ನಿಟ್ಟುಸಿರು ಬಿಟ್ಟಾನು...

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 4

ಸಮಾಚಾರ ಸಣ್ಣದಲ್ಲ

ಬಾಂಬ್ ಪತ್ತೆ ಹಚ್ಚದ 7 ಪೊಲೀಸ್ ಅಮಾನತು

ದೆಹಲಿ: ದೆಹಲಿ ಕೆಂಪುಕೋಟೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮಕ್ಕೂ ಮುಂಚಿನ ಭದ್ರತಾ ತಾಲೀಮು ವೇಳೆ ಅಡಗಿಸಿಟ್ಟಿದ್ದ (ನಕಲಿ) ಬಾಂಬ್‌ಗಳನ್ನು ಪತ್ತೆ ಹಚ್ಚದ ದೆಹಲಿ ಪೊಲೀಸ್ ಇಲಾಖೆಯ ಕಾನ್‌ಸ್ಟೆಬಲ್ ಮತ್ತು ಹೆಡ್ ಕಾನ್‌ಸ್ಟೆಬಲ್ ಸೇರಿದಂತೆ ಒಟ್ಟು 7 ಸಿಬ್ಬಂದಿಗಳನ್ನು ಅಮಾನತುಗೊಳಿಸಲಾಗಿದೆ. ಈ ಏಳೂ ಪೊಲೀಸರನ್ನು ಕೆಂಪು ಕೋಟೆಯಲ್ಲಿ ಸ್ವಾತಂತ್ರ್ಯೋತ್ಸವ ದಿನದ ಭದ್ರತೆಗೆ ನಿಯೋಜಿಸಲಾಗಿತ್ತು. ಈಗ ಭದ್ರತೆಯಲ್ಲಿ ನಿರ್ಲಕ್ಷ್ಯ ಆರೋಪದಡಿ ಅಮಾನತುಗೊಳಿಸಲಾಗಿದೆ.

ಕಾಶ್ಮೀರ ಮಾಜಿ ಗವರ್ನರ್ ಸತ್ಯಪಾಲ್ ಮಲಿಕ್ ನಿಧನ

ದೆಹಲಿ: ದೀರ್ಘಕಾಲದ ಅನಾರೋಗ್ಯ, ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಜಮ್ಮು-ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್(79) ದೆಹಲಿಯ ರಾಮಮನೋಹರ ಲೋಹಿಯಾ

ಆಸ್ಪತ್ರೆಯಲ್ಲಿ ಮಂಗಳವಾರ ಮಧ್ಯಾಹ್ನ 1.10ರಲ್ಲಿ ನಿಧನರಾದರು. ಮಲಿಕ್ 2018ರ ಆಗಸ್ಟ್‌ನಿಂದ 2019ರ ಅಕ್ಟೋಬರ್‌ವರೆಗೂ ಜಮ್ಮು - ಕಾಶ್ಮೀರದ 10ನೇ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದರು. ಅವರ ಅಧಿಕಾರಾವಧಿಯಲ್ಲಿಯೇ ಕೇಂದ್ರ ಸರಕಾರ 370ನೇ ವಿಧಿ ಅನೂರ್ಜಿತಗೊಳಿಸಿ ಜಮ್ಮು-ಕಾಶ್ಮೀರಕ್ಕಿದ್ದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿತು. ಅಲ್ಲದೇ ಜಮ್ಮು-ಕಾಶ್ಮೀರವನ್ನು ಎರಡು ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಿತು. ಮಲಿಕ್, ಮೊದಲು ಮಾಜಿ ಪ್ರಧಾನಿ ಚರಣ್ ಸಿಂಗ್ ಸ್ಥಾಪಿಸಿದ 'ಭಾರತೀಯ ಕ್ರಾಂತಿ ದಳ' ಪಕ್ಷದಲ್ಲಿದ್ದರು. ಭಾಗ್‌ಪತ್ ಕ್ಷೇತ್ರದಿಂದ ಮೊದಲು ಶಾಸಕರಾಗಿ ಆಯ್ಕೆಯಾದರು. ನಂತರ 1980 ಮತ್ತು 1989ರಲ್ಲಿ ಉತ್ತರ ಪ್ರದೇಶದಿಂದ ರಾಜ್ಯಸಭಾ ಸದಸ್ಯರಾದರು. 1989 ರಲ್ಲಿ ಜನತಾ ದಳದ ಟಿಕೆಟ್‌ನಲ್ಲಿ ಅಲಿಗಢ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದರು. ಮಲಿಕ್ ಅವರನ್ನು 2012ರಲ್ಲಿ ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷರನ್ನಾಗಿ ನೇಮಿಸಲಾಯಿತು. 2017ರಲ್ಲಿ ಬಿಹಾರ ರಾಜ್ಯಪಾಲರಾದರು, 2018 ರಲ್ಲಿ ಒಡಿಶಾದ ಹೆಚ್ಚುವರಿ ಉಸ್ತುವಾರಿ ವಹಿಸಲಾಗಿತ್ತು.

ನಿಜ ಭಾರತೀಯರನ್ನು ನಿರ್ಧರಿಸುವುದು ಯಾರು

ದೆಹಲಿ: ನಿಜವಾದ ಭಾರತೀಯ ಯಾರೆಂದು ನಿರ್ಧರಿಸುವುದು ಸುಪ್ರೀಂಕೋರ್ಟ್ ನ್ಯಾಯಾಧೀಶರ ವ್ಯಾಪ್ತಿಗೆ ಬರುವುದಿಲ್ಲ ಎಂದು ಕಾಂಗ್ರೆಸ್ ನಾಯಕಿ

ಪ್ರಿಯಾಂಕಾ ವಾದ್ರಾ ಹೇಳಿದ್ದಾರೆ. ಆ ಮೂಲಕ ಸಹೋದರ ರಾಹುಲ್ ಗಾಂಧಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿದ ಪ್ರಿಯಾಂಕಾ, ಸಹೋದರ ರಾಹುಲ್ ಗೆ ಭಾರತೀಯ ಸೇನೆ ಬಗ್ಗೆ ಬಹಳ ಗೌರವವಿದೆ. ಆತ ಸೇನೆ ವಿರುದ್ಧ ಎಂದೂ ಏನನ್ನೂ ಹೇಳುವುದಿಲ್ಲ ಎಂದರು. ಲೋಕಸಭೆ ಪ್ರತಿಪಕ್ಷ ನಾಯಕನಾಗಿ ಸರಕಾರ ವನ್ನು ಪ್ರಶ್ನೆ ಮಾಡುವುದು ರಾಹುಲ್ ಕರ್ತವ್ಯ. ಆತನ ಹೇಳಿಕೆಗಳನ್ನು ತಪ್ಪಾಗಿ ಅರ್ಥೈಸ ಲಾಗಿದೆ ಎಂದರು. ಸುಪ್ರೀಂಕೋರ್ಟ್ ನ್ಯಾಯಾ ಧೀಶರ ವಿರುದ್ಧ ಕಿಡಿಕಾರಿದರು.

ಹೊಸ ಕರ್ತವ್ಯ ಭವನ ಸಂಜೆ ಲೋಕಾರ್ಪಣೆ

ದೆಹಲಿ: ಅತ್ಯಾಕರ್ಷಕ ವಿನ್ಯಾಸದೊಂದಿಗೆ ಸಜ್ಜಾಗಿರುವ ಕೇಂದ್ರ ಸರಕಾರದ ಹಲವು ಸಚಿವಾಲಯಗಳಿರುವ 'ನೂತನ ಕರ್ತವ್ಯ ಭವನ'ವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಸಂಜೆ 6.30ಕ್ಕೆ ಲೋಕಾರ್ಪಣೆಗೊಳಿಸಲಿದ್ದಾರೆ. ದೆಹಲಿಯ 'ಕರ್ತವ್ಯ ಪಥ'ದಲ್ಲಿರುವ ಈ 'ಕರ್ತವ್ಯ ಭವನ'ದಲ್ಲಿ ನೆಲ ಅಂತಸ್ತು ಮತ್ತು 6 ಮಹಡಿಗಳಿದ್ದು, ಕೇಂದ್ರ ಗೃಹ ಸಚಿವಾಲಯ, ವಿದೇಶಾಂಗ ಸಚಿವಾಲಯ, ಗ್ರಾಮೀಣಾಭಿವೃದ್ಧಿ ಸಚಿವಾಲಯ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ, ಅತಿಸಣ್ಣ-ಸಣ್ಣ ಮತ್ತು ಮಧ್ಯಮ ಪ್ರಮಾಣ ಉದ್ಯಮಗಳ(ಎಂಎಸ್‌ಎಂಇ) ಸಚಿವಾಲಯ, ಕೇಂದ್ರ ಸರಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಸೇರಿದಂತೆ ಹಲವು ಪ್ರಮುಖ ಇಲಾಖೆಗಳ ಕಚೇರಿಗಳಿಗೆ ಸ್ಥಳಾವಕಾಶ ಮಾಡಿಕೊಡಲಾಗಿದೆ.

{ಜೈರಾಮ್ ರಮೇಶ್} ಕಾಂಗ್ರೆಸ್ ಸಂಸದ

'ದೋಸ್ತ್ ದೋಸ್ತ್ ನ ರಹಾ' ಎಂಬ ಚಿತ್ರಗೀತೆ ಪ್ರಧಾನಿ ಮೋದಿಗೂ ಗೊತ್ತಿರಬೇಕು. 'ದೋಸ್ತ್ ದೋಸ್ತ್ ನ ರಹಾ, ಟ್ರಂಪ್ ಯಾರ್ ಹಮೇಂ ತೇರಾ ಐತ್‌ಬಾರ್ ನ ರಹಾ' ಎಂದು ಹಾಡಬಹುದು. ಇಬ್ಬರೂ 'ಹೌಡಿ ಮೋದಿ' ಮತ್ತು 'ನಮಸ್ತೆ ಟ್ರಂಪ್' ಕಾರ್ಯಕ್ರಮ ನಡೆಸಿದ್ದರು. ಆದರೆ, ಮೋದಿ ಮತ್ತು ಟ್ರಂಪ್ ಬಾಂಧವ್ಯ ದೇಶಕ್ಕೆ ದುಬಾರಿಯಾಗುತ್ತಿದೆ.



ವಾಯುಪಡೆ, ನೌಕಾಪಡೆಗೂ ದೊಡ್ಡ ಮಟ್ಟದ ಖರೀದಿ | ಸಿಂದೂರ್ ಬಳಿಕ ವಿವಿಧ ದೇಶಗಳಿಂದಲೂ ಆಸಕ್ತಿ

ಖಂಡಾಂತರ ಬ್ರಹ್ಮೋಸ್‌ಗೆ ಹೆಚ್ಚಿದ ಬೇಡಿಕೆ

ದೆಹಲಿ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ನ 'ಟಾರಿಫ್'(ಪ್ರತಿಸುಂಕ) ಏರಿಸುವ ಬೆದರಿಕೆಗೆ ಸೊಪ್ಪು ಹಾಕದ ಭಾರತ, ಅದಕ್ಕೆ ಪ್ರತಿಯಾಗಿ ಅಮೆರಿಕದಿಂದ ಹೆಸರಾಂತ ಎಫ್-35 ಯುದ್ಧ ವಿಮಾನಗಳನ್ನು ಖರೀದಿಸುವುದನ್ನೇ ರದ್ದು ಮಾಡಿದೆ. ಬದಲಾಗಿ ದೇಶದ ಮೂರೂ ರಕ್ಷಣಾ ಪಡೆಗಳಿಗೆ ಅಗತ್ಯವಾದ ಶಸ್ತ್ರಾಸ್ತ್ರಗಳನ್ನು ಆದಷ್ಟೂ ದೇಶೀಯವಾಗಿಯೇ ತಯಾರಿಸಿಕೊಳ್ಳುವ 'ಆತ್ಮನಿರ್ಭರ ಭಾರತ' ಪರಿಕಲ್ಪನೆಗೆ ಮತ್ತಷ್ಟು ಶಕ್ತಿ ತುಂಬಲು ಮುಂದಾಗಿದೆ.

ಅದರ ಭಾಗವಾಗಿ ಭಾರತೀಯ ವಾಯುಪಡೆ ಮತ್ತು ಭಾರತೀಯ ನೌಕಾಪಡೆಗೆ ದೇಶೀಯವಾಗಿಯೇ ನಿರ್ಮಾಣಗೊಳ್ಳುತ್ತಿರುವ ಕ್ಷಿಪಣಿಗಳನ್ನು ಖರೀದಿಸುವುದಕ್ಕೆ ಉತ್ತೇಜನ ನೀಡಲಾರಂಭಿಸಿದೆ.

ಈ ಮಧ್ಯೆ, ಆಪರೇಷನ್ ಸಿಂದೂರ್ ಕಾರ್ಯಾಚರಣೆಯಲ್ಲಿ ಬಲು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದ ಬ್ರಹ್ಮೋಸ್ ಕ್ಷಿಪಣಿಗಳನ್ನು ರಕ್ಷಣಾ ಪಡೆಗಳಿಗೆ ಹೆಚ್ಚು ಹೆಚ್ಚು ಖರೀದಿಸುವುದಕ್ಕೆ ಭಾರತ ಸರಕಾರ ಅನುಮತಿ ನೀಡಲು ಮುಂದಾಗಿದೆ.

'ಆಪರೇಷನ್ ಸಿಂದೂರ್' ಕಾರ್ಯಾಚರಣೆಯಲ್ಲಿ ಪಾಕಿಸ್ತಾನದ ಪ್ರಮುಖ ವಾಯು ನೆಲೆಗಳಿಗೆ ದೊಡ್ಡ ಮಟ್ಟದ ಹಾನಿ ಮಾಡಿದ್ದೇ ಆತ್ಮನಿರ್ಭರ ಭಾರತದ ತಯಾರಿಕೆಯಾದ 'ಬ್ರಹ್ಮೋಸ್' ಸೂಪರ್ ಸಾನಿಕ್ ಖಂಡಾಂತರ ಕ್ಷಿಪಣಿ. ಆಪರೇಷನ್ ಸಿಂದೂರ್‌ನ 4 ದಿನಗಳ ಸೇನಾ ಕಾರ್ಯಾಚರಣೆ ವೇಳೆ ಪಾಕಿಸ್ತಾನದ ವಾಯುನೆಲೆಗಳು ಮತ್ತು ಸೇನಾ ಕಂಟೋನ್ಮೆಂಟ್ ಧ್ವಂಸಕ್ಕೆ ಬ್ರಹ್ಮೋಸ್ ಕ್ಷಿಪಣಿಗಳನ್ನೇ ಭಾರೀ ಪ್ರಮಾಣದಲ್ಲಿ ಬಳಸಲಾಗಿದೆ. ಆಪರೇಷನ್ ಸಿಂದೂರ್‌ನ ಯಶಸ್ಸು ಬ್ರಹ್ಮೋಸ್ ಖಂಡಾಂತರ ಕ್ಷಿಪಣಿಗಳ ಸಾಮರ್ಥ್ಯವನ್ನು ಜಾಗತಿಕ ಮಟ್ಟದಲ್ಲಿ ಅನಾವರಣಗೊಳಿಸಿದೆ. ಆ ಬಳಿಕ ವಿವಿಧ ದೇಶಗಳೂ ಬ್ರಹ್ಮೋಸ್ ಖರೀದಿಗೆ ಆಸಕ್ತಿ ತೋರಿವೆ. ಭಾರತೀಯ ಸಶಸ್ತ್ರ ಪಡೆಗಳಿಂದಲೂ ಬ್ರಹ್ಮೋಸ್ ಕ್ಷಿಪಣಿ ಖರೀದಿಗೆ ದೊಡ್ಡ ಮಟ್ಟದ ಬೇಡಿಕೆ ಬಂದಿದೆ.

ಭಾರತೀಯ ವಾಯುಪಡೆಯ ಯುದ್ಧ ವಿಮಾನಗಳಿಗೆ ಮತ್ತು ಭಾರತೀಯ ನೌಕಾಪಡೆಯ ಯುದ್ಧನೌಕೆಗಳಿಗೆ

ಹೆಚ್ಚಿನ ಸಂಖ್ಯೆಯ ಬ್ರಹ್ಮೋಸ್ ಕ್ಷಿಪಣಿಗಳ ಖರೀದಿಗೆ ಬೇಕಾಗಿರುವ ಅನುಮತಿಯನ್ನು ಉನ್ನತ ಮಟ್ಟದ ರಕ್ಷಣಾ ಸಚಿವಾಲಯದ ಸಭೆ ನೀಡುವ ನಿರೀಕ್ಷೆಯಿದೆ ಎಂದು ಉನ್ನತ ರಕ್ಷಣಾ ಮೂಲಗಳು ಸುದ್ದಿಸಂಸ್ಥೆಗೆ ಮಂಗಳವಾರ ತಿಳಿಸಿವೆ.

ಜಂಟಿ ಸಹಭಾಗಿತ್ವ: ದಶಕಗಳ ಕಾಲದ ಆಪ್ತಮಿತ್ರ ರಾಷ್ಟ್ರಗಳಾಗಿರುವ ಭಾರತ(ಶೇ.50.5) ಮತ್ತು ರಷ್ಯಾ(ಶೇ.49.5) ಜಂಟಿಯಾಗಿಯೇ 'ಬ್ರಹ್ಮೋಸ್' ಕ್ಷಿಪಣಿಯನ್ನು ಅಭಿವೃದ್ಧಿಪಡಿಸಿವೆ. ಭಾರತದ ಡಿಫೆನ್ಸ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಆರ್ಗನೈಸೇಷನ್ (ಡಿಆರ್‌ಡಿಒ) ಮತ್ತು ರಷ್ಯಾದ ಎನ್‌ಪಿಒ ಮಷಿಕೊ ಸತ್ರೋಯೆನಿಯಾ ಸಂಸ್ಥೆಗಳು ಜಂಟಿಯಾಗಿ ಬ್ರಹ್ಮೋಸ್ ಕ್ಷಿಪಣಿಯನ್ನು ಅಭಿವೃದ್ಧಿಪಡಿಸಿವೆ.

ಸದ್ಯ ತೆಲಂಗಾಣದ ಹೈದರಾಬಾದ್ ಮತ್ತು ಉತ್ತರ ಪ್ರದೇಶದ ಲಖನೌನಲ್ಲಿ ಬ್ರಹ್ಮೋಸ್ ಕ್ಷಿಪಣಿಯ ತಯಾರಿಕೆಗೆ ಬೃಹತ್ ಘಟಕಗಳನ್ನು ಸ್ಥಾಪಿಸಲಾಗಿದೆ.

ಭಾರತೀಯ ವಾಯುಪಡೆಯು ರಷ್ಯಾ ಮೂಲದ ಎಸ್‌ಯು-30 ಎಂಕೆಐ ಯುದ್ಧ ವಿಮಾನಗಳಲ್ಲಿ ದೇಶೀ ಕ್ಷಿಪಣಿಯನ್ನೇ ಬಳಸುತ್ತಿದೆ. ಭಾರತೀಯ ನೌಕಾಪಡೆಯು ತನ್ನ 'ವೀರ್' ಶ್ರೇಣಿಯ ಯುದ್ಧನೌಕೆಗಳಲ್ಲಿ ಬ್ರಹ್ಮೋಸ್ ಖಂಡಾಂತರ ಕ್ಷಿಪಣಿಗಳನ್ನು ಬಳಸಲು ಇಚ್ಛಿಸಿದೆ. ಹಾಗಾಗಿಯೇ ಎರಡೂ ಸಶಸ್ತ್ರ ಪಡೆಗಳಿಗೆ ಅಗತ್ಯವಾದಷ್ಟು ಬ್ರಹ್ಮೋಸ್ ಕ್ಷಿಪಣಿಗೆ ಖರೀದಿಗೆ ಸದ್ಯದಲ್ಲೇ ಅನುಮೋದನೆ ಸಿಗಲಿದೆ ಎಂದು ಮೂಲಗಳು ತಿಳಿಸಿವೆ.

ಪ್ರಧಾನಿ ಮೋದಿ ಮೆಚ್ಚಿದ ಬ್ರಹ್ಮೋಸ್!

ಪ್ರಧಾನಿ ನರೇಂದ್ರ ಮೋದಿ ಅವರು ಭಾರತೀಯ ಸೇನಾಪಡೆಗಳ ಕಾರ್ಯಾಚರಣೆಗಳಲ್ಲಿ ಸ್ವದೇಶಿ ನಿರ್ಮಿತ ಶಸ್ತ್ರಾಸ್ತ್ರ ವ್ಯವಸ್ಥೆಗಳ ಕಾರ್ಯಕ್ಷಮತೆಯನ್ನು ಇತ್ತೀಚೆಗೆ ಬಹಳವಾಗಿ ಶ್ಲಾಘಿಸಿದ್ದರು. 'ಆಪರೇಷನ್ ಸಿಂದೂರ್‌ನಲ್ಲಿ ಬಳಸಲಾದ ಭಾರತದ ಶಸ್ತ್ರಾಸ್ತ್ರಗಳ ಸಾಮರ್ಥ್ಯವನ್ನು ಜಗತ್ತು ನೋಡಿದೆ. ನಮ್ಮ ವಾಯು ರಕ್ಷಣಾ ವ್ಯವಸ್ಥೆ, ಕ್ಷಿಪಣಿ ಮತ್ತು ಡ್ರೋನ್‌ಗಳು ವಿಶೇಷವಾಗಿ ಬ್ರಹ್ಮೋಸ್ ಕ್ಷಿಪಣಿಗಳು ಆತ್ಮನಿರ್ಭರ ಭಾರತದ ಶಕ್ತಿಯನ್ನು ಸಾಬೀತುಪಡಿಸಿವೆ' ಎಂದು ಹೊಗಳಿದ್ದರು.

ಬ್ರಹ್ಮೋಸ್ ಹೊಡೆತಕ್ಕೆ ಥರಗುಟ್ಟಿದ್ದ ಪಾಕ್!

ಭಯೋತ್ಪಾದಕರ ಸೃಷ್ಟಿಕರ್ತ ಪಾಕಿಸ್ತಾನಕ್ಕೆ ಪಾಠ ಕಲಿಸಲು ಭಾರತದ ಸೇನಾಪಡೆಗಳು ನಡೆಸಿದ 'ಆಪರೇಷನ್ ಸಿಂದೂರ್' ಸೇನಾ ಕಾರ್ಯಾಚರಣೆ ವೇಳೆ ಅತ್ಯುಗ್ರ ಪರಿಣಾಮವನ್ನು ತೋರಿಸಿದ ದೇಶೀ ನಿರ್ಮಿತ ಬ್ರಹ್ಮೋಸ್ ಕ್ಷಿಪಣಿಗಳಿಗೆ ಈಗ ದೇಶ-ವಿದೇಶದಿಂದ ಭಾರೀ ಬೇಡಿಕೆ ವ್ಯಕ್ತವಾಗುತ್ತಿದೆ.

ಬ್ರಹ್ಮೋಸ್ ವಿಶ್ವದಲ್ಲೇ ಅತ್ಯಂತ ವೇಗದ ಸೂಪರ್ ಸಾನಿಕ್ ಕ್ರ್ಯೂಸ್ ಮಿಸೈಲ್(ಕ್ಷಿಪಣಿ) ಎನಿಸಿಕೊಂಡಿದೆ. ಅದರ ವೇಗದ ಚಲನೆ, ಗುರಿಯತ್ತ ನಿರ್ದಿಷ್ಟವಾಗಿ ಸಾಗುವಿಕೆಗೆ ಹೆಸರಾಗಿವೆ. ಈ ಅಂಶಗಳು ಪಾಕ್ ವಿರುದ್ಧದ 4 ದಿನಗಳ ಆಪರೇಷನ್ ಸಿಂದೂರ್ ಕಾರ್ಯಾಚರಣೆ ವೇಳೆಯಲ್ಲಿ ಹಾಗೂ ಅದಕ್ಕೂ ಮುಂಚೆ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ 9 ಉಗ್ರರ ನೆಲೆಗಳನ್ನು ಧ್ವಂಸಗೊಳಿಸುವ ಮಿಂಚಿನ ಕಾರ್ಯಾಚರಣೆಯ

ವೇಳೆಯಲ್ಲಿಯೇ ಸಾಬೀತಾಗಿವೆ. ಬ್ರಹ್ಮೋಸ್ ಹೊಡೆತಕ್ಕೆ ಪಾಕ್ ಮತ್ತು ಪಿಒಕೆಯಲ್ಲಿದ್ದ ಜೈಶ್ ಎ ಮೊಹಮ್ಮದ್ ಮತ್ತು ಲಷ್ಕರ್ ಎ ತಯ್ಯಬಾ ಉಗ್ರ ಸಂಘಟನೆಗಳ ಪ್ರಧಾನ ನೆಲೆಗಳು ಇನ್ನಿಲ್ಲದಂತೆ ನಾಶವಾದವು. ಆಪರೇಷನ್ ಸಿಂದೂರ್ ವೇಳೆ ಪಾಕ್‌ನ ಪ್ರಮುಖ ವಾಯುನೆಲೆಗಳ ರನ್‌ವೇಗಳು ತಕ್ಷಣಕ್ಕೆ ಬಳಸಲಾಗದಷ್ಟು ಹಾನಿಗೀಡಾದವು. ಇದೆಲ್ಲವೂ ಜಗತ್ತಿನೆದುರು ಬ್ರಹ್ಮೋಸ್‌ನ ಶಕ್ತಿ ಸಾಮರ್ಥ್ಯವನ್ನು ತೆರೆದಿಟ್ಟಿತು.

ಬ್ರಹ್ಮೋಸ್ ಅದ್ಭುತ ಸಾಮರ್ಥ್ಯ

ಶತ್ರು ದೇಶಗಳ ರಾಡಾರ್‌ನ ಕಣ್ಣು ತಪ್ಪಿಸಲು ಬ್ರಹ್ಮೋಸ್ ಕ್ಷಿಪಣಿ ಸಮುದ್ರ ಮಟ್ಟಕ್ಕೆ ಬಲು ಸಮೀಪವಾಗಿ, ಅಂದರೆ ಸಮುದ್ರಕ್ಕೆ ಕೇವಲ 3ರಿಂದ 10 ಮೀಟರ್‌ಗಳಷ್ಟು ಎತ್ತರದಲ್ಲಿ ಅತಿವೇಗವಾಗಿ ಸಾಗಬಲ್ಲದಾಗಿದೆ. ಅಲ್ಲದೇ, ಆಕಾಶದಲ್ಲಿ 15 ಕಿಮೀಗಳಷು ಎತ್ತರದಲ್ಲಿಯೂ ಸಾಗಬಲ್ಲದಾಗಿದೆ. ಬ್ರಹ್ಮೋಸ್ ಕ್ಷಿಪಣಿಯನ್ನು ತಡೆಯಲು ಚೀನಾದ ಕ್ಷಿಪಣಿ ನಾಶ ವ್ಯವಸ್ಥೆಯಿಂದಲೂ ಸಾಧ್ಯವಾಗದು ಎಂಬುದನ್ನು ಅಮೆರಿಕದ ರಕ್ಷಣಾ ಕ್ಷೇತ್ರ ಪರಿಣತ ಜಾನ್ ಸ್ಪೆನ್ಸರ್ ಅವರೇ ಹೇಳಿದ್ದಾರೆ. ಸದ್ಯ ಅತ್ಯಾಧುನಿಕ ಗುಣಮಟ್ಟದ ಬ್ರಹ್ಮೋಸ್ ಕ್ಷಿಪಣಿ ಬೆಲೆ ಅಂದಾಜು 34 ಕೋಟಿ ರು.ಗಳು ಎನ್ನಲಾಗಿದೆ. ಸದ್ಯ ಭಾರತದ ಸಶಸ್ತ್ರ ಪಡೆಗಳಿಗೆ ಒಟ್ಟು 1200ರಿಂದ 1500 ಬ್ರಹ್ಮೋಸ್ ಕ್ಷಿಪಣಿಗಳನ್ನು ಹೊಂದುವ ಗುರಿ ಇಟ್ಟುಕೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಕಾರ್ಯತಂತ್ರ ಪಾಲುದಾರಿಕೆ: ಭಾರತ-ಫಿಲಿಪೈನ್ಸ್ ಸಹಿ

ದೆಹಲಿ: ಭಾರತ ಮತ್ತು ಫಿಲಿಪೈನ್ಸ್ ಪರಸ್ಪರ ಕಾರ್ಯತಂತ್ರ ಪಾಲುದಾರಿಕೆ ಒಪ್ಪಂದಕ್ಕೆ ಮಂಗಳವಾರ ಸಹಿ ಹಾಕಿವೆ.

ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಫಿಲಿಪೈನ್ಸ್ ಅಧ್ಯಕ್ಷ ಫರ್ಡಿನಾಂಡ್ ಆರ್ ಮಾರ್ಕೋಸ್ ಜೂನಿಯರ್ ನಡುವಿನ ದ್ವಿಪಕ್ಷೀಯ ಸಭೆ ವೇಳೆ ಈ ಘೋಷಣೆ ಮಾಡಲಾಯಿತು.

ಎರಡೂ ದೇಶಗಳ ನಡುವಿನ ಸಂಬಂಧವನ್ನು ಈಗ ಕಾರ್ಯತಂತ್ರ ಪಾಲುದಾರಿಕೆ ಮಟ್ಟಕ್ಕೇರಿಸಲು ಸಮ್ಮತಿಸಿರುವುದು ಸಂತಸದ ಸಂಗತಿ. ರಾಷ್ಟ್ರಗಳ ನಡುವಿನ ಆಳವಾದ ಪರಸ್ಪರ ನಂಬಿಕೆಗೆ ರಕ್ಷಣಾ ಸಂಬಂಧಗಳ ಬಲವರ್ಧನೆಯು ಸ್ಪಷ್ಟ ಸಂಕೇತವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಎರಡೂ ದೇಶಗಳ ನಡುವಿನ ಪಾಲುದಾರಿಕೆ ಸಾಮರ್ಥ್ಯವನ್ನು ಫಲಿತಾಂಶಗಳಾಗಿ ಪರಿವರ್ತಿಸಲು ಸಮಗ್ರ ಕ್ರಿಯಾ ಯೋಜನೆ ರೂಪಿಸಲಾಗಿದೆ ಎಂದರು.

ಪಹಲ್ಗಾಮ್ ಭಯೋತ್ಪಾದಕ ದಾಳಿ ಖಂಡಿಸಿದ ಮತ್ತು ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತದ ಜತೆ ನಿಂತ ಫಿಲಿಪೈನ್ಸ್ ಸರಕಾರಕ್ಕೆ ಪ್ರಧಾನಿ ಮೋದಿ ಇದೇ ವೇಳೆ ಧನ್ಯವಾದ ಅರ್ಪಿಸಿದರು.

ಭಾರತ-ಫಿಲಿಪೈನ್ಸ್ ಆಯ್ಕೆಯಿಂದ ಸ್ನೇಹಿತರು, ಅದೃಷ್ಟದಿಂದ ಪಾಲುದಾರರು. ಹಿಂದೂ ಮಹಾಸಾಗರದಿಂದ ಪೆಸಿಫಿಕ್‌ವರೆಗೂ ಹಂಚಿತ ಮೌಲ್ಯಗಳಿಂದ ಎರಡೂ ದೇಶಗಳು ಒಂದಾಗಿವೆ. ನಮ್ಮದು ಕೇವಲ ಹಿಂದಿನ ಸ್ನೇಹವಲ್ಲ, ಭವಿಷ್ಯದ ಭರವಸೆ ಎಂದೂ ಮೋದಿ ವ್ಯಾಖ್ಯಾನಿಸಿದರು.

75 ವರ್ಷಗಳ ಸಂಭ್ರಮ

ಭಾರತ-ಫಿಲಿಪೈನ್ಸ್ ರಾಜತಾಂತ್ರಿಕ ಸಂಬಂಧ ಸ್ಥಾಪನೆ 75ನೇ ವರ್ಷ ಆಚರಿಸುತ್ತಿದೆ. ಅದರ ಸ್ಮರಣಾರ್ಥ ಉಭಯ ನಾಯಕರು ವಿಶೇಷ ಅಂಚೆ ಚೀಟಿ ಬಿಡುಗಡೆ ಮಾಡಿದರು. 'ಆಕ್ಟ್ ಈಸ್ಟ್' ಪಾಲಿಸಿ ಮತ್ತು 'ಮಹಾಸಾಗರ್ ವಿಷನ್' ಪ್ರಕಾರ ಫಿಲಿಪೈನ್ಸ್ ಭಾರತದ ಪ್ರಮುಖ ಪಾಲುದಾರ ರಾಷ್ಟ್ರವಾಗಿದೆ. ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ಶಾಂತಿ, ಭದ್ರತೆ, ಸಮೃದ್ಧಿ ಮತ್ತು ನಿಯಮಾಧಾರಿತ ಆದೇಶಕ್ಕೆ ಉಭಯತ್ರರೂ ಬದ್ಧರಾಗಿದ್ದೇವೆ. ಅಂತಾರಾಷ್ಟ್ರೀಯ ಕಾನೂನುಗಳಿಗೆ ಅನುಗುಣವಾಗಿ ನೌಕಾಯಾನ ಸ್ವಾತಂತ್ರ್ಯವನ್ನೂ ಬೆಂಬಲಿಸುತ್ತೇವೆ ಎಂದು ಮೋದಿ ಹೇಳಿದರು.

ಭಾರತದ ದೀರ್ಘಾವಧಿ ಗೃಹ ಸಚಿವ ಅಮಿತ್ ಶಾ!

ದೆಹಲಿ: ಭಾರತದಲ್ಲಿ ಅತಿ ಹೆಚ್ಚು ಕಾಲ ಕೇಂದ್ರ ಗೃಹ ಸಚಿವರಾಗಿ ಸೇವೆ ಸಲ್ಲಿಸಿದ ಹೆಗ್ಗಳಿಕೆಗೆ ಅಮಿತ್ ಶಾ ಪಾತ್ರರಾಗಿದ್ದಾರೆ. ಅವರು ಈ ಹುದ್ದೆಯಲ್ಲಿ 6 ವರ್ಷ 56 ದಿನಗಳನ್ನು ಇದೇ ಆಗಸ್ಟ್ 5ರ ಮಂಗಳವಾರ ಪೂರ್ಣ ಗೊಳಿಸಿದ್ದಾರೆ.



2019ರ ಮೇ 30ರಂದು ಕೇಂದ್ರ ಗೃಹ ಸಚಿವರಾಗಿ ಅಧಿಕಾರ ವಹಿಸಿಕೊಂಡ ಶಾ, ಈವರೆಗೆ ಒಟ್ಟು 2258 ದಿನಗಳನ್ನು ಆ ಹುದ್ದೆಯಲ್ಲಿ ಪೂರೈಸಿದ್ದಾರೆ. ಇದರೊಂದಿಗೆ, 2256 ದಿನಗಳ ಕಾಲ ಈ ಹುದ್ದೆಯನ್ನು ಅಲಂಕರಿಸಿದ್ದ ಹಿರಿಯ ಬಿಜೆಪಿ ನಾಯಕ ಲಾಲ್ ಕೃಷ್ಣ ಅಡ್ವಾಣಿ ಅವರ ಸುದೀರ್ಘ ಅಧಿಕಾರಾವಧಿಯನ್ನು ಮೀರಿಸಿ ಅಮಿತ್ ಶಾ ಹೊಸ ದಾಖಲೆ ಬರೆದಿದ್ದಾರೆ.

ಅಡ್ವಾಣಿ ಅವರು 1998 ರ ಮಾ.19ರಿಂದ 2004 ರ ಮೇ 22ರವರೆಗೆ ಕೇಂದ್ರ ಗೃಹ ಸಚಿವ ರಾಗಿದ್ದರು. ಕಾಂಗ್ರೆಸ್ ನಾಯಕ ಗೋವಿಂದ್ ವಲ್ಲಭ್ ಪಂತ್ ಅವರು 1955ರ ಜ.10ರಿಂದ 1961ರ ಮಾ.7ವರೆಗೆ ಕೇಂದ್ರ ಗೃಹ ಸಚಿವರಾಗಿ ಸೇವೆ ಸಲ್ಲಿಸಿದ್ದರು.

ಜಮ್ಮು- ಕಾಶ್ಮೀರಕ್ಕೆ ವಿಶೇಷ ಸಾಂವಿಧಾನಿಕ ಸ್ಥಾನಮಾನ ನೀಡಿದ್ದ 370ನೇ ವಿಧಿಯನ್ನು ರದ್ದುಗೊಳಿಸುವುದಾಗಿ ಸಂಸತ್ತಿನಲ್ಲಿ 2019ರಲ್ಲಿ ಘೋಷಿಸಿದ್ದು, ಅಮಿತ್ ಶಾ ಅವರ ಅಧಿಕಾರವ ಧಿಯಲ್ಲಿ ವಿಶೇಷವಾಗಿ ಗುರುತಿಸಲಾಗಿದೆ. ಮೊದಲಿಗೆ 2019ರ ಮೇ 30ರಂದು ಕೇಂದ್ರ ಗೃಹ ಸಚಿವರಾಗಿ ಅಧಿಕಾರ ವಹಿಸಿಕೊಂಡ ಶಾ, 2024ರ ಜೂ.9ವರೆಗೂ ಆ ಹುದ್ದೆಯಲ್ಲಿದ್ದರು. 2024ರಲ್ಲಿ ಹೊಸ ಸರಕಾರ ರಚನೆಯಾದ ನಂತರ ಜೂ.10ರಂದು ಮತ್ತೆ ಕೇಂದ್ರ ಗೃಹ ಸಚಿವರಾದರು. ಜತೆಗೆ, ಕೇಂದ್ರ ಸಹಕಾರ ಸಚಿವರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಶಾ ಅವರ ಅಧಿಕಾರವಧಿ ಆಂತರಿಕ ಭದ್ರತೆ ಮತ್ತು ಆಡಳಿತದಲ್ಲಿ ಹಲವು ಮಹತ್ವದ ಬೆಳವಣಿಗೆ ಗಳನ್ನು ಕಂಡಿದೆ. ನಕ್ಸಲ್ ಚಟುವಟಿಕೆ ನಿಗ್ರಹಿ ಸಿದ್ದು, ಹಂತ ಹಂತವಾಗಿ ಪೌರತ್ವ ತಿದ್ದುಪಡಿ ಕಾಯ್ದೆ ಅನುಷ್ಠಾನ, ಈಶಾನ್ಯ ರಾಜ್ಯಗಳಲ್ಲಿ ದೀರ್ಘಕಾಲದಿಂದ ಇದ್ದ ಹಿಂಸಾತ್ಮಕ ಹೋರಾಟ ಗಳಿಗೆ ಕೊನೆ ಹಾಡಲು ಒಪ್ಪಂದಗಳನ್ನು ಮಾಡಿಕೊಂಡಿರುವುದು ಶಾ ಅಧಿಕಾರವಧಿಯ ಪ್ರಮುಖ ಕ್ರಮಗಳಾಗಿವೆ.

ಪ್ರಧಾನಿ ಮೋದಿ ಶ್ಲಾಘನೆ

ಸುದೀರ್ಘ ಅವಧಿಗೆ ಕೇಂದ್ರ ಗೃಹ ಸಚಿವರಾಗಿರುವ ದಾಖಲೆ ನಿರ್ಮಿಸಿದ ಅಮಿತ್ ಶಾ ಅವರನ್ನು ದೆಹಲಿಯಲ್ಲಿ ಮಂಗಳವಾರ ಎನ್‌ಡಿಎ ಮೈತ್ರಿಕೂಟ ಸಭೆಯಲ್ಲಿ ಪ್ರಧಾನಿ ಮೋದಿ ಶ್ಲಾಘಿಸಿದರು. ಇದೇ ವೇಳೆ, ಎನ್‌ಡಿಎ ಸಂಸದೀಯ ಪಕ್ಷದ ಸಭೆಯಲ್ಲಿ ಆಪರೇಷನ್ ಸಿಂದೂರ್ ಕುರಿತ ನಿರ್ಣಯ ಮಂಡಿಸಿ ಅಂಗೀಕರಿಸಲಾಯಿತು.

ಸುವೇಂದು ಕಾವಲು ವಾಹನ ಮೇಲೆ ದಾಳಿ

ಕೂಚ್‌ಬೆಹಾರ್: ಪಶ್ಚಿಮ ಬಂಗಾಳ ವಿಧಾನಸಭೆ ಪ್ರತಿಪಕ್ಷ ನಾಯಕ ಸುವೇಂದು ಅಧಿಕಾರಿ ಅವರ ಬೆಂಗಾವಲು ವಾಹನದ ಮೇಲೆ ಟಿಎಂಸಿ ಕಾರ್ಯಕರ್ತರು ಕೂಚ್ ಬೆಹಾರ್ ಜಿಲ್ಲೆಯಲ್ಲಿ ಮಂಗಳವಾರ ದಾಳಿ ನಡೆಸಿದ್ದಾರೆ ಎಂದು ವರದಿಯಾಗಿದೆ.

ಟಿಎಂಸಿ ಧ್ವಜಗಳು ಮತ್ತು ಕಪ್ಪು ಬಾವುಟಗಳನ್ನು ಹಿಡಿದಿದ್ದ ಗುಂಪು ಮಧ್ಯಾಹ್ನ 12.35ರಲ್ಲಿ ಸುವೇಂದು ಅಧಿಕಾರಿ ಅವರ ಬೆಂಗಾವಲು ವಾಹನಕ್ಕೆ ಕಲ್ಲೆಸೆದಿದದು, ಕಾರಿನ ಕಿಟಕಿ ಗಾಜು ಪುಡಿಯಾಗಿದೆ ಎಂದು ಬಿಜೆಪಿ ನಾಯಕರು ದೂರಿದ್ದಾರೆ. ಆದರೆ, ದಾಳಿ ಆರೋಪವನ್ನು ಟಿಎಂಸಿ ತಳ್ಳಿಹಾಕಿದೆ. ಇದು ಬಿಜೆಪಿ ಸೃಷ್ಟಿಸಿದ ಉತ್ತಮ ನಾಟಕ ಎಂದು ಟೀಕಿಸಿದೆ.

ಕೂಚ್ ಬೆಹಾರ್ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಮುಂದೆ ಬಿಜೆಪಿ ನಡೆಸುತ್ತಿದ್ದ ಪ್ರತಿಭಟನೆಯನ್ನು ಮುನ್ನಡೆಸಲು ಉತ್ತರ ಬಂಗಾಳ ಜಿಲ್ಲೆಗೆ ಆಗಮಿಸಿದ ಬಿಜೆಪಿ ನಾಯಕ ಸುವೇಂದು ಅಧಿಕಾರಿ ವಿರುದ್ಧ ಟಿಎಂಸಿ ಕಾರ್ಯಕರ್ತರು ಘೋಷಣೆ ಕೂಗಿದ್ದು, ಖಗ್ರಾಬರಿ ಪ್ರದೇಶದ ಬಳಿ ಕಪ್ಪು ಬಾವುಟ ತೋರಿಸಿದ್ದಾರೆ.

ಕಾಶ್ಮೀರಕ್ಕೆ ರಾಜ್ಯ ಸ್ಥಾನ: 8ಕ್ಕೆ ಸುಪ್ರೀಂ ವಿಚಾರಣೆ

ದೆಹಲಿ: ಜಮ್ಮು-ಕಾಶ್ಮೀರಕ್ಕೆ ಮತ್ತೆ ರಾಜ್ಯದ ಸ್ಥಾನಮಾನ ದೊರಕಿಸಿಕೊಡುವಂತೆ ಕೋರಿದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ನಡೆಸಲಿದೆ. ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಪೀಠದೆದುರು ಹಿರಿಯ ವಕೀಲ ಗೋಪಾಲ್ ಶಂಕರನಾರಾ ಯಣನ್ ಅವರು ಮಂಗಳವಾರ ಈ ವಿಚಾರ ಪ್ರಸ್ತಾಪಿಸಿದರು. ಸಂಬಂಧಿಸಿದ ಅರ್ಜಿಗಳನ್ನು ಆ.8ರಂದು ವಿಚಾರಣೆಗೆ ಪಟ್ಟಿ ಮಾಡಲು ಪೀಠ ಒಪ್ಪಿತು.

ರಾಜ್ಯ ಸ್ಥಾನಮಾನ ಮರುಸ್ಥಾಪಿಸದೇ ಇರುವುದರಿಂದ ಜಮ್ಮು-ಕಾಶ್ಮೀರದ ಜನರ ಹಕ್ಕುಗಳ ಮೇಲೆ ಗಂಭೀರ ಪರಿಣಾಮವಾಗುತ್ತಿದೆ ಎಂದು ಕಾಲೇಜು ಅಧ್ಯಾಪಕ ಜಹೂರ್ ಅಹಮದ್ ಭಟ್ ಎಂಬವರು ಕಳೆದ ವರ್ಷ ವಿಧಾನಸಭಾ ಚುನಾವಣೆ ಸಂದರ್ಭ ಅರ್ಜಿ ಸಲ್ಲಿಸಿದ್ದರು. ರಾಜ್ಯ ಸ್ಥಾನಮಾನ ನೀಡುವುದಕ್ಕೂ ಮುನ್ನವೇ ವಿಧಾನಸಭೆಗೆ ಚುನಾವಣೆ ನಡೆಸಿ ಶಾಸಕಾಂಗ ಸಭೆ ರಚಿಸು

ವುದು ಒಕ್ಕೂಟ ವ್ಯವಸ್ಥೆಯ ಪರಿಕಲ್ಪನೆಯ ಉಲ್ಲಂಘನೆ ಎಂದು ಅರ್ಜಿಯಲ್ಲಿ ಗಮನ ಸೆಳೆದಿದ್ದಾರೆ. ಈಗಾಗಲೇ ಸುಪ್ರೀಂ ಕೋರ್ಟ್ ವಿಧಿ 370 ರದ್ದು ಕ್ರಮವನ್ನು ಎತ್ತಿಹಿಡಿದಿದೆ. ಜಮ್ಮು-ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ತಾತ್ಕಾಲಿಕವಾದುದು. ಮರಳಿ ರಾಜ್ಯ ಸ್ಥಾನಮಾನ ನೀಡಲಾಗುವುದು ಎಂಬ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರ ಹೇಳಿಕೆಯನ್ನು ನ್ಯಾಯಾಲಯ ಈ ಮೊದಲೇ ದಾಖಲಿಸಿಕೊಂಡಿದೆ.

ಶಿಬು ಸೊರೆನ್ ಅಂತ್ಯಕ್ರಿಯೆ

ರಾಮಗಢ: ಜಾರ್ಖಂಡ್ ಮಾಜಿ ಮುಖ್ಯಮಂತ್ರಿ, ಜೆಎಂಎಂ ಪಕ್ಷದ ಸಂಸ್ಥಾಪಕ ಶಿಬು ಸೊರೆನ್ ಅವರ ಅಂತ್ಯಕ್ರಿಯೆ ಮಂಗಳ

ವಾರ ರಾಮಗಢ ಜಿಲ್ಲೆಯ ನೆಮ್ರಾದಲ್ಲಿ ಸಕಲ ಸರಕಾರಿ ಗೌರವಗಳೊಂದಿಗೆ ನೆರವೇರಿತು. ಹುಟ್ಟೂರು ನೆಮ್ರಾದಲ್ಲಿ ಅಂತ್ಯಕ್ರಿಯೆ ವೇಳೆ ಸಾವಿರಾರು ಸಂಖ್ಯೆಯಲ್ಲಿ ಜನರು ನೆರೆದಿದ್ದರು. ಹಿರಿಯ ಪುತ್ರ, ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೆನ್, ತಂದೆಯ ಚಿತೆಗೆ ಬೆಂಕಿ ಹಚ್ಚುತ್ತಿದ್ದಂತೆ, ಜನ 'ಗುರೂಜಿ ಅಮರ್ ರಹೇ' ಎಂಬ ಘೋಷಣೆ ಮೊಳಗಿಸಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ನಾಯಕರು ದೆಹಲಿಯಲ್ಲಿ ಶಿಬು ಸೊರೆನ್ ಅವರಿಗೆ ಸೋಮವಾರ ಅಂತಿಮ ನಮನ ಸಲ್ಲಿಸಿದ್ದರು.

ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆಗೆ ಜೆಪಿ ನಡ್ಡಾ ತಿರುಗೇಟು

ಪ್ರತಿಪಕ್ಷದ ಕೆಲಸಕ್ಕೆ ಟ್ಯೂಷನ್

ದೆಹಲಿ: ರಾಜ್ಯಸಭೆ ಸದನದೊಳಗೆ ಕೇಂದ್ರ ಕೈಗಾರಿಕಾ ಭದ್ರತಾ ಪಡೆ ಸಿಬ್ಬಂದಿ ನಿಯೋಜನೆ ಸಂಬಂಧ ಸದನದ ನಾಯಕ ಜೆಪಿ

ನಡ್ಡಾ ಮತ್ತು ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ನಡುವೆ ಮಂಗಳವಾರ ತೀವ್ರ ವಾಕ್ ಚಕಮಕಿ ನಡೆಯಿತು.

ಆಡಳಿತಾರೂಢ ಪಕ್ಷ ಸದನದ ಬಾವಿ ಬಳಿ ಸಿ ಐ ಎಸ್ ಎಫ್ ಸಿಬ್ಬಂದಿಯನ್ನು ನಿಯೋಜಿಸಿದೆ. ರಾಜ್ಯಸಭಾ ಸದಸ್ಯರು ತಮ್ಮ ಪ್ರಜಾಸತಾತ್ಮಕ ಹಕ್ಕುಗಳನ್ನು ಚಲಾಯಿಸುವಾಗ ಕೇಂದ್ರಿಯ ಕೈಗಾರಿಕಾ ಭದ್ರತಾ ಸಿಬ್ಬಂದಿ ಸದನದ ಬಾವಿ ಬಳಿ ಇರುವುದು ಆಘಾತವನ್ನುಂಟು ಮಾಡಿದೆ ಎಂದು ಖರ್ಗೆ ಹೇಳಿದರು. ನಮ್ಮ ಸಂಸತ್ತು ಈ ಮಟ್ಟಕ್ಕೆ ಇಳಿದಿದೆಯೇ? ಎಂದು ಪ್ರಶ್ನಿಸಿದ ಖರ್ಗೆ, ಇದು ಅತ್ಯಂತ ಆಕ್ಷೇಪಾರ್ಹ. ನಾವು ಇದನ್ನು ಖಂಡಿಸುತ್ತೇವೆ. ಮುಂದೆ ಸದಸ್ಯರು ಸಾರ್ವಜನಿಕ ಮಹತ್ವದ ವಿಷಯ ಕುರಿತು ಚರ್ಚೆಗೆ ದನಿ ಎತ್ತಿದಾಗ ಸಿಐಎಸ್‌ಎಫ್ ಸಿಬ್ಬಂದಿ ಸದನದ ಬಾವಿಗೆ ಬರಲ್ಲ ಎಂಬ ನಿರೀಕ್ಷೆಯಿದೆ ಎಂದರು.

ಮಾತು ಮುಂದುವರೆಸಿದ ಖರ್ಗೆ, ಅರುಣ್ ಜೇಟ್ಲಿ ಹಾಗೂ ಸುಷ್ಮಾ ಸ್ವರಾಜ್ ರಾಜ್ಯಸಭೆಯ ಸದನದ ನಾಯಕರಾಗಿದ್ದಾಗ ಕಲಾಪಕ್ಕೆ ಅಡ್ಡಿಪಡಿಸುವುದನ್ನು ಪ್ರಜಾಸತ್ತಾತ್ಮಕ ಪ್ರಕ್ರಿಯೆ ಬಲಪಡಿಸುವುದಕ್ಕೆ ಅಡ್ಡಿ ಅಂತಾ ಹೇಳುತ್ತಿದ್ದು, ಇದು ದೊಡ್ಡ ವಿಷಯವಲ್ಲ. ನಾವು ಪ್ರಜಾಸತ್ತಾತ್ಮಕ ರೀತಿಯಲ್ಲಿ ಪ್ರತಿಭಟನೆ ಮಾಡುತ್ತಿದ್ದೇವೆ ಮತ್ತು ನಾವು ಅದನ್ನು ಮುಂದುವರಿಸುತ್ತೇವೆ. ಇದು ನಮ್ಮ ಹಕ್ಕು ಎಂದು ಖರ್ಗೆ ಹೇಳಿದರು.

ಆದರೆ, ಉಪ ಸಭಾಪತಿ ಹರಿವಂಶ್ ಅವರು ಖರ್ಗೆ ಅವರ ಹೇಳಿಕೆಯನ್ನು ತಳ್ಳಿಹಾಕಿದರು ಮತ್ತು ಇವರು ಸಿಐಎಸ್‌ಎಫ್ ಸಿಬ್ಬಂದಿಯಲ್ಲ, ಸಂಸತ್ತಿನ ಭದ್ರತಾ ಸಿಬ್ಬಂದಿ. ಮಾರ್ಷಲ್ ಮಾತ್ರ ಸಭಾಧ್ಯಕ್ಷರ ಆದೇಶ ಪಾಲಿಸುತ್ತಾರೆ ಎಂದು ಸ್ಪಷ್ಟಪಡಿಸಿದರು.

ಬಳಿಕ ಮಾತನಾಡಿದ ಜೆ.ಪಿ.ನಡ್ಡಾ, ಕಲಾಪಕ್ಕೆ ಅಡ್ಡಿಪಡಿಸುವುದು ಪ್ರಜಾಸತ್ತಾತ್ಮಕವಲ್ಲ ಎಂದು ಸ್ಪಷ್ಟಪಡಿಸಿದ್ದೀರಿ. ನಾನು ಮಾತನಾಡುವಾಗ ನನ್ನ ಪಕ್ಕದಲ್ಲಿ ಯಾರಾದರೂ ಘೋಷಣೆ ಕೂಗಿದರೆ ಅದು ಪ್ರಜಾಪ್ರಭುತ್ವವಲ್ಲ. ಇದು ಸರಿಯಾದ ಕೆಲಸವಲ್ಲ. ನಾನು ಬಹು ದೀರ್ಘ ಕಾಲ ಪ್ರತಿ ಪಕ್ಷದಲ್ಲಿ ಇದ್ದುದರಿಂದ ಪ್ರತಿಪಕ್ಷ ಹೇಗೆ ಕೆಲಸ ಮಾಡಬೇಕು ಎಂದು ನನ್ನಿಂದ ಟ್ಯೂಷನ್ ತೆಗೆದುಕೊಳ್ಳಿ. ಮುಂದಿನ 40 ವರ್ಷ ನೀವು ಪ್ರತಿಪಕ್ಷದಲ್ಲಿಯೇ ಇರುತ್ತೀರಿ ಎಂದು ಛೇಡಿಸಿದರು.

ಆಲಮಟ್ಟಿ ಎತ್ತರಿಸದಂತೆ ತಡೆಗೆ ಮಹಾ ಆಗ್ರಹ

ದೆಹಲಿ: ಕೃಷ್ಣಾ ನದಿಗೆ ನಿರ್ಮಿಸಿರುವ ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು ಹೆಚ್ಚಿಸುವ ಕರ್ನಾಟಕದ ಪ್ರಯತ್ನವನ್ನು ತಡೆಯಬೇಕೆಂದು ಕೇಂದ್ರ ಸರಕಾರವನ್ನು ಮಹಾರಾಷ್ಟ್ರ ಸರಕಾರ ಒತ್ತಾಯಿಸಿದೆ.

ದೆಹಲಿಯಲ್ಲಿ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಅವರನ್ನು ಭೇಟಿಯಾದ ಮಹಾರಾಷ್ಟ್ರ ಜಲ ಸಂಪನ್ಮೂಲ ಸಚಿವ ರಾಧಾಕೃಷ್ಣ ವಿಖೆ ಪಾಟೀಲ್ ನೇತೃತ್ವದ ನಿಯೋಗ, ಆಲಮಟ್ಟಿ ಅಣೆಕಟ್ಟೆ ಎತ್ತರವನ್ನು 519.60 ಮೀಟರ್‌ನಿಂದ 524.256 ಮೀಟರ್‌ಗಳಿಗೆ ಏರಿಸಲು ಕರ್ನಾಟಕ ಮುಂದಾಗಿದೆ. ಅಣೆಕಟ್ಟೆ ಮತ್ತಷ್ಟು ಎತ್ತರವಾದರೆ ಹಿನ್ನೀರಿನ ಸಂಗ್ರಹ ಪ್ರಮಾಣದಲ್ಲಿ ಭಾರೀ ಹೆಚ್ಚಳವಾಗಿ ರಾಜ್ಯದ ಸಾಂಗ್ಲಿ, ಸತಾರಾ, ಕೊಲ್ಹಾಪುರ ಜಿಲ್ಲೆಗಳಲ್ಲಿ ಪ್ರವಾಹ ಉಂಟಾಗುತ್ತದೆ ಎಂದು ಕಳವಳ ವ್ಯಕ್ತಪಡಿಸಿದೆ.

ಅಲ್ಲದೇ, ಮೂರೂ ಜಿಲ್ಲೆಗಳಲ್ಲಿನ ಪರಿಸರದ ಮೇಲೆಯೂ ಪ್ರತಿಕೂಲ ಪರಿಣಾಮವಾಗಲಿದೆ. ಇದೇ ಕಾರಣಕ್ಕಾಗಿ ನಮ್ಮ ರಾಜ್ಯ ನಿರಂತರ ಆಕ್ಷೇಪಣೆ ವ್ಯಕ್ತಪಡಿಸುತ್ತಿದೆ. 2019 ಮತ್ತು 2021ರಲ್ಲಿ ಸಾಂಗ್ಲಿ ಮತ್ತು ಕೊಲ್ಹಾಪುರ ಜಿಲ್ಲೆಗಳಲ್ಲಿ ಅತಿ ಹೆಚ್ಚು ಮಳೆ ಹಾಗೂ ಆಲಮಟ್ಟಿ ಅಣೆಕಟ್ಟಿನ ಹಿನ್ನೀರಿನಿಂದಾಗಿ ತೀವ್ರ ಪ್ರವಾಹ ಉಂಟಾಗಿತ್ತು ಎಂಬ ಅಂಕಿಅಂಶವೂ ಇದೆ. ಕೇಂದ್ರ ಸರಕಾರ ಮಧ್ಯಪ್ರವೇಶಿಸಿ, ಅಣೆಕಟ್ಟೆ ಹೆಚ್ಚಳ ಪ್ರಸ್ತಾಪವನ್ನು ತಡೆಯಬೇಕು ಎಂದು ನಿಯೋಗ ಒತ್ತಾಯಿಸಿದೆ.

ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಈ ಮೊದಲೇ ಕೇಂದ್ರಕ್ಕೆ ಇದೇ ವಿಚಾರವಾಗಿ ಪತ್ರ ಬರೆದು ಅಣೆಕಟ್ಟಿನ ಎತ್ತರ ಹೆಚ್ಚಳಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದೂ ಸಚಿವ ವಿಖೆ ಪಾಟೀಲ್ ನೆನಪಿಸಿದರು.

ಕೆನಡಾದಲ್ಲಿ 51 ಅಡಿ ಶ್ರೀರಾಮ ಪ್ರತಿಮೆ!

ಕೆನಡಾದ ಒಂಟಾರಿಯೊ ರಾಜ್ಯದ ಮಿಸ್ಸಿಸೌಗಾದಲ್ಲಿರುವ ಹಿಂದೂ ಪರಂಪರೆ ಕೇಂದ್ರದಲ್ಲಿ ಹಿಂದೂಗಳ ಆರಾಧ್ಯ ದೈವ ಶ್ರೀರಾಮಚಂದ್ರನ 51 ಅಡಿ ಎತ್ತರದ ಪ್ರತಿಮೆ ಭಾನುವಾರ ಅನಾವರಣಗೊಂಡಿದೆ. 7 ಅಡಿ ಹೆಚ್ಚುವರಿ ಪೀಠವಿದೆ. ಫೈಬರ್ ಗ್ಲಾಸ್ ಮತ್ತು ಉಕ್ಕಿನ ಮೇಲ್ಪದರ ಬಳಸಿ ಪ್ರತಿಮೆಯನ್ನು ದೆಹಲಿಯಲ್ಲಿ ತಯಾರಿಸಿ, ಕೆನಡಾದಲ್ಲಿ ನುರಿತ ಕುಶಲಕರ್ಮಿಗಳು ಜೋಡಿಸಿದ್ದಾರೆ. ಗಂಟೆಗೆ 200 ಕಿ.ಮೀ. ವೇಗದ ಬಿರುಗಾಳಿಯನ್ನೂ ತಡೆದುಕೊಳ್ಳುವ ಸಾಮರ್ಥ್ಯ ಪ್ರತಿಮೆಗಿದೆ. 4 ವರ್ಷದಲ್ಲಿ ಯೋಜನೆ ಪೂರ್ಣಗೊಂಡಿದೆ.

ಟಿಎಂಸಿ ಚೀಫ್ ವಿಪ್ ಬ್ಯಾನರ್ಜಿ ಪದತ್ಯಾಗ

ದೆಹಲಿ: ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಸಂಸದ ಕಲ್ಯಾಣ್ ಬ್ಯಾನರ್ಜಿ ಲೋಕಸಭೆಯಲ್ಲಿ ಪಕ್ಷದ ಮುಖ್ಯ ಸಚೇತಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಟಿಎಂಸಿ ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅಧ್ಯಕ್ಷತೆಯಲ್ಲಿ ನಡೆದ ಪಕ್ಷದ ಸಂಸದರ ವರ್ಚುವಲ್ ಸಭೆ ನಂತರ ಅವರು ರಾಜೀನಾಮೆ

ನಿರ್ಧಾರ ಪ್ರಕಟಿಸಿದ್ದಾರೆ.

ಪಕ್ಷದ ಸಂಸದರಲ್ಲಿ ಸಮನ್ವಯದ ಕೊರತೆ ಇದೆ ಎಂದು 'ದೀದಿ' (ಮಮತಾ ಬ್ಯಾನರ್ಜಿ) ಸಭೆಯಲ್ಲಿ ಹೇಳಿದರು. ಆದ್ದರಿಂದ, ರಾಜೀನಾಮೆ ನೀಡಲು ನಿರ್ಧರಿಸಿದೆ ಎಂದು ಕಲ್ಯಾಣ್ ಬ್ಯಾನರ್ಜಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಪ್ರಸಿದ್ಧ ವಕೀಲರೂ ಆಗಿರುವ ಕಲ್ಯಾಣ್ ಬ್ಯಾನರ್ಜಿ ಪಶ್ಚಿಮ ಬಂಗಾಳದ ಶ್ರೀರಾಮಪುರ ಲೋಕಸಭಾ ಕ್ಷೇತ್ರದಿಂದ 4 ಬಾರಿ ಆಯ್ಕೆಯಾಗಿದ್ದಾರೆ.

ಕಲ್ಯಾಣ್ ಬ್ಯಾನರ್ಜಿ ಪಕ್ಷದ ಸಂಸದೆ ಮಹುವಾ ಮೊಯಿತ್ರಾ ಜತೆ ಘರ್ಷಣೆ ಮಾಡಿಕೊಂಡಿದ್ದರು. ಅಲ್ಲದೇ ಮಾಜಿ ಕ್ರಿಕೆಟಿಗ- ಪಕ್ಷದ ಸಂಸದ ಕೀರ್ತಿ ಆಜಾದ್ ಜತೆಗೂ ಸಾರ್ವಜನಿಕವಾಗಿ ಜಗಳವಾಡಿದ್ದರು. ಇದೆಲ್ಲವೂ ಪಕ್ಷವನ್ನು ಮುಜುಗರಕ್ಕೀಡು ಮಾಡಿತ್ತು.

ಸಮಾಚಾರ ಸಣ್ಣದಲ್ಲ

ಸಾರಿಗೆ ಮುಷ್ಕರ : ಬಸ್ ಸಂಚಾರ ಬಂದ್

ರಾಯಚೂರು: ಮೂವತ್ತೈದು ತಿಂಗಳ ವೇತನ ಬಾಕಿ ನೀಡುವುದು, ವೇತನ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಸುವಂತೆ ಸಾರಿಗೆ ಸಂಸ್ಥೆ ನೌಕರರ ಸಂಘಟನೆಯಿಂದ ಕರೆ ನೀಡಿ ಬಸ್ ಸಂಚಾರ ಎಂದಿನಂತಿರದೆ, ವಿರಳವಾಗಿತ್ತು. ಖಾಸಗಿ ಬಸ್ ಚಾಲಕ ಸಹಕಾರದೊಂದಿಗೆ ಕೆಲ ಬಸ್ ಗಳು ಸಂಚಾರ ನಡೆಸಿದರೆ, ಇನ್ನೂ ಕೆಲ ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗಿರುವುದು ಕಂಡು ಬಂದಿತು. ರಾಜ್ಯಾದ್ಯಂತವಾಗಿ ಸಾರಿಗೆ ನೌಕರರು ಬೇಡಿಕೆ ಈಡೇರಿಕೆಗಾಗಿ ಸಿಎಂ ನೇತೃತ್ವದಲ್ಲಿ ನಡೆದ ಸಭೆ ವಿಫಲವಾದ ಬಳಿಕ ಬಸ್ ಸ್ಥಗಿತಗೊಳಿಸಿ ಮುಷ್ಕರಕ್ಕೆ ಕರೆ ನೀಡಲಾಗಿತ್ತು. ಆದರೆ ರಾಯಚೂರು ಜಿಲ್ಲೆಯಲ್ಲಿ ಬೆರಳೆಣಿಕೆಯಷ್ಟು ಬಸ್ ಸಂಚಾರ ನಡೆಸಿದವು. ಬಸ್ ಸಂಚಾರ ಸ್ಥಗಿತದ ಬಗ್ಗೆ ಮಾಹಿತಿ ಇದ್ದ ಹಿನ್ನಲೆಯಲ್ಲಿ ಬಸ್ ನಿಲ್ದಾಣದಲ್ಲಿ ಅಷ್ಟಾಗಿ ಪ್ರಯಾಣಕರು ಕಂಡು ಬರಲಿಲ್ಲ. ರಾಯಚೂರನಿಂದ ಹೈದರಬಾದ್, ಕರ್ನೂಲ್ ಗೆ ತೆರಳು ತೆಲಂಗಾಣ ಮತ್ತು ಆಂಧ್ರ ಪ್ರದೇಶದ ಬಸ್‌ಗಳು ಎಂದಿನಂತೆ ಸಂಚರಿಸಿದ್ದರಿಂದ ಅಷ್ಟಾಗಿ ಸಮಸ್ಯೆ ಕಂಡು ಬರಲಿಲ್ಲ. ಜಿಲ್ಲೆಯಲ್ಲಿ ಬೆಳಗ್ಗೆ 6 ಗಂಟೆಯಿಂದ ಸಾರಿಗೆ ನೌಕರರು ಬಸ್ ಸಂಚಾರ ಸ್ಥಗಿತಗೊಳಿಸಿ ಮುಷ್ಕರ ನಡೆಸಿದ್ದರು, ಬೆಳಗ್ಗೆ 10 ಗಂಟೆಯವರೆಗೆ ಮುಷ್ಕರ ನಡೆಸಲಾಯಿತು. ಆಂದ್ರ ಪ್ರದೇಶದ ಬಸ್‌ಗಳನ್ನು ಬಳಸಿಕೊಂಡು ಬಸ್ ಸಂಚಾರ ಆರಂಬಿಸಿದ್ದು ಜತೆಗೆ, ಮುಷ್ಕರಕ್ಕೆ ಕೋರ್ಟ್ ತಡೆ ನೀಡಿ ಆದೇಶ ನೀಡಿದ್ದರಿಂದ ನೌಕರರಲ್ಲಿ ಗೊಂದಲ ಉಂಟಾಗಿ ಕೆಲವರು ಕರ್ತವ್ಯ ಹಾಜರಾಗಿದ್ದರಿಂದ ನೌಕರರಲ್ಲೆ ಗೋಂದಲ ಮೂಡುವಂತಾಯಿತು.

ಮಂದಗತಿಯ ಕಾಮಗಾರಿ ಸವಾರರಿಗೆ ಕಿರಿಕಿರಿ

ಸಿಂಧನೂರು: ಜೇವರ್ಗಿ-ಚಾಮರಾಜನಗರ ರಾಷ್ಟ್ರೀಯ ಹೆದ್ದಾರಿ-150ಎ ವ್ಯಾಪ್ತಿಯ ಸಿಂಧನೂರು-ಮಸ್ಕಿ ಮಧ್ಯದ ಸೇತುವೆ ನಿರ್ಮಾಣ ಕಾಮಗಾರಿ ಅತ್ಯಂತ ಮಂದಗತಿಯಿಂದ ಸಾಗಿದ್ದು, ವಾಹನ ಸವಾರರು ಪ್ರತಿನಿತ್ಯ ತೊಂದರೆ ಅನುಭವಿಸುವಂತಾಗಿದೆ. ಮಸ್ಕಿಯಿಂದ ಸಿಂಧನೂರಿನವರೆಗೆ 7 ಸೇತುವೆಗಳು ಇದ್ದು, ಸೇತುವೆ ಮತ್ತು ಕೂಡು ರಸ್ತೆ ನಿರ್ಮಾಣಕ್ಕೆ 18 ಕೋಟಿ ರುಪಾಯಿ ಬಿಡುಗಡೆಯಾಗಿದೆ. ಹೈದರಾಬಾದ್ ಮೂಲದ ಗುತ್ತಿಗೆದಾರರಿಗೆ ಕಾಮಗಾರಿ ನಿರ್ವಹಿಸುವ ಜವಾಬ್ದಾರಿ ನೀಡಿದ್ದು, ಒಂದೂವರೆ ವರ್ಷ ಕಾಲಾವಧಿ ನಿಗದಿ ಪಡಿಸಲಾಗಿದೆ. ಆದರೆ ಸಿಂಧನೂರು ನಗರದ ಹೊರ ವಲಯದಲ್ಲಿ ಮಸ್ಕಿ ರಸ್ತೆಯಲ್ಲಿ ನಿರ್ಮಾಣಗೊಳ್ಳುತ್ತಿರುವ ಸೇತುವೆ ಕಾಮಗಾರಿ ಜನವರಿ ತಿಂಗಳಲ್ಲಿ ಪ್ರಾರಂಭವಾಗಿದ್ದು, ಇದುವರೆಗೂ ಶೇ 25 ರಷ್ಟು ಕಾಮಗಾರಿಯೂ ಆಗದಿರುವುದು ವಿಪರ್ಯಾಸದ ಸಂಗತಿಯಾಗಿದೆ. ವಿಜಯ ಪಾಟೀಲ ಕಾರ್ಯಪಾಲಕ ಎಂಜಿನಿಯರ್ ರಾಷ್ಟ್ರೀಯ ಹೆದ್ದಾರಿ ಯೋಜನೆಮಳೆ ಮತ್ತು ಎಡದಂಡೆ ನಾಲೆಗೆ ನೀರು ಬಿಟ್ಟಿರುವುದರಿಂದ ಹಳ್ಳಕ್ಕೆ ನೀರು ಹರಿದು ಬರುತ್ತಿರುವುದರಿಂದ ಕೆಲಸ ವಿಳಂಬವಾಗುತ್ತಿದೆ. ನಿಗದಿತ ಅವಧಿಯಲ್ಲಿ ಸೇತುವೆ ಕಾಮಗಾರಿಗಳನ್ನು ಮುಗಿಸಲು ಕೆಸಲ ಚುರುಕುಗೊಳಿಸ 'ಲಾಗುವುದುಬಸವಂತರಾಯಗೌಡ ಕಲ್ಲೂರು ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷಗುತ್ತಿಗೆದಾರರು ಮತ್ತು ರಾಷ್ಟ್ರೀಯ ಹೆದ್ದಾರಿ ಯೋಜನೆ ಅಧಿಕಾರಿಗಳು ತ್ವರಿತಗತಿಯಲ್ಲಿ ಸೇತುವೆಗಳ ಕೆಲಸ ಮುಗಿಸದಿದ್ದರೆ ಈ ಭಾಗದ ಗ್ರಾಮಸ್ಥರ ನೇತೃತ್ವದಲ್ಲಿ ರಸ್ತೆ ಸಂಚಾರ ತಡೆ ಚಳವಳಿ ನಡೆಸಲಾಗುವುದು.

ನೌಕರರ ಮುಷ್ಕರ ಪ್ರಯಾಣಿಕರ ಫಜೀತಿ

ಮುದಗಲ್: ರಾಜ್ಯಾದ್ಯಂತ ಸಾರಿಗೆ ನೌಕರರ ಮುಷ್ಕರವು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ನಡೆಸಿದ ಹಿನ್ನಲೆಯಲ್ಲಿ ಮುದಗಲ್ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಸಾರಿಗೆ ಸೌಲಭ್ಯ ಇಲ್ಲದೆ ತೊಂದರೆ ಅನುಭವಿಸುವಂತಾಗಿದೆ. ವೇತನ ಪರಿಷ್ಕರಣೆ, ಬಾಕಿ ವೇತನ ಪಾವತಿ ಮತ್ತು ಇತರ ಸೌಲಭ್ಯಗಳಿಗಾಗಿ ಸಾರಿಗೆ ನೌಕರರು ಮುಷ್ಕರ ನೀಡದ ಹಿನ್ನಲೆ ಮುದಗಲ್ ಪಟ್ಟಣದಲ್ಲಿ ಸಾರಿಗೆ ವ್ಯವಸ್ಥೆ ಅಸ್ತವ್ಯಸ್ತವಾಗಿದ ಕಾರಣ ಮುದಗಲ್ ಬಸ್ ನಿಲ್ದಾಣದಲ್ಲಿ ಖಾಸಗಿ ವಾಹನದ ಮೂಲಕ ಗ್ರಾಮಗಳಿಗೆ ತೆರಳುತ್ತಿರುವುದು ಕಂಡುಬಂದಿತು. ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜುಗಳಿಗೆ ತೆರಳಲು ಹಾಗೂ ಬೇರೆ ಬೇರೆ ಸ್ಥಳಗಳಿಗೆ ತೆರಳಲು ಪ್ರಯಾಣಿಕರರು ಪರದಾಡುತ್ತಿರುವುದು ಹಾಗೂ ಮುದಗಲ್ ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಪ್ರಯಾಣಕರು ಕಾದು ಕುಳಿತಿರುವದು ಕಂಡು ಬಂದಿತು.

ಯೂರಿಯಾ ಬಳಸಿದರೆ ಕ್ಯಾನ್ಸರ್‌ಕಾರಕ ಅಂಶ

ಕೊಪ್ಪಳ: ಯೂರಿಯ ಹೆಚ್ಚು ಬಳಕೆಯಿಂದ ತುಂಗಭದ್ರ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬೆಳೆಯುವ ಭತ್ತದಲ್ಲಿ ಕ್ಯಾನ್ಸರ್ ಕಾರಕ ಅಂಶ ಪತ್ತೆಯಾಗಿದೆ ಎಂದು ಕೃಷಿ ಜಂಟಿ ನಿರ್ದೇಶಕರು ಹೇಳಿದ್ದಾರೆ. ಯಾವುದೇ ಸಾಕ್ಷಾಧಾರ ಇಲ್ಲದೇ ರೈತರಲ್ಲಿ ಗೊಂದಲ ಸೃಷ್ಟಿಸಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅಖಿಲ ಕರ್ನಾಟಕ ರಾಜ್ಯ ಅನ್ನದಾತ ರೈತಸಂಘದ ರಾಜ್ಯಾಧ್ಯಕ್ಷ ಶರಣೇಗೌಡ ಕೇಸರಹಟ್ಟಿ ಹೇಳಿದರು. ನಗರದ ಕೊಪ್ಪಳ ಮೀಡಿಯಾ ಕ್ಲಬ್ ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದರು. ಸರಕಾರ ರೈತರಿಗೆ ಸಮರ್ಪಕವಾಗಿ ರಸ ಗೊಬ್ಬರ ಪೂರೈಕೆ ಮಾಡುವಲ್ಲಿ ವಿಫಲವಾಗಿದೆ. ಯೂರಿಯ ಸಿಗದೆ ಕೊಪ್ಪಳ ಜಿಲ್ಲೆಯ ರೈತರೊಬ್ಬರು ಮಣ್ಣು ತಿಂದು ಆಕ್ರೋಶ ಹೊರಹಾಕಿದ್ದರು.

{ಸಿದ್ದರಾಮಯ್ಯ} ಮುಖ್ಯಮಂತ್ರಿ

ಬಿಜೆಪಿ ಸರಕಾರದ ಅವಧಿಯಲ್ಲಿ ನೇಮಕಾತಿ ನಡೆದಿರಲಿಲ್ಲ. ಹೊಸ ಬಸ್ ಖರೀದಿ ಸ್ಥಗಿತಗೊಂಡಿತ್ತು, ಪಿಎಫ್ ನಿಧಿ ಮತ್ತು ಡೀಸೆಲ್ ಹಣ ಪಾವತಿ ಸೇರಿ 5,900 ಕೋಟಿ ರು.ಬಾಕಿ ಇತ್ತು. ಇದು ಬಿಜೆಪಿ ನಾಯಕರಿಗೆ ಮಾಹಿತಿಯಿದೆಯೇ ? ನಾವು ಬಂದ ಮೇಲೆ ನೇಮಕಾತಿಗೆ ಚಾಲನೆ ನೀಡಿದೆವು. ಹತ್ತು ಸಾವಿರ ಹುದ್ದೆ ತುಂಬಿದೆವು.

ಪ್ಲಾಟ್ ಫಾರಂಗೆ ಬಂದ ಖಾಸಗಿ ವಾಹನಗಳು | ಸಂಜೆ ನಂತರ ಸಾರಿಗೆ ಕಾರ್ಯಾಚರಣೆ ಆರಂಭ

ಸಾರಿಗೆ ಮುಷ್ಕರ: ಜಿಲ್ಲಾಡಳಿತ ಜಸ್ಟ್ ಪಾಸ್

ಕೊಪ್ಪಳ: ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸಾರಿಗೆ ನೌಕರರು ಮಂಗಳವಾರದಿಂದ ಮುಷ್ಕರ ಆರಂಭಿಸಿದ್ದು, ಮೊದಲ ದಿನ ಬಹುತೇಕ ಯಶಸ್ವಿಯಾಗಿದೆ. ಮತ್ತೊಂದೆಡೆ ಸಾರಿಗೆ ನೌಕರರ ಮುಷ್ಕರ ವಿಫಲ ಮಾಡುವಲ್ಲಿ ಕೊಪ್ಪಳ ಜಿಲ್ಲಾಡಳಿತ ಜಸ್ಟ್ ಪಾಸ್ ಆಗಿದೆ.

ಪ್ರಯಾಣಿಕರಿಗೆ ಅನುಕೂಲ

ಸಾರಿಗೆ ನೌಕರರು ಮುಷ್ಕರಕ್ಕೆ ಕರೆ ನೀಡಿದ್ದ ಹಿನ್ನೆಲೆ ಸಾರ್ವಜನಿಕರಿಗೆ ತೊಂದರೆ ಆಗದಂತೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವ ನಿಟ್ಟನಲ್ಲಿ ಕೊಪ್ಪಳ ಡಿಸಿ ಡಾ.ಸುರೇಶ ಹಿಟ್ನಾಳ ಸಭೆ ಮಾಡಿದ್ದರು. ಖಾಸಗಿ ವಾಹನ ಮಾಲೀಕರು ಬಸ್ ನಿಲ್ದಾಣದಿಂದ ಎಲ್ಲ ರೂಟ್ ಬಲ್ಲಿ ಬಸ್ ಓಡಿಸಬೇಕು. ಹಾಗಂತಾ ಸಾರ್ವಜನಿಕರಿಂದ ಯಾವುದೇ ರೀತಿಯಲ್ಲಿ ಹೆಚ್ಚುವರಿ ಪ್ರಯಾಣ ದರ ವಸೂಲಿ ಮಾಡದಂತೆ ಸೂಚನೆ ನೀಡಿದ್ದರು. ಈ ಮೂಲಕ ಸಾರಿಗೆ ನೌಕರರ ಮುಷ್ಕರಕ್ಕೆ ಫೇಲ್ ಮಾಡುವ ಯೋಜನೆ ರೂಪಿಸಿದ್ದರು. ಈ ಪೂರ್ವ ತಯಾರಿ ಹಿನ್ನೆಲೆ ಕೊಪ್ಪಳ ಜಿಲ್ಲೆಯಲ್ಲಿ ಜಿಲ್ಲಾಡಳಿತ ಪಾಸ್ ಆಗಿದೆ. ಜಿಲ್ಲೆಯ ಎಲ್ಲ ಕಡೆ ಖಾಸಗಿ ಬಸ್ ನಿಲ್ದಾಣಕ್ಕೆ ಬಂದು ನಿಂತಿದ್ದರಿಂದ ಒಂದಷ್ಟು ಪ್ರಯಾಣಿಕರಿಗೆ ಅನುಕೂಲವಾಯಿತು.

ಮುಷ್ಕರಕ್ಕೆ ಕರೆ ನೀಡಿದ್ದ ಹಿನ್ನೆಲೆ ಕೊಪ್ಪಳದ ಕೇಂದ್ರಿಯ ಬಸ್ ನಿಲ್ದಾಣದಲ್ಲಿ ಬೆಳಗ್ಗೆ ಬಹುತೇಕ ಬಸ್ ಗಳ ಕಾರ್ಯಾಚರಣೆ ಸ್ಥಗಿತಗೊಂಡಿತ್ತು. ಬಹುತೇಕ ಚಾಲಕರು ಬೆಳಗ್ಗೆ ಬಸ್ ಗಳನ್ನು ಡಿಪೋಕ್ಕೆ ಬಿಟ್ಟರೆ, ಕೆಲವರು ಬಸ್ ನಿಲ್ದಾಣದ ಪ್ಲಾಟ್ ಫಾರಂನಲ್ಲಿ ನಿಲ್ಲಿಸಿ ಕರ್ತವ್ಯಕ್ಕೆ ಗೈರಾಗುವ ಮೂಲಕ ಮುಷ್ಕರಕ್ಕೆ ಬೆಂಬಲ ನೀಡಿದರು. ಈ ಹಿನ್ನೆಲೆ ಸಾರ್ವಜನಿಕರು ಸುಗಮ ಸಂಚಾರಕ್ಕೆ ಪರದಾಡಿದರು. ಸೋಮವಾರ ರಾತ್ರಿಯೇ ಗ್ರಾಮೀಣ ಭಾಗದಲ್ಲಿ ವಸತಿ ಇದ್ದ ಬಸ್ ಗಳು ಬೆಳಗ್ಗೆ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರನ್ನು ನಗರ ಪ್ರದೇಶಕ್ಕೆ ಕರೆ ತಂದರು. ನಂತರ ಅವರು ಕೂಡ ಬಸ್ ಗಳನ್ನು ಒಂದೆಡೆ ಹಾಕಿ ಕರ್ತವ್ಯಕ್ಕೆ ಗೈರಾಗಿದ್ದು ಕಂಡು ಬಂತು.

ಕೊಪ್ಪಳದ ಕೇಂದ್ರಿಯ ಬಸ್ ನಿಲ್ದಾಣದಲ್ಲಿ ಖಾಸಗಿ ಬಸ್, ಕ್ರೂಸರ್ ಪ್ಲಾಟ್ ಫಾರಂನಲ್ಲಿ ನಿಂತಿರುವುದು.

ಕೆಎಸ್‌ಆರ್‌ಟಿಸಿ ನಿಲ್ದಾಣಕ್ಕೆ ಖಾಸಗಿ ವಾಹನ

ಕೊಪ್ಪಳದ ಕೇಂದ್ರಿಯ ಬಸ್ ನಿಲ್ದಾಣದ ಪ್ಲಾಟ್ ಫಾರಂನಲ್ಲಿ ಮಂಗಳವಾರ ಬೆಳಗ್ಗೆಯೇ ಖಾಸಗಿ ವಾಹನ ನಿಂತಿದ್ದವು. ಗದಗ, ಗಂಗಾವತಿ, ಕನಕಗಿರಿ ಸೇರಿ ನಾನಾ ಮಾರ್ಗದ ಪ್ಲಾಟ್ ಫಾರಂನಲ್ಲಿ ಖಾಸಗಿ ಮಿನಿ ಬಸ್, ಕ್ರೂಸರ್ ನಿಂತು, ಪ್ರಯಾಣಿಕರನ್ನು ಕೂಗಿ, ಕೂಗಿ ಕರೆಯುವ ದೃಶ್ಯ ಕಂಡು ಬಂದವು. ಬಸ್ ನಿಲ್ದಾಣದಲ್ಲಿ ಖಾಸಗಿ ವಾಹನ ಕಂಡು ಕೆಲ ಪ್ರಯಾಣಿಕರು, ಏನಿದು ಅಂತಾ ಪ್ರಶ್ನೆ ಮಾಡಿಕೊಂಡರು. ಸಾರಿಗೆ ನೌಕರರು ಮುಷ್ಕರಕ್ಕೆ ಕರೆ ನೀಡಿದ್ದ ಹಿನ್ನೆಲೆ ಮೂರು ದಿನಗಳ ಹಿಂದೆ ಕೊಪ್ಪಳ ಜಿಲ್ಲಾಧಿಕಾರಿ ಸುರೇಶ ಹಿಟ್ನಾಳ, ಖಾಸಗಿ ವಾಹನಗಳ ಮಾಲೀಕರೊಂದಿಗೆ ಸಭೆ ಮಾಡಿದ್ದರು. ಸಾರ್ವಜನಿಕರಿಗೆ ತೊಂದರೆ ಆಗದಂತೆ ಕ್ರಮ ವಹಿಸಲು ಜಿಲ್ಲಾಡಳಿತದೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಿದ್ದರು. ಜತೆಗೆ ನಿಗದಿತ ದರವನ್ನು ಮಾತ್ರ ಪ್ರಯಾಣಿಕರಿಂದ ಪಡೆಯಬೇಕು. ಹೆಚ್ಚುವರಿ ಹಣ ಪಡೆದರೆ ಕ್ರಮ ಕೈಗೊಳ್ಳುವುದಾಗಿ ಸೂಚನೆ ನೀಡಿದ್ದರು.

ಜಿಲ್ಲಾ ಕೇಂದ್ರ, ಕೊಪ್ಪಳ, ಗಂಗಾವತಿ, ಕುಷ್ಟಗಿ, ಯಲಬುರ್ಗಾ ಸೇರಿ ಪ್ರಮುಖ ಬಸ್ ನಿಲ್ದಾಣದ ಪ್ಲಾಟ್ ಫಾರಂನಲ್ಲೇ ಖಾಸಗಿ ಬಸ್ ನಿಲುಗಡೆಗೆ ಅವಕಾಶ ಮಾಡಲಾಗಿತ್ತು. ಇದರಿಂದ ಬೆಳಗ್ಗೆಯೇ ಸಾಕಷ್ಟು ಖಾಸಗಿ ಮಿನಿ ಬಸ್ ಹಾಗೂ ಕ್ರೂಸರ್ ಗಳು ಬಸ್ ನಿಲ್ದಾಣದಲ್ಲಿ ಜನರನ್ನು ಹತ್ತಿಸಿಕೊಂಡು ಹೋಗಿದ್ದು ಕಂಡು ಬಂತು. ಪ್ರಮುಖ ರೂಟ್ ನಲ್ಲಿ ಖಾಸಗಿ ವಾಹನಗಳ ಓಡಾಟದಿಂದ ಪ್ರಾಯಾಣಿಕರಿಗೆ ಅಷ್ಟಾಗಿ ಸಮಸ್ಯೆ ಆಗಲಿಲ್ಲ. ಆದರೆ, ಕೆಲ ಗ್ರಾಮೀಣ ಭಾಗದ ರೂಟ್ ನಲ್ಲಿ ಜನರು ಸಮಸ್ಯೆ ಅನುಭವಿಸಿದರು. ಇನ್ನು ವಿದ್ಯಾರ್ಥಿಗಳು ಸಂಜೆ ವರೆಗೆ ಬಸ್ ನಿಲ್ದಾಣದಲ್ಲೇ ಕಾಲ ಕಳೆಯುವಂತಾಯಿತು.

> **ಕೊಪ್ಪಳ ಜಿಲ್ಲೆಯ ಒಟ್ಟು 5 ಡಿಪೋಗಳ ಪೈಕಿ ಒಟ್ಟು 474 ಬಸ್ ಗಳು ಪ್ರತಿ ದಿನ ಕಾರ್ಯಾಚರಣೆ ಮಾಡುತ್ತವೆ. ಈ ಪೈಕಿ ಅನೇಕ ಬಸ್ ಸಂಜೆ ನಂತರವೇ ಕಾರ್ಯಾಚರಣೆ ಆರಂಭಿಸುತ್ತವೆ. ಬೆಳಗ್ಗೆ ಕೇವಲ 22 ಬಸ್ ಗಳು ಮಾತ್ರ ಕಾರ್ಯಾಚರಣೆ ಮಾಡಿದ್ದವು. ಸಂಜೆ ನಂತರ ಬಹುತೇಕರು ಕರ್ತವ್ಯಕ್ಕೆ ಹಾಜರಾದರು.**
> - ರಾಜೇಂದ್ರ ಜಾದವ್, ವಿಭಾಗೀಯ ನಿಯಂತ್ರಣಾಧಿಕಾರಿ, ಕೊಪ್ಪಳ

ಕೊಪ್ಪಳ ವಿವಿ ಪರೀಕ್ಷೆ ಮುಂದೂಡಿಕೆ

ಸಾರಿಗೆ ಇಲಾಖೆ ನೌಕರರ ಮುಷ್ಕರದ ಹಿನ್ನೆಲೆ ಮಂಗಳವಾರ ನಡೆಯಬೇಕಿದ್ದ ಕೊಪ್ಪಳ ವಿವಿ ಸ್ನಾತಕೋತ್ತರ ಪರೀಕ್ಷೆ ಮುಂದೂಡಲಾಯಿತು. ಬೆಳಗ್ಗೆ ವಿವಿಧ ಗ್ರಾಮದಿಂದ ಬಂದಿದ್ದ ವಿದ್ಯಾರ್ಥಿಗಳು ಬಸ್ ನಿಲ್ದಾಣದಲ್ಲಿಯೇ ಸ್ಟಕ್ ಆಗಿದ್ದರು. ಗಂಗಾವತಿ, ಕನಕಗಿರಿ, ಕುಷ್ಟಗಿ ಸೇರಿ ಜಿಲ್ಲೆಯ ವಿವಿಧ ಕಡೆಯಿಂದ ಕೊಪ್ಪಳಕ್ಕೆ ಬಂದಿದ್ದ ವಿದ್ಯಾರ್ಥಿಗಳು ಇಲ್ಲಿಂದ ತಳಕಲ್ ಗೆ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಬೇಕಿತ್ತು. ಕೆಲ ವಿದ್ಯಾರ್ಥಿಗಳು ಕೊಪ್ಪಳಕ್ಕೂ ತಡವಾಗಿ ಬಂದಿದ್ದರು. ಮುಷ್ಕರದ ತೀವ್ರತೆ ಅರಿತ ಕೊಪ್ಪಳ ವಿವಿ ಕುಲಪತಿ ಬಿ.ಕೆ ರವಿ, ಬೆಳಗ್ಗೆ ಸುಮಾರು 11 ಗಂಟೆ ನಂತರ ಪರೀಕ್ಷೆ ರದ್ದು ಮಾಡಿದ್ದರ ಬಗ್ಗೆ ಆದೇಶಿಸಿದರು. ದೂರದ ಊರುಗಳಿಂದ ಪರೀಕ್ಷೆ ಬರಬೇಕಿದ್ದ ವಿದ್ಯಾರ್ಥಿಗಳಿಗೆ ಅನಾನುಕೂಲ ಆಗುವ ಬಗ್ಗೆ ಅರಿತು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರೀಕ್ಷೆ ಮುಂದೂಡಿ ಆದೇಶಿಸಿದರು. ವಿದ್ಯಾರ್ಥಿಗಳು ಕೊಪ್ಪಳ ಜಿಲ್ಲಾ ಕೇಂದ್ರದಿಂದ 12 ಕಿ.ಮೀ ದೂರ ಇರುವ ಕುಕನೂರು ತಾಲೂಕು ತಳಕಲ್ ಗ್ರಾಮದಲ್ಲಿನ ವಿಶ್ವವಿದ್ಯಾಲಯಕ್ಕೆ ಹೋಗಬೇಕಿತ್ತು. ವಾಣಿಜ್ಯ, ಕಲಾ ಹಾಗೂ ವಿಜ್ಞಾನ ವಿಭಾಗದ ಸ್ನಾತಕೋತ್ತರ ಪದವಿಯ 2ನೇ ಸೆಮಿಸ್ಟರ್ ಪರೀಕ್ಷೆ ಮುಂದೂಡಲಾಗಿದೆ.

ಮಹಿಳೆಯರಿಗೆ ಪೀಕಲಾಟ: ಕೊಪ್ಪಳದ ಕೇಂದ್ರಿಯ ಬಸ್ ನಿಲ್ದಾಣದ ತುಂಬಾ ನಿಂತಿದ್ದ ಖಾಸಗಿ ಬಸ್ ಗಳು ಊರಿನ ಹೆಸರು ಕೂಗಿ ಕೂಗಿ ಪ್ರಯಾಣಿಕರನ್ನು ಕರೆದರು. ಕೆಲ ಮಹಿಳೆಯರು ಅನುಮಾನದಲ್ಲೇ ಚಾಲಕರ ಬಳಿಗೆ ಹೋಗಿ ಬಸ್ ಚಾರ್ಜ್ ಕೊಡಬೇಕಾ ಅಥವಾ ಉಚಿತ ಪ್ರಯಾಣವೇ? ಎಂದು ಕೇಳಿದ್ದು ಕಂಡು ಬಂತು. ಹೈಕೋರ್ಟ್ ಆದೇಶದ ಹಿನ್ನೆಲೆ ಸಂಜೆ ವೇಳೆಗೆ ಎಂದಿನಂತೆ ಬಸ್ ಕಾರ್ಯಾಚರಣೆ ಆರಂಭಿಸಲಾಯಿತು.

ಸಿಎಂ ಸಿದ್ದರಾಮಯ್ಯ ಹಟ್ಟಿ ಚಿನ್ನದ ಗಣಿಗೆ ಇಂದು

ನಗರದ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಟಿ ಯಲ್ಲಿ ಸಚಿವ ಎನ್ ಎಸ್ ಬೋಸರಾಜು ಮನವಿ ಮಾಡಿದರು.

ರಾಯಚೂರು: ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಸೇರಿದಂತೆ ಸಚಿವ ಸಂಪುಟದ ಸಚಿವರು ಬುಧವಾರ ಹಟ್ಟಿ ಪಟ್ಟಣಕ್ಕೆ ಆಗಮಿಸಿ 998 ಕೋಟಿ ರುಪಾಯಿ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ ಮಾಡಲಿದ್ದಾರೆ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಆಗಮಿಸುವಂತೆ ಸಣ್ಣ ನೀರಾವರಿ ಸಚಿವ ಎನ್ ಎಸ್ ಬೋಸರಾಜು ಮನವಿ ಮಾಡಿದರು. ನಗರದ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಟಿ ಉದ್ದೇಶಿಸಿ ಮಾತನಾಡಿದ ಅವರು, ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ಹಟ್ಟಿ ಗಣಿ ಕಂಪನಿಯ ಸಿಬ್ಬಂದಿ ಹಾಗೂ ಕಾರ್ಮಿಕರ ವಸತಿ ಸಮುಚ್ಚಯ ನಿರ್ಮಾಣದ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಹಟ್ಟಿ ಚಿನ್ನದ ಗಣಿ ಕಂಪನಿ ಆವರಣದಲ್ಲಿ ಅಂದಾಜು 998 ಕೋಟಿ ರು ಮೊತ್ತದಲ್ಲಿ ವಸತಿ ಸಮುಚ್ಚಯ, ಶಾಲೆ, ಆಸ್ಪತ್ರೆ ಸೇರಿದಂತೆ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿ ಅವರು ಚಾಲನೆ ನೀಡಲಿದ್ದು ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ ಸಚಿವರಾದ ಡಾ.ಶರಣಪ್ರಕಾಶ್ ಪಾಟೀಲ, ಸತೀಶ ಜಾರಕಿಹೊಳಿ, ಎಸ್ ಎಸ್ ಮಲ್ಲಿಕಾರ್ಜುನ ಸೇರಿದಂತೆ ಶಾಸಕರು, ವಿದಾನಪರಿಷತ್ ಸದಸ್ಯರು ಭಾಗಿಯಾಗಲಿದ್ದಾರೆ ಎಂದರು. ಜಿಲ್ಲೆಯಲ್ಲಿ ರಸಗೊಬ್ಬರ ಕೊರತೆ ಕುರಿತಂತೆ ಮಾತನಾಡಿ, ರಾಜ್ಯದಲ್ಲಿ ರಸಗೊಬ್ಬರ ಕೊರತೆ ಉಂಟಾಗಿದ್ದು, ಕೇಂದ್ರ ಸರ್ಕಾರ ಹಂಚಿಕೆ ಮಾಡಿದ ಪ್ರಕಾರ ಡಿಎಪಿ ಗೊಬ್ಬರ ಪೂರೈಸಲು ಕೆಲವು ರಸಗೊಬ್ಬರ ಕಂಪನಿಗಳು ಮುಂದೆ ಬಂದಿಲ್ಲ. ಅಲ್ಲದೇ ಜಾಗತಿಕವಾಗಿ ನಡೆಯುತ್ತಿರುವ ಯುದ್ಧಗಳು ಸಹ ಇದಕ್ಕೆ ಕಾರಣವಾಗಿದ್ದು, ಜಿಲ್ಲೆಯ ರೈತರಿಗೆ ಅಗತ್ಯವಾದ ಗೊಬ್ಬರವನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯವನ್ನು ನಮ್ಮ ಸರ್ಕಾರ ಮಾಡುತ್ತಿದ್ದು, ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವ ಅಂಗಡಿಗಳ ವಿರುದ್ಧ ಕಠಿಣ ಕ್ರಮಕೈಗೊಳ್ಳುವಂತೆ ಕೃಷಿ ಅಧಿಕಾರಿಗಳಿಗೆ ತಿಳಿಸಲಾಗಿದೆ. ಈಗ ಜಿಲ್ಲೆಯಲ್ಲಿ ಸದ್ಯ 6540 ಟನ್ ಯೂರಿಯಾ ಬಂದಿದ್ದು, ನಾಳೆಗೆ 1500 ಟನ್ ಬರುವ ಸಾಧ್ಯತೆ ಇದ್ದು, ಅಲ್ಲದೇ ಗೊಬ್ಬರಗಳ ಜತೆಗೆ ನ್ಯಾರೋ ಯೂರಿಯಾ , ನ್ಯಾರೋ ಡಿಎಪಿ ಹಾಗೂ ಸಂಪ್ಲಿಮೆಂಟ್ ಬಲವಂತವಾಗಿ ನೀಡಿದರೆ ಅಂಗಡಿಗಳ ಮೇಲೆ ಕಠಿಣ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. ಜಿಲ್ಲೆಯಲ್ಲಿ ಏಮ್ಸ್ ಸ್ಥಾಪನೆ ಕುರಿತಂತೆ ಇತ್ತೀಚೆಗೆ ಸದನದಲ್ಲಿ ಸಂಸದರಾದ ಜಿ.ಕುಮಾರ್ ನಾಯಕ್ ರವರು ಕೇಳಿದ ಪ್ರಶ್ನೆಗೆ ಕೇಂದ್ರ ಸರಕಾರ ಕರ್ನಾಟಕದಲ್ಲಿ ಏಮ್ಸ್ ಸ್ಥಾಪನೆ ಪ್ರಸ್ತಾಪವೇ ಇಲ್ಲವೆಂದು ತಿಳಿಸಿದ್ದು ಈ ಕುರಿತಂತೆ ಪ್ರತಿಕ್ರಿಯಿಸಿ ಏಮ್ಸ್ ವಿಚಾರದಲ್ಲಿ ಬಿಜೆಪಿಯವರು ಇಲ್ಲ ಸಲ್ಲದ ಆರೋಪವನ್ನು ಮಾಡುತ್ತಿದ್ದು, ಮುಖ್ಯಮಂತ್ರಿಗಳು ಇಲ್ಲಿಯವರೆಗೆ 3 ಬಾರಿ ರಾಯಚೂರಿನಲ್ಲಿಯೇ ಏಮ್ಸ್ ಸ್ಥಾಪಿಸಬೇಕೆಂದು ಪತ್ರ ಬರೆದಿದ್ದು , ಹಾಗೂ ಸಚಿವರು , ಶಾಸಕರುಗಳು ನಿಯೋಗ ಕೇಂದ್ರ ಸಚಿವರನ್ನು ಭೇಟಿ ಮನವಿ ಮಾಡಲಾಗಿದೆ. ಕೇಂದ್ರ ಸರಕಾರ ಮಾತ್ರ ರಾಜ್ಯದ ಬಗ್ಗೆ ಅಸಡ್ಡೆ ತೋರುತ್ತಿದೆ ಈ ಕುರಿತಂತೆ ಬಿಜೆಪಿಯವರು ಇಲ್ಲದ ರಾಜಕೀಯ ಮಾಡುತ್ತಾ ಇರುವುದು ಮಾತ್ರ ನಾಚಿಕೆಗೇಡಿನ ಸಂಗತಿಯಾಗಿದೆ ಎಂದು ತಿಳಿಸಿದರು ರಾಯಚೂರು ನಗರದಲ್ಲಿ ಇಎಸ್ ಐ ಆಸ್ಪತ್ರೆ ಮತ್ತು ಕಾರ್ಮಿಕರ ಮಕ್ಕಳಿಗಾಗಿ ರೆಸಿಡೆನ್ಸಿಯಲ್ ಶಾಲೆ ಆರಂಭಿಸಲು ಕಾರ್ಮಿಕ ಸಚಿವ ಸಂತೋಷ ಲಾಡ್ ಒಪ್ಪಿಗೆ ನೀಡಿದ್ದು, ಆಸ್ಪತ್ರೆ ಮತ್ತು ಶಾಲೆಗಾಗಿ ಜಾಹ ಕೂಡ ಗುರುತಿಸಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಟಿಯಲ್ಲಿ ಮಹಾನಗರ ಪಾಲಿಕೆ ಹಿರಿಯ ಸದಸ್ಯ ಜಯಣ್ಣ, ಮುಖಂಡರಾದ ಕೆ.ಶಾಂತಪ್ಪ, ದೊಡ್ಡ ಬಸ್ಸಪ್ಪಗೌಡ, ಆರ್.ಎ.ಪಿ.ಎಂ.ಸಿ ಅಧ್ಯಕ್ಷ ಜಯವಂತರಾವ್ ಪತಂಗೆ ಅಮರೇಗೌಡ ಹಂಚಿನಾಳ್ , ಜಿ.ಶಿವಮೂರ್ತಿ, ನರಸಿಂಹ ಲುಮಾಡಗಿರಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್‌ನ ಬಣ ರಾಜಕೀಯ ಬಡಿದಾಟದಿಂದ ಬಹಿರಂಗ

ಲಿಂಗಸೂಗೂರು: ತಾಲೂಕಿಗೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಆಗಮಿಸುವ ಮುನ್ನವೇ ಲಿಂಗಸೂಗೂರು ಕಾಂಗ್ರೆಸ್ ನ ಬಣ ರಾಜಕೀಯವಿಂದು ಬೀದಿಗೆ ಬಂದಿದ್ದು ವಿಧಾನ ಪರಿಷತ್ ಸದಸ್ಯ ಶರಣಗೌಡ ಬಯ್ಯಾಪುರ ಹಾಗೂ ಮಾಜಿ ಶಾಸಕ ಡಿ.ಎಸ್. ಹೂಲಿಗೇರಿಯವರ ನಡುವಿನ ತಿಕ್ಕಾಟ ಇದೀಗ ಬಹಿರಂಗ ಘರ್ಷಣೆಗೆ ವೇದಿಕೆಯಾದಂತಿದೆ.

ಬೆಂಬಲಿಗರ ಪರಸ್ಪರ ತೀವ್ರ ವಾಗ್ವಾದ ಹಾಗೂ ನೂಕಾಟ ತಳ್ಳಾಟ ಇಬ್ಬರ ಬೆಂಬಲಿಗರ ನಡುವೆ ಹೊಡೆದಾಟ ರೂಪವನ್ನು ಪಡೆದು ಕೊಂಡಿತ್ತು.

ವಿಧಾನ ಪರಿಷತ್ ಸದಸ್ಯ ಶರಣಗೌಡ ಬಯ್ಯಾಪುರ ಅವರು ತಾಲೂಕಿನ ಗೋರೆಬಾಳ್ ಗ್ರಾಮದಲ್ಲಿ ಆರ್.ಡಿ.ಸಿ.ಸಿ ಬ್ಯಾಂಕ್ ನ ನೂತನ ಕಟ್ಟಡ ಉದ್ಘಾಟನೆಗೆ ಬಂದಿದ್ದ ವೇಳೆಗೆ ಎರಡು ಬಣಗಳ ಬೆಂಬಲಿಗರ ನಡುವೆ ಘರ್ಷಣೆಯಾಗಿದೆ.

ಇತ್ತೀಚೆಗೆ ಶರಣಗೌಡ ಬಯ್ಯಾಪುರ ಅವರು ಮುಖ್ಯಮಂತ್ರಿಗಳ ಆಗಮನದ ಕುರಿತಂತೆ ಲಿಂಗಸೂಗೂರು ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ವೇಳೆಯಲ್ಲಿ ಮಾಜಿ ಶಾಸಕ ಡಿ.ಎಸ್.ಹೂಲಿಗೇರಿಯ ಅವರ ವಿರುದ್ಧ ಬಹಿರಂಗವಾಗಿಯೇ ಆಕ್ರೋಶ ವ್ಯಕ್ತಪಡಿಸಿದ್ದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ನ ಅಧ್ಯಕ್ಷ ಗೋವಿಂದ ನಾಯಕ ಯಾರು ಸಹಜವಾಗಿಯೇ ನನಗೆ ತಿಳಿದಿಲ್ಲ ಎಂಬಂತೆ ಹೇಳಿಕೆ ನೀಡಿದ್ದರು. ಈಗಾಗಿ ವಿಧಾನ ಪರಿಷತ್ ಸದಸ್ಯರು ಗೊರೆಬಾಳ ಗ್ರಾಮಕ್ಕೆ ಆರ್ಡಿಸಿಸಿ ಬ್ಯಾಂಕನ ನೂತನ ಕಟ್ಟಡ ಉದ್ಘಾಟನೆಗೆ ತೆರಳಿದ್ದ ವೇಳೆಯಲ್ಲಿ ಮಾಜಿ ಶಾಸಕರ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಬೆಂಬಲಿಗರು ಗಲಾಟೆ ಮಾಡಿ ತಳ್ಳಾಡಿ, ಪರಸ್ಪರ ಬೆಂಬಲಿಗರು ಕೈ ಕೈ ಮಿಲಾಯಿಸಿರುವ ಪ್ರಸಂಗ ಜರುಗಿದೆ. ಇಷ್ಟು ದಿನ ತೆರೆ ಮರೆಯಲ್ಲಿ ಬಣಗಳ ತಿಕ್ಕಾಟ ಇಂದು ಬೀದಿಗೆ ಬಂದಿದ್ದು, ನಾಳೆ ಹಟ್ಟಿ ಪಟ್ಟಣಕ್ಕೆ ಅಭಿವೃದ್ಧಿ ಕಾಮಗಾರಿಗಳ ಶಂಕು ಸ್ಥಾಪನೆಗೆ ಬರುವ ಸಿಎಂ ಗೆ ಮುಜುಗರ ಉಂಟಾಗು ವಂತಾಗಿದೆ.

ಕಲ್ಯಾಣ ಕರ್ನಾಟಕದ ಶಿಕ್ಷಕರ ಹುದ್ದೆ ತುಂಬದಿದ್ದರೆ ಹೋರಾಟದ ಎಚ್ಚರಿಕೆ

ರಾಯಚೂರು: ಕ.ಕ ಭಾಗದಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು 6 ತಿಂಗಳ ಒಳಗೆ ಭರ್ತಿ ಮಾಡಬೇಕು ಇಲ್ಲವಾದಲ್ಲಿ ಸರಕಾರ ವಿರುದ್ಧ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಹೈದರಾಬಾದ್ ಕರ್ನಾಟಕ ಜನಾಂದೋಲನ ಕೇಂದ್ರದ ಸಂಸ್ಥಾಪಕ ರಾಘವೇಂದ್ರ ಕುಷ್ಟಗಿ ಸರಕಾರಕ್ಕೆ ಎಚ್ಚರಿಕೆ ನೀಡಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕ ಭಾಗದಲ್ಲಿರುವ ಯಾವುದೇ ಶಿಕ್ಷಕರನ್ನು ಬೇರೆ ಪ್ರದೇಶಗಳಿಗೆ ವರ್ಗಾವಣೆ ಮಾಡುವುದನ್ನು ತಡೆಗಟ್ಟಬೇಕು. ಹೈದ್ರಾಬಾದ ಕರ್ನಾಟಕ ಭಾಗದ ಶಿಕ್ಷಕರಿಗೆ ಮತ್ತು ಮುಖ್ಯ ಶಿಕ್ಷಕರಿಗೆ ಇತರ ಸರಕಾರಿ ಚಟುವಟಿಗಳಿಂದ ವಿನಾಯಿತಿ ನೀಡಿ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು. ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಅತ್ಯಂತ ಗುಣಮಟ್ಟದ ಶಿಕ್ಷಣ ನೀಡುವ ವ್ಯವಸ್ಥೆ ನಿರ್ಮಿಸದೆ ಎಸ್‌ಎಸ್‌ಎಲ್ ಸಿಯಲ್ಲಿ ಒಳ್ಳೆಯ ಫಲಿತಾಂಶವನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ಪ್ರಾಥಮಿಕ ಶಿಕ್ಷಣಕ್ಕೆ ಸಕಲ ಆದ್ಯತೆ ನೀಡಬೇಕು. ರಾಜ್ಯದಲ್ಲಿ, ಎಸ್‌ಎಸ್ ಎಲ್‌ಸಿ ಯಲ್ಲಿ, ಕಲ್ಯಾಣ ಕರ್ನಾಟಕದ 6 ಜಿಲ್ಲೆಗಳಲ್ಲಿ ಹುದ್ದೆಗಳು ಖಾಲಿಯಾಗಿವೆ. ಈ ಶಾಪದಿಂದ ವಿಮೋಚನೆಯಾಗುವಂತೆ ಸರಕಾರ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ. ಶಾರದಾ ಹುಲಿನಾಯಕ, ಜಾನ್ ವೆಸ್ಲಿ, ಗುರುರಾಜ, ಲಿಂಗಪ್ಪ, ಬಿ. ಬಸವರಾಜ, ಭಂಡಾರಿ ಈರಣ್ಣ ಶೆಟ್ಟಿ, ಪರಪ್ಪ ಉಪಸ್ಥಿತರಿದ್ದರು.

ಕೇಂದ್ರದ ಸಂಸ್ಥಾಪಕ ರಾಘವೇಂದ್ರ ಕುಷ್ಟಗಿ ಮಾತನಾಡಿದರು.

> **ಕಲ್ಯಾಣ ಕರ್ನಾಟಕ ಅನುದಾನದಲ್ಲಿ ಶೇಕಡಾ 25% ರಷ್ಟು ಹಣವನ್ನು ಮೀಸಲಿಟ್ಟದ್ದನ್ನು ನಾವು ಮೆಚ್ಚುತ್ತೇವೆ. ಆದರೆ ಅದರ ಸದ್ಬಳಕೆ ಆದಂತೆ ಕಾಣುತ್ತಿಲ್ಲ. ಇದರ ಪರಿಣಾಮವನ್ನು ಇತ್ತೀಚಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಫಲಿತಾಂಶದಲ್ಲಿ ಕಾಣುತ್ತಿದೆ. ಈ ಪ್ರಮಾಣದ ವೆಚ್ಚದ ವಿಫಲತೆ ಕುರಿತು ಉತ್ತರದಾಯತ್ವಕ್ಕಾಗಿ ಸರಕಾರ ಸಿದ್ಧವಾಗಬೇಕು.**
> -ರಾಘವೇಂದ್ರ ಕುಷ್ಟಗಿ, ಸಂಸ್ಥಾಪಕ

ಕೊಲೆಯಾದ ಗವಿಸಿದ್ದಪ್ಪನ ಮನೆಗೆ ಮಾಜಿ ಸಚಿವ ಬಿ.ಶ್ರೀರಾಮುಲು ಭೇಟಿ | ಆ.8ರಂದು ಕೊಪ್ಪಳದಲ್ಲಿ ಪ್ರತಿಭಟನೆಗೆ ಕರೆ

ತ್ರಿಕೋನ ಪ್ರೇಮ ಕಹಾನಿಯ ಕೊಲೆ ಪ್ರಕರಣಕ್ಕೆ ರಾಜಕೀಯ ತಿರುವು

ಕೊಪ್ಪಳ: ಗವಿಸಿದ್ದಪ್ಪ ನಾಯಕ ಮುಸ್ಲಿಂ ಯುವತಿ ಲವ್ ಮಾಡಿದ್ದಾನೆ ಎಂಬ ಏಕೈಕ ಕಾರಣಕ್ಕೆ ನಗರದ ಮಧ್ಯ ಭಾಗದಲ್ಲಿ ಕೊಲೆ ಮಾಡಿದ್ದಾರೆ. ಇದು ಅತ್ಯಂತ ಹೀನ ಕೃತ್ಯ ಆಗಿದ್ದು, ಕೊಲೆ ಹಿಂದಿರುವ ಕಾಣದ ಕೈಗಳು ಹೊರಗೆ ಬರಬೇಕು. ತಪ್ಪಿತಸ್ಥರಿಗೆ ಗಲ್ಲು ಶಿಕ್ಷೆ ಆಗುವವರೆಗೆ ನಾನು ಹೋರಾಟ ಮಾಡುತ್ತೇನೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಆಗ್ರಹಿಸಿದರು.

ಕೊಪ್ಪಳದ ನಿರ್ಮಿತಿ ಕೇಂದ್ರ, ಏರಿಯಾದಲ್ಲಿ ಭಾನುವಾರ ರಾತ್ರಿ ಕೊಲೆಯಾದ ಗವಿಸಿದ್ದಪ್ಪ ನಾಯಕ ಮನೆಗೆ ಭೇಟಿ ನೀಡಿ ಮಂಗಳವಾರ ಮಾತನಾಡಿದರು.

ಕೊಲೆಯಾದ ಯುವಕ- ಯುವತಿ ಕೆಲ ದಿನ ಹೊರಗಡೆ ಹೋಗಿದ್ದರು. ಹಿರಿಯರು ರಾಜಿ ಮಾಡಿಸಿದ್ದರು. ಎಲ್ಲ ಅನುಸರಿಸಿಕೊಂಡು ಹೋಗುತ್ತಿದ್ದರು. ಹೀಗಿರುವಾಗ ಕೊಲೆ ಮಾಡುವ ಅಗತ್ಯ ಏನಿತ್ತು? ಪ್ರೀತಿ ವಿಷಯದಲ್ಲಿ ಕೊಲೆ ಮಾಡುವ ಹಂತಕ್ಕೆ ಹೋಗುವುದಿಲ್ಲ. ಆದರೆ, ಕೊಪ್ಪಳದಂತ ನಗರದಲ್ಲಿ ಮಚ್ಚು ತಗೊಂಡು ತಲೆ ತೆಗೆಯುವಂಥ ಘಟನೆ ನಡೆದಿದೆ. ವಾಲ್ಮೀಕಿ ಸಮುದಾಯ ದೊಡ್ಡ ಸಮುದಾಯ. ಅಮಾಯಕನನ್ನು ಕೊಲೆ ಮಾಡಿದ್ದಾರೆ. ಇದನ್ನು ತೀವ್ರವಾಗಿ ಖಂಡಿಸುತ್ತೇನೆ. ಬಿಜೆಪಿ ರಾಜ್ಯಾಧ್ಯಕ್ಷ ಬಿವೈವಿ ಖಂಡಿಸಿದ್ದಾರೆ. ನನ್ನೊಡನೆ ಮಾತಾಡಿದ್ದಾರೆ. ಕೊಲೆ ಮಾಡಿರುವ ಆರೋಪಿ ಕೊಲೆ ಮಾಡುವ ಮುನ್ನಾ ದಿನ ಮಚ್ಚು ಹಿಡಿದು ಕೊಲೆ ಮಾಡುವುದಾಗಿ ರೀಲ್ಸ್ ಮಾಡಿದಾನೆ. ಅಂದರೆ ಅವನಿಗೆ ಕುಮ್ಮಕ್ಕು ನೀಡಿದ್ದಾರೆ. ಏನೂ ಮಾಡಿದರೂ ನಡೆಯುತ್ತದೆ ಎಂಬ ಉದ್ದೇಶ ಹೊಂದಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದನ ಕರುಗಳನ್ನು ಕಡಿವಂತೆ ಮನುಷ್ಯರನ್ನು ಕಡಿದು ಹಾಕಿದ್ದಾರೆ. ಅಷ್ಟು ಧೈರ್ಯ ಅವರಿಗೆ ಎಲ್ಲಿಂದ ಬಂದಿದೆ. ಮೊದಲು ಪೊಲೀಸರು ಸಾಧಿಕ್ ಒಬ್ಬನೇ ಕೊಲೆ ಮಾಡಿದಾನೆ ಎಂದರು. ಇವತ್ತು ನಾಲ್ವರು ಎಂದಿದ್ದಾರೆ. ಪೊಲೀಸರು ದ್ವಂದ್ವ ನೀತಿ ಯಾಕೆ ಮಾಡುತ್ತಿದ್ದಾರೆ.

ಆರೋಪಿ ಹಿಂದುಗಳ ವಿರುದ್ಧ ರೀಲ್ಸ್ ಟ್ರೋಲ್ ಮಾಡ್ತಿದ್ದ. ಗಾಂಜಾ ಸೇವಿಸುತ್ತ ರೀಲ್ಸ್ ಮಾಡಿದಾನೆ. ಬೈಕ್ ವೀಲಿಂಗ್ ಮಾಡಿದ್ದಾನೆ. ಹೀಗಿದ್ದರೂ ಅವನ ವಿರುದ್ಧ ಕ್ರಮ ಕೈಗೊಂಡಿಲ್ಲ. ನಮ್ಮ ಹುಡುಗನನ್ನು ರಾತ್ರಿ ವೇಳೆ ಕರೆಸಿಕೊಂಡಿದ್ದಾರೆ. ಇದರ ಹಿಂದೆ ಹುಡುಗಿ ಕೈವಾಡ ಇರುವ ಶಂಕೆ ಇದೆ. ಅದರ ಬಗ್ಗೆ ತನಿಖೆ ಆಗಬೇಕಲ್ಲವಾ ? ಎಂದು ಪ್ರಶ್ನಿಸಿದರು.

ನಾವೆಲ್ಲ ಏನೇ ಮಾಡಿದರೂ ತಾಯಿಗೆ ಮಗನನ್ನು ತಂದುಕೊಡಲಾಗದು. ಸಾಧಿಕ್ ಇಂದು ಪೊಲೀಸರಿಗೆ ಶರಣಾಗಿರಬಹುದು. ನೀ ಪಾತಾಳದಲ್ಲಿದ್ದರೂ ಎಳೆದು ತರುತ್ತೇವೆ. ಗಲ್ಲು ಶಿಕ್ಷೆ ಕೊಡಿಸುತ್ತೇವೆ. ಪಿಎಸ್‌ಐ ಬೆಂಬಲ ಇರಬಹುದು. ನಾವು ಏನ್ ಮಾಡಿದರೂ ದಕ್ಕಿಸಿಕೊಳ್ಳಬಹುದೆಂಬ ಅಹಂ ಇರಬಹುದು. ಸಮುದಾಯ ಶಕ್ತಿ ಒಂದಾಗಿದೆ. ಕೇಸರಿ ಜಿಹಾದ್ ಮಾಡಿದಂಥವರಿಗೆ ಇದೇ ಗತಿ ಎಂದು ಕಮೆಂಟ್ ಹಾಕಿದ್ದಾನೆ. ಹಿಂದುಗಳೆಲ್ಲ ಒಂದಾಗಿ ನಿಂತರೆ ನೀವೆಲ್ಲ ಉಳಿಯಲ್ಲ. ನಾವೆಲ್ಲ ಲಕ್ಷಾಂತರ ಸಂಖ್ಯೆಯಲ್ಲಿ ಕೇಸರಿ ಧ್ವಜದೊಂದಿಗೆ ಬೀದಿಗಿಳಿಯುತ್ತೇವೆ. ಆಗ ನೀವೇನು ಮಾಡುತ್ತೀರಿ ನೋಡುತ್ತೇವೆ. ಹಿಂದು ಕಾರ್ಯಕರ್ತರಿಗೆ ಅನ್ಯಾಯ ಆದರೆ ನಾ ಜೀವ ಪಣಕ್ಕಿಟ್ಟಾದರೂ ಹೋರಾಡುತ್ತೇವೆ.

ಕೊಪ್ಪಳದ ಹಿರಿಯರು ನಿರ್ಧರಿಸಿದಾಗ ಹೋರಾಟಕ್ಕೆ ಬರುವೆ. ಗವಿಸಿದ್ದಪ್ಪನ ಆತ್ಮಕ್ಕೆ ಶಾಂತಿ ಸಿಗುವವರೆಗೆ ಹೋರಾಡುತ್ತೇವೆ. ಕೊಲೆಗೆ ಕುಮ್ಮಕ್ಕು ನೀಡಿದವರನ್ನು ಪತ್ತೆ ಮಾಡಿ ಅವರಿಗೆ ಶಿಕ್ಷೆ ಆಗುವಂತೆ ಮಾಡಬೇಕು ಎಂದರು. ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜ ಧಡೆಸುಗೂರ, ಮುಖಂಡರಾದ ಶರಣು ತಳ್ಳಿಕೇರಿ, ಡಾ.ಬಸವರಾಜ ಕ್ಯಾವಟರ್, ಮಲ್ಲಿಕಾರ್ಜುನ ಸ್ವಾಮಿ, ಗಣೇಶ ಹೊರತಟ್ನಾಳ ಇದ್ದರು.

> **ಕೊಪ್ಪಳಲ್ಲಿ ಪೊಲೀಸ್ ಇಲಾಖೆ ಸಂಪೂರ್ಣ ವಿಫಲವಾಗಿದೆ. ಗೃಹ ಮಂತ್ರಿಗಳು ಎಲ್ಲಿದ್ದೀರಿ ನೀವು? ನಮ್ಮ ಹುಡುಗನ ರುಂಡ ಕತ್ತರಿಸಿದ್ದಾರೆ. ಪೊಲೀಸರು ಗಂಟೆಗೊಂದು ಹೇಳಿಕೆ ನೀಡುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಸಂವಿಧಾನ ಉಳಿಸಬೇಕಾದವರು ಯಾರು ? ನಾವು ಹೋರಾಟ ಮುಂದುವರೆಸುತ್ತೇವೆ. ಶಾಸಕ, ಸಂಸದರು ಎಲ್ಲ ಜನಪ್ರತಿನಿಧಿಗಳು ನಮ್ಮ ಹುಡುಗನ ಕುಟುಂಬಕ್ಕೆ ನ್ಯಾಯ ಒದಗಿಸಿಕೊಡಬೇಕು. ಆ.8 ರಂದು ಕೊಪ್ಪಳದಲ್ಲಿ ಪ್ರತಿಭಟನೆ ಇರಲಿದೆ.**
> - ಬಿ.ಶ್ರೀರಾಮುಲು, ಮಾಜಿ ಸಚಿವ

ಜಾಲತಾಣದ ಮಾಹಿತಿ ಕಳ್ಳರಿಗೆ ಮೂಗುದಾರ

ಪ್ರತಿಯೊಬ್ಬರು ಫೇಸ್‌ಬುಕ್ ಪ್ರಿಯರೇ. ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ವಾಟ್ಸಾಪ್‌ನ ಮಾತೃ ಸಂಸ್ಥೆ ಮೆಟಾ, ಫೇಸ್‌ಬುಕ್‌ಗಾಗಿ ಹೊಸ ನಿಯಮವನ್ನು ಜಾರಿಗೆ ತಂದಿದ್ದು, ಮೂಲ ಖಾತೆಗಳಿಂದ ಕಂಟೆಂಟ್ ಕದ್ದು ಹಂಚಿಕೊಳ್ಳುವ ಪರಿಪಾಠಕ್ಕೆ ಕೊಕ್ಕೆ ಬೀಳಲಿದೆ.

ಕರಿಯಪ್ಪ ಹೆಗ್ಗಡದಿನ್ನಿ

ಫೇಸ್‌ಬುಕ್, ಇನ್‌ಸ್ಟಾ, ವಾಟ್ಸಾಪ್ ಸೇರಿ ಹಲವು ಸೋಷಿಯಲ್ ಮೀಡಿಯಾಗಳಲ್ಲಿ ಮಕ್ಕಳಿಂದ ವೃದ್ಧರೂ ಗಂಟಗಟ್ಟಲೇ ಸಮಯ ಕಳಿಯುವುದು ಹವ್ಯಾಸ. ಇದರ ನಡುವೆ ಜಾಲತಾಣಗಳನ್ನೇ ತಮ್ಮ ಆರ್ಥಿಕ ಮೂಲಕ್ಕೆ ದಾರಿ ಮಾಡಿಕೊಂಡಿದ್ದಾರೆ. ತಮ್ಮ ಕ್ರಿಯೆಟಿವಿಟಿ ಮೂಲಕ ಕಂಟೆಂಟ್ ಕ್ರಿಯೆಟ್ ಮಾಡಿ ಆದಾಯ ಗಳಿಸುತ್ತಿದ್ದಾರೆ. ಮೂಲ ಕಂಟೆಂಟ್‌ಗೂ ಖದೀಮರ ಕೈ ಹಾಕುತ್ತಿದ್ದು, ಇದನ್ನು ತಡೆಯಲು ಮೆಟಾ ಹೊಸ ನಿಯಮ ತಂದಿದೆ.

5 ಲಕ್ಷ ಫೇಸ್‌ಬುಕ್ ಖಾತೆ ನಿಷ್ಕ್ರಿಯ

- 5 ಲಕ್ಷ ಫೇಸ್‌ಬುಕ್ ಖಾತೆಗಳನ್ನು ನಿಷ್ಕ್ರಿಯಗೊಳಿಸಿರುವ ಮೆಟಾ
- ನಿಷೇಧಿತ ಪೇಜ್‌ಗಳ ಆದಾಯ ಕಡಿತಗೊಳಿಸಿ ಮೆಟಾ ಆದೇಶ
- ನಕಲು ಕಂಟೆಂಟ್ ಪತ್ತೆ ಹಚ್ಚುವ ಎಐ ಆಧಾರಿತ ತಂತ್ರಜ್ಞಾನ ಬಳಕೆ

ನಿತ್ಯ ಸಾವಿರಾರು ವಿಚಾರಗಳ ಮೇಲೆ ಫೇಸ್‌ಬುಕ್‌ನಲ್ಲಿ ಪೋಸ್ಟ್‌ಗಳನ್ನು ಹಂಚಿಕೊಳ್ಳಲಾಗುತ್ತಿದೆ. ಮೂಲ ಕಂಟೆಂಟ್ ಕ್ರಿಯೆಟರ್‌ಗಳು ತಮ್ಮ ಪೇಜ್‌ಗಳಲ್ಲಿ ಹಂಚಿಕೊಂಡ ಪೋಸ್ಟ್, ಬರಹ ಹೊಂದಿರುವ ಮಾಹಿತಿ ಯನ್ನು ಕದ್ದು ಮರುಪೋಸ್ಟ್ ಮಾಡುವ ಖಾತೆಗಳನ್ನು ನಿಯಂತ್ರಿಸಲು ಮೆಟಾ ಮುಂದಾಗಿದೆ. ಸ್ಪ್ಯಾಮ್ ಮತ್ತು ಡೂಪ್ಲಿಕೇಟ್ ಕಂಟೆಂಟ್ ಅನ್ನು ಕಡಿಮೆ ಮಾಡಲು ಮತ್ತು ವೇದಿಕೆಯಲ್ಲಿ ಒರಿಜಿನಲ್ ಕ್ರಿಯೆಟಿವಿಟಿಯನ್ನು ಉತ್ತೇಜಿಸಲು ಲಾಂಗ್‌ಟರ್ಮ್ ಯೋಜನೆಯನ್ನು ಪ್ರಾರಂಭಿಸಿರುವುದಾಗಿ ಫೇಸ್‌ಬುಕ್ ತನ್ನ ಅಧಿಕೃತ ಬ್ಲಾಗ್ ಪೋಸ್ಟ್‌ನಲ್ಲಿ ತಿಳಿಸಿದೆ. ಮೂಲ ಕಂಟೆಂಟ್ ನಕಲಿಸಿ ಹಂಚಿಕೊಳ್ಳುತ್ತಿದ್ದ 5 ಲಕ್ಷಕ್ಕೂ ಹೆಚ್ಚು ಖಾತೆಗಳ ವಿರುದ್ಧ ಫೇಸ್‌ಬುಕ್ ಹಾಗೂ ಮೆಟಾ ಈ ವರ್ಷದಲ್ಲಿ ಕ್ರಮ ಕೈಗೊಂಡಿದೆ. ಕಂಟೆಂಟ್ ನಕಲಿಸಿ ಪೋಸ್ಟ್ ಮಾಡುತ್ತಿದ್ದ 5 ಲಕ್ಷ ಫೇಸ್‌ಬುಕ್ ಖಾತೆಗಳನ್ನು ನಿಷ್ಕ್ರಿಯಗೊಳಿಸಿರುವುದಲ್ಲದೇ ಇದುವರೆಗೆ ಆ ಪೇಜ್‌ಗಳು ಸಂಪಾದಿಸಿದ ಆದಾಯವನ್ನು ಕಡಿತಗೊಳಿಸಿದೆ. ಮೂಲ ಕಂಟೆಂಟ್ ಕ್ರಿಯೆಟರ್ಸ್ ಗಳಿಗೆ ಹೊಡೆತ ಬೀಳುವುದನ್ನು ತಪ್ಪಿಸಲು ಕಠಿಣ ಕ್ರಮ ಕೈಗೊಂಡಿದ್ದು, ಪ್ರತಿಭಾನ್ವಿತರಿಗೆ ನಮ್ಮ ಮೊದಲ ಆದ್ಯತೆ ಎಂದಿದೆ ಫೇಸ್‌ಬುಕ್. ನಕಲು ಕಂಟೆಂಟ್‌ಗಳನ್ನು ಪತ್ತೆ ಹಚ್ಚಲು ಎಐ ಆಧಾರಿತ ತಂತ್ರಜ್ಞಾನವನ್ನು ಬಳಕೆ ಮಾಡಲಾಗುತ್ತಿದೆ. ಫೇಸ್‌ಬುಕ್‌ನ ಈ ಹೊಸ ನಿಯಮವು ಒರಿಜಿನಲ್ ಕಂಟೆಂಟ್ ಕ್ರಿಯೆಟರ್ಸ್‌ಗೆ ದೊಡ್ಡ ಪ್ರಯೋಜನ ಮತ್ತು ಅವರ ಕಠಿಣ ಪರಿಶ್ರಮಕ್ಕೆ ಸರಿಯಾದ ಮನ್ನಣೆಯನ್ನು ನೀಡುತ್ತದೆ. ಆದ್ದರಿಂದ ನೀವು ಫೇಸ್‌ಬುಕ್‌ನಲ್ಲಿ ಸಕ್ರಿಯರಾಗಿದ್ದರೆ ಮತ್ತು ಕಂಟೆಂಟ್ ಅನ್ನು ಹಂಚಿಕೊಂಡರೆ ಈಗಲೇ ಜಾಗರೂಕರಾಗಿರಿ. ಇಲ್ಲದಿದ್ದರೆ ನಿಮ್ಮ ಗಳಿಕೆ ಮತ್ತು ರೇಂಜ್ ಎರಡನ್ನೂ ಮೆಟಾ ನಿಲ್ಲಿಸಬಹುದು.

98 ಲಕ್ಷ ವಾಟ್ಸಾಪ್ ಖಾತೆ ನಿಷೇಧ

- ಒಂದೇ ಸಾರಿ ಸಂದೇಶ ನೋಡ್ಬಹುದು
- ವಾಟ್ಸಾಪ್ ಹೊಸ ಫೀಚರ್

ದೇಶ ಭದ್ರತೆ, ಶಾಂತಿ ಭಂಗ, ಕೋಮು ಸಂಘರ್ಷ, ಅಶ್ಲೀಲ ಸಂದೇಶ ರವಾನೆ ಹಾಗೂ ಸಮಾಜ ಘಾತುಕ ಚಟುವಟಿಕೆಗಳನ್ನು ತಡೆಗಟ್ಟುವ ಭಾಗವಾಗಿ ಭಾರತದಲ್ಲಿ 98 ಲಕ್ಷಕ್ಕೂ ಹೆಚ್ಚು ವಾಟ್ಸಾಪ್ ಖಾತೆಗಳನ್ನು ಜೂನ್ ತಿಂಗಳಿನಲ್ಲಿ ನಿಷೇಧಿಸಿದೆ ಎಂದು ಮೆಟಾ ತಿಳಿಸಿದೆ.

ಬಳಕೆದಾರರ ಸುರಕ್ಷತೆ ಹಾಗೂ ವೈಯಕ್ತಿಕ ಮಾಹಿತಿ ಸೋರಿಕೆ ಆಗದಂತೆ ಕಠಿಣ ಕ್ರಮ ಹೊಂದಿ ರುವ ವಾಟ್ಸಾಪ್ ಮಾಹಿತಿ ದುರುಪಯೋಗ, ಭದ್ರತಾ ಬೆದರಿಕೆಗಳನ್ನು ಎದುರಿಸಲು ಎಂಡ್ ಟು ಎಂಡ್ ಎನ್‌ಕ್ರಿಪ್ಶನ್, ಸೇಫ್ಟಿ ಟೂಲ್ಸ್ ಮತ್ತು ಡೆಡಿಕೇಟೆಡ್ ಟೀಮ್ಸ್ ಪರಿಚಯಿಸಿದೆ. ಇದರ ಮೂಲಕ ಬಂದ ದೂರುಗಳನ್ನು ಆಧರಿಸಿದ ಮೆಟಾ ಭಾರತದಲ್ಲಿ 98ಲಕ್ಷಕ್ಕೂ ಹೆಚ್ಚು ವಾಟ್ಸಾಪ್ ಖಾತೆಗಳನ್ನು ನಿಷೇಧಿಸಿದೆ. ವಾಟ್ಸಾಪ್ ಬಳಕೆದಾರರಿಂದ ದೂರುಗಳು ಬರುವ ಮೊದಲೇ ಸುಮಾರು 19.79 ಲಕ್ಷ ಖಾತೆಗಳನ್ನು ನಿಷೇಧಿಸಲಾಗಿದೆ. ಖಾತೆಗಳನ್ನು ನಿಷೇಧಿಸುವುದರ ಜತೆಗೆ ಭಾರತದಲ್ಲಿನ ಬಳಕೆದಾರರಿಂದ ಬಂದ ದೂರುಗಳ ಮೇಲೂ ವಾಟ್ಸಾಪ್ ಕ್ರಮ ಕೈಗೊಂಡಿದೆ. ಈ ತಿಂಗಳಲ್ಲಿ, ವೇದಿಕೆಯು 23,596 ದೂರುಗಳನ್ನು ಸ್ವೀಕರಿಸಿದ್ದು, ಅವುಗಳಲ್ಲಿ 1,001 ಖಾತೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ.

ಒಂದೇ ಬಾರಿ ಕಾಣುತ್ತೆ ಮೆಸೇಜ್!

ಅತ್ಯಂತ ಜನಪ್ರಿಯ ಜಾಲ ತಾಣ ವಾಟ್ಸಾಪ್‌ಗೆ ನೂತನ ಫೀಚರ್ ಸೇರಿದ್ದು, ಒಂದು ಸಂದೇಶವನ್ನು ಒಂದು ಬಾರಿ ಮಾತ್ರ ನೋಡಬ ಹುದು. ಈಗಾಗಲೇ ಇರುವ ಒಂದು ಫೋಟೊ ಒಂದೇ ಸಾರಿ ನೋಡುವ ಮಾದರಿಯಲ್ಲೇ ಇದು ಇದ್ದು, ಯಾರಿಗಾದರೂ ಒಂದು ಬಾರಿ ನೋಡುವ ಆಯ್ಕೆಯಲ್ಲಿ ಮೆಸೇಜ್ ರವಾನಿಸಿದರೆ ಅದು ರಿಸೀವರ್‌ಗೆ ಒಂದೇ ಬಾರಿ ಕಾಣಲಿದೆ. ಕಳಿಸಿದ ಸಂದೇಶ ಫಾರ್ವರ್ಡ್ ಹಾಗೂ ಸ್ಕ್ರೀನ್‌ಶಾಟ್ ತೆಗೆದುಕೊಳ್ಳುವ ಅವಕಾಶವೂ ಇರುವುದಿಲ್ಲ.

ಸೌರಶಕ್ತಿ ಉತ್ಪಾದನೆಯಲ್ಲಿ ಭಾರತಕ್ಕೆ 3ನೇ ಸ್ಥಾನ

ಸಾಂಪ್ರದಾಯಿಕ ಶಕ್ತಿ ಉತ್ತೇಜನಕ್ಕೆ ಒತ್ತು ಕೊಟ್ಟಿರುವ ಕೇಂದ್ರ ಸರಕಾರದ ಗುರಿ ಫಲಿಸಿದೆ. ಸೌರಶಕ್ತಿ ಉತ್ಪಾದನೆಯಲ್ಲಿ ಸ್ವಾವಲಂಬನೆ ರಾಷ್ಟ್ರವಾಗಿ ಮುನ್ನುಗ್ಗುತ್ತಿದ್ದು, ಸೌರಶಕ್ತಿ ಉತ್ಪಾದನೆಯಲ್ಲಿ ಮೂರನೇ ಅತೀ ದೊಡ್ಡ ರಾಷ್ಟ್ರವಾಗಿ ಭಾರತ ಹೊರಹೊಮ್ಮಿದೆ. ಈ ಮೂಲಕ ಜಪಾನ್ ದೇಶವನ್ನು ಮೀರಿಸಿದೆ. ದೇಶದ ಇಂಧನ ಕ್ಷೇತ್ರದ ಅಭಿವೃದ್ಧಿಯಲ್ಲಿ ಗಮನಾರ್ಹ ಸಾಧನೆಯಾಗಿದೆ.

ಅಂತಾರಾಷ್ಟ್ರೀಯ ನವೀಕರಿಸಬಹುದಾದ ಇಂಧನ ಸಂಸ್ಥೆ ಬಿಡುಗಡೆ ಮಾಡಿರುವ ದತ್ತಾಂಶದ ಆಧಾರದ ಮೇಲೆ ಭಾರತವು 1,08,494 ಗಿಗಾವ್ಯಾಟ್ ಗಂಟೆಗಳ ಸೌರಶಕ್ತಿಯನ್ನು ಉತ್ಪಾದಿಸಿದ್ರೆ, ಜಪಾನ್ 96,459 ಗಿಗಾವ್ಯಾಟ್ ಗಂಟೆಗಳ ಸೌರಶಕ್ತಿಯನ್ನು ಉತ್ಪಾದಿಸಿದೆ. ಸೌರಶಕ್ತಿ ಉತ್ಪಾದನೆಯಲ್ಲಿ ಭಾರತವು ಜಪಾನ್‌ಗಿಂತ ಒಂದು ಹೆಜ್ಜೆ ಮುಂದಿದೆ.

2030ರ ವೇಳೆಗೆ 500 ಗಿಗಾವ್ಯಾಟ್ ಶುದ್ಧ ಇಂಧನ ಆಧಾರಿತ ವಿದ್ಯುತ್ ಸಾಮರ್ಥ್ಯವನ್ನು ಸಾಧಿಸುವ ಮಹತ್ವಾಕಾಂಕ್ಷೆಯ ಗುರಿಯನ್ನು ಭಾರತ ಹೊಂದಿದೆ. ಇದನ್ನು ಸಾಧಿಸಲು ಅದು ಬಹು ಆಯಾಮದ ವಿಧಾನದೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಈ ನಿಟ್ಟಿನಲ್ಲಿ ಈ ಸಾಧನೆ ಮುಖ್ಯವಾಗಿದೆ. ಸೌರಶಕ್ತಿ ಕ್ಷೇತ್ರದಲ್ಲಿನ ಯಶಸ್ಸಿನ ಜತೆಗೆ ಭಾರತವು ತನ್ನ ಪವನ ಶಕ್ತಿ ಬಂಡವಾಳವನ್ನು ವಿಸ್ತರಿಸುತ್ತಿದೆ. ಕಳೆದ ತಿಂಗಳ ಆರಂಭದಲ್ಲಿ ಈ ವರ್ಷದ ಜೂನ್ 30ರ ವೇಳೆಗೆ ಭಾರತದಲ್ಲಿ ಸ್ಥಾಪಿತ ಪವನ ಶಕ್ತಿ ಸಾಮರ್ಥ್ಯವು 51.67 ಗಿಗಾವ್ಯಾಟ್ ತಲುಪಿದೆ.

ಕಳೆದ ಮೂರು ಹಣಕಾಸು ವರ್ಷಗಳಲ್ಲಿ ದೇಶದ ಪವನ ಶಕ್ತಿ ಸಾಮರ್ಥ್ಯವು ನಿರಂ ತರವಾಗಿ ಹೆಚ್ಚುತ್ತಿದೆ. 2023-2024 ರ ಹಣಕಾಸು ವರ್ಷದಲ್ಲಿ, 2,275.55 ಮೆಗಾ ವ್ಯಾಟ್ ಹೊಸ ಸಾಮರ್ಥ್ಯವನ್ನು ಸೇರಿಸಲಾಗಿದೆ. 2024-2025 ರ ಹಣಕಾಸು ವರ್ಷದಲ್ಲಿ 3,253.39 ಮೆಗಾವ್ಯಾಟ್‌ಹೊಸ ಸಾಮರ್ಥ್ಯವನ್ನು ಸೇರಿಸಲಾಗಿದೆ ಮತ್ತು 2025-2026 ರ ಹಣಕಾಸು ವರ್ಷದ ಏಪ್ರಿಲ್-ಜೂನ್ ತ್ರೈಮಾಸಿಕದಲ್ಲಿ 1,637.02 ಮೆಗಾವ್ಯಾಟ್ ಹೊಸ ಸಾಮರ್ಥ್ಯವನ್ನು ಸ್ಥಾಪಿಸಲಾಗಿದೆ ಎಂದರು.

ಪವನ ಶಕ್ತಿಯಲ್ಲಿ ಕರ್ನಾಟಕಕ್ಕೆ 3ನೇ ಸ್ಥಾನ

13,816.68 ಮೆಗಾವ್ಯಾಟ್ ಸ್ಥಾಪಿತ ಸಾಮರ್ಥ್ಯದೊಂದಿಗೆ ಗುಜರಾತ್ ಪವನ ಶಕ್ತಿ ಉತ್ಪಾದನಾ ಸಾಮರ್ಥ್ಯದ ವಿಷಯದಲ್ಲಿ ಅಗ್ರ ಮೂರು ರಾಜ್ಯಗಳಲ್ಲಿ ಮುಂಚೂಣಿಯಲ್ಲಿದೆ. ತಮಿಳುನಾಡು 11,830.36 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಮೂಲಕ ಎರಡನೇ ಸ್ಥಾನದಲ್ಲಿದೆ. 7,714.74 ಮೆಗಾವ್ಯಾಟ್ ಪವನ ವಿದ್ಯುತ್ ಉತ್ಪಾದಿಸುವ ಮೂಲಕ ಕರ್ನಾಟಕವು ದೇಶದ ಮೂರನೇ ಅತಿದೊಡ್ಡ ಉತ್ಪಾದಕ ರಾಜ್ಯವಾಗಿದೆ.

ಮಾರುಕಟ್ಟೆಗೆ ಬಂದಿದೆ ಬಜೆಟ್ ಫ್ರೆಂಡ್ಲಿ ಟಿವಿ

ಬೆಂಗಳೂರು: ಭಾರತದ ಗ್ಯಾಜೆಟ್ ಕ್ಷೇತ್ರದಲ್ಲಿ ಹೆಸರು ಮಾಡಿರುವ ಏಸರ್ ಸಂಸ್ಥೆ ಇದೀಗ ಇಂದಿನ ಜನರೇಷನ್ ಬಯಸುವ ಆಧುನಿಕ ಸೌಲಭ್ಯಗಳನ್ನು ಹೊಂದಿರುವ ಸ್ಮಾರ್ಟ್ ಟಿವಿಯನ್ನು ಕಡಿಮೆ ದರದಲ್ಲಿ ಮಾರುಕಟ್ಟೆಗೆ ಪರಿಚಯಿಸಿದೆ.

ಆ್ಯಂಡ್ರಾಯ್ಡ್ 14 ಓಎಸ್ ಹೊಂದಿರುವ ಭಾರತದ ಮೊದಲ ಸ್ಮಾರ್ಟ್ ಟಿವಿ ಎನಿಸಿರುವ ಏಸರ್ ವಿ ಪ್ರೊ ಕ್ಯೂ ಟಿವಿ ಇತ್ತೀಚಿಗೆ ಬಿಡುಗಡೆಯಾಗಿದ್ದು, ಈ ಟಿವಿಯಲ್ಲಿ ಕೃತಕ ಬುದ್ಧಿಮತ್ತೆಯ ಸಾಮರ್ಥ್ಯ ಹೊಂದಿರುವುದು ವಿಶೇಷ. ಕಾಲಕ್ಕೆ ತಕ್ಕಂತೆ ಆಧುನಿಕ ಮನೆಗಳಿಗಾಗಿ ಏಸರ್ ಕಂಪನಿ ಐ ಗೂಗಲ್ ಟಿವಿಗಳನ್ನು ಬಿಡುಗಡೆ ಮಾಡಿದೆ. ಈ ಸರಣಿಯಲ್ಲಿ 43 ಇಂಚು, 50 ಇಂಚು ಮತ್ತು 55 ಇಂಚಿನ ಟಿವಿಗಳು ಲಭ್ಯವಿದೆ.

ಈ ನೂತನ ಬ್ರ್ಯಾಂಡ್‌ನ ಟಿವಿ ಫ್ರೇಮ್ ಲೆಸ್ ವಿನ್ಯಾಸದಲ್ಲಿ ಸಿದ್ದವಾಗಿರುವುದರಿಂದ ಸ್ಕ್ರೀನ್ ಸ್ಪೇಸ್ ಹೆಚ್ಚಾಗಿದೆ. 4ಕೆ ಕ್ಯೂಎಲ್‌ಇಡಿ ಡಿಸ್ಪ್ಲೇ ಇರುವುದರಿಂದ, ವಿಶೇಷವಾಗಿ ಡ್ಯುಯಲ್ ಎಐ ಪ್ರೊಸೆಸರ್ ಇರುವುದರಿಂದ ಅತ್ಯುತ್ತಮ ಗುಣಮಟ್ಟದ ವಿಡಿಯೊಗಳು ಸಿಗುತ್ತದೆ. ಈ ಟಿವಿಯನ್ನು ಕೇವಲ ಸಿನಿಮಾ ವೀಕ್ಷಣೆಗೆ ಮಾತ್ರವಲ್ಲದೇ, ಗೇಮಿಂಗ್‌ಗೂ ಅನುಕೂಲವಾಗುವಂತೆ ರೂಪಿಸಲಾಗಿದೆ.

ಸೌಲಭ್ಯಗಳೇನು?

- ಗೂಗಲ್ ಅಸಿಸ್ಟೆಂಟ್, ಗೂಗಲ್ ಕಾಸ್ಟ್
- 30 ವ್ಯಾಟ್ ಕ್ವಾಂಟಮ್ ಹೈ-ಫೈ ಸ್ಪೀಕರ್, ಡಾಲ್ಬಿ ಅಟ್ಮಾಸ್ ಮತ್ತು ಡಾಲ್ಬಿ ಆಡಿಯೊ
- ದೇಶದ ಮೊದಲ ಆ್ಯಂಡ್ರಾಯ್ಡ್ 14 ಓಎಸ್ ಹೊಂದಿರುವ ಟಿವಿ
- ಫ್ರೇಮ್ ಲೆಸ್ ಟಿವಿಯಾಗಿರುವುದರಿಂದ ಶೇ.98.5ರಷ್ಟು ಸ್ಕ್ರೀನ್ ಸಿಗಲಿದೆ
- ಡ್ಯುಯಲ್ ಎಐ ಪ್ರೊಸೆಸರ್

ಎಐ ಈ ಕಾಲದ ಅತ್ಯಗತ್ಯ ತಂತ್ರಜ್ಞಾನವಾಗಿ ರೂಪುಗೊಂಡಿದ್ದು, ಪ್ರತಿಯೊಂದು ವಸ್ತುಗಳಲ್ಲಿಯೂ ಅದನ್ನು ಸಮರ್ಥವಾಗಿ ಬಳಸಿಕೊಳ್ಳುವತ್ತ ಕಂಪನಿಗಳು ಮುಂದಾಗಿವೆ. ಏಸರ್ ಕೂಡ ಎಐ ತಂತ್ರಜ್ಞಾನವನ್ನು ಬಳಸಿದೆ. ಗೂಗಲ್ ಟಿವಿಯಾಗಿರುವುದರಿಂದ, ಗೂಗಲ್ ಅಸಿಸ್ಟೆಂಟ್ ಮೂಲಕವೇ ಈ ಟಿವಿಯ ಕಾರ್ಯನಿರ್ವಹಣೆ ನಿಯಂತ್ರಿಸಬಹುದಾಗಿದೆ. ಅದು ಗ್ರಾಹಕರಿಗೆ ಹೆಚ್ಚಿನ ಅನುಕೂಲತೆಯನ್ನು ನೀಡುತ್ತದೆ.

50 ಇಂಚಿನ ಕ್ಯೂಎಲ್‌ಇಡಿ ಟಿವಿಯಲ್ಲಿ 2 ಜಿಬಿ ರ‍್ಯಾಮ್, 16 ಸ್ಟೋರೇಜ್ ಇದ್ದು, ಈ ಸೌಲಭ್ಯವು ಈ ಟಿವಿ ವೇಗವಾಗಿ ಇಂಟರ್ ನೆಟ್ ಕೆಲಸ ಮಾಡಲು ಅನುವು ಮಾಡಿಕೊಡುತ್ತದೆ. ಆಂಡ್ರಾಯ್ಡ್ 14 ಗೂಗಲ್ ಟಿವಿಯಲ್ಲಿ ತ್ವರಿತವಾಗಿ ಕೆಲಸ ಮಾಡುತ್ತದೆ. ಇಷ್ಟೆಲ್ಲ ಸೌಲಭ್ಯವಿದ್ದರೂ, ದರ ಗ್ರಾಹಕ ಸ್ನೇಹಿಯಾಗಿದ್ದು, 50 ಇಂಚಿನ ಟಿವಿ 29 ಸಾವಿರ ರೇಂಜ್‌ನಲ್ಲಿದೆ. ಕಡಿಮೆ ಬಜೆಟ್‌ನಲ್ಲಿ ಉತ್ತಮ ಟಿವಿ ಬಯಸುವ ಮಂದಿ ಈ ಕಡೆ ಗಮನ ಹರಿಸಬಹುದಾಗಿದೆ.

ಪ್ರತಿನಿತ್ಯ 500 ಪ್ರವಾಸಿಗರು ಭೇಟಿ | ಅತ್ಯಧಿಕ ಆದಾಯದ ಆಕರ್ಷಣೆಯ ತಾಣ

ತಂಗಾಳಿಯ ತಾಣ ಗ್ಲಾಸ್ ಬ್ರಿಡ್ಜ್ ಎಬ್ಬಿಸಿದ ರಾಜಕೀಯ ಬಿಸಿಗಾಳಿ !

ಜಿಲ್ಲಾ ನೋಟ

ಅನಿಲ್ ಎಚ್. ಟಿ.

ಮಡಿಕೇರಿ: ಜಿಲ್ಲೆಯ ಹೆಸರಾಂತ ಪ್ರವಾಸಿ ತಾಣ ರಾಜಾಸೀಟ್‌ನಲ್ಲಿ ಉದ್ದೇಶಿತ ಗ್ಲಾಸ್ ಬ್ರಿಡ್ಜ್ ಮತ್ತು ಫುಡ್ ಕೋರ್ಟ್ ಈಗ ತಂಪಿನ ತಾಣದಲ್ಲಿ ಬಿಸಿ ಎಬ್ಬಿಸುವಂತೆ ಮಾಡಿದೆ.

ಗ್ಲಾಸ್ ಬ್ರಿಡ್ಜ್ ಯೋಜನೆ

ಕೊಡಗಿನಲ್ಲಿ ಕಳೆದ ಎರಡು ವರ್ಷಗಳಿಂದ ಪ್ರವಾಸೋದ್ಯಮಕ್ಕೆ ಹೊಸ ಪರಿಚಯವಾಗಿ ಗ್ಲಾಸ್ ಬ್ರಿಡ್ಜ್ ಸೇರ್ಪಡೆಯಾಗಿತ್ತು. ಪ್ರಕೃತಿಯ ಅಂಚಿನಲ್ಲಿ ಕೆಳಗಡೆ ಪ್ರಪಾತದ ಮೇಲ್ಗಡೆ ಗ್ಲಾಸ್ ಮೇಲೆ ನಡೆದುಕೊಂಡು ಸಾಗುವ ಪ್ರವಾಸಿಗನಿಗೆ ಇದು ರೋಮಾಂಚನದ ಅನುಭವ ನೀಡಿತ್ತು. ಮಡಿಕೇರಿಯಿಂದ 5 ಕಿ.ಮೀ. ದೂರದ ಉಡೋತ್‌ನಲ್ಲಿ ಮೊದಲು ಪ್ರಾರಂಭವಾಗಿದ್ದ ಗ್ಲಾಸ್ ಬ್ರಿಡ್ಜ್ ಅತ್ಯಂತ ಜನಪ್ರಿಯವೂ ಆಗಿತ್ತು. ಪ್ರತಿನಿತ್ಯ 500-600 ಪ್ರವಾಸಿಗರು ಗ್ಲಾಸ್ ಬ್ರಿಡ್ಜ್‌ಗೆ ಭೇಟಿ ನೀಡುತ್ತಿದ್ದರು. ಗ್ಲಾಸ್ ಬ್ರಿಡ್ಜ್ ಕೋಟಿಗಟ್ಟಲೆ ವಹಿವಾಟಿಗೂ ಕಾರಣವಾಗಿ ಅತ್ಯಂತ ಆದಾಯವಿರುವ ಪ್ರವಾಸಿ ಯೋಜನೆ ಎಂಬ ಹಿರಿಮೆಗೂ ಕಾರಣವಾಗಿತ್ತು.

ಪ್ರವಾಸಿಗರ ದಂಡು

ಗ್ಲಾಸ್ ಬ್ರಿಡ್ಜ್ ನ ಯಶಸ್ಸು ಅನಂತರ ಇತರೆಡೆಯೂ ಇದೇ ಯೋಜನೆ ಜಾರಿಗೆ ಕಾರಣವಾಯಿತು. ಮಡಿಕೇರಿ ಬಳಿಯ ಅಬ್ಬಿಫಾಲ್ಸ್ ರಸ್ತೆಯಲ್ಲಿ ಮತ್ತೊಂದು ಗ್ಲಾಸ್ ಬ್ರಿಡ್ಜ್ ಕಳೆದ ವರ್ಷ ಪ್ರಾರಂಭವಾಯಿತು. ಇದಕ್ಕೂ ಕೂಡ ಜನರು ಸಾಲುಗಟ್ಟಿ ತೆರಳತೊಡಗಿದರು. ಗ್ಲಾಸ್ ಬ್ರಿಡ್ಜ್ ನಲ್ಲಿಯೇ ಸೆಲ್ಫಿ ಪಾಯಿಂಟ್ ಕೂಡ ವಿಶೇಷ ಆಕರ್ಷಣೆಯಾಗಿತ್ತು. ಆದರೆ ಕಳೆದ ವರ್ಷ ಭಾರೀ ಮಳೆಯ ಸಂದರ್ಭ ಗ್ಲಾಸ್ ಬ್ರಿಡ್ಜ್ ನ ತಳಬದಿ ಮಣ್ಣು ಕುಸಿತ ಪ್ರಾರಂಭವಾಗಿ ಆತಂಕಕ್ಕೆ ಕಾರಣವಾಯಿತು.

ಗ್ಲಾಸ್ ಬ್ರಿಡ್ಜ್‌ಗೆ ಬೀಗ

ಕೂಡಲೇ ಕೊಡಗು ಜಿಲ್ಲಾಧಿಕಾರಿ ವೆಂಕಟ್ ರಾಜ್ ಜಿಲ್ಲೆಯ ಎಲ್ಲಾ ಗ್ಲಾಸ್ ಬ್ರಿಡ್ಜ್ ಗಳನ್ನು ಬೀಗ ಹಾಕಿ ಮುಚ್ಚಿಸಿದ್ದರು. ಜಿಲ್ಲಾಧಿಕಾರಿಯ ಈ ಆದೇಶದ ವಿರುದ್ಧ ಗ್ರಾಸ್ ಬ್ರಿಡ್ಜ್ ಮಾಲೀಕರು ಹೈಕೋರ್ಟ್ ಮೊರೆ ಹೋದ ಬಳಿಕ ಪ್ರಕರಣ ಕೋರ್ಟ್‌ನಲ್ಲಿರುವುದರಿಂದಾಗಿ ಇಂದಿಗೂ ಯಾವುದೇ ಗ್ಲಾಸ್ ಬ್ರಿಡ್ಜ್ ಕೊಡಗಿನಲ್ಲಿ ಆರಂಭವಾಗಲಿಲ್ಲ. ಭಾಗಮಂಡಲದಲ್ಲಿ ಮಹಿಳಾ ಉದ್ಯಮಿಯೊಬ್ಬರು ನಿರ್ಮಿಸುವ ಗ್ಲಾಸ್ ಬ್ರಿಡ್ಜ್ ನಿರ್ಮಾಣದ ಹಂತದಲ್ಲಿದೆ. ಮಡಿಕೇರಿ ಹೊರವಲಯದ ಬೊಯಿಕೇರಿ ಗ್ರಾಮದಲ್ಲಿ ಮತ್ತೊಂದು ಗ್ಲಾಸ್‌ಬ್ರಿಡ್ಜ್ ಉದ್ಘಾಟನೆಗೆ ಸಿದ್ದವಾಗಿದೆ. ಕೆಲವೆಡೆ ಗ್ಲಾಸ್ ಬ್ರಿಡ್ಜ್ ಪ್ರಾರಂಭಕ್ಕೆ ಪ್ರವಾಸೋದ್ಯಮಿಗಳು ಸಿದ್ದತೆ ಕೈಗೊಳ್ಳುತ್ತಿದ್ದಾರೆ.

ರಾಜಾಸೀಟ್ ಟೆಂಡರ್

ಹೀಗಿರುವಾಗಲೇ ಮಡಿಕೇರಿಯ ರಾಜಾಸೀಟ್‌ನಲ್ಲಿ ತೋಟಗಾರಿಕಾ ಇಲಾಖೆ ವತಿಯಿಂದ ಖಾಸಗಿ ಸಹಭಾಗಿತ್ವದಲ್ಲಿ ಗ್ಲಾಸ್ ಬ್ರಿಡ್ಜ್ ನಿರ್ಮಾಣಕ್ಕೆ ಟೆಂಡರ್ ಕರೆದಿರುವುದು ಭಾರೀ ವಿವಾದಕ್ಕೆ ಕಾರಣವಾಗಿದೆ. ರಾಜಾಸೀಟ್ ಈವರೆಗೂ ಅತ್ಯಂತ ಸ್ವಚ್ಛ, ಮಾಲಿನ್ಯ ರಹಿತ ತಾಣ. ರಾಜಾಸೀಟ್‌ನಲ್ಲಿ ಇಲ್ಲಿನ ಪರಿಸರಕ್ಕೆ ಧಕ್ಕೆ ಉಂಟಾಗುತ್ತದೆ. ಅಂದವೂ ಹಾಳಾಗುತ್ತದೆ. ಆಹ್ಲಾದಕರ ಪರಿಸರ ರಾಜಾಸೀಟ್ ಅನ್ನು ಗ್ಲಾಸ್ ಬ್ರಿಡ್ಜ್ ಹೆಸರಿನಲ್ಲಿ ಹಾಳುಗೆಡುವಬೇಡಿ ಎಂಬುದು ಗ್ಲಾಸ್ ಬ್ರಿಡ್ಜ್ ವಿರೋಧಿಗಳ ಆಕ್ರೋಶ.

» ನಾಣಯ್ಯ ವಾದಕ್ಕೆ ಬಿಜೆಪಿ ಪ್ರಮುಖರೂ ಸಾಥ್

» ಯೋಜನೆ ಜಾರಿಗೆ ಶಾಸಕ ಮಂಥರ್‌ಗೌಡರ ಆಸಕ್ತಿ

ಅತ್ಯಧಿಕ ಆದಾಯದ ಆಕರ್ಷಣೆ

ಗ್ಲಾಸ್ ಬ್ರಿಡ್ಜ್ ಅನ್ನು ಗ್ರೇಟರ್ ರಾಜಾಸೀಟ್‌ನಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಇದರಿಂದ ಅತ್ಯಧಿಕ ಪ್ರವಾಸಿಗರು ರಾಜಾಸೀಟ್ ಗೆ ಬರುತ್ತಾರೆ. ಸರಕಾರಕ್ಕೆ ಅತ್ಯಧಿಕ ಆದಾಯವೂ ಬರುತ್ತದೆ. ಇಂಥ ಹೊಸ ತಾಣ ಪರಿಚಯಿಸಿದರೆ ಪ್ರವಾಸಿಗರು ನೂತನ ಆಕರ್ಷಣೆಗಾಗಿ ಕೊಡಗಿಗೆ ಬರುತ್ತಾರೆ. ಹೊಸ ತಾಣಗಳು ಸೃಷ್ಟಿಯಾಗದೇ ಹೋದರೆ ಕೊಡಗಿಗೆ ಪ್ರವಾಸಿಗರ ಸಂಖ್ಯೆ ಕ್ಷೀಣಿಸುವ ಸಾಧ್ಯತೆ ಇದೆ. ಗ್ಲಾಸ್ ಬ್ರಿಡ್ಜ್ ಸ್ಥಾಪನೆಗಾಗಿ ಮಡಿಕೇರಿ ಶಾಸಕ ಡಾ.ಮಂಥರ್ ಗೌಡ ಎರಡು ವರ್ಷದಿಂದ ಪ್ರಯತ್ನಿಸಿ ಕೊನೆಗೂ ಯೋಜನೆ ಜಾರಿಗೆ ಮುಂದಾಗಿದ್ದಾರೆ. ಸರಕಾರಕ್ಕೆ ಆದಾಯ ತರುವ ಯೋಜನೆ ವಿರೋಧಿಸಿದರೆ ಹೇಗೆ ಎಂಬುದು ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜೇಶ್ ಅವರ ಪ್ರಶ್ನೆ.

ಶುದ್ಧ ಪರಿಸರ ಕಾಪಾಡಿ

ಖಂಡಿತವಾಗಿಯೂ ಯೋಜನೆ ಜಾರಿಯಾಗಬಾರದು. ಬಹಳ ವರ್ಷಗಳಿಂದ ರಾಜಾಸೀಟ್ ಶುದ್ಧ ಗಾಳಿ, ನಿರ್ಮಲ ವಾತಾವರಣಕ್ಕೆ ಪ್ರಖ್ಯಾತಿ. ರಾಜಾಸೀಟ್‌ನ ಶುದ್ಧತೆ ಹಾಳು ಮಾಡಬೇಡಿ ಎಂದು ಹಿರಿಯ ರಾಜಕಾರಣಿ ಎಂ.ಸಿ. ನಾಣಯ್ಯ ಪಟ್ಟು ಹಿಡಿದಿದ್ದಾರೆ.

ನಾಣಯ್ಯ ವಾದಕ್ಕೆ ಬಿಜೆಪಿ ಪ್ರಮುಖರೂ ಸಾಥ್ ನೀಡಿದ್ದಾರೆ ಜಿಲ್ಲಾ ಬಿಜೆಪಿ, ಮಡಿಕೇರಿ ನಗರಸಭೆಯ ಬಿಜೆಪಿ ಸದಸ್ಯರು, ಸಂಸದ

ಯದುವೀರ್ ಕೂಡ ಗ್ಲಾಸ್ ಬ್ರಿಡ್ಜ್ ವಿರೋಧಿಸಿ ಹೇಳಿಕೆ ನೀಡಿದ್ದಾರೆ. ಗ್ಲಾಸ್ ಬ್ರಿಡ್ಜ್ ಸಂಬಂಧಿತ ಮಡಿಕೇರಿ ನಗರಸಭೆ ಕರೆದಿದ್ದ ವಿಶೇಷ ಸಭೆಯಲ್ಲಿ ಆಡಳಿತ ಬಿಜೆಪಿ ಮತ್ತು ಪ್ರತಿಪಕ್ಷ ಕಾಂಗ್ರೆಸ್ ಸದಸ್ಯರ ನಡುವೇ ಭಾರೀ ವಾಗ್ವಾದವೇ ನಡೆದಿದೆ.

ರಾಜಕೀಯ ಬಿಸಿಗಾಳಿ

ರಾಜಾಸೀಟ್ ನ ಯಾವ ಸ್ಥಳದಲ್ಲಿ ಗ್ಲಾಸ್ ಬ್ರಿಡ್ಜ್ ನಿರ್ಮಾಣವಾಗಲಿದೆ. ಇದರ ಸಾಧಕ, ಬಾಧಕಗಳೇನು ಎಂಬ ಬಗ್ಗೆ ಸ್ಥಳ ಪರಿಶೀಲನೆ ಮಾಡದೇ ಹಲವರು ಪರ - ವಿರೋಧ ವಾದ ಮಂಡಿಸುತ್ತಿದ್ದಾರೆ. ಗ್ಲಾಸ್ ಬ್ರಿಡ್ಜ್ ಬಗ್ಗೆ ಕಾಂಗ್ರೆಸ್ - ಬಿಜೆಪಿ ನಡುವಿನ ರಾಜಕೀಯ ಭಿನ್ನಾಭಿಪ್ರಾಯಗಳೇ ತಂಪು ತಾಣ ರಾಜಾಸೀಟ್‌ನ ಗ್ಲಾಸ್ ಬ್ರಿಡ್ಜ್ ವಿಚಾರದಲ್ಲಿ ಬಿಸಿ ಬಿಸಿ ಹಬೆ ಎಬ್ಬಿಸಿರುವುದಂತೂ ಸುಳ್ಳಲ್ಲ..!

ವಿದ್ಯಾರ್ಥಿಗಳಿಗೆ ಸ್ಫೂರ್ತಿ ನಿಸರ್ಗ ಸೌಂದರ್ಯ | ತಾಯಿ ಹೆಸರಿನಲ್ಲಿ ವೃಕ್ಷ ನೆಡುವ ಯೋಜನೆ

11ಸಾವಿರ ಗಿಡಗಳಿಂದ ಕಂಗೊಳಿಸುವ ಧಾರವಾಡದ ಐಐಟಿ ಕ್ಯಾಂಪಸ್

ಜಿಲ್ಲಾ ನೋಟ

ವಸೀಮ ಭಾವಿಮನಿ

ಧಾರವಾಡ: ಓದಿನ ಜತೆ-ಜತೆಗೆ ತಾವು ಕಲಿಯುತ್ತಿರುವ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳಿಗೆ ಹಾಗೂ ಕೆಲಸ ಮಾಡುತ್ತಿರುವ ಸಿಬ್ಬಂದಿಗೆ ಸಂಸ್ಥೆಯ ಸುತ್ತಮುತ್ತ ಸುಂದರವಾದ, ಆಹ್ಲಾದಕರವಾದ ವಾತಾವರಣವಿದ್ದರೇ ಅದರ ಸ್ಫೂರ್ತಿಯೇ ಬೇರೆ..! ಇಂಥಾದ್ದೊಂದು ಹಚ್ಚಹಸಿರಿನ ನಿತ್ಯ ಹರಿದ್ವರ್ಣದ ಪರಿಸರ ನಿರ್ಮಿಸುವಲ್ಲಿ ವಿದ್ಯಾ ಕಾಶಿ ಧಾರವಾಡದ ಐಐಟಿ ಮುಂಚೂಣಿಯಲ್ಲಿದೆ. 475 ಎಕರೆಯಷ್ಟು ವಿಶಾಲವಾದ ಕ್ಯಾಂಪಸ್ ಇಲ್ಲಿದೆ.

ಮಲೆನಾಡಿನ ಸೆರಗಿನಂತಿರುವ ಧಾರವಾಡದಲ್ಲಿ ನಿಸರ್ಗದ ಹಸಿರಿಗೆ ಯಾವುದೇ ಬರವಿಲ್ಲ. ಇಡೀ ಜಿಲ್ಲೆ ಭೌಗೋಳಿಕವಾಗಿ ಹಸಿರು ಗುಡ್ಡ ಬೆಟ್ಟ ಮರ, ಗಿಡಗಂಟಿಗಳಿಂದ ಆವರಿಸಿದೆ. ಇಂತಹ ಸುಂದರ ಪರಿಸರವನ್ನು ಧಾರವಾಡದಲ್ಲಿ ತಲೆ ಎತ್ತಿರುವ ಕೇಂದ್ರ ಸರಕಾರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಧಾರವಾಡದ ಐಐಟಿಯಲ್ಲಿ ನಾವು ಕಾಣಬಹುದು. ಇದಕ್ಕೆ ಇಲ್ಲಿರುವ ಆಡಳಿತ ಮಂಡಳಿಯ ಇಚ್ಛಾಶಕ್ತಿಯೇ ಕಾರಣ ಎನ್ನಬಹುದು.

ಹನ್ನೊಂದು ಸಾವಿರ ಗಿಡ

ಐಐಟಿ ಧಾರವಾಡದ ಕ್ಯಾಂಪಸ್ ಸುಮಾರು 11,000ಕ್ಕೂ ಅಧಿಕ ಗಿಡಗಳಿಂದ ಸುಂದರ ಪರಿಸರವಾಗಿ ಕಂಗೊಳಿಸುತ್ತಿದೆ. ಈ ಸಂಸ್ಥೆಯ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯ ಆರೋಗ್ಯವನ್ನು ಶುದ್ಧ ಗಾಳಿ ಶುದ್ಧ ಪರಿಸರದಿಂದ ಕಾಪಾಡುತ್ತಿದೆ. ಐಐಟಿ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ಒಟ್ಟು 11,000ದಷ್ಟು ಗಿಡಗಳನ್ನು ನೆಡಲಾಗಿದೆ. ಇದರಲ್ಲಿ ಕೆಲವೊಂದು ಔಷಧಿಯ ಗುಣಗಳು ಇರುವ ಗಿಡಗಳು ಇವೆ.

1200 ವಿದ್ಯಾರ್ಥಿಗಳು

ಇಲ್ಲಿ ಒಟ್ಟು 1200ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಇವರೆಲ್ಲರೂ ರಾಜ್ಯ ಹಾಗೂ ಹೊರ ರಾಜ್ಯದಿಂದ ವಿದ್ಯಾಭ್ಯಾಸಕ್ಕೆ ಬಂದಿದ್ದಾರೆ. ಇವರು ಇಲ್ಲಿಯವರೆಗೂ 11,000 ಗಿಡಗಳನ್ನು ನೆಟ್ಟಿದ್ದಾರೆ.ಜಾಗದಲ್ಲಿ ಸುತ್ತಲೂ ಹಸಿರು ಪರಿಸರದ ವಾತಾವರಣ ಇರುವ ಕಾರಣ ವಿದ್ಯಾರ್ಥಿಗಳಿಗೆ ಓದಿನಲ್ಲಿ ಏಕಾಗ್ರತೆ ಸಾಧ್ಯವಾಗುತ್ತಿದೆ. ಉತ್ಸಾಹ, ಹುಮ್ಮಸ್ಸು ಕ್ಷಮತೆ ಹೆಚ್ಚಾಗಲು ಕೂಡ ಈ ಹಸಿರು ಗಿಡ ಮರಗಳ ಪರಿಸರ ಕಾರಣವಾಗಿದೆ. ಒಂದು ವೃಕ್ಷ ತಾಯಿ ಹೆಸರಿನಲ್ಲಿ ಮತ್ತು ವಿದ್ಯಾರ್ಥಿಗಳು ತಮ್ಮ ಜನ್ಮ ನಕ್ಷತ್ರದ ಹೆಸರಿನಲ್ಲಿ ಒಂದು ವೃಕ್ಷ ನೆಡುವ ಕಾರ್ಯಕ್ರಮಗಳು ಇಲ್ಲಿ ನಿರಂತರವಾಗಿ ಸಾಗುತ್ತಾ ಬಂದಿವೆ. ಐಐಟಿಯ ಆವರಣದಲ್ಲಿ 10 ಮಿಲಿಯನ್ ಲೀಟರ್ ನೀರು ಸಂಗ್ರಹ ಸಾಮರ್ಥ್ಯದ ಒಟ್ಟು 3 ಕೆರೆಗಳನ್ನ ನಿರ್ಮಿಸಲಾಗಿದೆ. ಇಲ್ಲಿ ಪಕ್ಷಿಗಳಿಗೂ ಬೇಸಿಗೆಯಲ್ಲಿ ನೀರು ಕುಡಿಯಲು ಅನುಕೂಲವಾಗಲಿದೆ. ಜೋತೆಗೆ ವಿದ್ಯಾರ್ಥಿಗಳು ಸಂಜೆ ಹೊತ್ತಿನಲ್ಲಿ ವಾಯು ವಿಹಾರ ಕೂಡ ಮಾಡಲು ಅನುಕೂಲವಾಗಲಿದೆ. ಐಐಟಿಯ ಪ್ರಾಧ್ಯಾಪಕ ವೃಂದದ ಆರೋಗ್ಯದ ದೃಷ್ಟಿಯಿಂದಲೂ ಇಲ್ಲೊಂದು ಉತ್ತಮ ಪರಿಸರ ಕಾಪಾಡಿಕೊಂಡು ಬರಲಾಗಿದೆ.

ಏಕಾಗ್ರತೆಯ ಸಾಧನೆ

ಓದಿನಲ್ಲಿ ಏಕಾಗ್ರತೆ ಹೆಚ್ಚಿದೆ ಎನ್ನೊದಕ್ಕೆ 6 ನೇ ಘಟಿಕೋತ್ಸವವೇ ಸಾಕ್ಷಿ. 6 ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಗೋಲ್ಡ್ ಮೆಡಲ್ ಹಾಗೂ ಸಿಲ್ವರ್ ಅವಾರ್ಡ ಪ್ರದಾನ ಮಾಡಲಾಗಿದೆ. ಬಿಟೆಕ್ ಎಲೆಕ್ಟ್ರಿಕ್ ಎಂಜಿನಿಯರಿಂಗ್ ವಿಭಾಗದಲ್ಲಿ ಪೊಮಜೆ ರಿಶಬ್ ಶರದ ಅವರಿಗೆ ಪ್ರೆಸಿಡೆಂಟ ಆಫ್ ಇಂಡಿಯಾ ಗೋಲ್ಡ್ ಮೆಡಲ್ ನೀಡಲಾಗಿದೆ. ಬಿಟೆಕ್ ಎಂಜಿನಿಯರಿಂಗ್ ಫಿಸಿಕ್ಸ್ ವಿಭಾಗದಲ್ಲಿ ಡೈರೆಕ್ಟರ್ ಗೋಲ್ಡ್ ಮೆಡಲ್ ಅಭಿರಾಮ.ಕೆ ಅವರಿಗೆ ಪ್ರದಾನ ಮಾಡಲಾಗಿದೆ. ಬಿಟೆಕ್ ವಿಭಾಗದ 4 ವಿದ್ಯಾರ್ಥಿಗಳಿಗೆ ಇನ್ಸ್ಟಿಟ್ಯೂಟ್ ಸಿಲ್ವರ್ ಮೆಡಲಿಸ್ಟ ಅವಾರ್ಡ್, ಹಾಗೂ ಇನ್‌ಸ್ಟಿಟ್ಯೂಟ್ ಸಿಲ್ವರ್ ಮೆಡಲಿಸ್ಟ್ ಮೆಟೆಕ್ ವಿಭಾಗದಲ್ಲಿ 3 ವಿದ್ಯಾರ್ಥಿಗಳಿಗೆ ಹಾಗೂ ಒಬ್ಬ ವಿದ್ಯಾರ್ಥಿನಿಗೆ ನಗದು ಪುರಸ್ಕಾರವನ್ನು ಬಿಟೆಕ್ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಕೊಡಲಾಗಿದೆ.

> **ಧಾರವಾಡದ ಐಐಟಿ 475 ಎಕರೆ ವಿಶಾಲವಾದ ವಿಸ್ತೀರ್ಣತೆ ಹೊಂದಿದೆ. ಇಲ್ಲಿ ಸುತ್ತಮುತ್ತ ಪರಿಸರ ಹಸಿರುಮಯ ವಾತಾವರಣ ನಿರ್ಮಾಣ ಮಾಡಿದ್ದೇವೆ. ಸದ್ಯ ಇರುವ 18 ಕಟ್ಟಡಗಳಲ್ಲಿ ಸೋಲಾರ್ ಪ್ಯಾನಲ್ ಅಳವಡಿಸುವ ಪ್ರಯತ್ನ ಮಾಡಲಾಗುತ್ತಿದೆ. ನಿತ್ಯವೂ ಸುಂದರ ಪರಿಸರದ ನಡುವೆ ಕೆಲಸ ಮಾಡುವುದರಿಂದ ಇಲ್ಲಿನ ಎಲ್ಲರ ಆರೋಗ್ಯವೂ ಲವಲವಿಕೆಯಿಂದ ಇರುತ್ತದೆ.**
>
> **-ಪ್ರೊ. ವಿಜೀತ ಕೊಟಗಿ, ಐಐಟಿ ಧಾರವಾಡದ ಪಿಆರ್‌ಒ**

ಮೂರು ಕೆರೆಗಳ ನಿರ್ಮಾಣ

ಇಲ್ಲಿ 114 ಮಿಲಿಯನ್ ಲೀಟರ್ ನೀರು ಸಂಗ್ರಹದ ಸಾಮರ್ಥ್ಯ ಹೊಂದುವ ಕೆರೆ ನಿರ್ಮಾಣಕ್ಕೆ ಮುಂದಾಗಿದೆ. ಮುಂದಿನ ದಿನಗಳಲ್ಲಿ 3 ಕೆರೆಗಳನ್ನ ನಿರ್ಮಿಸಲು ಚಿಂತನೆ ನಡೆದಿದ್ದು, 2022 ರ ಮಾ.12ರಲ್ಲಿ ಪ್ರಧಾನಿ ಮೋದಿಯಿಂದ ಲೋಕಾರ್ಪಣೆಯಾದ ಧಾರವಾಡ ಐಐಟಿ ಗುಣಮಟ್ಟದ ಶಿಕ್ಷಣದಲ್ಲಿಯೂ ಸದಾ ಮುಂದಿದೆ. ಧಾರವಾಡ ಐಐಟಿಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಇಲ್ಲಿ ಕೊಡಲಾಗುತ್ತಿದೆ.

» ಇಲ್ಲಿ 475 ಎಕರೆಯಷ್ಟು ವಿಶಾಲವಾದ ಕ್ಯಾಂಪಸ್

» ಐಐಟಿಯ ಸುತ್ತಲೂ ಸ್ವಚ್ಛಂದ ಹಸಿರು ಪರಿಸರ

ಐಐಟಿಯಲ್ಲಿ 1298 ವಿದ್ಯಾರ್ಥಿಗಳು

ಐಐಟಿ ಧಾರವಾಡದಲ್ಲಿ 1298 ವಿದ್ಯಾರ್ಥಿಗಳು ಇದ್ದು, 112 ಸಿಬ್ಬಂದಿ, 72 ಖಾಯಂ ಸಿಬ್ಬಂದಿ, ಹಾಗೂ 69 ಹೊರಗುತ್ತಿಗೆ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ.

ವಿಶ್ವವಾಣಿ @vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಬೆಂಗಳೂರು 06-08-2025 ಬುಧವಾರ

ಚಿತ್ತವಿಹಾರ

ವಿನಯವೇ ವಿಜಯ!

● ರಂಗನಾಥ್ ಗುಡಿಮನಿ

ಮನುಷ್ಯ ಅನೇಕ ಬಗೆಯ ಸದ್ಗುಣ, ದುರ್ಗುಣಗಳ ಗಣಿ. ಬದುಕಿನಲ್ಲಿ ಸದ್ಗುಣಗಳಿಗೆ ಇರುವಷ್ಟು ಮೌಲ್ಯ, ಬೆಲೆ ದುರ್ಗುಣಗಳಿಗಿಲ್ಲ. ಸದ್ಗುಣಗಳು ನಮಗೆ ಸದ್ಗತಿ ತಂದುಕೊಟ್ಟರೆ, ಅದೇ ದುರ್ಗುಣಗಳು ದುರ್ಗತಿಗೆ ದೂಡುತ್ತವೆ. ನಮ್ಮೊಳಗೆ ಹುದುಗಿರುವ ಅತ್ಯಲ್ಪ ಮತ್ತೆ ಅತ್ಯಮೂಲ್ಯ ನಡತೆಗಳಲ್ಲಿ ವಿನಯವು ಕೂಡ ಒಂದು. ವಿನಯ ಎಂದರೆ ವಿನೀತನಾಗಿರುವುದು ಅಥವಾ ನಮ್ರನಾಗಿರುವ ಗುಣ ಎಂದರ್ಥ. ಒಬ್ಬ ವ್ಯಕ್ತಿಯು ತನ್ನ ಬಗ್ಗೆ ಹೆಚ್ಚು ಯೋಚಿಸದೆ, ಇತರರನ್ನು ಗೌರವದಿಂದ ಕಾಣುವ ಮತ್ತು ಸಭ್ಯವಾಗಿ ವರ್ತಿಸುವ ಗುಣವನ್ನು ವಿನಯ ಸೂಚಿಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಪ್ರಥಮದಲ್ಲಿ ನಮ್ಮನ್ನು ನಾವು ಗೆಲ್ಲಲು ವಿನಯವೇ ದಿವ್ಯೌಷಧ ಎಂದರೂ ತಪ್ಪಾಗಲಾರದು.

'ವಿದ್ಯೆಗೆ ವಿನಯವೇ ಭೂಷಣ' ಎನ್ನುವ ಗಾದೆಮಾತು ಸಹಿತ ವಿನಯದ ಮಹತ್ವವನ್ನು ಎತ್ತಿ ಹೇಳುತ್ತದೆ. ವಿನಯ ನಮ್ಮ ಎಲ್ಲ ಮಗ್ಗಲಿನ ಏಳಿಗೆಗೆ ಕಾರಣವಾದರೆ, ಅದೇ ಅವಿನಯ ನಮ್ಮ ಅಧಃಪತನಕ್ಕೆ ಮೂಲ ಕಾರಣವಾಗುತ್ತದೆ.ಅದಕ್ಕೆ ಹೇಳೋದು, 'ವಿನಯ ತಪ್ಪಿದರೆ,ವಿಕೋಪ ತಪ್ಪಿದ್ದಲ್ಲ'ವೆಂದು. ವಿನಯದಿಂದಲೇ ನಮಗೆ ಶಿಸ್ತು, ಸರಳತೆ, ಪ್ರಾಮಾಣಿಕತೆ ಬಳುವಳಿಯಾಗಿ ಬರುತ್ತವೆ. ಈ ವಿನಯವೇ ನಮ್ಮನ್ನು ಈ ವಿಶ್ವದ ಎದುರು ಉಳಿದ ಎಲ್ಲರಿಗಿಂತಲೂ ವಿನೂತನ, ವಿಶೇಷ ಹಾಗೂ ವಿಭಿನ್ನ ವ್ಯಕ್ತಿಯನ್ನಾಗಿ ತೋರ್ಪಡಿಸುವುದು.

ವಿನಯ ಎನ್ನುವ ಫಲಕಾರಿ ಬೀಜವನ್ನು ಜವಾಬ್ದಾರಿಯುತ ಪೋಷಕರು, ಶಿಕ್ಷಕರು ಎಳವೆಯಲ್ಲಿಯೇ ಮಕ್ಕಳಲ್ಲಿ ಮೊಳೆಯುವಂತೆ ಮಾಡಿದರೆ ಮುಂದೊಂದು ದಿನ ಅದಕ್ಕೆ ತಕ್ಕ ಪ್ರತಿಫಲ ಸಿಕ್ಕೇ ಸಿಗುತ್ತದೆ. ಈ ಸಮಯದಲ್ಲಿ ವಾರೆನ್ ಬಫೆಟ್ ಅವರ ಒಂದು ಮಾತು ನೆನಪಾಗುತ್ತದೆ: 'ನಾವು ಯಶಸ್ವಿಯಾಗಲು ಬೇರೆಯವರಿಗಿಂತ ಸ್ಮಾರ್ಟ್ ಆಗಿರುವ ಅಗತ್ಯವಿಲ್ಲ, ಬೇರೆಯವರಿಗಿಂತ ವಿನಮ್ರವಾಗಿದ್ದರೆ ಸಾಕು!' ಈ ಮಾತು ಅರ್ಥಪೂರ್ಣ.

ವಿನಯವಿದ್ದರೆ ವಿಜಯ, ಇಲ್ಲದಿದ್ದರೆ ವಿನಾಶ. ವಿನಯದಿಂದ ಮುನ್ನಡೆದರೆ ಇಡೀ ವಿಶ್ವವನ್ನೇ ಗೆದ್ದಂತೆ. ಒಂದೇ ಮಾತಲ್ಲಿ ಹೇಳುವುದಾದರೆ ನಮ್ಮಲ್ಲಿ ವಿನಯವೊಂದಿದ್ದರೆ ಎಲ್ಲದರಲ್ಲಿಯೂ 'ವಿನ್' ಆದಂತೆಯೇ. ಎಲ್ಲರೂ ದಿನನಿತ್ಯದ ನಡವಳಿಕೆಯಲ್ಲಿ ವಿನಯವನ್ನು ಅಳವಡಿಸಿಕೊಂಡು, ವಿನಯದ ಗಮ್ಯದಲ್ಲಿಯೇ ಮುನ್ನಡೆದು, ನೋಡುಗರಿಗೆ ಮಾದರಿಯಾಗೋಣ, ವಿನಯದ ಕಂಪನ್ನು ಎಲ್ಲರಿಗೂ ಹಂಚೋಣ.

ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಇದು ಇಲ್ಲಿ ಹಬ್ಬದ ದಿನ!

● ಮೋಹನ ಭಟ್ಟ,ಅಗಸೂರು

ಪರೀಕ್ಷೆ ಮುಗಿಸಿದ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭವನ್ನು, ವಿಶೇಷ ಹಬ್ಬದ ರೀತಿ ಆಚರಿಸಿದರೆ ಹೇಗಿದ್ದೀತು! ಆ ಹಬ್ಬವನ್ನು ನೋಡಲೆಂದೇ, ವಿದ್ಯಾರ್ಥಿಗಳು, ಅವರ ಪೋಷಕರು ಮತ್ತು ಪ್ರವಾಸಿಗರು ಬಂದರೆ ಹೇಗಿದ್ದೀತು! ಇಂತಹ ಪದವಿ ಪ್ರದಾನ ಹಬ್ಬಗಳಲ್ಲಿ, ಹೆಚ್ಚು ಪ್ರಖ್ಯಾತವಾದದ್ದು ಮತ್ತು ಯುರೋಪಿನಲ್ಲೇ ಅತಿ ದೊಡ್ಡದು ಎಂದರೆ ಆಕ್ಸ್‌ಫರ್ಡ್ ಗ್ರ್ಯಾಜುಯೇಷನ್ ಡೇ!

ಇಂಗ್ಲೆಂಡಿನ ಪ್ರಸಿದ್ಧ ಶಿಕ್ಷಣ ಕೇಂದ್ರಗಳಲ್ಲಿ ಒಂದಾದ ಆಕ್ಸ್‌ಫರ್ಡ್‌ನಲ್ಲಿ ಕಲಿಯಬೇಕೆಂಬುದು ಪ್ರತಿಭಾವಂತ ವಿದ್ಯಾರ್ಥಿಗಳ ಕನಸು. ಜಗತ್ತಿನ ವಿವಿಧ ದೇಶಗಳ ವಿದ್ಯಾರ್ಥಿಗಳು, ಆಕ್ಸ್ ಫರ್ಡ್‌ನಲ್ಲಿ ಪದವಿ ಪಡೆಯಲು ಆಸೆ ಪಡುವುದು ಸಹಜ. ಆದರೆ ಇಲ್ಲಿಯ ಕಾಲೇಜುಗಳಲ್ಲಿ ಪ್ರವೇಶ ಸಿಗುವದು ಸುಲಭವಿಲ್ಲ. ಆಕ್ಸ್‌ಫರ್ಡ್ ವಿ.ವಿ.ಯ ವ್ಯಾಪ್ತಿಯಲ್ಲಿ ಬ್ರೂಕ್ ವಿ.ವಿ ಯೂ ಸೇರಿದಂತೆ 44 ಕಾಲೇಜುಗಳಿವೆ. ಆಕ್ಸ್‌ಫರ್ಡ್ ವಿ.ವಿ. ಯಲ್ಲಿ ಸುಮಾರು 25ಸಾವಿರ ವಿದ್ಯಾರ್ಥಿಗಳು ಹಾಗೂ ಬ್ರೂಕ್ ವಿ.ವಿ ಯಲ್ಲಿ 14 ಸಾವಿರ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಾರೆ. ಇಡೀ ಆಕ್ಸ್‌ಫರ್ಡ್ ನಗರದ ಯಾವ ಕಡೆ ಹೋದರೂ ವಿದ್ಯಾರ್ಥಿಗಳು ಕಾಣಸಿಗುತ್ತಾರೆ. ಈ ವಿಶ್ವವಿದ್ಯಾಲಯದ ಸುತ್ತ ಮುತ್ತಲೂ ಓಡಾಡಿದರೆ, ಜಗತ್ತಿನ ಹಲವು ದೇಶಗಳ ವಿದ್ಯಾರ್ಥಿಗಳನ್ನು ಕಾಣಬಹುದು! ಇದು ಕೇವಲ ಇಂಗ್ಲೆಂಡ್ ಅಥವಾ ಯುರೋಪಿಗೆ ಸೀಮಿತವಾಗಿಲ್ಲ ಎಂಬುದು ಗಮನಾರ್ಹವಾದುದು.

ಪ್ರತಿ ವರ್ಷ ಅಗಸ್ಟ್ ಮೊದಲ ವಾರದಲ್ಲಿ ಇಲ್ಲಿ ಗ್ರಾಜ್ಯುಶೇನ್ ಡೇ (ಪದವಿ ಪ್ರದಾನ ಸಮಾರಂಭ) ನಡೆಯುವುದು. ಕಳೆದ ವರ್ಷ ಪದವಿ ಪೂರೈಸಿದ ವಿದ್ಯಾರ್ಥಿಗಳಿಗೆ ಈ ವರ್ಷ ಪದವಿ ಪ್ರದಾನ ಮಾಡಲಾಗುವದು. ಇಲ್ಲಿನ ಪದವಿ ಪ್ರದಾನ ಸಮಾರಂಭದ ಸಂಭ್ರಮದ ಹಬ್ಬದಲ್ಲಿ ಪಾಲ್ಗೊಳ್ಳಲು, ವಿದ್ಯಾರ್ಥಿಗಳ ಮಾತಾ ಪಿತೃರು, ಸ್ನೇಹಿತರು ಹಾಗೂ ಇತರರು ಆಗಮಿಸುತ್ತಾರೆ.

ಈ ಸಮಯದಲ್ಲಿ ಇಡೀ ಆಕ್ಸ್‌ಫರ್ಡ್ ನಗರ ಸಂಭ್ರಮಿಸುವದು ವಿಶೇಷ! ಇಡೀ ಪ್ರದೇಶವನ್ನು ಹಬ್ಬದ ವಿಶೇಷದಂತೆ ಅಲಂಕರಿಸುತ್ತಾರೆ. ವಿದ್ಯಾರ್ಥಿಗಳಿಗೆ ಎಲ್ಲಿ ಹೋದರೂ ರಿಯಾಯತಿ ದರದಲ್ಲಿ ವಸ್ತುಗಳು ಸಿಗುತ್ತವೆ. ನಗರದ ಪ್ರಮುಖ ಚೌಕಗಳಲ್ಲಿ ಹೂಗಳಿಂದ ಅಲಂಕಾರ, ಎಲ್ಲರ ಕೈಯಲ್ಲಿ ವೈವಿಧ್ಯಮಯ ಪುಷ್ಪ ಗುಚ್ಛಗಳು, ವೀಲ್ ಚೇರ್‌ಗಳಲ್ಲಿ ಹಿರಿಯರು ಪುಷ್ಪಗುಚ್ಛ ಹಿಡಿದು ಸಂಭ್ರಮಿಸುತ್ತಾರೆ.

ಪದವಿಯನ್ನು ಸ್ವೀಕಾರ ಮಾಡುವ ವಿದ್ಯಾರ್ಥಿಗಳು ಕಪ್ಪನೆಯ ಹ್ಯಾಟು, ಗವನು ಧರಿಸಿ, ದೊಡ್ಡ ಪುಷ್ಪಗುಚ್ಛ ಹಿಡಿದು ಒಬ್ಬರಿಗೊಬ್ಬರು ಬಿಗಿದಪ್ಪಿಕೊಳ್ಳುವ ದೃಶ್ಯ ಸಾಮಾನ್ಯ. ಇವರು ಹಿಡಿದಿರುವ ಪುಷ್ಪಗುಚ್ಛಗಳೂ ವೈವಿಧ್ಯಮಯ.

ಇಲ್ಲಿನ ಉಡುಗೊರೆ ಮತ್ತು ಆಟಿಕೆಗಳ ಮಾರಾಟದಲ್ಲಿ ಒಂದು ವಿಶೇಷವುಂಟು! ಈ ದಿನ ಟೆಡ್ಡಿ ಬೇರ್ ಗೊಂಬೆಗಳಿಗೆ ಭಾರೀ ಬೇಡಿಕೆ; ಅವು ಮಾಮೂಲಿ ಟೆಡ್ಡಿ ಬೇರ್ ಅಲ್ಲ. ವಿಶೇಷವಾಗಿ, ಆ ದಿನಕ್ಕೆಂದೇ ಅಲಂಕಾರ ಗೊಂಡ ಟೆಡ್ಡಿ ಬೇರ್‌ಗಳು. ಟೆಡ್ಡಿ ಬೇರ್‌ಗೆ ಕೋಟು, ಹ್ಯಾಟು ಹಾಕಿ ಅಲಂಕರಿಸುತ್ತಾರೆ! ವಿದ್ಯಾರ್ಥಿಗಳ ಪೋಷಾಕಿನ ರೀತಿ! ಈ ಟೆಡ್ಡಿ ಬೇರ್‌ನ್ನು ಬಿಳಿಯ ಹೂವುಗಳ ಮಧ್ಯೆ ಇಟ್ಟು ಸಿದ್ಧಪಡಿಸಿದ ಪುಷ್ಪಗುಚ್ಛಗಳಿಗೆ ಭಾರೀ ಬೇಡಿಕೆ.

ಈ ಸಂಭ್ರಮದ ನಡುವೆ ಬೀಗಿ ನಡೆಯುವ ಜೋಡಿಗಳು ಹೋಗುವ ದೃಶ್ಯ, ಎಲ್ಲ ಐಸ್ ಕ್ರೀಮ್ ಅಂಗಡಿ, ಪಾನೀಯ ಅಂಗಡಿಗಳಲ್ಲಿ, ಗಿಫ್ಟ್ ಶಾಪ್‌ಗಳಲ್ಲಿಯೂ ಮಕ್ಕಳೇ ತುಂಬಿದ ದೃಶ್ಯವನ್ನು ಕಾಣಬಹುದು. ಇದಲ್ಲದೇ ಇಲ್ಲಿನ ಈ ಹಬ್ಬವನ್ನು ನೋಡಲು ಆಕ್ಸ್‌ಫರ್ಡ್‌ಗೆ ಆಗಮಿಸಿದ ಸುತ್ತಲಿನ ಶಾಲಾ, ಕಾಲೇಜು ಮಕ್ಕಳಿಗೆ ಅವರ ಪ್ರಾಧ್ಯಾಪಕರು ಇಲ್ಲಿ ವಿಶೇಷಗಳನ್ನು ವಿವರಿಸುವದೂ ಕಂಡು ಬಂತು. ಗುಂಪು ಗಂಪಾಗಿ ಮಕ್ಕಳು ಕಾಲುವೆಯಲ್ಲಿ ಅಲಂಕೃತ ದೋಣಿಗಳಲ್ಲಿ ಸಂಭ್ರಮಾಚರಣೆಯನ್ನು ಮಾಡುತ್ತಾರೆ.

ಇಂತಹ ಪದವಿ ಪ್ರದಾನ ಹಬ್ಬವು, ಯುರೋಪ್‌ನಲ್ಲಿಯೇ ದೊಡ್ಡ ಪ್ರಮಾಣದ್ದು ಎಂಬ ಹೆಗ್ಗಳಿಕೆಯೂ ಇದೆ. ಇದನ್ನು ನೋಡಲು ಎಂದೇ ಪ್ರವಾಸಿಗಳು ಆಗಮಿಸುವದೂ ವಿಶೇಷ! ಆದ್ದರಿಂದ, ಇದೊಂದು ಪ್ರವಾಸಿ ಆಕರ್ಷಣೆಯೂ ಹೌದು! ವ್ಯತ್ಯಾಸವೆಂದರೆ, ಇದು ವಿದ್ಯೆಗೆ ಸಂಬಂಧಿಸಿದ ಪ್ರವಾಸಿ ಆಕರ್ಷಣೆ!

1096 ರಲ್ಲಿ ಸ್ಥಾಪಿತ ವಾದ ಈ ವಿ.ವಿ. ಕೇಂದ್ರವಾದ ಥೇಮ್ಸ್ ನ ಕಾಲುವೆಯ ಬದಿಯ ಅಂದದ ಆಕ್ಸ್‌ಫರ್ಡ್ ಕೇವಲ ಶಿಕ್ಷಣ ಪ್ರೇಮಿಗಳ ಮೆಚ್ಚುಗೆಯ ಸ್ಥಳವಾಗಿರದೇ, ಪ್ರವಾಸಿ ತಾಣವೂ ಆಗಿದೆ. ಲಂಡನ್ ನಿಂದ 60 ಮೈಲು ದೂರದ ಇಲ್ಲಿಗೆ ಹಗಲು ರಾತ್ರಿ ಎನ್ನದೇ ಬಸ್ಸು, ರೈಲುಗಳು ಸಂಚರಿಸುತ್ತವೆ.

ಕಷ್ಟಪಟ್ಟರೆ ಮಾತ್ರ ಜೀವನಾನುಭವ!

ದ್ರಾಕ್ಷಿರಸವೇನಲ್ಲ ಜೀವನದ ತಿರುಳಾರ್ಗಮ್
ಇಕ್ಷುದಂಡದವೊಲದು ಕಷ್ಟಭೋಜನವೆ
ದಕ್ಷತೆಯಿನಿಡಿಯುವಂಗೊಂದೆರಡು ಗುಟುಕು ರಸ
ಮಾಕ್ಷಿಕರು ಮಿಕ್ಕೆಲ್ಲ - ಮಂಕುತಿಮ್ಮ॥

ಈ ಜೀವನ ಎಂಬುದು ದ್ರಾಕ್ಷಿಯ ಹಣ್ಣನ್ನು ಬಾಯಲ್ಲಿ ಹಾಕಿಕೊಂಡು, ಚಪ್ಪರಿಸಿಕೊಂಡು ರಸವನ್ನು ಹೀರಿದಂತಲ್ಲ. ಈ ಜೀವನ ಎಂಬುದು ಒಂದು ರೀತಿಯಲ್ಲಿ ಕಬ್ಬಿನ ಜಲ್ಲೆಯ ರೀತಿಯಂತೆ. ಕಷ್ಟಪಟ್ಟು ಜಗಿದರೆ ಮಾತ್ರ ಆ ಕಬ್ಬಿನ ಜಲ್ಲೆಯಲ್ಲಿನ ಒಂದೆರಡು ಗುಟುಕು ರಸವು ಮಾತ್ರ ಬಾಯಿಗೆ ಸಿಹಿ ತರಬಹುದಷ್ಟೇ! ಆದರೆ ಕಷ್ಟಪಡದೆ ಜಗಿಯುವುದಿಲ್ಲ ಎಂತಾದರೆ ನಾವು ಒಂದು ರೀತಿಯಲ್ಲಿ ಆ ಕಬ್ಬಿನ ಜಲ್ಲೆಯ ಮೇಲೆ ಕುಳಿತುಕೊಂಡು, ಜೊಲ್ಲು ಸುರಿಸುವ ಮಾಕ್ಷಿಕರಂತಾಗುತ್ತೇವೆ ಎಂದು ಈ ಪದದಲ್ಲಿ ಹೇಳಿದ್ದಾರೆ.

ಶುಭೋದಯಕ್ಕೊಂದು ಕಗ್ಗ



ರವೀ ಚೆಕ್ಕನಾಯಕನಹಳ್ಳಿ

ಈ ಜೀವನ ಎಂಬ ಬೃಹನ್ನಾಟಕದಲ್ಲಿ ನಾವು ಕಷ್ಟಬೀಳಲೇ ಬೇಕು. ಜೀವನದ ದಾರಿಯಲ್ಲಿ ನಾವು ಅನುಭವವನ್ನು ಗಳಿಸಲೇಬೇಕು. ಬಂದ ಅನುಭವದಿಂದ ನಾವು ಆತ್ಮೋದ್ಧಾರ ಮಾಡಿಕೊಳ್ಳಬೇಕು ಎಂಬುದನ್ನು ಒಂದೊಳ್ಳೆ ಉದಾಹರಣೆಯೊಂದಿಗೆ ಹೇಳಿದ್ದಾರೆ. ನಾವು ದ್ರಾಕ್ಷಿ ಹಣ್ಣನ್ನು ತಿನ್ನುವಾಗ ಹೆಚ್ಚು ಕಷ್ಟ ಪಡಬೇಕಿಲ್ಲ, ಬಾಯೊಳಗೆ ಆ ಹಣ್ಣನ್ನ ಹಾಕಿಕೊಂಡು ಚಪ್ಪರಿಸಿದರೆ ಸಾಕು, ಆ ಹಣ್ಣಿನ ರಸವೆಲ್ಲವೂ ಬಾಯಲ್ಲಿಯೇ ಇರುತ್ತದೆ. ಆದರೆ ಅದೇ ಕಬ್ಬಿನ ಜಲ್ಲೆ (ಇಕ್ಷು ದಂಡ) ವನ್ನು ತಿನ್ನುವುದು ಅದೆಷ್ಟು ಕಷ್ಟ? ಕಬ್ಬಿನ ಜಲ್ಲೆಯ ಸಿಪ್ಪೆಯನ್ನು ಹಲ್ಲುಗಳಿಂದ ಕಚ್ಚಿ ತೆಗೆಯಬೇಕು, ನಂತರ ಹಲ್ಲುಗಳಿಂದ ಶಕ್ತಿ ಹಾಕಿ ಜಗಿದಾಗ ಕೆಲವೇ ಕೆಲವು ಗುಟುಕು ಕಬ್ಬಿನ ರಸ ಬಂದು, ಹಿತವೆನಿಸುತ್ತದೆ. ಅದೇ ಕಬ್ಬಿನ ಜಲ್ಲೆಯನ್ನು ಕಡಿಯಲು, ಜಗಿಯಲು ನಮಗೆ ಸಾಧ್ಯವಾಗದಿದ್ದರೆ ಅದೇ ಜಲ್ಲೆಯನ್ನು ನೋಡುತ್ತಿದ್ದರೋ, ನೆಕ್ಕಿದರೋ ಅದರ ರುಚಿ, ಅದರ ಸ್ವಾದ ನಮಗೆ ರುಚಿಸದು.

ಹಾಗೆಯೇ ಈ ಜೀವನ ಎಂಬ ಈ ಯಾನದಲ್ಲಿ ನಾವು ಪ್ರತಿಯೊಂದನ್ನೂ ಸಹ ಅನುಭವಿಸಬೇಕೆಂದರೆ ಮೊದಲಿಗೆ ಕಷ್ಟಬಿದ್ದು, ಹೊಳಹೊಕ್ಕು ಅನುಭವಿಸಿದಾಗ ಮಾತ್ರ ಅನುಭವಗಳು ಬರುತ್ತವೆ. ಪ್ರಯತ್ನಗಳೇ ಇಲ್ಲವಾದರೆ ಈ ಬದುಕಿನ ಸತ್ವ, ಸೊಬಗು, ಸೊಗಡುಗಳು ನಮ್ಮ ಅರಿವಿಗೆ ಬರುವುದಾದರೂ ಹೇಗೆ ಅಲ್ಲವೇ ? ಹಾಗಾಗಿಯೇ ಬದುಕಿನಲ್ಲಿ ನಾವು ಪ್ರತೀ ವಿಷಯದಲ್ಲಿ ಆಳಕ್ಕೆ ಇಳಿದು ಅನುಭವವನ್ನು ಗಳಿಸಿದಾಗ ಮಾತ್ರ ಜೀವನದ ನಿಜ ಅನುಭವ ಆಗುತ್ತದೆ. ಆ ಅನುಭವದ ನಂತರ ರಕ್ತಿಯೋ, ವಿರಕ್ತಿಯೋ, ಮೋಹವೋ, ವ್ಯಾಮೋಹವೋ ಅಥವಾ ನಿರ್ಲಿಪ್ತತೆಯೋ, ವೈರಾಗ್ಯವೋ, ಜ್ಞಾನವೋ ಉಂಟಾಗಬಹುದು. ಅನುಭವವೇ ಆಗದಿದ್ದರೆ, ಪಡೆಯುವುದಾದ್ದರೂ ಏನನ್ನು, ಬಿಡುವುದಾದರೂ ಏನನ್ನು? ಹಾಗಾಗಿ ಬದುಕನ್ನು ಕೇವಲ ಸುಲಭವಾಗಿ ದ್ರಾಕ್ಷಿ ಹಣ್ಣನ್ನು ತಿಂದಹಾಗೆ ಸವಿಯದೆ, ಕಷ್ಟಪಟ್ಟು ಕಡಿದು ಜಗಿದು ರಸಾಸ್ವಾದನೆ ಮಾಡುವ ಕಬ್ಬಿನ ಜಲ್ಲೆಯನ್ನು ತಿಂದಹಾಗೆ ಬದುಕಬೇಕು. ಕೆಲವರಿಗೆ ಈ ಜೀವನ ದ್ರಾಕ್ಷಿ ಹಣ್ಣನ್ನು ತಿಂದ ಹಾಗೆಯೇ ಇರಬಹುದು. ಆದರೆ ಈ ಜೀವನದ ತಿರುಳಾದರೂ, ಈ ಜೀವನದ ಅನುಭವ, ಅನುಭಾವವಾದರೂ ಗಳಿಸುವುದು ಹೇಗೆ? ಒಂದು ಪಕ್ಷ ಕಷ್ಟಪಡುವುದಿಲ್ಲ ಎಂದು ಕುಳಿತರೆ, ಅಂತಹವರು ಒಂದು ರೀತಿಯಲ್ಲಿ ಕಬ್ಬಿನ ಜಲ್ಲೆಯ ಮೇಲೆ ಕುಳಿತು ರಸಾನುಭವವನ್ನು ಪಡೆಯದ ಮಾಕ್ಷಿಕರು (ನೊಣ) ಆಗಿರುತ್ತಾರೆ. ಹಾಗಾಗಿ ಸೊಬಗು, ಸೊಗಡು, ಭವದ ಅನುಯಾಯಿತ್ವ ಬರಬೇಕೆಂದರೆ ಅನುಭವಿಯಾಗಿ ಅನುಭಾವಿಯಾದರೆ ಮಾತ್ರವೇ ಸಾಧ್ಯ ಎಂಬುದನ್ನು ಈ ಪದ್ಯದಲ್ಲಿ ವಿವರಿಸಿದ್ದಾರೆ.

ನಾವು ಈ ಜೀವನದಲ್ಲಿ ಅನುಭವಗಳಿಸಿ ಅನುಭಾವಿಗಳಾಗಬೇಕಾದರೆ ಪ್ರತಿಯೊಂದನ್ನೂ ಹೊಳಹೊಕ್ಕು ನೋಡಲೇ ಬೇಕು. ದ್ರಾಕ್ಷಿ ಹಣ್ಣನ್ನು ತಿಂದ ಹಾಗೆ ಸುಖಕರವಾಗಿದ್ದರೆ ಈ ಜೀವನಕ್ಕೇನು ಅರ್ಥ ಇರುತ್ತದೆ?

ದೇಹದಲ್ಲಿ ಹಿಮೊಗ್ಲೋಬಿನ್

● ಅಜಯ್ ಅಂಚೆಪಾಳ್ಯ

ನಮ್ಮ ದೇಹ ಸುಸ್ಥಿತಿಯಲ್ಲಿರಬೇಕಾದರೆ, ರಕ್ತದಲ್ಲಿ ಅಗತ್ಯ ಮತ್ತು ನಿಗದಿತ ಪ್ರಮಾಣದ ಹಿಮೋಗ್ಲೋಬಿನ್ ಇರಬೇಕು; ವಿವಿಧ ಕಾರಣಗಳಿಂದಾಗಿ, ಕಬ್ಬಿಣದ ಅಂಶ ಕಡಿಮೆಯಾಗಿ, ಹಿಮೋಗ್ಲೋಬಿನ್ ಕಡಿಮೆಯಾಗುವ ಸಾಧ್ಯತೆ ಇದೆ; ಆಗ, ವ್ಯಕ್ತಿಗೆ ನಿಶ್ಶಕ್ತಿ ತಲೆದೋರುತ್ತದೆ ಮತ್ತು ಇದೇ ಸಮಸ್ಯೆ ದೀರ್ಘ ಕಾಲವಿದ್ದರೆ, ನಾನಾ ರೀತಿಯ ಆರೋಗ್ಯ ಸಮಸೆಯಗಳು ಕಾಡಬಹುದು.

ರಕ್ತದಲ್ಲಿ ಹಿಮೋಗ್ಲೋಬಿನ್‌ನ್ನು ಹೆಚ್ಚಿಸಿಕೊಳ್ಳಲು ಆಹಾರ ತಜ್ಞರು ಹಲವು ಸಲಹೆ ನೀಡುತ್ತಾರೆ; ಇದನ್ನು ಅನುಸರಿಸುವುದರ ಮೂಲಕ ರಕ್ತದ ಆರೋಗ್ಯವನ್ನು ಉತ್ತಮಪಡಿಸಿಕೊಳ್ಳಬಹುದು.

- ನಮ್ಮ ದೇಹವು ಕಬ್ಬಿಣದ ಅಂಶವನ್ನು ಹೀರಿಕೊಳ್ಳಲು ವಿಟಮಿನ್ ಸಿ ತುಂಬಾ ಅಗತ್ಯ. ಲಿಂಬೆ, ಮೂಸುಂಬೆ, ಕಿತ್ತಳೆ, ಚಕ್ಕೋತ ಮೊದಲಾದ ಸಿಟ್ರಸ್ ಹಣ್ಣುಗಳನ್ನು ಸೇವಿಸಿದಾಗ, ಆಹಾರದಲ್ಲಿರುವ ಕಬ್ಬಿಣದ ಅಂಶವನ್ನು ದೇಹವು ಬೇಗನೆ ಹೀರಿಕೊಳ್ಳುತ್ತದೆ ಮತ್ತು ಆ ಮೂಲಕ ಹಿಮೋಗ್ಲೋಬಿನ್ ಮಟ್ಟ ಉತ್ತಮವಾಗುತ್ತದೆ. ಆದ್ದರಿಂದ, ಪ್ರತಿ ದಿನ ಲಿಂಬೆ ಮೊದಲಾದ ಸಿಟ್ರಸ್ ಹಣ್ಣನ್ನು ಆಹಾರದಲ್ಲಿ ಉಪಯೋಗಿಸಬಹುದು. ಸ್ಟ್ರಾಬೆರಿ, ಬೆಲ್‌ಪೆಪರ್ ಸಹ ಕಬ್ಬಿಣದ ಅಂಶವು ದೇಹವನ್ನು ಸೇರಲು ಸಹಾಯ ಮಾಡುತ್ತದೆ.
- ಕಬ್ಬಿಣದ ಅಂಶ ಜಾಸ್ತಿ ಇರುವ ಸೊಪ್ಪು, ಬೀಟ್ ರೂಟ್, ಬೇಳೆಕಾಳುಗಳನ್ನು ಹೆಚ್ಚು ಸೇವಿಸಬೇಕು. ಕೆಂಪು ಬಣ್ಣದ ಹರಿವೆ ಸೊಪ್ಪು ಉತ್ತಮ.
- ಫೋಲೇಟ್ ಅಧಿಕವಾಗಿರುವ ಸೊಪ್ಪು, ಬೀನ್ಸ್, ಮೊಳಕೆ ಬರಿಸಿದ ಕಾಳುಗಳ ಸೇವನೆಯು, ರಕ್ತ ಕಣಗಳ ಉತ್ಪತ್ತಿಗೆ ಪೂರಕ.
- ಗೋಡಂಬಿ, ವಾಲ್‌ನಟ್, ಗುಂಬಳಕಾಯಿ ಬೀಜ, ಆಲ್ಮಂಡ್, ದಾಳಿಂಬೆ ಮೊದಲಾದವುಗಳಲ್ಲಿ ಅಧಿಕ ಕಬ್ಬಿಣದ ಅಂಶವಿದ್ದು, ಹಿಮೋಗ್ಲೋಬಿನ್ ತಯಾರಿಗೆ ಪೂರಕ ಎನಿಸಿವೆ.
- ಕಬ್ಬಿಣದ ಪಾತ್ರೆಗಳಲ್ಲಿ ಅಡುಗೆ ಮಾಡುವುದು ಸಹ ಉತ್ತಮ. ಈ ನಿಟ್ಟಿನಲ್ಲಿ, ಕಬ್ಬಿಣದ ದೋಸೆ ಕಾವಲಿ ಮತ್ತು ತವಾ ಬಳಕೆ ಉತ್ತಮ (ಟೆಫ್ಲಾನ್ ಕೋಟ್ ಇರುವ, ನಾನ್ ಸ್ಟಿಕ್ ತವಾಗೆ ಹೋಲಿಸಿದಾಗ).
- ಕಾಫಿ, ಚಹ ಮೊದಲಾದವು ದೇಹದ ಕಬ್ಬಿಣದ ಅಂಶವನ್ನು ಕಡಿಮೆ ಮಾಡಬಲ್ಲವು. ಕಾಫಿ ಚಹಾ ಸೇವನೆ ಮಿತ ಪ್ರಮಾಣದಲ್ಲಿರಲಿ.
- ಚೆನ್ನಾಗಿ ನೀರು ಕುಡಿಯಬೇಕು. ಇದು ರಕ್ತದ ಆರೋಗ್ಯಕ್ಕೆ ಪೂರಕ.
- ನಿಯಮಿತವಾಗಿ ವ್ಯಾಯಾಮ, ನಡಿಗೆ ಮಾಡಬೇಕು. ಇದರಿಂದಾಗಿ ರಕ್ತ ಕಣಗಳು ಉತ್ಪತ್ತಿಯಾಗುತ್ತವೆ. ದೇಹದ ಸ್ಥಿತಿಯನ್ನು ಅವಲಂಬಿಸಿ, ಪ್ರತಿದಿನ ಅರ್ಧ ಗಂಟೆಯಿಂದ ಒಂದು ಗಂಟೆಯ ತನಕ ವ್ಯಾಯಾಮ ಬಹಳ ಉಪಯೋಗಕಾರಿ.

(ಈ ಬರಹವು ಸ್ವಯಂವೈದ್ಯವನ್ನು ಪ್ರೋತ್ಸಾಹಿಸುವುದಿಲ್ಲ; ಆರೋಗ್ಯ ಸಮಸ್ಯೆಗಳಿದ್ದಾಗ ವೈದ್ಯರನ್ನು ಕಾಣುವುದು ಅಗತ್ಯ.)

ಪುಟ್ಟ ಪಟ್ಟಣದ ಪ್ರತಿಭೆ!

● ಶಿವಯೋಗಿ ಎಂ ವಿ ರಾಂಪುರ

ಪುಟ್ಟ ಪಟ್ಟಣದಲ್ಲಿ ಜನನ; ಕ್ರೀಡೆಯ ಕನಸು; ಅದನ್ನು ನನಸು ಮಾಡಿಕೊಳ್ಳುವ ಛಾತಿ; ನಮ್ಮ ದೇಶದ ಮಹಿಳಾ ಕ್ರಿಕೆಟ್ ತಂಡದಲ್ಲಿ ಅಪರೂಪದ ಸಾಧನೆ; ಸಣ್ಣ ಪಟ್ಟಣದ ಪ್ರತಿಭೆಯು ಭಾರತದ ಕ್ರಿಕೆಟ್ ತಂಡವು ಗೆಲ್ಲಲು ಬ್ಯಾಟ್ ಮಾಡಿದ ಅಪರೂಪದ ಸನ್ನಿವೇಶ. ಈಗ, ಹದಿನಾರು ವರ್ಷಗಳ ಕ್ರಿಕೆಟ್ ಬದುಕಿಗೆ ವಿದಾಯ! ಇದು ಕಡೂರಿನ ವೇದಾ ಕೃಷ್ಣಮೂರ್ತಿ ಅವರ ಸಾಧನೆ!

ಇವರ ಕ್ರಿಕೆಟ್ ಪಯಣ ಆರಂಭವಾದದ್ದು ಚಿಕ್ಕ ಪಟ್ಟಣ ಕಡೂರಿನಿಂದ. ಆದರೆ ಆಕೆಯ ಕನಸು ಮಾತ್ರ ಅಂತಾರಾಷ್ಟ್ರೀಯ ಕ್ರಿಕೆಟ್ ವೇದಿಕೆಯಷ್ಟು ವಿಶಾಲ.

ಮೈದಾನದಲ್ಲಿ ಬಿರುಸಾದ ಬ್ಯಾಟರ್, ಫೀಲ್ಡಿಂಗ್‌ನಲ್ಲಿ ಚುರುಕುತನದ ಪ್ರತೀಕ. ಆದರೆ ಅವರ ಒಳಗಿನ ಕಥೆ ಹೋರಾಟದಿಂದ ಕೂಡಿದೆ. 2008ರಲ್ಲಿ ಕೇವಲ 15ರ ಹರೆಯದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಖಾಲಿ ಕೈಯಲ್ಲಿ ನಿಂತಿದ್ದ ಹುಡುಗಿ, ಇಂದು ಕ್ರಿಕೆಟ್ ಕ್ಷೇತ್ರದಲ್ಲಿ ಹೆಮ್ಮೆಯ ಸಾಧನೆ ಮಾಡಿದ ಹೆಣ್ಣು.

2017ರ ಮಹಿಳಾ ವಿಶ್ವಕಪ್ ಅವರ ಕ್ರಿಕೆಟ್ ಬದುಕಿಗೆ ಉರಿಯೊತ್ತಿದ ಹೊತ್ತು. ಮಿಥಾಲಿ ರಾಜ್ ನೇತೃತ್ವದ ಭಾರತ ತಂಡ ಇಂಗ್ಲೆಂಡ್‌ನಲ್ಲಿ ಸೆಮಿಫೈನಲ್ ಪ್ರವೇಶಕ್ಕಾಗಿ ಹೋರಾಟ ಮಾಡುತ್ತಿದ್ದ ಸಮಯ. ನಿರ್ಣಾಯಕ ಪಂದ್ಯ ನ್ಯೂಜಿಲೆಂಡ್ ವಿರುದ್ಧ. ಭಾರತಕ್ಕೆ ಗೆಲುವು ಅಗತ್ಯ. ವೇದಾ ಬ್ಯಾಟಿಂಗ್‌ಗೆ ಬಂದಳು. ಅಬ್ಬಾ ಆ ಆಟ ಕಣ್ಣಿಗೆ ಕಟ್ಟಿದ ಹಾಗೆ ಇಂದಿಗೂ ನೆನಪಿದೆ: 45 ಎಸೆತಗಳಲ್ಲಿ 70 ರನ್ ಬಾರಿಸಿ ಭಾರತವನ್ನು ಸೆಮಿಫೈನಲ್‌ಗೆ ಎತ್ತಿದಳು ಕನ್ನಡತಿ.

ಅಂದು ಕಡೂರಿನ ವೇದಾ ಕೃಷ್ಣಮೂರ್ತಿ ಅವರ ಆಟದಿಂದಾಗಿ ಭಾರತ ಫೈನಲ್ ತಲುಪಿತ್ತು. ಇಂಗ್ಲೆಂಡ್ ವಿರುದ್ಧದ ಫೈನಲ್ ಪಂದ್ಯದಲ್ಲಿ ಕೇವಲ 9 ರನ್‌ಗಳಿಂದ ಸೋಲುಂಟಾಯಿತು. ವೇದಾ ಅವರ ಏಕೈಕ ಹೊಡೆತದಲ್ಲಿ ಲೋಪವಿತ್ತು ಎಂಬ ಟೀಕೆಗಳು ಕೇಳಿಬಂದರೂ, ಆಕೆಯ ಆತ್ಮವಿಶ್ವಾಸ ಮಾತ್ರ ಕುಗ್ಗಲಿಲ್ಲ. 'ಆ ಹೊಡೆತ ಬೌಂಡರಿಯನ್ನು ದಾಟಿದ್ರೆ, ನೀವು ಈ ಪ್ರಶ್ನೆ ಕೇಳುತ್ತಿರಲಿಲ್ಲ!' ಎಂದು ನೇರವಾಗಿ ಉತ್ತರಿಸಿದರು ವೇದಾ.

ಆದರೆ ಜೀವನದಲ್ಲಿ ಕ್ರಿಕೆಟ್‌ಗಿಂತ ದೊಡ್ಡ ಪೆಟ್ಟುಗಳು ಕೂಡ ಬಂದವು. ಕೋವಿಡ್ ಸಮಯದಲ್ಲಿ ತಾಯಿಯನ್ನು ಕಳೆದುಕೊಂಡರಯ; ಹತ್ತೇ ದಿನಗಳಲ್ಲಿ ಅಕ್ಕನೂ ನಿಧನರಾದರು. ಕಷ್ಟದ ದಿನಗಳೂ; ವೇದಾ ಅವರು ದುಃಖವನ್ನೂ ಶಕ್ತಿಯಾಗಿ ಪರಿವರ್ತಿಸಿದರು. ಭಾರತದ ಮಹಿಳಾ ತಂಡದ ಪ್ರಮುಖ ಬ್ಯಾಟರ್ ಆಗಿ ಸಾಧನೆ ಮಾಡಿದರು. ಭಾರತ ದಪರ 48 ಏಕದಿನ ಪಂದ್ಯಗಳು, 76 ಟಿ20 ಪಂದ್ಯಗಳಲ್ಲಿ ಆಡಿದರು. ಬ್ಯಾಟಿಂಗ್, ಸಿಂಗ್, ಡ್ರೈವ್ ಅವಳ ಆಟದ ಶೈಲಿ ಅಷ್ಟೇ ಅಲ್ಲ, ಬದುಕಿನ ಶೈಲಿಯೂ ಗಟ್ಟಿ.

ಈಗ, ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಹದಿನಾರು ವರ್ಷಗಳ ಪಯಣಕ್ಕೆ ಇವರು ವಿದಾಯ ಹೇಳಿದ್ದಾರೆ. ವೇದಾ ಕೃಷ್ಣಮೂರ್ತಿ ಅವರು ತನ್ನ ಹೊಸ ಇನ್ನಿಂಗ್ಸ್‌ಗೆ ಹೆಜ್ಜೆ ಇಡುತ್ತಿದ್ದಾರೆ. ಕೋಚ್ ಆಗಬಹುದೇ? ಕಮೆಂಟೇಟರ್ ಆಗಬಹುದೇ? ನೋಡಬೇಕು.

ಕಡೂರಿನಂತಹ ಪುಟ್ಟ ಊರಿನಿಂದ ಬಂದ ಅಪರೂಪದ ಕ್ರಿಕೆಟ್ ಪ್ರತಿಭೆ ವೇದಾ ಕೃಷ್ಣಮೂರ್ತಿ.

ಹನಿ ಮಳೆ

ಅಲ್ಲೇ ಕುಂತಾಳ!

ನನಗೋ ಹಸಿದ ಹೊಟ್ಟೆ
ಹಾಕುತ್ತಿದೆ ತಾಳ
ಅವಳಿಗೋ ಧಾರಾವಾಹಿ ಹುಚ್ಚು
ಅಡುಗೆ ಮರೆತು
ಟಿವಿ ಮುಂದೆ ಕುಂತಾಳ!

● ಮಹಾಂತೇಶ ಮಾಗನೂರ

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಕಪ್ಪಾಗಿರುವ ಆನೆಯಿದು (2)
2. ದೋಣಿಯನ್ನು ನಡೆಸುವವನು (3)
4. ತರಕಾರಿ ತರುವಾಗ ಅವಸರ (4)
6. ಒಳ್ಳೆಯ ಭಾವನೆಯಿಂದ ನೀಡಿದ ಗೌರವಧನ (4)
8. ಶಕ್ತಿಯೂ ಆಗಬಲ್ಲ ಯೋಗ್ಯತೆ (3)
10. ಹಂತಕನಂತೆ ಕಾಣುವ ಯಮ (3)
11. ಅನಾದಿ ಕಾಲದಿಂದ ಇದೆ ಈ ವಾದ್ಯ (3)
13. ಗಣಪತಿಗೆ ಪ್ರಿಯವಾದ ಸಿಹಿಕಡುಬು (3)
15. ಬಳ್ಳಿಗಳಿಂದ ಮಾಡಿದ ಮಂಟಪ (4)
17. ಯುದ್ಧವೀರನಿಗೆ ಒಪ್ಪುವ ಹೆಸರು (4)
19. ಅಭಿವೃದ್ಧಿ (3)
20. ಬೇನೆಗೆ ಮತ್ತೊಂದು ಹೆಸರು (2)

ಮೇಲಿಂದ ಕೆಳಕ್ಕೆ

1. ತಿಂಡಿಪೋತನ ಬಳಿಬಂದಿರುವ ಪಾರಿವಾಳ (3)
2. ಆಕಾಶ (4)
3. ಗಂಡು ಕೋತಿ (3)
5. ರಂಪದ ಅವಳಿ (3)
6. ಪ್ರತಿ ವಾರ ಇಲ್ಲಿ ಗದ್ದಲವೆ? (2)
7. ಸಮಾಧಾನ (3)
9. ಅಸ್ತವ್ಯಸ್ತವಾಗಿ ಬಂದಿರುವ ಮನ್ಮಥ (3)
10. ಒಂದು ಇಂಚು (3)
12. ನಾಕ ತೋರಿಸುವ ಮುಖಂಡ (3)
13. ಭ್ರಾಂತಿಯಂತೆ ತೋರಿದ ಪ್ರೀತಿ (2)
14. ಮಂಡಿಗೆ ತುಂಬಿರುವ ಕರಂಡಕ (4)
16. ಒಟ್ಟಾರೆಯಾದ ಅಭಿಪ್ರಾಯ (3)
18. ಹರಾಜು (3)

ಬೇಟೆಗಾರನ ಅಚಲ ವಿಶ್ವಾಸಕ್ಕೆ ಒಲಿದ ಶ್ರೀ ಕೃಷ್ಣ

ಒಂದು ಅರಣ್ಯದಲ್ಲಿ ಓರ್ವ ಸಂತರು ಒಂದು ಗುಡಿಸಲನ್ನು ಕಟ್ಟಿಕೊಂಡು ವಾಸಿಸುತ್ತಿದ್ದರು. ಓರ್ವ ಬೇಟೆಗಾರನು ಅಲ್ಲಿಂದ ಹೋಗುತ್ತಿದ್ದಾಗಲೆಲ್ಲ, ಆ ಸಂತರಿಗೆ ನಮಸ್ಕಾರ ಮಾಡಿ ಹೋಗುತ್ತಿದ್ದನು. ಒಂದು ದಿನ ಆ ಬೇಟೆಗಾರನು ಸಂತರಿಗೆ, 'ಸಂತರೇ, ನಾನು ಜಿಂಕೆಯ ಬೇಟೆಯಾಡುತ್ತೇನೆ. ನೀವು ಯಾರ ಬೇಟೆಯಾಡಲು ಇಲ್ಲಿ ವಾಸಿಸುತ್ತಿದ್ದೀರಿ? ಇನ್ನು ಎಷ್ಟು ದಿನ ನಿಮ್ಮ ವಾಸ್ತವ್ಯ ಇಲ್ಲಿ ಮುಂದುವರೆಯುತ್ತದೆ' ಎಂದು ಕುತೂಹಲದಿಂದ ಕೇಳಿದನು.

ಆಗ ಸಂತರು ಅವನ ಮಕ್ಕಳಂತಹ ಮನಸ್ಸಿಗೆ ಮುಗುಳ್ನಗುತ್ತಾ 'ಮಗನೇ, ನಾನು ಶ್ರೀಕೃಷ್ಣನ ಬೇಟೆ ಮಾಡಲು ಇಲ್ಲಿ ವಾಸಿಸುತ್ತಿದ್ದೇನೆ. ಅವನು ಸಿಕ್ಕಾಗ ನನ್ನ ಜನ್ಮ ಸಾರ್ಥಕ' ಎಂದರು.

ಅಷ್ಟರಲ್ಲೇ ಅವರ ಕಣ್ಣುಗಳಿಂದ ಕಣ್ಣೀರು ಹರಿಯತೊಡಗಿತು. ಆಗ ಬೇಟೆಗಾರನು, 'ಸಂತರೇ ನೀವೇಕೆ ಅಳುತ್ತಿರುವಿರಿ? ಶ್ರೀಕೃಷ್ಣನೇ! ಅವನು ಹೇಗೆ ಕಾಣಿಸುತ್ತಾನೆ ನನಗೆ ಹೇಳಿ? ನಾನು ಅವನನ್ನು ಹೇಗಾದರೂ ಹಿಡಿದುಕೊಂಡು ಬರುತ್ತೇನೆ' ಎಂದು ಹೇಳಿದನು. ಸಂತರು ಅವನ ಮುಗ್ಧತೆಗೆ ಮಾರುಹೋಗಿ ಭಗವಾನ್ ಶ್ರೀಕೃಷ್ಣನ ಮನೋಹರ ವರ್ಣನೆಯನ್ನು ಮಾಡುತ್ತಾ ಅವನ ಬಣ್ಣ ತಿಳಿನೀಲಿ, ಅವನ ತಲೆಯ ಮೇಲೆ ನವಿಲುಗರಿಯಿದೆ, ಅವನು ಕೊಳಲನ್ನು ನುಡಿಸುತ್ತಾನೆ ನೋಡಲು ಅತ್ಯಂತ ಮನಮೋಹಕ ರೂಪ ಉಳ್ಳವನು ಎಂದು ಹೇಳಿದರು.

ಬೇಟೆಗಾರನು, ನನಗೆ ನಿಮ್ಮನ್ನು ನೋಡಿ ಬಹಳ ಗೌರವ ಉಕ್ಕುತ್ತಿದೆ. ಎಲ್ಲಿಯವರೆಗೆ ನಾನು ನಿಮ್ಮ ಶ್ರೀ ಕೃಷ್ಣನನ್ನು ಹಿಡಿದುಕೊಂಡು ಬರುವುದಿಲ್ಲವೋ, ಅಲ್ಲಿಯವರೆಗೆ ನೀರನ್ನೂ ಕುಡಿಯುವುದಿಲ್ಲ ಎಂದು ಖಂಡಿತವಾದ ಧ್ವನಿಯಲ್ಲಿ ಹೇಳಿ ಅಲ್ಲಿಂದ ಅವರ ಉತ್ತರಕ್ಕೂ ಕಾಯದೆ ಹೊರಟುಬಿಟ್ಟನು. ಅನಂತರ ಅವನು ಒಂದು ಸ್ಥಳದಲ್ಲಿ ಬಲೆಯನ್ನು ಹರಡಿ ಕುಳಿತುಕೊಂಡನು. ದಾರಿಯನ್ನು ಕಾಯುತ್ತಾ ಕಾಯುತ್ತಾ 3 ದಿನಗಳು ಉರುಳಿದವು. ದಯಾಮಯ ಭಗವಂತನಿಗೆ ಬೇಟೆಗಾರನ ಮೇಲೆ ದಯೆ ಬಂದಿತು. ಶ್ರೀಕೃಷ್ಣನು ಕೊಳಲನ್ನು ನುಡಿಸುತ್ತಾ ತಾನಾಗಿಯೇ ಬಂದು ಆ ಬಲೆಯಲ್ಲಿ ಸಿಕ್ಕಿ ಬಿದ್ದನು. ಶ್ರೀಕೃಷ್ಣನನ್ನು ನೋಡಿದಾಕ್ಷಣ ಬೇಟೆಗಾರನು ಅವನ ಮೋಹಕ ರೂಪದಲ್ಲಿ ಸಿಲುಕಿಕೊಂಡನು. ಒಂದೇ ಸಮನೆ ಶ್ಯಾಮಸುಂದರನನ್ನು ನೋಡುತ್ತಾ ನೋಡುತ್ತಾ ಅವನ ಕಣ್ಣುಗಳಿಂದ ಭಾವಾಶ್ರುಗಳು ಹರಿಯತೊಡಗಿದವು, ಅವನು ತನ್ನ ಅಸ್ತಿತ್ವವನ್ನೇ ಮರೆತನು. ಅವನ ಚೇತನ ಜಾಗೃತವಾಯಿತು, ಆಗ ಅವನು, 'ಬೇಟೆ ಸಿಕ್ಕಿತು, ಬೇಟೆ ಸಿಕ್ಕಿತು' ಎಂದು ಜೋರಾಗಿ ಕೂಗತೊಡಗಿದನು.

ಶ್ರೀಕೃಷ್ಣನು ಅವನ ಕಡೆಗೆ ಮುಗುಳ್ನಗೆ ಬೀರುತ್ತಾ ನೋಡುತ್ತಿದ್ದನು. ಬೇಟೆಗಾರನು ಶ್ರೀಕೃಷ್ಣನನ್ನು ಬೇಟೆಯಂತೆ ಹೆಗಲ ಮೇಲೆ ಹೊತ್ತುಕೊಂಡು ಸಂತರ ಬಳಿಗೆ ಬಂದನು.

ಶ್ರೀಕೃಷ್ಣನು ಬಲೆಯಲ್ಲಿ ಸಿಕ್ಕಿಕೊಂಡಿರುವುದೂ, ಮುಗುಳ್ನಗು ಬೀರುತ್ತಿರುವ ದೃಶ್ಯವನ್ನು ನೋಡಿ ಸಂತರ ಪ್ರಜ್ಞೆಯೇ ತಪ್ಪಿತು. ಎಚ್ಚರಗೊಂಡಾಗ ಅವರು ಬೇಟೆಗಾರನ ಕಾಲುಗಳನ್ನು ಹಿಡಿದು ನಮಸ್ಕಾರ ಮಾಡಿದರು. ಅವರು ಶ್ರೀಕೃಷ್ಣನಿಗೆ ಅಂಜಿಕೊಂಡೇ 'ಹೇ ನಾಥಾ, ನಾನು ಚಿಕ್ಕವನಿದ್ದಾಗಿನಿಂದ ಎಷ್ಟು ಪ್ರಯತ್ನಿಸಿದೆ! ನಿಮ್ಮ ಪ್ರಾಪ್ತಿಗಾಗಿ ಮನೆ-ಮಠವನ್ನು ಬಿಟ್ಟೆ, ಧ್ಯಾನ ಭಜನೆಯನ್ನು ಮಾಡಿದೆ. ನಿಮ್ಮ ದರ್ಶನವಾಗಲಿಲ್ಲ ; ಆದರೆ ಇವನಿಗೆ ಕೇವಲ 3 ದಿನಗಳಲ್ಲಿ ದರ್ಶನ ನೀಡಿದಿರಿ. ಇದೆಂಥಾ ಸೋಜಿಗ' ಎಂದರು. ಆಗ ಭಗವಂತನು, 'ನಿಮ್ಮ ಮೇಲೆ ಇರುವ ಇವನ ಅಪರಿಮಿತ ಪ್ರೇಮ ಮತ್ತು ನೀಡಿದ ವಚನದ ಮೇಲಿನ ದೃಢ ವಿಶ್ವಾಸವನ್ನು ನೋಡಿ ನನಗೆ ಇವನ ಬಳಿ ಬರದೇ ಇರಲು ಸಾಧ್ಯವಾಗಲಿಲ್ಲ' ಎಂದನು.

ಭಗವಂತನನ್ನು ಒಲಿಸಿಕೊಳ್ಳಲು ಅವನೊಂದಿಗಿನ ಅನುಸಂಧಾನಕ್ಕೆ ನಮಗೆ ನೂರು ಮಂತ್ರಗಳ, ಜಪತಪ ಧ್ಯಾನಗಳ ಆಚರಣೆಗಿಂತ ಮೊದಲು ಅವನಲ್ಲಿ ದೃಢವಾದ ನಂಬಿಕೆ ಇರಬೇಕು. ಅವನನ್ನು ಯಾವ ರೀತಿ ನಾವು ಆರಾಧಿಸುತ್ತೇವೆ ಎನ್ನುವುದಕ್ಕಿಂತ ನಮ್ಮ ಭಕ್ತಿಯಲ್ಲಿರುವ ಪ್ರಾಮಾಣಿಕತೆ ಅವನನ್ನು ಬಹುಬೇಗ ತಲುಪುತ್ತದೆ. ನಂಬಿದವರಿಗೆ ಪ್ರತಿ ಪ್ರಾಣಿ, ಪಕ್ಷಿ , ಜೀವದಲ್ಲೂ ಭಗವಂತ ಕಾಣುತ್ತಾನೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಏರೋಪ್ಲೇನ್ ಬಿಲ್ಡಿಂಗ್!

● ಪುರುಷೋತ್ತಮ್ ವೆಂಕಿ, ಚಿತ್ರದುರ್ಗ

ಚಿತ್ರದುರ್ಗ ನಗರದ ಮಧ್ಯಭಾಗದಲ್ಲಿರುವ ಈ ಕಟ್ಟಡ ನೋಡಿದವರ ಗಮನ ಸೆಳೆಯುತ್ತದೆ! ಅದುವೇ ಏರೋ ಪ್ಲೇನ್ ಬಿಲ್ಡಿಂಗ್. ಹಲವಾರು ದಶಕಗಳ ಹಿಂದೆಯೇ ಕಟ್ಟಿಸಲಾದ ವಿಮಾನವನ್ನು ಹೋಲುವ ಈ ಕಟ್ಟಡವು ಈಗಲೂ ಉಳಿದಿದೆ. ಚಿತ್ರದುರ್ಗದ ಹೊಸಪೇಟೆ ರಸ್ತೆಯ ಲ್ಲಿರುವ ಈ ಕಟ್ಟಡದ ಮುಂಭಾಗವನ್ನು ವಿಮಾನದಂತೆ ವಿನದ್ಯಾಸಗೊಳಿಸಲಾಗಿದ್ದು, ಅದಕ್ಕೆ ಆಧಾರವಾಗಿ ಎರಡು ಕಂಬಗಳಿವೆ. ಈ ವಿಮಾನದ ಮೂತಿ, ಮುಂಭಾಗ ಎರಡು ತಿರುಗುವ ರೆಕ್ಕೆಗಳು, ಮೇಲ್ಭಾಗ ಹಾಗೂ ಅಕ್ಕಪಕ್ಕ ಕಿಟಕಿಗಳು ಹಾಗೂ ರೆಕ್ಕೆಗಳನ್ನು ವಿನ್ಯಾಸಗೊಳಿಸಲಾಗಿದೆ. ಈ ಹಿಂದೆ ಇದು ಉದ್ಯೋಗ ವಿನಿಯಮಯ ಕಛೇರಿಯಾಗಿದ್ದು, ಕಾಕ್‌ಪಿಟ್‌ನಲ್ಲಿ ಕಚೇರಿಯೊಂದಿತ್ತಂತೆ! ಈ ಕಟ್ಟಡದಲ್ಲಿ ಸರ್ಕಾರಿ ಕಛೇರಿಗಳು ಕಾರ್ಯನಿರ್ವಹಿಸುತ್ತಿದ್ದು, ಹೊಸ ವೀಕ್ಷಕರಿಗೆ ಸಖತ್ ಅಚ್ಚರಿಯನ್ನು ಉಣಬಡಿಸುತ್ತಿದೆ!

ಸಮಾಚಾರ ಸಣ್ಣದಲ್ಲ

ಅನುರಾಗ್ ಠಾಕೂರ್ ಮತ್ತೆ ನಾಮನಿರ್ದೇಶನ

ದೆಹಲಿ: ಮಾಜಿ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಮತ್ತೊಮ್ಮೆ ಭಾರತೀಯ ಬಾಕ್ಸಿಂಗ್ ಫೆಡರೇಶನ್ ಅಧ್ಯಕ್ಷರಾಗುವ ರೇಸ್‌ನಲ್ಲಿದ್ದಾರೆ. ಹಿಮಾಚಲ ಪ್ರದೇಶ ಬಾಕ್ಸಿಂಗ್ ಅಸೋಸಿಯೇಷನ್ ಆಗಸ್ಟ್ 21ರಂದು ನಡೆಯಲಿರುವ ಬಿಎಫ್‌ಐ ಚುನಾವಣೆಗೆ ಠಾಕೂರ್ ಮತ್ತು ಅದರ ಅಧ್ಯಕ್ಷ ರಾಜೇಶ್ ಭಂಡಾರಿ ಇಬ್ಬರನ್ನೂ ತನ್ನ ಪ್ರತಿನಿಧಿಗಳಾಗಿ ನಾಮನಿರ್ದೇಶನ ಮಾಡಿದೆ. ಮಾರ್ಚ್ 28ರಂದು ನಿಗದಿಯಾಗಿದ್ದ ಚುನಾವಣೆಗೆ ಠಾಕೂರ್ ಕೂಡ ಸ್ಪರ್ಧೆಯಲ್ಲಿದ್ದರು, ಆದರೆ ಬಿಎಫ್‌ಐ ಅಧ್ಯಕ್ಷ, ಅಜಯ್ ಸಿಂಗ್ ಹೊರಡಿಸಿದ 60 ಸದಸ್ಯರ ಎಲೆಕ್ಟೋರಲ್ ಕಾಲೇಜು ಪಟ್ಟಿದಿಂದ ಅನುರಾಗ್ ಅವರ ಹೆಸರನ್ನು ಕೈಬಿಡಲಾಗಿತ್ತು. ಚುನಾವಣೆಯಲ್ಲಿ ಸ್ಪರ್ಧಿಸುವ ಉದ್ದೇಶದಿಂದ ಬಿಎಫ್‌ಐನ ತಾತ್ಕಾಲಿಕ ಸಮಿತಿ ಮುಖ್ಯಸ್ಥ ಹುದ್ದೆಗೆ ಅಜಯ್ ಸಿಂಗ್ ರಾಜೀನಾಮೆ ನೀಡಿದ್ದಾರೆ. ವಿಶ್ವ ಬಾಕ್ಸಿಂಗ್ ಅಧ್ಯಕ್ಷ ಬೋರಿಸ್ ವಾನ್ ಡೆರ್ ವೊರ್ಸ್ಟ್ ಚುನಾವಣೆಯ ಮೇಲ್ವಿಚಾರಣೆ ನಡೆಸಲಿದ್ದಾರೆ. ಬಿಎಫ್‌ಐ ಅಧ್ಯಕ್ಷರಾಗಿ ಅಜಯ್ ಸಿಂಗ್ ಈಗಾಗಲೇ ತಲಾ 4 ವರ್ಷಗಳ ಎರಡು ಅವಧಿಯನ್ನು ಪೂರ್ಣಗೊಳಿಸಿದ್ದು, 3ನೇ ಹಾಗೂ ಕೊನೆಯ ಅವಧಿಗೆ ಸ್ಪರ್ಧಿಸಲು ಅವರೂ ಸಿದ್ಧರಾಗಿದ್ದಾರೆ.

ಮೆಸ್ಸಿ ಕೇರಳ ಭೇಟಿ ರದ್ದು



ತಿರುವನಂತಪುರ: ಲಯೊನೆಲ್ ಮೆಸ್ಸಿ ನಾಯಕತ್ವದ ಅರ್ಜೆಂಟೀನಾ ಫುಟ್ಬಾಲ್ ತಂಡವು ವೇಳಾಪಟ್ಟಿಗೊಂದಲದಿಂದಾಗಿ ಕೇರಳ ಪ್ರವಾಸವನ್ನು ರದ್ದಾಗಿದೆ. ಈ ವಿಚಾರವನ್ನು ಕೇರಳದ ಕ್ರೀಡಾ ಸಚಿವ ವಿ. ಅಬ್ದುರಹಿಮಾನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. 'ಅಕ್ಟೋಬರ್ ತಿಂಗಳಿನಲ್ಲಿ ಕೇರಳಕ್ಕೆ ಭೇಟಿ ನೀಡಲು ಸಾಧ್ಯವಾಗುವುದಿಲ್ಲ ಎಂದು ಅರ್ಜೆಂಟೀನಾ ತಂಡ ತಿಳಿಸಿದೆ, ಆದರೆ ಅಕ್ಟೋಬರ್‌ನಲ್ಲಿ ಮಾತ್ರ ಈ ಪಂದ್ಯ ನಡೆಯಬೇಕೆಂದು ಆಯೋಜಕರು ಪಟ್ಟುಹಿಡಿದಿದ್ದಾರೆ. ಹೀಗಾಗಿ ವೇಳಾಪಟ್ಟಿಯ ಗೊಂದಲದಿಂದ ಮೆಸ್ಸಿ ನೇತೃತ್ವದ ತಂಡ ರಾಜ್ಯ ಪ್ರವಾಸವನ್ನು ಕೈಬಿಟ್ಟಿದೆ' ಎಂದು ಹೇಳಿದ್ದಾರೆ. ಆಯೋಜಕರು ಪಂದ್ಯದ ಶುಲ್ಕವನ್ನು ಈಗಾಗಲೇ ಪಾವತಿಸಿದ್ದಾರೆ, ಹಾಗಾಗಿ ಅರ್ಜೆಂಟೀನಾ ತಂಡವು ಕೇರಳದಲ್ಲಿ ಪ್ರದರ್ಶನ ಪಂದ್ಯವನ್ನು ಆಡಲಿದೆ ಎಂದು ಅಬ್ದುರಹಿಮಾನ್ ಇತ್ತೀಚೆಗೆ ವಿಶ್ವಾಸ ವ್ಯಕ್ತಪಡಿಸಿದ್ದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ದುಬೈ, ಅಬುಧಾಬಿಯಲ್ಲಿ ನಡೆಯಲಿರುವ ಪ್ರತಿಷ್ಠಿತ ಟೂರ್ನಿ | ಸೆ.9ರಿಂದ ಚುಟುಕು ಕ್ರಿಕೆಟ್ ಪಂದ್ಯಾವಳಿ | ಒಟ್ಟು 19 ಪಂದ್ಯಗಳು

ಟೀಮ್ ಇಂಡಿಯಕ್ಕಿನ್ನು ಏಷ್ಯಾಕಪ್ ಸವಾಲು

ಲಂಡನ್: ಭಾರೀ ಕುತೂಹಲ ಹಾಗೂ ಸ್ಮರಣೀಯ ಕ್ಷಣಗಳಿಗೆ ಸಾಕ್ಷಿಯಾದ ಈ ಬಾರಿಯ ತೆಂಡೂಲ್ಕರ್-ಆ್ಯಂಡರ್‌ಸನ್ ಸರಣಿಯು ಅಷ್ಟೇ ರೋಚಕವಾಗಿ ಸೋಮವಾರ ಲಂಡನ್‌ನ ಓವಲ್‌ನಲ್ಲಿ ಕೊನೆಗೊಂಡಿತು. ಸರಣಿ ಸೋಲಿನ ಭೀತಿಯಲ್ಲಿದ್ದ ಯಂಗ್ ಇಂಡಿಯಾ ತಂಡವು ಕೊನೆಗೂ ದಿಟ್ಟ ಪ್ರದರ್ಶನ ತೋರುವ ಮೂಲಕ 5 ಪಂದ್ಯಗಳ ಸರಣಿಯನ್ನು 2-2 ಅಂತರದಲ್ಲಿ ಡ್ರಾ ಮಾಡಿಕೊಳ್ಳುವ ಮೂಲಕ ಭರ್ಜರಿ ಯಶಸ್ಸನ್ನು ಕಂಡಿತ್ತು. ಇಂಗ್ಲೆಂಡ್‌ಗೆ ತೆರಳಿದ್ದ ಟೆಸ್ಟ್ ತಂಡದ ಬಹುತೇಕ ಆಟಗಾರರು ಮುಂಬರುವ ಏಷ್ಯಾ ಕಪ್ ತಂಡದಲ್ಲೂ ಇರುವ ಸಾಧ್ಯತೆ ಹೆಚ್ಚಿರುವುದ ರಿಂದ ಇದೀಗ ಒಂದು ತಿಂಗಳ ಕಾಲ ವಿಶ್ರಾಂತಿ ಪಡೆದು, ಮತ್ತೆ ಆ ಟೂರ್ನಿಗಾಗಿ ಸಜ್ಜಾಗ ಬೇಕಾಗಿದೆ.

ಏಷ್ಯಾದ ಪ್ರತಿಷ್ಠಿತ ತಂಡಗಳ ನಡುವೆ ನಡೆಯುವ ಏಷ್ಯಾ ಕಪ್ ಪಂದ್ಯಾವಳಿಯು ಇದೇ ಸೆಪ್ಟೆಂಬರ್ 9ರಿಂದ 28ರ ವರೆಗೆ ದುಬೈ ಮತ್ತು ಅಬುಧಾಬಿಯಲ್ಲಿ ಆಯೋಜನೆಯಾ ಗಲಿದ್ದು, ಒಟ್ಟು 19 ಪಂದ್ಯಗಳು ನಡೆಯಲಿದೆ.

ಭಾರತದ ಲೀಗ್ ಪಂದ್ಯಗಳು ಕ್ರಮವಾಗಿ ಸೆ. 10, 14 ಹಾಗೂ 19ರಂದು ನಿಗದಿಯಾಗಿದೆ. ತಂಡವು ಯು.ಎ.ಇ, ಪಾಕಿಸ್ತಾನ ಹಾಗೂ ಒಮಾನ್ ತಂಡಗಳನ್ನು ಎದುರಿಸಲಿದೆ. ಭಾರತ ಹಾಗೂ ಪಾಕಿಸ್ತಾನ ತಂಡಗಳು ತಮ್ಮ ಗ್ರೂಪ್‌ನಲ್ಲಿ ಮೊದಲ ಎರಡು ಅಗ್ರ ತಂಡಗಳಾಗುವುದು ಬಹುತೇಕ ಖಚಿತವಾಗಿದೆ, ಹಾಗಾಗಿ ಸೂಪರ್ -4 ಸ್ಟೇಜ್‌ನಲ್ಲಿ ಸೆ.21ರಂದು ಎರಡೂ ತಂಡ ಗಳು ಪರಸ್ಪರ ಮುಖಾಮುಖಿಯಾಗಲಿವೆ ಎಂಬುದು ಸದ್ಯದ ಲೆಕ್ಕಾಚಾರ. ಭಾರತದ ಸೂಪರ್-4 ಹಂತದ ಉಳಿದ ಪಂದ್ಯಗಳಿಗೆ ಲೀಗ್ ಹಂತದಲ್ಲಿ ತಂಡ ಯಾವ ಸ್ಥಾನ ಪಡೆಯಲಿದೆ ಎನ್ನುವುದರ ಮೇಲೆ ನಿರ್ಧಾರ ವಾಗಲಿದೆ.

ಈ ಬಾರಿಯ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿ ಟಿ20 ಸ್ವರೂಪದಲ್ಲಿ ನಡೆಯಲಿರುವ ಕಾರಣ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ರವೀಂದ್ರ ಜಡೇಜಾರವರ ಆಟ ಕಣ್ತುಂಬಿ ಕೊಳ್ಳಲು ಭಾರತೀಯ ಕ್ರಿಕೆಟ್ ಪ್ರೇಮಿಗಳಿಗೆ ಸಾಧ್ಯವಿಲ್ಲ, ಏಕೆಂದರೆ ಅವರೆಲ್ಲರೂ ಈಗಾಗಲೇ ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಹೀಗಾಗಿ ಟೆಸ್ಟ್ ಸರಣಿಗಾಗಿ ಇಂಗ್ಲೆಂಡ್‌ಗೆ ಪಯಣಿಸಿದ ಯಂಗ್ ಇಂಡಿಯಾ ತಂಡದ ಬಹುತೇಕ ಆಟಗಾರರು ಈ ಬಾರಿಯ ಏಷ್ಯಾ ಕಪ್ ತಂಡದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂಬುವುದು ದೃಢವಾಗಿದೆ. ಏಷ್ಯಾ ಕಪ್‌ಗಾಗಿ ಭಾರತ ಕ್ರಿಕೆಟ್ ತಂಡದ ಸದಸ್ಯರ ಪಟ್ಟಿ ಆಗಸ್ಟ್ ಅಂತ್ಯದ ವೇಳೆಗೆ ಪ್ರಕಟಗೊಳ್ಳುವ ಸಾಧ್ಯತೆ ಇದೆ. ರಿಷಭ್ ಪಂತ್ ಗಾಯಗೊಂಡಿರುವ ಕಾರಣ ವಿಕೆಟ್ ಕೀಪಿಂಗ್ ಹೊಣೆ ಕನ್ನಡಿಗ ಕೆ.ಎಲ್ ರಾಹುಲ್ ಪಾಲಾಗಲಿದೆಯಾ ಅಥವಾ ಕೇರಳದ ಸಂಜು ಸ್ಯಾಮ್ಸನ್‌ಗೆ ಸ್ಥಾನ ಒಲಿಯಲಿದೆಯಾ ಎಂದು ಕಾದು ನೋಡಬೇಕಿದೆ.

ಏಷ್ಯಾ ಕಪ್ ಟೂರ್ನಿಯಲ್ಲಿ 8 ತಂಡಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಎ-ಗುಂಪಿನಲ್ಲಿ ಭಾರತ, ಪಾಕಿಸ್ತಾನ, ಯು.ಎ.ಇ ಮತ್ತು ಒಮಾನ್ ತಂಡಗಳಿದ್ದರೆ, ಬಿ-ಗುಂಪಿನಲ್ಲಿ ಶ್ರೀಲಂಕಾ, ಬಾಂಗ್ಲಾದೇಶ, ಅಫ್ಘಾನಿಸ್ತಾನ, ಮತ್ತು ಹಾಂಗ್‌ಕಾಂಗ್ ಇರಲಿದೆ.

ಪಂದ್ಯಾವಳಿಯ ಸಮಯ

ಏಷ್ಯಾಕಪ್ ಪಂದ್ಯಾವಳಿಯನ್ನು ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಆಯೋಜಿಸುತ್ತಿದ್ದು, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಆತಿಥ್ಯ ವಹಿಸಲಿದೆ. ದುಬೈ ಕ್ರೀಡಾಂಗಣವು 11 ಪಂದ್ಯ ಹಾಗೂ ಅಬುಧಾಬಿ ಕ್ರೀಡಾಂಗಣವು 8 ಪಂದ್ಯಗಳಿಗೆ ಆತಿಥ್ಯ ವಹಿಸಲಿದೆ. ಯು.ಎ.ಇ ಸ್ಥಳೀಯ ಸಮಯ ಪ್ರಕಾರ ಸಂಜೆ 6 ಗಂಟೆಗೆ ಪ್ರಾರಂಭವಾಗುವ ಪಂದ್ಯಗಳು, ಭಾರತದಲ್ಲಿ ಸಂಜೆ 7.30ಕ್ಕೆ ಆರಂಭವಾಗಲಿದೆ.

ಮಹಾರಾಜ ಟ್ರೋಫಿ ಕ್ರಿಕೆಟ್ ಬೆಂಗಳೂರಿನಲ್ಲಿ ಟೂರ್ನಿ ಅನುಮಾನ

ಇನ್ನೂ ಸಿಗದ ಅನುಮತಿ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ 'ಮಹಾರಾಜ ಟ್ರೋಫಿ ಕ್ರಿಕೆಟ್ ಟಿ20 ಟೂರ್ನಿ-2025' ಆರಂಭವಾಗಲು ಇನ್ನು ಕೇವಲ ಒಂದು ವಾರ ಮಾತ್ರ ಬಾಕಿಯಿವೆ. ಆದರೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ಆಯೋಜಿಸಲು ಇನ್ನೂ ಪೊಲೀಸ್ ಇಲಾಖೆಯಿಂದ ಅನುಮತಿ ಸಿಕ್ಕಿಲ್ಲ, ಹೀಗಾಗಿ ಟೂರ್ನಿಯ ಬಗ್ಗೆ ಅನಿಶ್ಚಿತತೆ ಮೂಡಿದೆ. ಫ್ರ್ಯಾಂಚೈಸಿಗಳು ಈಗಾಗಲೇ ತಂಡಗಳ ಅಭ್ಯಾಸ ಇತ್ಯಾದಿ ಚಟುವಟಿಕೆಗಳನ್ನು ಆರಂಭಿಸಿವೆ.

ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಕಾಲ್ತುಳಿತದಿಂದಾಗಿ 11 ಜನ ಮೃತಪಟ್ಟ ಹಿನ್ನೆಲೆಯಲ್ಲಿ ಕ್ರೀಡಾಂಗಣಕ್ಕೆ ಪ್ರೇಕ್ಷಕರಿಗೆ ಪ್ರವೇಶ ಅವಕಾಶವನ್ನು ಪೊಲೀಸ್ ಇಲಾಖೆ ನಿರಾಕರಿಸಿತ್ತು, ಈ ಹಿನ್ನೆಲೆಯಲ್ಲಿ ಖಾಲಿ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ನಡೆಸುವುದಾಗಿ ಕೆಎಸ್‌ಸಿಎ ತನ್ನ ಪ್ರಕಟಣೆಯಲ್ಲಿ ಈಗಾಗಲೇ ತಿಳಿಸಿತ್ತು. ಅದರಂತೆ ಪಂದ್ಯಾವಳಿ ನಡೆಸಲು ಅನುಮತಿ ನೀಡುವಂತೆ ಆಯೋಜಕರು ಕೆಲ ದಿನಗಳ ಹಿಂದೆಯೇ ನಗರ ಪೊಲೀಸ್ ಕಮಿಷನರ್ ಹಾಗೂ ಕೇಂದ್ರ ವಲಯದ ಡಿ.ಸಿ.ಪಿ.ಗೆ ಮನವಿ ಸಲ್ಲಿಸಿದ್ದರು, ಆದರೆ ಇದುವರೆಗೂ ಪೊಲೀಸರು ಅನುಮತಿ ನೀಡಿಲ್ಲ. ಹೀಗಾಗಿ ಟೂರ್ನಿ ಬೆಂಗಳೂರಿನಲ್ಲಿ ನಡೆಯುವು ಅನುಮಾನ ಎನ್ನುವಂತಿದೆ.

ಸದ್ಯದ ಮಾಹಿತಿ ಪ್ರಕಾರ ಬೆಂಗಳೂರಿನಲ್ಲಿ ಮಹಾರಾಜ ಟ್ರೋಪಿ ಪಂದ್ಯಾವಳಿಗೆ ಅನುಮತಿ ಸಿಗದಿದ್ದರೆ ಮೈಸೂರಿಗೆ ಇಲ್ಲವೇ ಹುಬ್ಬಳ್ಳಿಗೆ ಸ್ಥಳಾಂತರ ಮಾಡುವ ಕುರಿತು ಕೂಡ ಕೆಎಸ್‌ಸಿಎಯಲ್ಲಿ ಚಿಂತನೆ ನಡೆದಿದೆ ಎನ್ನಲಾಗಿದೆ, ಆದರೆ ಈ ಬಗ್ಗೆಯೂ ಯಾವುದೇ ಖಚಿತ ನಿರ್ಧಾರ ಕೈಗೊಂಡಿಲ್ಲವೆಂದು ಮೂಲಗಳು ತಿಳಿಸಿವೆ. ಆ. 11ರಂದು ಟೂರ್ನಿ ಆರಂಭವಾಗಲಿದೆ ಎಂದು ಈ ಮೊದಲು ತಿಳಿಸಲಾಗಿತ್ತು.

ಫಿಟ್ನೆಸ್‌ಗಾಗಿ ಸೂರ್ಯಕುಮಾರ್ ಬೆಂಗಳೂರಿನಲ್ಲಿ ಕಠಿಣ ತರಬೇತಿ



ಬೆಂಗಳೂರು: ಏಷ್ಯಾಕಪ್ ಟೂರ್ನಿ ಹತ್ತಿರ ಬರುತ್ತಿದ್ದಂತೆ ಗಾಯದಿಂದ ಚೇತರಿಸಿಕೊಳ್ಳುತ್ತಿರುವ ಮತ್ತು ಫಿಟ್ನೆಸ್ ಕಳೆದುಕೊಂಡಿರುವ ಟೀಮ್ ಇಂಡಿಯಾದ ಆಟಗಾರರು ಮರಳಿ ಫಿಟ್ನೆಸ್ ಪಡೆದುಕೊಳ್ಳುವ ನಿಟ್ಟಿನಲ್ಲಿ ಬೆಂಗಳೂರಿನಲ್ಲಿರುವ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ (ಎನ್‌ಸಿಎ) ಕಠಿಣ ತರಬೇತಿಗೆ ಹಾಜರಾಗಿದ್ದಾರೆ.

ಭಾರತದ ಟಿ20 ನಾಯಕ ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ಮೊಹಮ್ಮದ್ ಶಮಿ ಸೇರಿದಂತೆ ಐಪಿಎಲ್ ಬಳಿಕ ವಿಶ್ರಾಂತಿಯಲ್ಲಿದ್ದ ಅನೇಕ ಸ್ಟಾರ್ ಆಟಗಾರರು ಎನ್.ಸಿ.ಎ.ಯಲ್ಲಿ ತರಬೇತಿ ಆರಂಭಿಸಿದ್ದಾರೆ. ಜೂನ್‌ನಲ್ಲಿ ಸೂರ್ಯಕುಮಾರ್ ಯಾದವ್ ಅವರಿಗೆ ಸ್ಪೋರ್ಟ್ಸ್ ಹರ್ನಿಯಾ ನೋವಿಗೆ ಸಂಬಂಧಿಸಿದಂತೆ ಜರ್ಮನಿಯ ಮ್ಯೂನಿಚ್‌ನಲ್ಲಿ ಯಶಸ್ವಿ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ಸದ್ಯ ಚೇತರಿಕೆಯ ಹಾದಿಯಲ್ಲಿರುವ ಅವರು ದುಲೀಪ್ ಟ್ರೋಫಿಯಿಂದ ಹೊರಗುಳಿದಿದ್ದಾರೆ. ಪಶ್ಚಿಮ ವಲಯದ ಆಯ್ಕೆದಾರರು ಅವರನ್ನು ತಮ್ಮ 15 ಸದಸ್ಯರ ತಂಡದಲ್ಲಿ ಸೇರಿಸಿಕೊಳ್ಳದಿರಲು ನಿರ್ಧರಿಸಿದ್ದರೂ, ತಾವು ಅಲಭ್ಯರಾಗುವುದಾಗಿ ತಿಳಿಸಿದ್ದರು. ಹೀಗಾಗಿ ಶಾರ್ದುಲ್ ಠಾಕೂರ್‌ಗೆ ಪಶ್ಚಿಮ ವಲಯದ ನಾಯಕತ್ವ ನೀಡಲಾಗಿದೆ. 34 ವರ್ಷದ ವೇಗಿ ಮೊಹಮ್ಮದ್ ಶಮಿ ಹೆಚ್ಚು ಸಮಯ ಬೌಲಿಂಗ್ ಮಾಡಲು ಸಾಧ್ಯ ವಾಗುವುದಿಲ್ಲ ಎಂದು ಬಿಸಿಸಿಐ ವೈದ್ಯಕೀಯ ತಂಡವು ಭಾರತೀಯ ಮಂಡಳಿಗೆ ತಿಳಿಸಿದ ನಂತರ, ಆ್ಯಂಡರ್ಸನ್-ತೆಂಡೂಲ್ಕರ್ ಟ್ರೋಫಿಗಾಗಿ ಶಮಿಯನ್ನು ಇಂಗ್ಲೆಂಡ್ ಸರಣಿಗೆ ಆಯ್ಕೆ ಮಾಡಿರಲಿಲ್ಲ. ಕಳೆದುಕೊಂಡಿರುವ ಫಾರ್ಮ್ ಮತ್ತೆ ಕಂಡುಕೊಳ್ಳಲು ಹಾಗೂ ಭಾರತ ತಂಡದ ಪರ ಆಡಲು, ದೇಶೀಯ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿದ್ದಾರೆ.

ಬಿಎಫ್‌ಸಿಯಿಂದ ಆಟಗಾರರ ವೇತನಕ್ಕೆ ತಡೆ

ಐಎಸ್‌ಎಲ್ ಫುಟ್ಬಾಲ್ ಟೂರ್ನಿ ಅತಂತ್ರ

ದೆಹಲಿ: ರಿಲಯನ್ಸ್ ಒಡೆತನದ ಫುಟ್ಬಾಲ್ ಸ್ಪೋರ್ಟ್ಸ್ ಡೆವಲಪ್‌ಮೆಂಟ್ (ಎಫ್‌ಎಸ್‌ಡಿಎಲ್) ಮತ್ತು ಅಖಿಲ ಭಾರತೀಯ ಫುಟ್ಬಾಲ್ ಫೆಡರೇಶನ್ ಬಿಕ್ಕಟ್ಟಿನಿಂದಾಗಿ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯ ಭವಿಷ್ಯ ಅತಂತ್ರವಾಗಿದೆ. ಈ ಕಾರಣಕ್ಕೆ ಬೆಂಗಳೂರು ಎಫ್.ಸಿ ತಂಡವು ತನ್ನ ಆಟಗಾರರ ವೇತನವನ್ನು ಅನಿರ್ದಿಷ್ಟಾವಧಿಗೆ ತಡೆಹಿಡಿದಿದೆ.

ಈ ಬಗ್ಗೆ ಬಿ.ಎಫ್.ಸಿ ಅಧಿಕೃತ ಘೋಷಣೆ ಮಾಡಿದ್ದು, 'ಐಎಸ್‌ಎಲ್ ಭವಿಷ್ಯದ ಅತಂತ್ರವಾಗಿರುವುದರಿಂದ ನಾವು ಕಠಿಣ ನಿರ್ಧಾರ ಕೈಗೊಳ್ಳಬೇಕಾಗಿದೆ. ತಂಡದ ಮುಖ್ಯ ಆಟಗಾರರೂ ಸೇರಿದಂತೆ ಹಲವರ ಸಂಬಳವನ್ನು ಅನಿರ್ದಿಷ್ಟಾವಧಿಗೆ ಅಮಾನತುಗೊಳಿಸಲಾಗಿದೆ. ನಮಗೆ ಇದರ ಹೊರತಾಗಿ ಬೇರೆ ಆಯ್ಕೆ ಇಲ್ಲ. ಆಟಗಾರರು, ಸಿಬ್ಬಂದಿ, ಅವರ ಕುಟುಂಬಸ್ಥರು ನಮ್ಮ ಆದ್ಯತೆ ಯಾಗಿದ್ದು, ಫ್ರಾಂಚೈಸಿಯು ಅವರ ಜತೆ ಸಂಪರ್ಕ ದಲ್ಲಿದೆ' ಎಂದಿದೆ. ಹೀಗಾಗಿ ಸುನಿಲ್ ಚೆಟ್ರಿ ಸೇರಿ ದಂತೆ ಬಿಎಫ್‌ಸಿಯ ಆಟಗಾರರಿಗೆ ಈ ಋತುವಿನಲ್ಲಿ ವೇತನ ಸಿಗುವುದು ಅನುಮಾನವಾಗಿದೆ. ಟೂರ್ನಿ ಆಯೋಜಕ ಸಂಸ್ಥೆ ಹಾಗೂ ಅಖಿಲ ಭಾರತ ಫುಟ್ಬಾಲ್ ಫೆಡರೇಶನ್ (ಎ.ಐ.ಎಫ್.ಎಫ್) ನಡುವಿನ ಗುತ್ತಿಗೆ ಒಪ್ಪಂದ ನವೀಕರಣಗೊಳ್ಳದ ಕಾರಣ, 2025-26ರ ಇಂಡಿಯನ್ ಸೂಪರ್ ಲೀಗ್ (ಐ.ಎಸ್.ಎಲ್) ಫುಟ್ಬಾಲ್ ಟೂರ್ನಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ. ಟೂರ್ನಿ ಆಯೋಜಕರಾದ ರಿಲಯನ್ಸ್ ಸಂಸ್ಥೆಯ ಭಾಗವಾಗಿರುವ ಫುಟ್ಬಾಲ್ ಸ್ಪೋರ್ಟ್ಸ್ ಡೆವಲಪ್‌ಮೆಂಟ್ ಲಿ.(ಎಫ್‌ಎಸ್‌ಡಿಎಲ್) ಹಾಗೂ ಎಐಎಫ್‌ಎಫ್ ನಡುವಿನ ಒಪ್ಪಂದ ಡಿಸೆಂಬರ್ 8, 2025ರಂದು ಕೊನೆಗೊಳ್ಳಲಿದೆ. ಸಾಮಾನ್ಯವಾಗಿ ಐಎಸ್‌ಎಲ್ ಫುಟ್ಬಾಲ್ ಟೂರ್ನಿಯು ಸೆಪ್ಟೆಂಬರ್‌ನಿಂದ ಏಪ್ರಿಲ್ ವರೆಗೂ ನಡೆಯಲಿರುವ ಕಾರಣ, ಗುತ್ತಿಗೆ ನವೀಕರಣಗೊಳ್ಳದೆ ಟೂರ್ನಿ ಆಯೋಜಿಸುವ ಸ್ಥಿತಿಯಲ್ಲಿ ತಾನಿಲ್ಲ ಎಂದು ಎಫ್‌ಎಸ್‌ಡಿಎಲ್ ಎಲ್ಲಾ ಫ್ರಾಂಚೈಸಿಗಳಿಗೂ ಮಾಹಿತಿ ನೀಡಿದೆ.

ಸುನಿಲ್ ಚೆಟ್ರಿ ಕಳವಳ

ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಸ್) ಅನಿರ್ದಿಷ್ಟಾವಧಿಗೆ ಸ್ಥಗಿತಗೊಂಡಿರುವ ಬಗ್ಗೆ ಸುನಿಲ್ ಚೆಟ್ರಿ ಸಾಮಾಜಿಕ ತಾಣಗಳಲ್ಲಿ ಇತ್ತೀಚೆಗೆ ಪ್ರತಿಕ್ರಿಯೆ ನೀಡಿದ್ದರು. 'ಭಾರತದ ಫುಟ್ಬಾಲ್ ವ್ಯವಸ್ಥೆಯಲ್ಲಿರುವ ಎಲ್ಲರೂ ನೋವು, ಭಯ, ಆತಂಕದಲ್ಲಿದ್ದಾರೆ. ದೇಶದ ಈಗಿನ ಫುಟ್ಬಾಲ್ ಸ್ಥಿತಿಗತಿ ಕಳವಳಕಾರಿ. ಐಎಸ್‌ಎಲ್ ಸ್ಥಗಿತಗೊಂಡಿರುವ ಬಗ್ಗೆ ಆಟ ಗಾರರು, ಕೋಚ್‌ಗಳು, ಸಿಬ್ಬಂದಿ, ಫಿಸಿಯೋ ಎಲ್ಲರೂ ನನ್ನಲ್ಲಿ ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಈ ಬಿರುಗಾಳಿಯನ್ನು ನಾವು ಒಟ್ಟಿಗೆ ಎದುರಿ ಸುತ್ತೇವೆ' ಎಂದು ತಿಳಿಸಿದ್ದರು.

ವಿಟಾಕೀಸ್

ಗತವೈಭವ ಸಾರಿದ ಆಶಿಕಾ

ಚುಟು ಚುಟು ಬೆಡಗಿ ಆಶಿಕಾ ರಂಗನಾಥ್ ಕನ್ನಡದ ಜತೆಗೆ ಪರಭಾಷೆಯ ಸಿನಿಮಾ ಗಳಲ್ಲಿಯೂ ನಟಿಸು ತ್ತಿದ್ದಾರೆ. ಅವತಾರಪುರುಷ ಚಿತ್ರದ ಬಳಿಕ ಆಶಿಕಾ ಮರೆ ಯಾಗಿದ್ದರು. ಈಗ ಚಂದನವನಕ್ಕೆ ಮತ್ತೆ ಮರಳಿದ್ದು, ಗತ ವೈಭವ ಸಾರುತ್ತಿದ್ದಾರೆ. ನಿರ್ದೇಶಕ ಸಿಂಪಲ್ ಸುನಿ ನಿರ್ದೇ ಶನದಲ್ಲಿ ಮೂಡಿಬರುತ್ತಿರುವ ಗತ ವೈಭವದಲ್ಲಿ ಆಶಿಕಾ ನಾಯಕಿಯಾಗಿ ನಟಿಸುತ್ತಿದ್ದಾರೆ. ಆಶಿಕಾ ಹುಟ್ಟು ಹಬ್ಬದ ಪ್ರಯುಕ್ತ ಫಸ್ಟ್‌ಲುಕ್ ಟೀಸರ್ ರಿಲೀಸ್ ಆಗಿದೆ. ಆಶಿಕಾ ಗತ ವೈಭವದಲ್ಲಿ ಮಿಂದೆದ್ದಿದ್ದಾರೆ. ಅಪರೂಪದ ದೃಶ್ಯಕಾವ್ಯ ಅದ್ಭುತವಾಗಿ ಮೂಡಿಬಂದಿದೆ. ವಿಲಿಯಂ ಡೇವಿಡ್ ಕ್ಯಾಮೆರಾ ಕೈಚಳ, ಜ್ಯುಡಾಸ್ಯಾಂಡಿ ಸಂಗೀತ ನಿರ್ದೇಶನ ಗತ ವೈಭವಕ್ಕೆ ಹೊಸತನ ತುಂಬಿದೆ. ಪುರಾತನ ಮತ್ತು ಪ್ರಸ್ತುತ ಕಾಲಘಟ್ಟದ ಕುರಿತಂತೆ ಕಥೆ ಸಾಗುತ್ತದೆ. ದುಶ್ಯಂತ್ ಈ ಚಿತ್ರದಲ್ಲಿ ನಾಯಕನಾಗಿ ನಟಿಸುತ್ತಿದ್ದು, ಈ ಚಿತ್ರದ ಮೂಲಕ ಚಿತ್ರರಂಗಕ್ಕೆ ಪರಿಚಿತರಾಗುತ್ತಿದ್ದಾರೆ. ದೀಪಕ್ ತಿಮ್ಮಪ್ಪ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಬಹುತೇಕ ಚಿತ್ರೀ ಕರಣ ಮುಕ್ತಾಯವಾಗಿದ್ದು, ಈ ವರ್ಷವೇ ಗತವೈಭವನ್ನು ತೆರೆಯಲ್ಲಿ ಕಣ್ತುಂಬಿಕೊಳ್ಳಬಹುದಾಗಿದೆ. ವಿಭಿನ್ನ ಪ್ರೇಮ ಕಥೆಯ ಮೂಲಕ ಮೋಡಿ ಮಾಡುವ ನಿರ್ದೇಶಕ ಸಿಂಪಲ್ ಸುನಿ ಈಗ ಗತವೈಭವ ಸಿನಿಮಾ ಮೂಲಕ ಮ್ಯಾಜಿಕ್ ಮಾಡಲಿದ್ದಾರೆ.

ದೊಡ್ಮನೆ ಮೊಮ್ಮಗ ಯುವ ರಾಜ್‌ಕುಮಾರ್, ಎಕ್ಕ ಚಿತ್ರದ ಮೂಲಕ ಭರ್ಜರಿ ಯಶಸ್ಸು ಪಡೆದಿದ್ದಾರೆ. ಸಖತ್ ಸದ್ದು ಮಾಡಿದ ಎಕ್ಕ ಗಲ್ಲಾಪೆಟ್ಟಿಗೆಯಲ್ಲಿ ಭರಪೂರ ರೊಕ್ಕ ಗಳಿಸಿದೆ. ಎಕ್ಕನಾಗಿ ಯುವ ರಾಜ್‌ಕುಮಾರ್ ಅವತಾರ ನೋಡಿದ ಅಭಿಮಾನಿಗಳು ಬಹುಪರಾಕ್ ಎಂದಿದ್ದಾರೆ. ಈ ಸಿನಿಮಾದ ಬಳಿಕ ಯುವ, ಸೂರಿ ಗರಡಿ ಸೇರುವುದು ಈ ಹಿಂದೆಯೇ ಖಚಿತವಾಗಿತ್ತು. ಎಕ್ಕ ಚಿತ್ರಕ್ಕೂ ಮೊದಲೇ ಸೂರಿ ಸಿನಿಮಾಗೆ ಎಲ್ಲಾ ಸಿದ್ಧತೆಗಳು ಆಗಿದ್ದವು. ಇನ್ನೇನು ಚಿತ್ರತಂಡ ಶೂಟಿಂಗ್‌ಗೆ ತೆರಳಲಿದೆ. ಈ ತಿಂಗಳಲ್ಲಿಯೇ ಶೂಟಿಂಗ್ ಆರಂಭಿಸುವ ನಿರೀಕ್ಷೆ ಇದೆ.

ಸೂರಿ ಸಿನಿಮಾ ಎಂದ ಮೇಲೆ ಕಲ್ಟ್ ಫೀಲ್ ಇದ್ದೇ ಇರುತ್ತದೆ, ರಾ ಸ್ಟೈಲ್‌ನಲ್ಲಿಯೇ ಸಿನಿಮಾ ಸಾಗಲಿದೆ. ಡೈಲಾಗ್ ಕೂಡ ಹಾಗೇ ಇರುತ್ತವೆ. ಈ ಚಿತ್ರದಲ್ಲಿಯೂ ರಾ ಮೇಕಿಂಗ್ ಇರಲಿದೆ. ಅದಕ್ಕೂ ಮಿಗಿಲಾಗಿ ಸಿನಿಮಾ ಹೊಸತನದಿಂದ ಕೂಡಿರಲಿದೆಯಂತೆ. ನವಿ ರಾದ ಪ್ರೇಮ ಕಾವ್ಯದ ಸಿನಿಮಾ ಇದಾಗಿದ್ದು, ಯುವ ಈ ಚಿತ್ರದಲ್ಲಿ ಹೊಸ ಗೆಟಪ್‌ನಲ್ಲಿ ಮಿಂಚಲಿದ್ದಾರೆ. ಭರ್ಜರಿ ಆ್ಯಕ್ಷನ್ ಸನ್ನಿವೇಶಗಳು, ಅದ್ಭುತ ಡ್ಯಾನ್ಸ್ ಎಲ್ಲವೂ ಇರಲಿದ್ದು, ಯುವ ವಿವಿಧ ಶೇಡ್‌ನಲ್ಲಿ ಕಂಗೊಳಿಸಲಿದ್ದಾರೆ.

ಕೊಡಗು, ಮಂಗಳೂರಿನ ಸುತ್ತ ಮುತ್ತ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ಸೂರಿ ಸಿನಿಮಾ ಅಂದ ಮೇಲೆ ಅಲ್ಲಿ ಹೊಸತರದ ಪಾತ್ರಗಳು ಇರುತ್ತವೆ, ಅದು ಈ ಸಿನಿಮಾದಲ್ಲಿಯೂ ಮುಂದಿವರಿಯಲಿದೆ. ಉಳಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿರಲಿದ್ದು, ಶೀಘ್ರ ದಲ್ಲಿಯೇ ತಾರಾಗಣದ ಬಗ್ಗೆ ತಿಳಿಯಲಿದೆ.

ರಾಘುಗೆ ಒಲಿದ ಬಂಪರ್

ಕಿರುತೆರೆಯಲ್ಲಿ ಪ್ರಸಾರವಾಗುತ್ತಿದ್ದ ಗಿಚ್ಚಿ ಗಿಲಿಗಿಲಿ.. ಖ್ಯಾತಿಯ ರಾಘವೇಂದ್ರಗೆ ಚಿತ್ರರಂಗದಲ್ಲಿ ಬಂಪರ್ ಆಫರ್ ಒಲಿದಿದೆ. ರಾಘು ಅಂದರೆ ಅರ್ಥವಾಗೋದು ಕಷ್ಟ, ಅದೇ ರಾಗಿಣಿ ಎಂದರೆ ಥಟ್ಟನೆ ನೆನಪಾಗುತ್ತಾರೆ. ಯಾಕೆಂದರೆ ರಾಘು ಹುಡುಗಿಯ ವೇಷದಲ್ಲಿ ಕಾಣಿಸಿಕೊಂಡು ರಾಗಿಣಿಯಾಗಿ ನಗಿಸಿದ್ದೇ ಹೆಚ್ಚು. ಅದೇ ರಾಘು ಈಗ ಮಹಾ ನಟಿ ರಿಯಾಲಿಟಿ ಶೂಗೆ ಎಂಟ್ರಿಕೊಟ್ಟಿದ್ದಾರೆ.

ಮಹಿಳಾ ವೇಷದಲ್ಲಿ ಮಿಂಚುವ ರಾಘು ಹುಡುಗಿಯಿಂದ ಹಿಡಿದು ಅಜ್ಜಿಯವರೆಗೂ ಪಾತ್ರ ನಿರ್ವಹಿಸುವ ಚಾಕಚಕ್ಯತೆ ಹೊಂದಿದ್ದಾರೆ. ಮಹಾನಟಿ ಶೋನಲ್ಲಿ ಉಮಾಶ್ರೀ ಅವರು ಅತಿಥಿಯಾಗಿ ಪಾಲ್ಗೊಂಡಿದ್ದ ಎಪಿ ಸೋಡ್‌ನಲ್ಲಿ ರಾಘು, ಪುಟ್ನಂಜ ಚಿತ್ರದಲ್ಲಿನ ಉಮಾಶ್ರೀ ಅವರ ಡೈಲಾಗ್ ಹೊಡೆದು ಮನಗೆದ್ದರು. ಉಮಾಶ್ರೀ ಅವರ ಮೆಚ್ಚುಗೆಗೂ ಪಾತ್ರರಾದರು.

ಶೋನಲ್ಲಿ ತೀರ್ಪುಗಾರರಾಗಿ ಪಾಲ್ಗೊಳ್ಳುವ ನಿರ್ದೇಶಕ ತರುಣ್ ಸುದೀರ್ ರಾಘು ನಟನೆ ನೋಡಿ ಮೆಚ್ಚಿಕೊಂಡಾಡಿರು, ಮಾತ್ರವಲ್ಲ ಮುಂದೆ ತಮ್ಮ ಸಿನಿಮಾಗಳಲ್ಲಿ ನಟಿಸಲು ಅವಕಾಶ ನೀಡುವುದಾಗಿ ಹೇಳಿದ್ದಾರೆ. ರಾಘು ಈಗಾಗಲೇ ಹಲವು ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಸೆಟ್ಟೇರಿತು ವಿನಯ್ ಹೊಸ ಚಿತ್ರ

ಸ್ಯಾಂಡಲ್‌ವುಡ್‌ಗೆ ಸಂಕ್ರಮಣ ಕಾಲ ಬಂದಿದೆ. ತೆರೆಗೆ ಬಂದ ಸಿನಿಮಾಗಳೆಲ್ಲಾ ಭರ್ಜರಿ ಪ್ರದರ್ಶನ ಕಂಡು, ಉತ್ತಮಗಳಿಕೆ ಮಾಡುತ್ತಿವೆ. ಈ ಖುಷಿಯಲ್ಲಿಯೇ ಮತ್ತಷ್ಟು ಹೊಸ ಸಿನಿಮಾಗಳು ಸೆಟ್ಟೇರುತ್ತಿವೆ. ಖ್ಯಾತ ಉದ್ಯಮಿ ವಿಜಯ್ ಟಾಟಾ ಕನ್ನಡ ಸಿನಿಮಾ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯನ್ನೇ ಮಾಡಲು ಮುಂದಾಗಿದ್ದು, ಒಟ್ಟೊಟ್ಟಿಗೆ ಆರು ಚಿತ್ರಗಳನ್ನು ನಿರ್ಮಾಣ ಮಾಡುವುದರ ಜತೆಗೆ ಚಿತ್ರೋದ್ಯ ಮಕ್ಕೆ ಬೆನ್ನೆಲುಬಾಗಿ ನಿಲ್ಲಲು ಸಿದ್ಧ ಎಂದು ಹೇಳಿದ್ದರು. ಈ ನಿರ್ಮಾಣ ಸಂಸ್ಥೆಯ ಲೋಗೋವನ್ನು ನಟ, ನಿರ್ದೇಶಕ ಕ್ರೇಜಿಸ್ಟಾರ್ ವಿ.ರವಿ ಚಂದ್ರನ್ ಹಾಗೂ ಶ್ರೀ ಮುರಳಿ ಬಿಡುಗಡೆ ಮಾಡಿದ್ದರು. ಈಗ ಆರು ಚಿತ್ರಗಳ ಪೈಕಿ ಈಗ ಎರಡು ಚಿತ್ರದ ಸ್ಕ್ರಿಪ್ಟ್‌ಗಳ ಪೂಜೆ ನೆರವೇರಿದ್ದು ಪ್ರೀ ಪ್ರೊಡಕ್ಷನ್ ಕೆಲಸಗಳು ಭರದಿಂದ ಸಾಗಿವೆ.

ಖ್ಯಾತ ಉದ್ಯಮಿ ವಿಜಯ್ ಟಾಟಾ ಅವರ ನೂತನ ನಿರ್ಮಾಣ ಸಂಸ್ಥೆಯಾದ ಅಮೃತ ಸಿನಿ ಕ್ರಾಫ್ಟ್ ನಲ್ಲಿ ಈ ಎರಡು ಚಿತ್ರಗಳು ನಿರ್ಮಾಣವಾಗುತ್ತಿವೆ. ಸದ್ಯ ಪ್ರೊಡಕ್ಷನ್ ನಂಬರ್ 1 ಶೀರ್ಷಿಕೆಯಲ್ಲಿ ಸೆಟ್ಟೇರಿರುವ ಚಿತ್ರದಲ್ಲಿ ದೊಡ್ಮನೆ ಮೊಮ್ಮಗ ವಿನಯ್ ರಾಜಕುಮಾರ್ ನಟಿಸಲಿದ್ದಾರೆ. ಈ ಚಿತ್ರವನ್ನು ಡಿ.ಎಸ್.ಪಿ ವರ್ಮ ನಿರ್ದೇಶನದ ಮಾಡಲಿದ್ದಾರೆ. ಮತ್ತೊಂದು ಚಿತ್ರ ಮಹಿಳಾ ನಿರ್ದೇ ಶಕಿ ಮಾನಸಾ ಸಾರಥ್ಯದಲ್ಲಿ ಮೂಡಿ ಬರುತ್ತಿದೆ. ಈ ಚಿತ್ರದಲ್ಲಿಯೂ ದೊಡ್ಡ ತಾರಾಬಳಗವೇ ಇದೆ. ನಾವು ಬರೀ ಚಿತ್ರ ನಿರ್ಮಾಣ ಮಾಡುವುದಷ್ಟೇ ಅಲ್ಲ, ಚಿತ್ರದ ಬಗ್ಗೆ ಮಾರ್ಕೆಟಿಂಗ್ ಮಾಡಿ ಯಾವ ಸಮಯ ದಲ್ಲಿ ಚಿತ್ರ ರಿಲೀಸ್ ಮಾಡಬೇಕು, ಚಿತ್ರದ ಕಂಟೆಂಟ್‌ಗೆ ತಕ್ಕ ಹಾಗೆ ಪ್ರಚಾರ, ಹೀಗೆ ಎಲ್ಲಾ ವಿಭಾಗ ದಲ್ಲೂ ಚರ್ಚೆ ಮಾಡಿ ಚಿತ್ರ ಮಂದಿರಕ್ಕೆ ಬರುತ್ತೇವೆ. ಅದಕ್ಕಾಗಿ ಒಂದಷ್ಟು ರಿಸರ್ಚ್ ಮಾಡಿದ್ದೇವೆ.

ಒಳ್ಳೆಯ ಚಿತ್ರಗಳ ನಿರ್ಮಾಣದ ಜತೆಗೆ ಚಿತ್ರೀಕರಣ ಅರ್ಧಕ್ಕೆ ನಿಂತಿರುವ ಚಿತ್ರ ಗಳಿಗೂ ಸಾಥ್ ಕೊಡ ಬೇಕು. ಹೊಸ ನಿರ್ದೇಶಕರು, ಕಲಾವಿದರಿಗೆ ಅವಕಾಶ ನೀಡಬೇಕು. ಹಾಗೆಯೇ ಸಿನಿಮಾಗಳನ್ನು ವಿತರಣೆ ಮಾಡುವ ದಕ್ಕೂ ನಿರ್ಧಾರ ಮಾಡಿದ್ದೇವೆ ಎಂದು ವಿಜಯ್ ಟಾಟಾ ಹೇಳಿದ್ದಾರೆ. ಹಾಗಾಗಿ ಮುಂದೆ ಮತ್ತಷ್ಟು ಒಳ್ಳೆಯ ಸಿನಿಮಾಗಳು ಮೂಡಿ ಬರಲಿವೆ ಎಂಬ ನಿರೀಕ್ಷೆ ಸಿನಿಪ್ರಿಯರಲ್ಲಿದೆ.